ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಶುಕ್ರವಾರ, 15 ಮೇ 2026

ಸಂಪುಟ 16, ಸಂಚಿಕೆ 51, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5

RNI No.KARKAN/2011/64413

hosadigantha.com
epaper.hosadigantha.com
Hosadigantha Digital



ನೀಟ್ ಪರೀಕ್ಷೆ ರದ್ದು ದ್ರೋಹ: ಸಿಎಂ | ೦೫

ತೈವಾನ್ ವಿಚಾರದಲ್ಲಿ ಎಚ್ಚರಿಕೆ ಇರಲಿ | ೦೭

ಯುದ್ಧ ನಿಲ್ಲಿಸಲು ಭಾರತ ಕೊಡುಗೆ: ಜೈಶಂಕರ್ | ೦೭

ಕೆಂಪುಕೋಟೆ ಸ್ಫೋಟ ಪ್ರಕರಣದಲ್ಲಿ 10 ಮಂದಿ ವಿರುದ್ಧ ಆರೋಪಪಟ್ಟಿ

ಸರ್ಕಾರ ಬೀಳಿಸುವ ಸಂಚು!

ಹೊಸದಿಲ್ಲಿ: ಭಾರತ ಸರ್ಕಾರವನ್ನು ಉರುಳಿಸಿ ದೇಶದಲ್ಲಿ ಶರಿಯಾ ಆಡಳಿತ ಸ್ಥಾಪಿಸುವ ಉದ್ದೇಶದಿಂದ 'ಆಪರೇಷನ್ ಹೆವನ್‌ಲಿ ಹಿಂದ್' ಹೆಸರಿನಲ್ಲಿ ಜಿಹಾದಿ ಸಂಚು ರೂಪಿಸಿದ್ದ ಅಲ್‌ಖೈದಾ ಅಂಗಸಂಸ್ಥೆ ಅನ್ಸಾರ್ ಘಜ್ವತ್-ಉಲ್-ಹಿಂದ್ ಸಂಘಟನೆಯ ಭಯೋತ್ಪಾದಕ ಜಾಲವನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಯಲಿಗೆಳೆದಿದೆ.



ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ್ದ ಭೀಕರ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ 10 ಮಂದಿಯ ವಿರುದ್ಧ 7,500 ಪುಟಗಳ ಮಹತ್ವದ ಆರೋಪಪಟ್ಟಿಯನ್ನು ಎನ್‌ಐಎ ಕೋರ್ಟ್‌ಗೆ ಸಲ್ಲಿಸಿದೆ. ಪುಟ ೪

- ಭಾರತ ಸರ್ಕಾರ ಉರುಳಿಸಿ ಶರಿಯಾ ಆಡಳಿತ ಜಾರಿಗೆ ಸಂಚು
- ಅಲ್‌ಖೈದಾ ಅಂಗಸಂಸ್ಥೆ ಅನ್ಸಾರ್ ಘಜ್ವತ್-ಉಲ್-ಹಿಂದ್ ಜಾಲ ಬಯಲು
- ಆಪರೇಷನ್ ಹೆವನ್‌ಲಿ ಹಿಂದ್ ಹೆಸರಿನಲ್ಲಿ ದೇಶವಿರೋಧಿ ಜಾಲ
- ವೈದ್ಯರು ಸೇರಿ ವೈಟ್ ಕಾಲರ್ ಭಯೋತ್ಪಾದಕ ಘಟಕ ಪತ್ತೆ
- 7,500 ಪುಟಗಳ ಆರೋಪಪಟ್ಟಿ ಸಲ್ಲಿಸಿದ ಎನ್‌ಐಎ
- ಟಿಎಟಿಪಿ ಸ್ಫೋಟಕ, ಡ್ರೋನ್ ಹಾಗೂ ರಾಕೆಟ್ ಐಇಡಿ ಪ್ರಯೋಗ ನಡೆಸಿದ್ದ ಆರೋಪ
- 588 ಸಾಕ್ಷ್ಯ, 395 ದಾಖಲೆ, 200ಕ್ಕೂ ಹೆಚ್ಚು ವಶಪಡಿಸಿಕೊಂಡ ವಸ್ತುಗಳ ಬಗ್ಗೆ ಉಲ್ಲೇಖ

ಡ್ರೋನ್, ರಾಕೆಟ್ ಬಳಕೆಗೆ ಪಿತೂರಿ

ತನಿಖೆಯಲ್ಲಿ ಆರೋಪಿಗಳು ಅಕ್ರಮವಾಗಿ ಎಕೆ-47 ರೈಫಲ್, ಕ್ರಿಂಕೊವ್ ರೈಫಲ್, ಪಿಸ್ತೂಲುಗಳು, ಜೀವಂತ ಗುಂಡುಗಳನ್ನು ಸಂಗ್ರಹಿಸಿದ್ದೂ ಪತ್ತೆಯಾಗಿದೆ. ಜಮ್ಮು-ಕಾಶ್ಮೀರ ಸೇರಿ ದೇಶದ ವಿವಿಧ ಭಾಗಗಳ ಭದ್ರತಾ ಕೇಂದ್ರಗಳ ಮೇಲೆ ದಾಳಿ ನಡೆಸುವ ಉದ್ದೇಶದಿಂದ ಡ್ರೋನ್, ರಾಕೆಟ್ ಆಧಾರಿತ ಐಇಡಿ ತಂತ್ರಜ್ಞಾನಗಳ ಮೇಲೂ ಪ್ರಯೋಗ ನಡೆಸಿದ್ದರು ಎಂದು ಎನ್‌ಐಎ ತಿಳಿಸಿದೆ.

ಜಮ್ಮು-ಕಾಶ್ಮೀರ, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ದಿಲ್ಲಿ-ಎನ್‌ಸಿಆರ್‌ಗಳಲ್ಲಿ ತನಿಖೆ ನಡೆಸಲಾಗಿದೆ. ಪುಟ ೪

ಒಮಾನ್‌ನಲ್ಲಿ ಭಾರತದ ಸರಕು ನೌಕೆ ಮೇಲೆ ದಾಳಿ

ಹೊಸದಿಲ್ಲಿ: ಒಮಾನ್ ಸಮುದ್ರ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ಧ್ವಜ ಹೊಂದಿದ್ದ ಎಂಎಸ್‌ವಿ ಹಾಜಿ ಅಲಿ ಎಂಬ ಸರಕು ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿ ಅದನ್ನು ಮುಳುಗಿಸಿರುವುದನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತೀವ್ರವಾಗಿ ಖಂಡಿಸಿದೆ. ವಿವರ ಪುಟ ೭

ಕಿರುಸುದ್ದಿ

ಕಾನೂನು ಕ್ರಮಕ್ಕೆ ಒತ್ತಾಯ



• **ನವಲಗುಂದ:** ತುರ್ತು ಚಿಕಿತ್ಸಾ ಘಟಕದಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ರೋಗಿಗಳು ಮತ್ತು ಸಾರ್ವಜನಿಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಆಗ್ರಹಿಸಿದರು.

ಈ ಕುರಿತು ತಹಶೀಲ್ದಾರ್ ಸುಧೀರ ಸಾಹುಕಾರ ಅವರ ಮೂಲಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ನೀಡಿ ಮಾತನಾಡಿದ ಅವರು, ತುರ್ತು ಚಿಕಿತ್ಸಾ ಘಟಕದಲ್ಲಿ ಜೀವ ಉಳಿಸುವ ವೈದ್ಯಕೀಯ ಉಪಕರಣಗಳು ಕಾರ್ಯನಿರ್ವಹಿಸಲು ವಿದ್ಯುತ್ ಅತ್ಯಗತ್ಯ. ಆದರೆ ತಾಲೂಕಾಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಭಾನುವಾರ ರಾತ್ರಿ ವಿದ್ಯುತ್ ವ್ಯತ್ಯಯ ಉಂಟಾಗಿದ್ದು ಕತ್ತಲಿನಲ್ಲಿ ಚಿಕಿತ್ಸೆ ನೀಡುವುದು ವೈದ್ಯರಿಗೂ ಕಷ್ಟಕರವಾಗಿದ್ದು, ರೋಗಿಗಳ ಪ್ರಾಣದ ಜೊತೆ ಚೆಲ್ಲಾಟವಾಡಿದಂತಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಸವರಾಜ ಮಲ್ಲದಾಸರ ಮಾತನಾಡಿ, ತುರ್ತು ಚಿಕಿತ್ಸಾ ಘಟಕದಲ್ಲಿ ಆಮ್ಲಜನಕ ಸಾಂದ್ರಕಗಳು ಲೈಫ್ ಸಪೋರ್ಟ್ ಸಿಸ್ಟಮ್‌ಗಳು ಮತ್ತು ವೈದ್ಯಕೀಯ ಉಪಕರಣಗಳು ವಿದ್ಯುತ್ ಇಲ್ಲದೆ ಸ್ಥಗಿತಗೊಂಡಿವೆ ಎಂದರು. ರೈತ ಮುಖಂಡ ಮಲ್ಲಿಕಾರ್ಜುನಸ್ವಾಮಿ ಮಠಪತಿ ಹಾಗೂ ಹನುಮಂತಪ್ಪ ಹುಳಕಣ್ಣವರ, ಕುಮಾರ ಹೊಣಕುದರಿ ಇದ್ದರು.

ಜಾನಪದ ಸಂಸ್ಕೃತಿಯ ಜೀವಾಳ



• **ಧಾರವಾಡ:** ಜಾನಪದ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯ ಜೀವಾಳವಾಗಿದ್ದು, ಜಾನಪದ ಉಳಿದರೆ ನಮ್ಮ ದೇಶೀ ಸಂಸ್ಕೃತಿ ಉಳಿಯುತ್ತದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಪಾರ್ವತೆವ್ವ ಹೊಂಗಲ್ ಹೇಳಿದರು.

ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ ಅಲ್ಲವ್ವ ಶಿವಪ್ಪಣ್ಣ ಜಿಗಳೂರ ಕಲಾ ಹಾಗೂ ಡಾ. ಸುಶೀಲಾ ಮುರಿಗೆಪ್ಪ ಶೇಷಗಿರಿ ವಾಣಿಜ್ಯ ಮಹಿಳಾ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿ ದಯಾನಂದ ಬಂಡಿ ಅಧ್ಯಕ್ಷತೆ ವಹಿಸಿದ್ದರು. ಡಾ. ಪಾರ್ವತೆವ್ವ ಸಿದ್ದಪ್ಪ ಹೊಂಗಲ್ ಅವರನ್ನು ಸನ್ಮಾನಿಸಲಾಯಿತು. 2025-26ನೇ ಪ್ರಸಕ್ತ ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಣೆ ಜತೆಗೆ ಪಠ್ಯೇತರ ಚಟುವಟಿಕೆಗಳ ಪ್ರಶಸ್ತಿ ಪ್ರದಾನಿಸಲಾಯಿತು. ಆಡಳಿತಾಧಿಕಾರಿ ಎಸ್. ಕೆ. ಹೊಸಂಗಡಿ, ಸದಸ್ಯರಾದ ಡಾ. ನಿರ್ಮಲಾ ಹಿರೇಗೌಡರ, ಪ್ರವೀಣ ಹಟ್ಟಿಹೊಳಿ, ಕಲ್ಲನಗೌಡ ಹೊಂಗಲ್ ಸೇರಿದಂತೆ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ಇದ್ದರು.

ಅರ್ಜಿ ಆಹ್ವಾನ

• **ಹುಬ್ಬಳ್ಳಿ:** ನಗರದ ದಿ ಹುಬ್ಬಳ್ಳಿ ಅರ್ಬನ್ ಕೋ ಆಫ್ ಬ್ಯಾಂಕ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಪುರಸ್ಕಾರ ನೀಡುತ್ತಿದೆ. 2026 ನೇ ಸಾಲಿನಲ್ಲಿ ಎಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳ ಗಳಿಸಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ. ವಿದ್ಯಾರ್ಥಿಗಳು ತಮ್ಮ ಹಾಗೂ ಪಾಲಕರ ಇತ್ತೀಚಿನ ಭಾವಚಿತ್ರ, ದೃಢೀಕೃತ ಅಂಕಪಟ್ಟಿ, ಸಂಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಸದಸ್ಯತ್ವದ ಮಾಹಿತಿ ಆಡಳಿತ ಕಚೇರಿಗೆ ಮೇ 20 ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ನಿಧನ ಸುದ್ದಿ

ಮಲಪೂರಿ ಮಿಟಗಾರ

• **ಅಳ್ನಾವರ:** ಸಮೀಪದ ಹುಲಿಕೇರಿ ಗ್ರಾಮದ ಮಲಪೂರಿ ರಮೇಶ ಮಿಟಗಾರ (65) ಅವರು ಬುಧವಾರ ನಿಧನರಾದರು. ಮೃತರು ಪತಿ ಹಾಗೂ ಇಬ್ಬರು ಪುತ್ರರು, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.



ಶ್ರೀನಿವಾಸ ದೇಸಾಯಿ

• **ಹುಬ್ಬಳ್ಳಿ:** ಇಲ್ಲಿಯ ವಿಶ್ವೇಶ್ವರ ನಗರ ನಿವಾಸಿ ನಿವೃತ್ತ ಇಂಜಿನಿಯರ್ ಹಾಗೂ ಖ್ಯಾತ ಸಾಹಿತ್ಯಾಸಕ್ತ ಶ್ರೀನಿವಾಸ ಕೆ. ದೇಸಾಯಿ ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.





ಹುಬ್ಬಳ್ಳಿ: ನೈರುತ್ಯ ರೈಲ್ವೆ ಕನ್ನಡ ಸಂಘದ ವತಿಯಿಂದ ಬಸವ, ಕನಕದಾಸರ ಹಾಗೂ ಪುರಂದರ ದಾಸರ ವಚನ, ದಾಸವಾಣಿ ಸಂಗೀತ ಹಾಗೂ ಚರ್ಚೆ ಕಾರ್ಯಕ್ರಮ ನಡೆಯಿತು.

ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸರು

• **ನವಲಗುಂದ:** ನಗರದ ಪೊಲೀಸ್ ಠಾಣೆಗೆ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಡಿ ಖರೀದಿಸಲಾದ ನೂತನ ಬುಲೇರೊ ವಾಹನವನ್ನು ಪೊಲೀಸ್ ಇಲಾಖೆಗೆ ಶಾಸಕ ಎನ್. ಎಚ್. ಕೋನರಡ್ಡಿ ಅವರು ಹಸ್ತಾಂತರಿಸಿದರು. ಈ ವೇಳೆ ಮಾತನಾಡಿದ ಅವರು, ಜನರ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ತುರ್ತು ಸೇವೆಗಳು ಇನ್ನಷ್ಟು ವೇಗವಾಗಿ ಜನರಿಗೆ ತಲುಪಲು ಹಾಗೂ ಪೊಲೀಸ್ ಇಲಾಖೆಯ ಕಾರ್ಯಕ್ಷಮತೆಯನ್ನು ಬಲಪಡಿಸಲು ಈ ವಾಹನ ಸಹಕಾರಿಯಾಗಲಿದೆ ಎಂದರು.

ಸಾರ್ವಜನಿಕ ಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸುವ ನಿಟ್ಟಿನಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು ನಮ್ಮ ಕರ್ತವ್ಯವಾಗಿದ್ದು, ಜನರ ಸುರಕ್ಷತೆ ಮತ್ತು ನೆಮ್ಮದಿಗೆ ಸದಾ ಬದ್ಧರಾಗಿದ್ದೇವೆ ಎಂದರು.

ಇದಕ್ಕೂ ಮುನ್ನ ಬುಧವಾರ ನವಲಗುಂದ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ 2025-26ನೇ ಸಾಲಿನ ಉದ್ಯಮಶೀಲತಾ ಯೋಜನೆಯಡಿ ಖರೀದಿಸಲಾದ ವಾಹನವನ್ನು ಫಲಾನುಭವಿಯಾದ ಕೋಳಿವಾಡ ಗ್ರಾಮದ ಗಣೇಶ ಕಾಳೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಅದೀಕ್ಷಕ ಗುಂಜನ್ ಆರ್ಯ, ಡಿಎಸ್‌ಪಿ ಗ್ರಾಮೀಣ ವಿಭಾಗ ವಿನೋದ ಮುಕ್ತೇದಾರ, ಸಿಐನ್‌ಇ, ಡಿಎಸ್‌ಪಿ ಶಿವಾನಂದ ಕಟಗಿ, ಡಿಎಸ್‌ಪಿ ಡಿಎಆರ್ ಡಿ.ಎಸ್. ದನಗರ, ಸಿಪಿಐ ರವಿ ಕಪ್ಪತ್ತನವರ, ಆರ್‌ಪಿಐ ಫಕೀರಪ್ಪ, ಪಿಎಸ್‌ಐ ಜನಾರ್ಧನ ಬಿ. ಸೇರಿದಂತೆ ಮುಂತಾದ ಅಧಿಕಾರಿಗಳು ಉಪಸ್ಥಿತರಿದ್ದರು.



ನವಲಗುಂದ: ನಗರದ ಪೊಲೀಸ್ ಠಾಣೆಗೆ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಡಿ ಖರೀದಿಸಲಾದ ನೂತನ ಬುಲೇರೊ ವಾಹನವನ್ನು ಪೊಲೀಸ್ ಇಲಾಖೆಗೆ ಶಾಸಕ ಎನ್. ಎಚ್. ಕೋನರಡ್ಡಿ ಅವರು ಹಸ್ತಾಂತರಿಸಿದರು.

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ | ಪಾಟೀಲ ಸೂಚನೆ

ಸಮರ್ಪಕ ನೀರು ಒದಗಿಸಿ

• **ಕಲಘಟಗಿ:** ಯಾವ ಯಾವ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇದೆಯೋ ಅಲ್ಲಿ ಸಾಧ್ಯವಾದಷ್ಟು ಗ್ರಾಮದ ವ್ಯಾಪ್ತಿಯಲ್ಲಿ ಕೊಳವೆಬಾವಿ ವ್ಯವಸ್ಥೆ ಮಾಡಿಸಿ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗದಂತೆ ಕಾಳಜಿ ವಹಿಸಿ ಎಂದು ಜಿಪಂ ಮುಖ್ಯಕಾರ್ಯನಿರ್ವಹಕ ಅಧಿಕಾರಿ ಭುವನೇಶ ಪಾಟೀಲ ಹೇಳಿದರು.

ಅವರು ಗುರುವಾರ ಕಲಘಟಗಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ನೀರಿನ ಶುದ್ಧತೆಯ ಬಗ್ಗೆ ಗಮನ ವಹಿಸಿ ಹಾಗೂ ಬೇಸಿಗೆ ಇರುವುದರಿಂದ ನೀರಿನ ಉಳಿತಾಯ ಮಾಡಿ ಎಂದು ಸಲಹೆ ನೀಡಿದರು.

ಕೆಲವು ಗ್ರಾಮಗಳಲ್ಲಿ ನೀರಿದ್ದರೂ ವಿದ್ಯುತ್ ಸಮಸ್ಯೆಯಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ. ತಾಲೂಕಿನ ಬೀರವಳ್ಳಿ, ತಾವರಗೇರಿ, ಸುರಶೆಟ್ಟಿಕೊಪ್ಪ ಗ್ರಾಮದಲ್ಲಿ ವಿದ್ಯುತ್ ವ್ಯತ್ಯಯ ಆಗುತ್ತಿದೆ ಎಂದು ಕೆಲವು ಪಿಡಿಓಗಳು ತಿಳಿಸಿದರು.

ತಾಪಂ ಮುಖ್ಯಾಧಿಕಾರಿ ಪರಶುರಾಮ ಸಾವಂತ, ಎಡಿ ಗಿರೀಶ ಕೋರಿ, ಎಇಇ ಎಚ್.ಪಿ. ರಜಪೂತ, ಎಇಇ ಸಂತೋಷ ಸತಾಳಿ, ಬಿಸಿಎಂ ಸುರೇಶ ಗುರನ್ನವರ, ಶಿವಪ್ಪ ಸಣ್ಣಮನಿ, ಕೃಷಿ ಅಧಿಕಾರಿ ಅಮರ ನಾಯ್ಕರ್, ತೋಟಗಾರಿಕಾ ಅಧಿಕಾರಿ ಶ್ರೀದೇವಿ ಎ.ಎಸ್., ಸಮಾಜ ಕಲ್ಯಾಣ ಅಧಿಕಾರಿ ಅನುಷಾ ಹಿರೇಮಠ, ಗಾಯತ್ರಿ ಸಜ್ಜನ, ಡಾ. ಮಧುಸೂಧನ, ವಿದ್ಯಾ ಬಡಿಗೇರ, ಡಾ. ದೇವೇಂದ್ರಪ್ಪ ಲಮಾಣಿ, ಶಂಕರ ಅಂಬಾಯಿ ಆರ್‌ಎಫ್‌ಒ ತಲ್ಲೂರ ಸೇರಿದಂತೆ ತಾಲೂಕು ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಉಪಸ್ಥಿತರಿದ್ದರು.



> ಬಿ ಹುಲಿಕಟ್ಟಿ, ದ್ಯಾವನಕೊಂಡ, ಹುಣಸಿಕಟ್ಟಿ, ಸಂಗಮೇಶ್ವರ, ಬೀರವಳ್ಳಿ, ಮಿಶ್ರಿಕೊಟಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸರಿಯಾಗಿ ಜನರಿಗೆ ನೀರು ಒದಗಿಸಿ.ಎಲ್ಲರೂ ಸರಿಯಾಗಿ ಕರ್ತವ್ಯ ನಿಭಾಯಿಸಿ.
> ■ ಭುವನೇಶ ಪಾಟೀಲ, ಜಿಪಂ ಮುಖ್ಯಕಾರ್ಯನಿರ್ವಹಕ ಅಧಿಕಾರಿ

ಫೇಸ್ ಅಥೆಂಟಿಕೇಶನ್ ಶೀಘ್ರ ಪೂರ್ಣಗೊಳಿಸಿ

ತುರ್ತಾಗಿ ಎಲ್ಲರೂ ಫೇಸ್ ಅಥೆಂಟಿಕೇಶನ್ ಪೂರ್ಣಗೊಳಿಸಿ. ಇ.ಕೆ.ವೈ.ಸಿ ಚುರುಕುಗೊಳಿಸಿ, ಒಂಬುಡ್ಸಮನ್ ರಿಕವರಿ ಬಹಳಷ್ಟು ಇದ್ದು ಸರಿಯಾಗಿ ವಸೂಲಾತಿ ಮಾಡಿ. ಪ್ರತಿ ತಿಂಗಳು ಗ್ರಾಪಂಗಳಲಿ ಮಹಿಳಾ ಸಭೆಗಳನ್ನು ಮಾಡಿ. ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳಲ್ಲಿ 2025-26 ಕರ ವಸೂಲಾತಿ ಉತ್ತಮವಾಗಿದೆ. ನೂತನ ಆಡಳಿತಾಧಿಕಾರಿಗಳು ನಿಯಮಿತವಾಗಿ ಗ್ರಾಪಂಗೆ ಭೇಟಿ ನೀಡಿ ಕುಂದು ಕೊರತೆ ನಿವಾರಿಸಿ ಎಂದು ಜಿಪಂ ಮುಖ್ಯಕಾರ್ಯನಿರ್ವಹಕ ಅಧಿಕಾರಿ ಭುವನೇಶ ಪಾಟೀಲ ಹೇಳಿದರು.

ಗುರು ಕಾರುಣ್ಯದಿಂದ ಶಿಷ್ಯ ಪರಂಪರೆಗೆ ಬೆಳಕು: ಶ್ರೀ

• **ನವಲಗುಂದ:** ಆಧ್ಯಾತ್ಮದಲ್ಲಿ ಗುರು ಕಾರುಣ್ಯದಿಂದ ಬೆಳಗುವ ಶಿಷ್ಯ ಪರಂಪರೆಯಿಂದಲೇ ಧರ್ಮ ರಕ್ಷಣೆಗೆ ದಾರಿದೀಪವಾಗಿದ್ದು, ಶಿಷ್ಯ ಪರಂಪರೆಯಿಂದ ಸ್ಥಾಪಿತವಾದ ಮಠಗಳು ಸಮಾಜದಲ್ಲಿನ ಅಂಕು, ಡೊಂಕುಗಳನ್ನು ತಿದ್ದುವ ಮೂಲಕ ಭಕ್ತ ವೃಂದವನ್ನು ಜಾಗೃತಗೊಳಿಸುವ ಕಾರ್ಯ ಮಾಡುತ್ತಿವೆ ಎಂದು ಶಿರಹಟ್ಟಿ ಭಾವೈಕ್ಯ ಸಂಸ್ಥಾನ ಮಠದ ಫಕೀರಸಿದ್ಧರಾಮ ಸ್ವಾಮೀಜಿ ಹೇಳಿದರು.

ಅವರು ನಗರದ ಹಿರೇಮಠದ ಗುರುಪಟ್ಟಾಧಿಕಾರ ಮಹೋತ್ಸ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸ್ವಾಮೀಜಿಯಾದವರು ತಮ್ಮ ಪೂರ್ವಾಶ್ರಮವನ್ನು ತೊರೆದು ಸನ್ಯಾಸವನ್ನು ಸ್ವೀಕರಿಸಿ ತಮ್ಮ ಆತ್ಮ ಜ್ಞಾನದ ಮೂಲಕ ಸಮಾಜವನ್ನು ಮುನ್ನಡೆಸುವ ಕಾರ್ಯ ಮಾಡಿದಾಗ ಮಾತ್ರ ಸನ್ಯಾಸತ್ವದ ಸಾತ್ವಿಕತೆಗೆ ಮೆರಗು ಬರಲು ಸಾಧ್ಯ ಎಂದರು.

ಪಟ್ಟಾಧಿಕಾರ ಮಹೋತ್ಸವ ಸ್ವಾಗತಿ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಎನ್.ಎಚ್. ಕೋನರಡ್ಡಿ ಹಾಗೂ ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಮಾತನಾಡಿ, ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ಕಳೆದ 12 ದಿನಗಳಿಂದ ಪಟ್ಟಣದಲ್ಲಿ ಜರುಗಿದ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ನಿತ್ಯ ಸಾವಿರಾರು ಭಕ್ತರು ಪಾಲ್ಗೊಳ್ಳುವ ಮೂಲಕ ಪೀಠಾರೋಹಣ ಮಹೋತ್ಸವಕ್ಕೆ ಸಾಕ್ಷಿಯಾಗಿದ್ದಾರೆ ಎಂದರು. ಪಂಚಗ್ರಹ ಹಿರೇಮಠದ ಹಿರಿಯ ಸ್ವಾಮೀಜಿ ಸಿದ್ದೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ನರಗುಂದ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವ ಕೆ.ಎನ್.ಗಡ್ಡಿ, ಬಿ.ಬಿ.ಗಂಗಾಧಮಠ, ಅಂದಾನಯ್ಯ ಹಿರೇಮಠದ, ಗಣ್ಯರಾದ ಅಣ್ಣಪ್ಪ ಬಾಗಿ, ವ್ಹಿ.ಟಿ.ಕರಿಸಕ್ರಣ್ಣವರ, ಸಿದ್ಧಲಿಂಗಯ್ಯ ಹಿರೇಮಠ, ಪಾಂಡಪ್ಪ ಕೋನರಡ್ಡಿ, ವೀರೇಶ ಹೂಗು, ಬಿ.ಸಿ. ಪೂಜಾರ, ಗಂಗಪ್ಪ ಹಳ್ಳದ, ಯಲ್ಲಪ್ಪ ಭೋವಿ,ಅಪ್ಪಣ್ಣ ಹಳ್ಳದ ಮತ್ತಿತರರಿದ್ದರು. ಬಿಗ್ ಬಾಸ್ ಖ್ಯಾತಿ ಹನಮಂತ ಲಮಾಣಿ ತಂಡದವರಿಂದ ಜಾನಪದ ಸಂಗೀತ ಕಾರ್ಯಕ್ರಮ ಜರುಗಿದವು. ಎ.ಬಿ.ಕೊಪ್ಪದ ನಿರೂಪಿಸಿದರು. ಆರ್.ಎಸ್.ನೇಗಲಿ ವಂದಿಸಿದರು.

ಗುಣಾತ್ಮಕ ಕಾರ್ಯ

ಪೂರ್ವ ಜನ್ಮದ ಸುಕೃತ ಮತ್ತು ಸಿದ್ದೇಶ್ವರ ಶಿವಾಚಾರ್ಯರ ಆಶೀರ್ವಾದದಿಂದ ಮಠದ ಪಟ್ಟಾಧ್ಯಕ್ಷನಾಗಿರುವೆ. ವೀರಶೈವ ಧರ್ಮ ಪರಂಪರೆಯ ಆದರ್ಶ ಮೌಲ್ಯಗಳ ಸಂರಕ್ಷಣೆ-ಗುರುಸ್ಥಲದ ಮಹತ್ವವನ್ನು ಅರಿತು ಭಕ್ತ ಸಂಕುಲಕ್ಕೆ ಮಾರ್ಗದರ್ಶನ ಮಾಡುವೆ. ಹೊರಗಿನ ಸಿರಿ ಸಂಪತ್ತಿಗಿಂತ ಆಧ್ಯಾತ್ಮ ಸಂಪತ್ತು ದೊಡ್ಡದು. ಪಂಚ ಪೀಠಾಧೀಶ್ವರರ ಕೃಪಾಶೀರ್ವಾದದಿಂದ ಮಠದ ಅಭಿವೃದ್ಧಿ, ಭಕ್ತರಿಗೆ ಸಂಸ್ಕಾರ ಮತ್ತು ಗುಣಾತ್ಮಕ ರಚನಾತ್ಮಕ ಕಾರ್ಯಗಳನ್ನು ಮಾಡುತ್ತೇನೆಂದು ರೇಮಠದ ನೂತನ ಪೀಠಾಧಿಕಾರಿ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಸಂಕಲ್ಪಿಸಿದರು.




ಹುಲಿಗೆಮ್ಮಾದೇವಿ ಜಾತ್ರಾಮಹೋತ್ಸವಕ್ಕೆ ಚಾಲನೆ

• **ಹುಬ್ಬಳ್ಳಿ:** ಇಲ್ಲಿಯ ಹಳೇ ಹುಬ್ಬಳ್ಳಿ ಅರವಿಂದ ನಗರದ ಹುಲಿಗೆಮ್ಮಾದೇವಿ ದೇವಸ್ಥಾನದ ಜಾತ್ರಾಮಹೋತ್ಸವಕ್ಕೆ ಗುರುವಾರ ಚಾಲನೆ ದೊರೆಯಿತು. ಹುಲಿಗೆಮ್ಮಾ ದೇವಿಯವರಿಗೆ ನವವಿಧ ಸ್ನಾನಗಳು, ಮಹಾಭಿಷೇಕ, ವಿಶೇಷ ಅಲಂಕಾರದೊಂದಿಗೆ ಉದಯಪೂಜೆ ನೆರವೇರಿಸಲಾಯಿತು. ಮಧ್ಯಾಹ್ನ ಜಾತ್ರಮಹೋತ್ಸವದ ಸಮಾರೋಪ ಸಮಾರಂಭ ನಡೆಯಿತು. ಬಿಜೆಪಿ ಯುವಮೋರ್ಚಾ ರಾಜ್ಯ ಉಪಾಧ್ಯಕ್ಷ ಡಾ. ಮಲ್ಲಿಕಾರ್ಜುನ ಬಾಳಿಕಾಯಿ ಮಾತನಾಡಿ, ದೈವಕೃಪೆ ಇಲ್ಲದೆ ಯಾವ ಕಾರ್ಯವೂ ಯಶಸ್ವಿಯಾಗುವುದಿಲ್ಲ, ಸಂಪತ್ತಿನ ದಾನ ಮಾಡಲು ಸಾಧ್ಯವಾಗದಿದ್ದರೂ ದೈಹಿಕ ಶ್ರಮದಾನ ಮತ್ತು ದೇವರ ಸೇವೆ ಮಾಡುವ ಮೂಲಕ ನಮ್ಮಿಂದ ಸಾಧ್ಯವಾದಷ್ಟು ದೇವರ ಮೊರೆ ಹೋಗಬೇಕು ಎಂದರು. ಬಿಜೆಪಿ ಧಾರವಾಡ ವಿಭಾಗ ಪ್ರಭಾರಿ ಜಯತೀರ್ಥ ಕಟ್ಟಿ ಮಾತನಾಡಿ, ನಮ್ಮ ಹಿರಿಯರು ನಮಗೆಲ್ಲ ನೀಡಿದ ಸಂಸ್ಕಾರವನ್ನು ನಾವುಗಳು ನಮ್ಮ ಮುಂದಿನ ಪೀಳಿಗೆಗೆಲ್ಲ ಬಳುವಳಿಯಾಗಿ ನೀಡಬೇಕು. ಅವರಿಗಾಗಿ ಆಸ್ತಿ ಮಾಡುವ ಬದಲು ಅವರಲ್ಲಿ ಸಂಸ್ಕಾರಗಳನ್ನು ತುಂಬಿ ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು ಎಂದರು.

ಸ್ವರ್ಣ ಸಮೂಹ ಸಂಸ್ಥೆಗಳ ಚೆರ್ಮನ್ ಡಾ. ವಿಎಸ್‌ವಿ ಪ್ರಸಾದ ಮಾತನಾಡಿ, ಧರ್ಮ ರಕ್ಷಣೆಯಾಗಬೇಕು ಎಂದರೆ ದೇವಸ್ಥಾನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಶ್ರದ್ಧೆಯಿಂದ ಧರ್ಮ ಸೇವೆ ಮಾಡಬೇಕು ಎಂದರು. ತೋಟಪ್ಪ ನಿಡಗುಂದಿ, ಮಹೇಶ ದಾಬಡೆ, ಬಸವರಾಜ ಕುಂದಗೋಳಮಠ, ವಿರೇಶ ಸಂಗಳದ, ಅಶೋಕ ವಾಲ್ಮೀಕಿ, ಮಾಜಿ ಯೋಧ ಶಿವಾಜಿ ಗಾಂವಕರ, ವಿನಾಯಕ ಘೋಡಕೆ, ಗುರು ಬನ್ನಿಕೊಪ್ಪ, ಕೆ.ಪಿ ಗೋಟುರ, ವಿಠ್ಠಲ ಏಕಬೋಟೆ, ಮಹಾದೇವ ಸುಲಾಖೆ, ರಾಮಕೃಷ್ಣ ಅಬ್ಬಿಗೇರಿ, ಶ್ರೀಧರ ತಾಂಬೆ, ಪುರದನಗೌಡ್ರು, ರವಿಕುಮಾರ ಮಡ್ಡಿ ಇದ್ದರು.

- ದೇವಿಯ ಪಲ್ಲಕ್ಕಿ ಉತ್ಸವ ಮೆರವಣಿಗೆ ಈ ದೇವಸ್ಥಾನದಿಂದ ಹೊರಟು ಮೂಲ ದೇವಸ್ಥಾನಕ್ಕೆ ತಲುಪಿತು
- ಸುಮಂಗಲೆಯರು ಶ್ರೀ ಲಕ್ಷ್ಮೀ ಶೋಭಾನ, ಶ್ರೀ ದುರ್ಗಾ ಸಪ್ತಶತಿ ಪಾರಾಯಣ, ಲಲಿತ ಸಹಸ್ರ ನಾಮಾವಳಿಯನ್ನು ಪಠಿಸಿದರು
- ದೇವಸ್ಥಾನದ ವತಿಯಿಂದ ಗಣ್ಯರಿಗೆಲ್ಲಾ ಮಾತೋಶ್ರೀ ಡಾ.ಹುಲಿಗೆಮ್ಮಾ ಪೋಸಾ ಅಮ್ಮನವರು ಗೌರವಿಸಿದರು



ವಿದ್ಯಾರ್ಥಿಗಳಿಗೆ ನಿರಂತರ ಅಧ್ಯಯನ ಅವಶ್ಯ



• **ಹುಬ್ಬಳ್ಳಿ:** ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ನಿರಂತರ ಅಧ್ಯಯನ ಅವಶ್ಯಕ. ಯಶಸ್ಸು ಸಾಧಿಸಲು ಶಿಸ್ತು, ಸಮರ್ಪಣೆ ಹಾಗೂ ದೂರ ದೃಷ್ಟಿ ಅವಶ್ಯಕವಾಗಿದೆ ಎಂದು ಉದ್ಯಮಿ ವಿ.ಎಸ್.ವಿ. ಪ್ರಸಾದ ಹೇಳಿದರು.

ನಗರದ ಚೇತನ ಬಿಸಿನೆಸ್ ಸ್ಕೂಲ್‌ನಲ್ಲಿ ಮೂರು ದಿನಗಳು ನಡೆಯುವ ಚಕ್ರವ್ಯೂಹ್ 2ಕೆ26 ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಮೇರಿಕಾ ದೇಶದಲ್ಲಿ ಸ್ಪರ್ಧೆ ಬಹಳ ಬೇಗ ಆರಂಭವಾಗುತ್ತದೆ. ಇದರಿಂದ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸೂಕ್ತವಾಗಿ ನಿಭಾಯಿಸಲು ಅನುಕೂಲವಾಗಲಿದೆ ಎಂದರು.

ಚಕ್ರವ್ಯೂಹ 2ಕೆ26 ಆಯೋಜನೆ ಮಾಡಿರುವುದು ಶ್ಲಾಘನೀಯ. ಕೃತಕ ಬುದ್ಧಿ ಮತ್ತೆ ಯನ್ನು ಸದಪಯೋಗ ಉತ್ತಮವಾಗಿದೆ. ಆದರೆ ಸಂಪೂರ್ಣ ಅದರ ಮೇಲೆ ಅವಲಂಬನೆ ಅಪಾಯಕಾರಿ ಎಂದರು.

ಅಮೆರಿಕಾದ ಅರಲ್ಲಿ ವಾರನಿಂಗ್ ಸರ್ವಿಸ್‌ನ ಸಂಸ್ಥೆಯ ಉಪಾಧ್ಯಕ್ಷೆ ವಿಶ್ಲೇಷಾ ಪಾಟೀಲ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸೃಜನಶೀಲತೆ, ವ್ಯಕ್ತಿತ್ವ ವಿಕಾಸ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ. ಅಮೆರಿಕಾದಲ್ಲಿ ಇಂತಹ ಚಟುವಟಿಕೆಗಳು ಸಾಮಾನ್ಯವಾಗಿದ್ದು, ವಿದ್ಯಾರ್ಥಿಗಳು ತಮ್ಮೊಳಗಿನ ನಾಯಕತ್ವವನ್ನು ಅರಿತುಕೊಳ್ಳಬೇಕು. ನಿರಂತರ ಅಧ್ಯಯನ ಮತ್ತು ಹೊಂದಾಣಿಕೆಯ ಮನೋಭಾವ ಇಂದಿನ ಕಾಲದ ಅಗತ್ಯ ಎಂದರು.

ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಮಾತನಾಡಿ, ವಿದ್ಯಾರ್ಥಿಗಳು ನ್ಯಾಯ, ಗೌರವ ಹಾಗೂ ಕ್ರೀಡಾ ಸ್ಫೂರ್ತಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.

ಸಂಸ್ಥೆ ನಿರ್ದೇಶಕ ಡಾ. ವಿ. ಎಂ. ಕೊರವಿ ಮಾತನಾಡಿ, ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಮನೋಭಾವ, ನಾಯಕತ್ವ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಬೆಳೆಸುವ ಉದ್ದೇಶದಿಂದ ರೂಪಿಸಲಾಗಿದೆ ಎಂದರು.

ಪ್ರೊ. ಶ್ರೇಯಸ್ ಮುರಡೇಶ್ವರ, ಪ್ರೊ. ಮಣಿಕ್, ಪ್ರೊ. ರಾಮಕಾಂತ ಕುಲಕರ್ಣಿ, ಪ್ರೊ. ಅನಿರುದ್ಧ ಅಂಕೋಲೇಕರ, ಕಾವೇರಿ ಕುಲಕರ್ಣಿ, ಮೋಹಿತ್ ಧರ್ಮದಾಸ ಇದ್ದರು.

ಪುನಃ ಅಧಿಪತ್ಯ ಸಾಧಿಸಲು ಪ್ರಯತ್ನ: ಲಾಡ್

• **ಹುಬ್ಬಳ್ಳಿ:** ಪಶ್ಚಿಮ ಪದವೀಧರರ ಕ್ಷೇತ್ರದ ಹಿಂದೆ ಕಾಂಗ್ರೆಸ್ ಭದ್ರಕೋಟೆಯಾಗಿತ್ತು. ಪ್ರಸ್ತುತವಾಗಿ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ, ಪುನಃ ಈ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಲು ಪ್ರಯತ್ನ ನಡೆದಿದೆ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಇಲ್ಲಿನ ಗೋಕುಲ ರಸ್ತೆಯಲ್ಲಿ ಬುಧವಾರ ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆಯ ಕಾಂಗ್ರೆಸ್ ಪಕ್ಷದ ಕಾರ್ಯಾಲಯ ಉದ್ಘಾಟಿಸಿ ಅವರು ಮಾತನಾಡಿದರು. ಟಿಕೆಟ್ ಸಿಗದವರಿಗೆ ಅಸಮಾಧಾನವಾಗುವುದು ಸಹಜ. ಸದ್ಯ ಪಕ್ಷದ ನಾಯಕರು ಮೋಹನ ಲಿಂಬಿಕಾಯಿ ಅವರಿಗೆ ಟಿಕೆಟ್ ನೀಡಿದ್ದು, ಪಕ್ಷದ ನಿರ್ಧಾರದಂತೆ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಎಲ್ಲರು ಕೆಲಸ ಮಾಡಬೇಕು. ಈ ದೇಶ ಯಾವುದೇ ರಾಜಕೀಯ ಪಕ್ಷಗಳ ಸ್ವತ್ತಲ್ಲ, ಈ ಕ್ಷೇತ್ರದಲ್ಲಿ ಪ್ರಜ್ಞಾವಂತ ಮತದಾರರಿದ್ದಾರೆ. ತಮ್ಮ ಮತದಿಂದ ದೇಶ, ಸಮಾಜದ ಅಭಿವೃದ್ಧಿಗೆ ಯಾವ ರೀತಿ ಅನುಕೂಲವಾಗುತ್ತದೆ, ಯಾರು ಯಾವ ರೀತಿ ಕೆಲಸ ಮಾಡಿದ್ದಾರೆ ಎಂಬುದನ್ನು ಯೋಚಿಸಿ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಮಾತನಾಡಿ, ಈ ಕ್ಷೇತ್ರಕ್ಕೆ ಆರು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. 2020ರಲ್ಲಿ ಕೋವಿಡ್ ಕಾರಣ ನಾಲ್ಕು ತಿಂಗಳು ಚುನಾವಣೆಯನ್ನು ಮುಂದೂಡಲಾಗಿತ್ತು. ಅದರಂತೆ ಈಗ ಜೂನ್‌ನಲ್ಲಿ ಚುನಾವಣೆ ನಡೆದರೆ ಈ ತಿಂಗಳ ಅಂತ್ಯದೊಳಗೆ ಚುನಾವಣೆಯ ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ ಎಂದರು.

ಹುಬ್ಬಳ್ಳಿ-ಧಾರವಾಡ ಕಾಂಗ್ರೆಸ್ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ಅಲ್ತಾಫ್ ಹಳ್ಳೂರ, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಅನಿಲಕುಮಾರ ಪಾಟೀಲ, ಮಾಜಿ ಶಾಸಕ ಎಂ.ಎಸ್. ಅಕ್ಕಿ, ಹು-ಧಾ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ, ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ್ ಪಾಟೀಲ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್. ಆರ್.ಪಾಟೀಲ, ಮುಖಂಡ ಸದಾನಂದ ಡಂಗನವರ, ಸುನೀಲ್ ಮರಾಠೆ ಇದ್ದರು.



ಹಿಜಾಬ್ ಧರಿಸಲು ಅನುಮತಿ ನೀಡಿದ್ದನ್ನು ಖಂಡಿಸಿ ಪ್ರತಿಭಟನೆ

• **ಹುಬ್ಬಳ್ಳಿ:** ರಾಜ್ಯ ಸರ್ಕಾರ ಶಾಲಾ-ಕಾಲೇಜ್‌ಗಳಲ್ಲಿ ಹಿಜಾಬ್ ಧರಿಸಲು ಅನುಮತಿ ನೀಡಿರುವುದನ್ನು ಖಂಡಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಹಿಜಾಬ್ ಧರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ,ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ, ಶಿಕ್ಷಣ ಸಚಿವರ ಮಧು ಬಂಗಾರಪ್ಪ ಅವರ ಭಾವಚಿತ್ರಗಳ ಧಹಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ಮುಸ್ಲಿಂ ಸಮುದಾಯ ಮತ ಬ್ಯಾಂಕ್ ಹಾಗೂ ಓಲೈಕೆಗಾಗಿ 2022ರಲ್ಲಿ ಶಾಲಾ ಕಾಲೇಜ್‌ಗಳಲ್ಲಿ ವಸ್ತ್ರ ಸಂಹಿತೆ ನಿಗದಿ ಪಡಿಸಿದ ಬಿಜೆಪಿ ಆದೇಶವನ್ನು ವಾಪಾಸ್ ಪಡೆದಿದ್ದು, ಇದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಮಾತನಾಡಿ, ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ವಸ್ತ್ರ ಸಂಹಿತೆ ವಾಪಾಸ್ ಪಡೆದಿದ್ದಾರೆ. ಮುಸ್ಲಿಂ ಮತ ಬ್ಯಾಂಕ್ ಸಲುವಾಗಿ ಇಡೀ ಶಿಕ್ಷಣ ವ್ಯವಸ್ಥೆ ಬಲಿ ಕೊಡುವ ಕೆಲಸ ಸರ್ಕಾರ ಮಾಡಿದೆ. ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದ್ದು, ಹಿಂಪಡೆಯುವ ಮೂಲಕ ಕಾನೂನು ಉಲ್ಲಂಘನೆ ಮಾಡಿದೆ. ಶ್ರೀರಾಮ ಸೇನೆ ಸಿಎಂ ಹಾಗೂ ಶಿಕ್ಷಣ ವಿರುದ್ಧ ನ್ಯಾಯಾಲಯದಲ್ಲಿ ಕೇಸ್ ದಾಖಲಿಸುತ್ತೇವೆ ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಮವಸ್ತ್ರ ಮಹತ್ವ ಗೊತ್ತಿಲ್ಲ, ಇವರ ರಾಜಕೀಯ ಹಿತಾಸಕ್ತಿಯಿಂದ ವಿದ್ಯಾರ್ಥಿಗಳನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಹಿಜಾಬ್ ಹಾಕಿಕೊಂಡು ಬಂದಲ್ಲಿ ಕೇಸರಿ ವಸ್ತ್ರ ಹಾಕಿಕೊಂಡು ಹೋಗಿ ಎಂದರು. ಮುಸ್ಲಿಂ ಸಮುದಾಯದ ಓಲೈಕೆ ಮಾಡುತ್ತಿದ್ದಾರೆ. ಸರ್ಕಾರ ಮುಸ್ಲಿಂ ಸಮುದಾಯಕ್ಕೆ 600 ಕೋಟಿ ನೀಡುತ್ತಿದೆ. ಈಗ ಹಿಜಾಬ್ ಧರಿಸಲು ಅನುಮತಿ ನೀಡಲಾಗುತ್ತಿದೆ. ಇದು ಗಲಭೆಗೆ, ಶಾಂತಿ, ಸುವ್ಯವಸ್ಥೆ ಹಾಳಾಗಲಿದ್ದು, ವಿದ್ಯಾರ್ಥಿ ವರ್ಗ ಒಡೆಯುವ ಕೆಲಸ ಸರ್ಕಾರ ಮಾಡುತ್ತಿದೆ ಎಂದರು. ಮಂಜುನಾಥ ಕಾಟಕರ, ಪ್ರವೀಣ ಮಾಳದಕರ, ರಘು ಯಲ್ಲಕ್ಕನವರ, ಗುಣಧರ ದಡೋತಿ ಸೇರಿದಂತೆ ಅನೇಕರಿದ್ದರು.



ನಾಳೆಯಿಂದ 12ನೇ ಮೇ ಸಾಹಿತ್ಯ ಮೇಳ

• **ಹುಬ್ಬಳ್ಳಿ:** 12 ನೇ ಮೇ ಸಾಹಿತ್ಯ ಮೇಳ ನಗರದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮೇ 16 ಹಾಗೂ 17 ರಂದು ಹಮ್ಮಿಕೊಳ್ಳಲಾಗಿದೆ ಎಂದು ಎಂದು ಪ್ರಗತಿಪರ ಚಿಂತಕ, ಸಾಹಿತಿ ಬಸವರಾಜ ಸೂಳಿಭಾವಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗದಗಿನ ಲಡಾಯಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಕ, ಕವಲಕ್ಕಿಯ ಕವಿ ಪ್ರಕಾಶನ ಹಾಗೂ ಮೇ ಸಾಹಿತ್ಯ ಮೇಳ ಹುಬ್ಬಳ್ಳಿ ಬಳಗದ ಸಹಯೋಗದಲ್ಲಿ ಮೇಳ ನಡೆಯಲಿದೆ ಎಂದರು.

ಮೇ 16ರಂದು ಬೆಳಗ್ಗೆ 10 ಕ್ಕೆ ಉದ್ಘಾಟನಾ ಗೋಷ್ಠಿಯನ್ನು ಸನತಕುಮಾರ ಬೆಳಗಲಿ, ಬಿ.ಎಸ್. ಸೊಪ್ಪಿನ, ಕೆ.ಎಸ್. ಶರ್ಮಾ, ವಿವೇಕಾನಂದ ದೊಡಮನಿ, ಬೀಬೀಜಾನ್ ಮುಲ್ಲಾ, ಫರೀದಾ ಕರ್ನೂಲ್ ಮತ್ತು ಲಿನೆಟ್ ಡಿಸಿಲ್ವ ಉದ್ಘಾಟಿಸಲಿದ್ದಾರೆ ಎಂದರು. ಸಾಂವಿಧಾನಿಕ ಪ್ರಜಾಸತ್ತೆ: ಸ್ವರೂಪ-ಸಂಘರ್ಷದ ಇತಿಹಾಸ, ವರ್ತಮಾನ ಭಾರತದಲ್ಲಿ ಸಾಂವಿಧಾನಿಕ ಪ್ರಜಾಸತ್ತೆ: ಏನು ಎತ್ತ, ಪ್ರಜಾಸತ್ತೆಯ ಮೇಲಿನ ದಾಳಿ: ಸೃಜನಶೀಲ ಸ್ಪಂದನೆ, ಪ್ರಜಾಸತ್ತೆ ಅಡಿಯಲ್ಲಿ ಅಸ್ಮಿತೆಯ ರಾಜಕಾರಣ, ಎಸ್‌ಐಆರ್: ಸಮಸ್ಯೆ-ಜನಾಂದೋಲನ ಹಾಗೂ ಇತರ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ. ಮೇ 17ರಂದು ಬೆಳಗ್ಗೆ 8.30ಕ್ಕೆ ಚನ್ನಮ್ಮ ವೃತ್ತದಿಂದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದವರೆಗೆ ಎಸ್‌ಐಆರ್ ರದ್ದುಗೊಳಿಸುವ ಕುರಿತು ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು. ಶ್ಯಾಮಲಾ ಗುರುಪ್ರಸಾದ, ಇಸಬೆಲ್ಲ ದಾಸ್, ಗುರುನಾಥ ಉಳ್ಳಿಕಾಶಿ, ನಾಗರಾಜ ಗುರಿಕಾರ, ಲಿಂಗರಾಜ ಅಂಗಡಿ, ಮಹೇಶ ಪತ್ತಾರ, ಸುನಂದಾ ಕಡಮೆ ಹಾಗೂ ಇತರರಿದ್ದರು.



ಸರಳ ಬದುಕಿಗೆ ವಚನಗಳು ಅವಶ್ಯ: ಪ್ರೊ. ಎಸ್.ವಿ. ಪಟ್ಟಣಶೆಟ್ಟಿ

• **ಹುಬ್ಬಳ್ಳಿ:** ಬಸವಾದಿ ಶರಣರ ವಚನ ಸಾಹಿತ್ಯಕ್ಕೆ ಅಳಿವು ಎಂಬುವುದು ಇಲ್ಲ, ಜನಸಾಮಾನ್ಯರ ಸರಳ ಬದುಕಿಗೆ ವಚನಗಳು ತುಂಬ ಅವಶ್ಯಕವಾಗಿವೆ ಎಂದು ಶರಣ ಸಾಹಿತಿ ಪ್ರೊ. ಎಸ್. ವಿ. ಪಟ್ಟಣಶೆಟ್ಟಿ ತಿಳಿಸಿದರು.

ನಗರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ಹುಬ್ಬಳ್ಳಿ ಶಹರ ವತಿಯಿಂದ ಏರ್ಪಡಿಸಿದ್ದ ಶರಣ ಸಾಹಿತ್ಯ ಚಿಂತನ ಮಂಥನ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

12ನೇ ಶತಮಾನದ ವಚನಕಾರರ ವಿಚಾರಧಾರೆಯನ್ನು ಇಂದಿನ ಸಮಾಜಕ್ಕೆ ಅಳವಡಿಸಿಕೊಳ್ಳಲು ವಚನ ಸಾಹಿತ್ಯ ತುಂಬಾ ಸಹಕಾರಿಯಾಗಿದೆ. ಇದು ಸಮಾನತೆ, ಕಾಯಕ ತತ್ವ ದಾಸೋಹ ಮತ್ತು ಸಾಮಾಜಿಕ ಪರಿವರ್ತನೆಗೆ ಶರಣರ ವಚನಗಳ ಬೆಳಕಿನಲ್ಲಿ ಚಿಂತನೆ ನಡೆಸಿ, ಬದುಕನ್ನು ಸರಳ ಮತ್ತು ಪಾವನವಾಗಿಸುವ ಮಾರ್ಗ ತೋರುತ್ತದೆ ಎಂದರು.

ಜಾನಪದ ಕಲಾವಿದ ಡಾ. ರಾಮು ಮೂಲಗಿ ಮಾತನಾಡಿ, ಪ್ರೊ. ಎಸ್.ವ್ಹಿ. ಪಟ್ಟಣಶೆಟ್ಟಿ ಅವರು ಶರಣ ಸಾಹಿತಿಗಳಾಗಿ ಶರಣ ಸಂಸ್ಕೃತಿಯ ಉಳಿವಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಹುಬ್ಬಳ್ಳಿ ತಾಲೂಕು ಅಧ್ಯಕ್ಷ ಗುರುಸಿದ್ದಪ್ಪ ಎಂ. ಬಡಿಗೇರ ಪ್ರಾಸ್ತಾವಿಸಿದರು. ಪ್ರೊ. ಎಸ್ .ವಿ. ಪಟ್ಟಣಶೆಟ್ಟಿ ಅವರಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನಿಂದ ಅಭಿನಂದಿಸಲಾಯಿತು. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ , ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿ ಉಮಾದೇವಿ, ಡಾ ಪೂರ್ಣಿಮಾ ಬಗಲಿ, ಪತ್ರಕರ್ತ ಗಿರೀಶ ಪಟ್ಟಣಶೆಟ್ಟಿ , ಪ್ರಭುದೇವರು, ಕೋಶಾಧ್ಯಕ್ಷೆ ಗೀತಾ ಅಂಗಡಿ, ಕಾರ್ಯದರ್ಶಿ ಮಲ್ಲಿಕಾರ್ಜುನ ಕಮ್ಮಾರ , ಶರಣ ಸಾಹಿತ್ಯ ಪರಿಷತ್ತಿನ ಸದಸ್ಯ ವಿಜಯಾ ಗುಡಗೇರಿ, ಪಾರ್ವತಿ ಕಂಬಳಿ, ಶೀತಲ ಚಿನ್ನಪ್ಪನವರ ಇದ್ದರು.



ಹುಬ್ಬಳ್ಳಿ
ಶುಕ್ರವಾರ, 15 ಮೇ 2026
ಸಂಪುಟ 16, ಸಂಚಿಕೆ 51, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಹೊಸಬಾಳೆ ನಿಲುವಿಗೆ ನರಾವಣೆ ಸಹಮತ | ೦೭ · ಕೆಂಕಿದರೆ ನಿರ್ಣಾಯಕ ತಿರುಗೇಟು | ೦೭ · ಇಂದಿನಿಂದ ಪ್ರಧಾನಿ 5 ರಾಷ್ಟ್ರಗಳ ಪ್ರವಾಸ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ ಉಪರಿ ಚತುರ್ದಶಿ, ನಕ್ಷತ್ರ: ಅಶ್ವಿನಿ

ದಿನದ ಮಾತು

ಸಜ್ಜನರ ದರ್ಶನ ಒಳ್ಳೆಯದು. ಅವರ ಹಿತೋಪದೇಶ ಕೇಳುವುದು ಇನ್ನೂ ಒಳ್ಳೆಯದು.
▲ ನೀತಿ ಮಂಜರಿ

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ
ಲೇಖನ
• ಎರಿಕ್ ಸೋಲ್ಹೈಮ್
• ಪುಟ ೬

ಕಿರುಸುದ್ದಿ

ವಿ.ಡಿ. ಸತೀಶನ್ ಕೇರಳದ ನೂತನ ಮುಖ್ಯಮಂತ್ರಿ



• **ತಿರುವನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.
• ಪುಟ ೭

ಉ.ಪ್ರದೇಶದಲ್ಲಿ ಬಿರುಗಾಳಿ ಮಳೆಗೆ 111 ಜನರು ಬಲಿ

• **ಲಖನೌ:** ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.
• ಪುಟ ೭

ಪರವಾನಗಿ ಇದೆಯೇ?: ಮಮತಾಗೆ ಬಾರ್ ಕೌನ್ಸಿಲ್
• ಪುಟ ೭

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ
• ಪುಟ ೭

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ: ಬಿಜೆಪಿ
• ಪುಟ ೫



ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ: ತೈವಾನ್ ವಿಚಾರ ರಣರಂಗ
• ಪುಟ ೭
ಸುದ್ದಿ ಸಮಗ್ರ

ಮೋದಿ ಆರಂಭಿಸಿದ ಇಂಧನ ಉಳಿತಾಯ ಅಭಿಯಾನಕ್ಕೆ ವೇಗ
ದೇಶವ್ಯಾಪಿ ಮಿತವ್ಯಯ

- ಸಚಿವರ ಸೈಕಲ್ ಸವಾರಿ, ನಡೆದು ಕಚೇರಿಗೆ; ಮೆಟ್ರೋ ಬಳಕೆ
- ಬೆಂಗಾವಲು ವಾಹನ ಕಡಿತ, ವರ್ಕ್ ಫ್ರಂ ಹೋಮ್ ಕ್ರಮ ಜಾರಿ
- ಜನಪ್ರತಿನಿಧಿಗಳಿಗೆ ಸಾಥ್ ನೀಡಿದ ಅಧಿಕಾರಿಗಳು, ಸಾರ್ವಜನಿಕರು

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿಯಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ಅಸ್ಥಿರತೆಯ ನಡುವೆ ಪೆಟ್ರೋಲ್-ಡೀಸೆಲ್ ಉಳಿತಾಯ ಮತ್ತು ವಿದೇಶಿ ವಿನಿಮಯ ಸಂರಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ನೀಡಿದ ಕರೆಗೆ ದೇಶದ ವಿವಿಧ ರಾಜ್ಯಗಳಲ್ಲಿ ಗುರುವಾರ ಭಾರೀ ಸ್ಪಂದನೆ ವ್ಯಕ್ತವಾಯಿತು. ಮಂತ್ರಿಗಳು, ರಾಜ್ಯಪಾಲರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೈಕಲ್ ಸವಾರಿ, ನಡೆದು ಕಚೇರಿಗೆ ತೆರಳುವುದು, ಸಾರ್ವಜನಿಕ ಸಾರಿಗೆ ಬಳಸುವುದು, ಅಧಿಕೃತ ಬೆಂಗಾವಲು ವಾಹನಗಳ ಕಡಿತಗೊಳಿಸುವುದು ಹಾಗೂ ವರ್ಕ್ ಫ್ರಂ ಹೋಮ್ ವ್ಯವಸ್ಥೆ ಜಾರಿಗೊಳಿಸುವಂತಹ ಕ್ರಮಗಳನ್ನು ಕೈಗೊಂಡರು.



ಉತ್ತರ ಪ್ರದೇಶದಲ್ಲಿ ಹಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಪರಿಸರ ಸ್ನೇಹಿ ಸಂಚಾರಕ್ಕೆ ಉತ್ತೇಜನ ನೀಡಿದರು. ➡ಪುಟ ೪



ವಿಧಾನ ಭವನಕ್ಕೆ ಬೈಕ್‌ನಲ್ಲಿ ಫಡ್ನವೀಸ್

• **ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ ಸಣ್ಣ ತ್ಯಾಗ ಮಾತ್ರ ಕೇಳಿದ್ದಾರೆ ಎಂದು ಹೇಳಿದ ಅವರು, ರಾಜ್ಯದಲ್ಲಿ ಸಚಿವ ಬೆಂಗಾವಲು ವಾಹನಗಳ ಕಡಿತ, ಅನಗತ್ಯ ವಿದೇಶ ಪ್ರವಾಸ ರದ್ದು ಹಾಗೂ ಆರು ತಿಂಗಳು ಬೃಹತ್ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದರು.



ಎತ್ತಿನಬಂಡಿಯಲ್ಲಿ ಮದುವೆ ಮೆರವಣಿಗೆ

• **ರಾಯ್ಪುರ:** ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯ ಪೊಲೀಸ್ ಸಿಬ್ಬಂದಿ ಕುಬೇರ್ ದೇಹರಿ ತಮ್ಮ ಮದುವೆ ಮೆರವಣಿಗೆಯಲ್ಲಿ ವಾಹನಗಳ ಬದಲು ಎತ್ತಿನಬಂಡಿಗಳನ್ನು ಬಳಸುವ ಮೂಲಕ ಗಮನ ಸೆಳೆದಿದ್ದಾರೆ. ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದನೆಯಾಗಿ ಈ ಕ್ರಮ ಕೈಗೊಂಡಿದ್ದಾಗಿ ಅವರು ಹೇಳಿದ್ದಾರೆ. ಈ ವಿಶಿಷ್ಟ ಮೆರವಣಿಗೆ ಪರಿಸರ ಸಂರಕ್ಷಣೆ ಹಾಗೂ ಪರಂಪರೆ ಉಳಿವಿನ ಸಂದೇಶ ನೀಡಿದೆ.

ದಿಲ್ಲಿ ಸರ್ಕಾರದಿಂದ ವಾರಕ್ಕೆ 2 ದಿನ ವರ್ಕ್ ಫ್ರಂ ಹೋಮ್

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದಿಸಿದ ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಸರ್ಕಾರಿ ಕಚೇರಿಗಳಿಗೆ ವಾರದಲ್ಲಿ ಎರಡು ದಿನ ವರ್ಕ್ ಫ್ರಂ ಹೋಮ್ ಘೋಷಿಸಿದರು. ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಬಳಕೆ ಮಾಡಲಿದ್ದು, ವಾರದಲ್ಲಿ ಒಂದು ದಿನ ನೋ ವೆಹಿಕಲ್ ಡೇ ಆಚರಿಸಲು ಕರೆ ನೀಡಲಾಗಿದೆ. ಮುಖ್ಯಮಂತ್ರಿ ಬೆಂಗಾವಲು ವಾಹನಗಳ ಸಂಖ್ಯೆಯಲ್ಲಿ ಶೇ.60ರಷ್ಟು ಕಡಿತಗೊಂಡಿದೆ.

ರಾಜ್ಯಪಾಲರ ಬೆಂಗಾವಲು ಪಡೆ ಗಾತ್ರ ಅರ್ಧಕ್ಕೆ ಇಳಿಕೆ



• **ಬೆಂಗಳೂರು:** ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂಧನ ಉಳಿತಾಯಕ್ಕಾಗಿ ಕರೆ ನೀಡಿರುವುದನ್ನು ಬೆಂಬಲಿಸಿರುವ ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗುರುವಾರ ತಮ್ಮ ಅಧಿಕೃತ ಬೆಂಗಾವಲು ಪಡೆಯ ಗಾತ್ರವನ್ನು ಅರ್ಧದಷ್ಟು ಕಡಿಮೆ ಮಾಡಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಇಂಧನ ಸಂರಕ್ಷಣೆ ಮತ್ತು ವಿದೇಶಿ ವಿನಿಮಯ ವೆಚ್ಚವನ್ನು ಕಡಿಮೆ ಮಾಡುವ ಪ್ರಧಾನಿಯವರ ಮನವಿಗೆ ರಾಜ್ಯಪಾಲರು ಈ ಕ್ರಮ ಕೈಗೊಂಡಿದ್ದಾರೆ.

---

16 ರಾಜ್ಯ, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ
ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ

• **ಹೊಸದಿಲ್ಲಿ:** ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಭಾರೀ ಸದ್ದು ಮಾಡಿದ್ದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಮೂರನೇ ಹಂತವನ್ನು ಮೇ 30ರಿಂದ ಆರಂಭಿಸುವುದಾಗಿ ಭಾರತೀಯ ಚುನಾವಣಾ ಆಯೋಗ (ಇಸಿಐ) ಶುಕ್ರವಾರ ಘೋಷಿಸಿದೆ. ಇದರಲ್ಲಿ ಕರ್ನಾಟಕ ಸೇರಿದಂತೆ ಒಟ್ಟು 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 36.73 ಕೋಟಿ ಮತದಾರರು ಒಳಗೊಂಡಿದ್ದಾರೆ.

ದಿಲ್ಲಿ, ಒಡಿಶಾ, ಮಿಜೋರಾಂ, ಸಿಕ್ಕಿಂ, ಮಣಿಪುರ, ಉತ್ತರಾಖಂಡ, ಆಂಧ್ರ, ಅರುಣಾಚಲ ಪ್ರದೇಶ, ಹರ್ಯಾಣ, ಚಂಡೀಗಢ, ತೆಲಂಗಾಣ, ಪಂಜಾಬ್, ಕರ್ನಾಟಕ, ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್, ನಾಗಾಲ್ಯಾಂಡ್, ತ್ರಿಪುರಾ, ದಾದರ್ ಮತ್ತು ನಗರ್ ಹವೇಲಿ ಹಾಗೂ ದಾಮನ್, ದಿಯುನಲ್ಲಿ ಮೇ 30ರಂದು ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಲಿದೆ. ವಿಪಕ್ಷಗಳು ಆಡಳಿತ ನಡೆಸುತ್ತಿರುವ ಪಂಜಾಬ್, ಜಾರ್ಖಂಡ್, ಕರ್ನಾಟಕ, ತೆಲಂಗಾಣ ರಾಜ್ಯಗಳಲ್ಲೂ ಏಕಕಾಲದಲ್ಲಿ ಎಸ್‌ಐಆರ್ ನಡೆಸಲಾಗುವುದು. 3.94 ಲಕ್ಷಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) 36.73 ಕೋಟಿ ಮತದಾರರ ಮನೆ-ಮನೆಗೆ ತೆರಳಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮಾಹಿತಿ ಸಂಗ್ರಹಿಸಲಿದ್ದಾರೆ. ➡ಪುಟ ೪



ಕರ್ನಾಟಕದಲ್ಲಿ
- ಜೂ.20-29: ಸಿದ್ಧತೆ, ತರಬೇತಿ ಮತ್ತು ಮುದ್ರಣ
- ಜೂ.30-ಜು.29: ಬಿಎಲ್‌ಒಗಳಿಂದ ಮನೆ ಮನೆ ಭೇಟಿ
- ಜು.29ರಿಂದ ಮತಗಟ್ಟೆಗಳ ಪ್ರಕ್ರಿಯೆ
- ಆ.5: ಮತದಾರರ ಕರಡು ಪಟ್ಟಿ ಪ್ರಕಟ
- ಆ.5-ಸೆ.4: ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶ
- ಆ.5-ಅ.3: ಆಕ್ಷೇಪಣೆ ಅರ್ಜಿಗಳ ಇತ್ಯರ್ಥ /ನೋಟಿಸ್ ಅವಧಿ
- ಅ.7: ಅಂತಿಮ ಮತದಾರರ ಪಟ್ಟಿ ಪ್ರಕಟ

ಪಟ್ಟಿಯಲ್ಲಿ ಅರ್ಹರಿಗಷ್ಟೇ ಸ್ಥಾನ

ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರ ಹೆಸರು ಮಾತ್ರ ಸೇರಬೇಕು, ಅನರ್ಹರ ಹೆಸರುಗಳು ಸೇರಬಾರದು ಎಂಬ ಉದ್ದೇಶದಿಂದ ಎಸ್‌ಐಆರ್ ನಡೆಸಲಾಗುತ್ತಿದೆ. ಹಂತ-3ರ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎಲ್ಲ ಮತದಾರರೂ ಉತ್ಸಾಹದಿಂದ ಭಾಗವಹಿಸಿ ತಮ್ಮ ವಿವರ ನಮೂನೆಗಳನ್ನು ಭರ್ತಿ ಮಾಡಬೇಕು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮನವಿ ಮಾಡಿದ್ದಾರೆ. ಎಸ್‌ಐಆರ್ 2ನೇ ಹಂತದಲ್ಲಿ 9 ರಾಜ್ಯ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 60 ಲಕ್ಷಕ್ಕೂ ಅಧಿಕ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ.

ಆರೆಸ್ಸೆಸ್ ಸರಕಾರ್ಯವಾಹ ಹೊಸಬಾಳೆ ಬಣ್ಣನೆ
ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ



ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ ಆಯೋಜಿಸಿದ್ದ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ಇದ್ದರು.

• **ಬೆಂಗಳೂರು:** ಜೀವನದಲ್ಲಿ ತಮಗಾಗಿ ಏನನ್ನೂ ಬಯಸದ ತ್ಯಾಗದ ಪರಮ ಮೂರ್ತಿ ಮೈ.ಚ. ಜಯದೇವ. ಅವರು ಧ್ಯೇಯಜೀವಿ ಮಾತ್ರವಲ್ಲದೇ ಅವಿಶ್ರಾಂತರು ಮತ್ತು ಕರ್ಮಯೋಗಿಯೂ ಆಗಿದ್ದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬಣ್ಣಿಸಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪುಸ್ತಕದ ಕುರಿತು ಅವರು ಮಾತನಾಡಿದರು. ಒಬ್ಬ ಸಂಘಟಕ, ಜನರನ್ನು ಸೇರಿಸುವ ಸಾಮರ್ಥ್ಯ ಇರುವವರು ಜೀವನದ ವಿವಿಧ ಮುಖಗಳಲ್ಲಿ ಅದನ್ನು ಸಾಕಾರಗೊಳಿಸುವ ಪ್ರಯತ್ನ ಮಾಡಿದರು. ➡ಪುಟ ೪

> **ಅವಿಶ್ರಾಂತ ಧ್ಯೇಯ ಜೀವಿ ಜಯದೇವ ಅವರ ಜೀವನದ ಚರಿತ್ರೆ ಅಲ್ಲ; ಅವರು ಸ್ಥಾಪಿಸಿದ ಸಂಸ್ಥೆಗಳ ಪುನರುಜ್ಜೀವನದ ಇತಿಹಾಸ ಅಡಗಿರುವ ಮೌಲಿಕ ಪುಸ್ತಕ. ಅವರ ಧ್ಯೇಯಾ ದರ್ಶಗಳು ನಮ್ಮೊಂದಿಗೆ ಇರುತ್ತವೆ.**
> ■ **ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ,** ಸುತ್ತೂರು ಮಠಾಧೀಶರು

ಯಾರನ್ನೂ ಓಲೈಸುವ, ನೋಯಿಸುವ ಉದ್ದೇಶವಿಲ್ಲ: ಸಿಎಂ ಸಿದ್ದರಾಮಯ್ಯ
ಧರ್ಮ, ಜಾತಿ ಆಚರಣೆ ಗೌರವಿಸುವ ಉದ್ದೇಶ



• **ಬೆಂಗಳೂರು:** ಸಂವಿಧಾನದ ಆಶಯವಾಗಿರುವ ಸರ್ವ ಧರ್ಮ ಸಮಭಾವದ ಆಶಯಕ್ಕೆ ಅನುಗುಣವಾಗಿಯೇ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪರಿಷ್ಕೃತ ವಸ್ತ್ರಸಂಹಿತೆ ಯನ್ನು ಜಾರಿಗೊಳಿಸಲಾಗಿದೆ. ಇದು ಯಾರನ್ನಾದರೂ ಓಲೈಸುವ ಇಲ್ಲವೇ ನೋಯಿಸುವ ಉದ್ದೇಶದ ವಸ್ತ್ರಸಂಹಿತೆ ಅಲ್ಲ, ಎಲ್ಲ ಜಾತಿ-ಧರ್ಮಗಳ ಆಚರಣೆ, ಸಂಪ್ರದಾಯಗಳನ್ನು ಗೌರವಿಸುವ ವಸ್ತ್ರಸಂಹಿತೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಸ್ತ್ರಸಂಹಿತೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಹಿಜಾಬ್ ಧರಿಸಲು ಅವಕಾಶ ನೀಡಿರುವುದು ಮುಸ್ಲಿಮರ ಓಲೈಕೆಯಾದರೆ, ಜನಿವಾರ, ಪೇಟ, ಟರ್ಬನ್ ಧರಿಸಲು ಅವಕಾಶ ನೀಡಿರುವುದು ಆಯಾಧರ್ಮಗಳ ಓಲೈಕೆ ಯಾಗುವುದೇ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಿರುವ ವಸ್ತ್ರಸಂಹಿತೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರಿಯ ವಿದ್ಯಾಲಯಗಳ ವಸ್ತ್ರಸಂಹಿತೆಗೆ ಅನುಗುಣವಾಗಿಯೇ ಇದೆ. ರಾಜ್ಯ ಸರ್ಕಾರ ಹೊರಡಿಸಿರುವ ವಸ್ತ್ರಸಂಹಿತೆಯನ್ನು ವಿರೋಧಿಸುವವರು ಕೇಂದ್ರೀಯ ವಿದ್ಯಾಲಯಗಳ ವಸ್ತ್ರಸಂಹಿತೆಯನ್ನೂ ವಿರೋಧಿಸಬೇಕಲ್ಲವೇ? ಯಾಕೆ ಈ ಹಿಪಾಕ್ರಸಿ ಎಂದಿದ್ದಾರೆ. ➡ಪುಟ ೪

ನಂಬಿಕೆ ಆಧಾರಿತ ಗುರುತು ಧರಿಸಲು ಅವಕಾಶ
ಸರ್ಕಾರವು ಸಾಂವಿಧಾನಿಕ ತತ್ವಗಳಿಗೆ ಅನುಗುಣವಾಗಿ ಎಲ್ಲಾ ಧರ್ಮ ಮತ್ತು ಸಂಪ್ರದಾಯಗಳ ಬಗ್ಗೆ ತಟಸ್ಥ ಮತ್ತು ಸಮಾನ ನಿಲುವು ಹೊಂದಿರಬೇಕಿದೆ. ಅದೇ ರೀತಿ ಯಾರಿಗೂ ತೊಂದರೆಯಾಗದಂತಹ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಆಚರಣೆಗಳಿಂದಾಗಿ ಯಾವುದೇ ವಿದ್ಯಾರ್ಥಿಗೆ ಶಿಕ್ಷಣ ಹಕ್ಕು ನಿರಾಕರಣೆ ಆಗದಂತೆ ನೋಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಿಗದಿತ ಸಮವಸ್ತ್ರಕ್ಕೆ ಪೂರಕವಾಗಿ ಮತ್ತು ಅದಕ್ಕೆ ಹೊಂದಿಕೊಳ್ಳುವಂತೆ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಗುರುತುಗಳನ್ನು ಧರಿಸಲು ಅವಕಾಶ ಕಲ್ಪಿಸಲು ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಹಿಜಾಬ್ ಕುರಿತ ಸರ್ಕಾರದ ಕ್ರಮಕ್ಕೆ ಬಿವೈವಿ ಆಕ್ರೋಶ



• **ಬೆಂಗಳೂರು:** ಶಾಲಾ- ಕಾಲೇಜುಗಳಲ್ಲೂ ಹಿಂದುಗಳು, ಮುಸಲ್ಮಾನರೆಂದು ಬೆಂಕಿ ಹಚ್ಚುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದ್ದು, ಬರುವ ದಿನಗಳಲ್ಲಿ ರಾಜ್ಯದ ಜನರು ಇದಕ್ಕೆ ಉತ್ತರ ಕೊಡುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿವೃದ್ಧಿಯನ್ನು ಮರೆತು ಹಿಂದುಗಳಿಗೆ ಅಪಮಾನ ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಇತಿಶ್ರೀ ಹಾಡುವ ದಿನಗಳು ಬಂದೇ ಬರಲಿವೆ. ಆಗ ರಾಜ್ಯದ ಜನರೂ ಇದಕ್ಕೆ ಉತ್ತರ ಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪

ಮತೀಯ ವಿಷ ಬೀಜ ಬಿತ್ತುವ ಕೆಲಸ
ಶಾಸಕ ಮಹೇಶ್ ಟೆಂಗಿನಕಾಯಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದು ಮಕ್ಕಳಲ್ಲಿ ಮತೀಯ ವಿಷ ಬೀಜ ಬಿತ್ತಲು ಶುರು ಮಾಡಿದೆ ಎಂದು ಆರೋಪಿಸಿದರು. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2022ರಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ವಸ್ತ್ರಸಂಹಿತೆ ಬೇಕು ಎಂಬುದನ್ನು ನ್ಯಾಯಾಲಯ ಸಹ ಎತ್ತಿ ಹಿಡಿದಿತ್ತು. ಆದರೆ, ಇಂದು ಕಾಂಗ್ರೆಸ್ ಸರ್ಕಾರ ಹಿಜಾಬ್ ಧರಿಸಲು ತೀರ್ಮಾನ ಕೈಗೊಂಡಿದೆ ಎಂದು ದೂರಿದರು.

ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾದ ಪ್ರೇಮ್‌ಕುಮಾರ್
ಚಾಲಕನ ಪುತ್ರನಿಗೆ 15 ಚಿನ್ನದ ಪದಕ

▸ ದೇವಿತಾ ಸಿ. ಸುಬ್ಬಯ್ಯ

ದಿಗಂತ ವಿಶೇಷ

• **ಬೆಂಗಳೂರು:** ಸಾಮಾನ್ಯ ರೈತ ಕುಟುಂಬದ ಹಿನ್ನಲೆ ಹೊಂದಿರುವ ಹಾಗೂ ಟೆಂಪೋ ಚಾಲಕನ ಮಗ ಇಂದು ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾನೆ. ಈ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾನೆ.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಟೆಂಪೋ ಚಾಲಕ ಈಶ್ವರರಾವ್ ಹಾಗೂ ಲಕ್ಷ್ಮಿಬಾಯಿ ದಂಪತಿ ಮಗನಾಗಿರುವ ಕೆ.ಈ. ಪ್ರೇಮ್‌ಕುಮಾರ್ ಕೃಷಿ ವಿಜ್ಞಾನ ಪದವಿಯಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ.91.02 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಜತೆಗೆ ಒಟ್ಟು 15 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ ಹಲವಾರು ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾನೆ.

ಗ್ರಾಮೀಣ ಬದುಕಿನಿಂದ ಸಾಧನೆವರೆಗೆ: ರೈತ ಕುಟುಂಬದ ಹಿನ್ನೆಲೆಯಲ್ಲೇ ಬೆಳೆದ ಪ್ರೇಮ್‌ಕುಮಾರ್, ಬಾಲ್ಯದಿಂದಲೇ ಕೃಷಿ ಜೀವನವನ್ನು ಹತ್ತಿರದಿಂದ ಕಂಡವರು. ➡ಪುಟ ೪



> **ಕೃಷಿ ಕೇವಲ ಒಂದು ಕೋರ್ಸ್ ಅಲ್ಲ, ಅದು ದೇಶದ ಭವಿಷ್ಯ. ಶ್ರಮ, ಆಸಕ್ತಿ ಮತ್ತು ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಕೃಷಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ.**
> ■ **ಪ್ರೇಮ್‌ಕುಮಾರ್,** ಕೃಷಿ ವಿವಿ ವಿದ್ಯಾರ್ಥಿ

ಕೃಷಿಯಿಂದ ಕೃಷಿ ವಿಜ್ಞಾನಕ್ಕೆ
ಜಿಕೆವಿಕೆ ಶಿಕ್ಷಣದ ವೇಳೆ ಅವರು ಕೃಷಿಯ ವೈಜ್ಞಾನಿಕ ಅಂಶಗಳನ್ನು ಆಳವಾಗಿ ಅರ್ಥಮಾಡಿಕೊಂಡರು. ಮಣ್ಣು ವಿಜ್ಞಾನ, ಬೆಳೆ ಉತ್ಪಾದನೆ, ಬೀಜ ತಂತ್ರಜ್ಞಾನ, ಮತ್ತು ಕೃಷಿ ಸಂಶೋಧನೆಗಳಂತಹ ವಿಷಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಇದರೊಂದಿಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಿಂದ ಸಿಗುತ್ತಿದ್ದಂತಹ ಮಾರ್ಗದರ್ಶನದಿಂದ ಅತ್ಯುತ್ತಮ ಅಂಕಗಳೊಂದಿಗೆ 15 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ

• **ಚೆನ್ನೈ:** ಜೋಸೆಫ್ ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯದಲ್ಲಿ ಮದ್ಯಪಾನದ ನಿಯಮಗಳನ್ನು ಕಠಿಣಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಇನ್ನು ಮುಂದೆ ಮದ್ಯ ಖರೀದಿ ಅಥವಾ ಮಾರಾಟ ಮಾಡಲು ಕನಿಷ್ಠ 21 ವರ್ಷ ನಿಗದಿಪಡಿಸಿ ಮಹತ್ವದ ಆದೇಶ ಹೊರಡಿಸಿದೆ.



ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ವಿಜಯ್ ಸರ್ಕಾರ ಈ ಕ್ರಮ ಜಾರಿಗೆ ತಂದಿದೆ. ರಾಜ್ಯದಲ್ಲಿ ಮದ್ಯಪಾನ ನಿಯಂತ್ರಣ ಮತ್ತು ಸಾರ್ವಜನಿಕ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಗಾಗಲೇ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಸಮೀಪದಲ್ಲಿದ್ದ 717 ಟಾಸ್ಮಾಕ್ ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದ ಬೆನ್ನಲ್ಲೇ ಮತ್ತೊಂದು ಕ್ರಮ ಕೈಗೊಂಡಿದೆ. ➡ಪುಟ ೪

ಸುವೇಂದು ನೇತೃತ್ವದ ಬಿಜೆಪಿ ಸರ್ಕಾರದಿಂದ ಅಧಿಸೂಚನೆ
ಬಂಗಾಳ: ಗೋವಧೆಗೆ ನಿರ್ಬಂಧ

• **ಕೋಲ್ಕತ್ತಾ:** ಗೋಪ್ರೇಮಿಗಳ ಪಾಲಿಗೊಂದು ಖುಷಿ ಸುದ್ದಿ. ಪಶ್ಚಿಮ ಬಂಗಾಳದಲ್ಲಿ 1950ರ ಗೋವಧೆ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಬುಧವಾರ ಅಧಿಸೂಚನೆ ಹೊರಡಿಸಿದೆ.

ಮುಖ್ಯವಾಗಿ ಗೋವು, ಗೂಳಿ, ಎಮ್ಮೆ, ಎತ್ತು, ಕೋಣ ಇತ್ಯಾದಿಗಳನ್ನು ಸಾರ್ವಜನಿಕವಾಗಿ ವಧಿಸುವಂತಿಲ್ಲ. ಕಸಾಯಿಖಾನೆಗಳು ಕಡ್ಡಾಯವಾಗಿ ಕ್ಷಮತಾ ಪ್ರಮಾಣಪತ್ರ ಹೊಂದಿರಬೇಕು. ಕ್ಷಮತಾ ಪ್ರಮಾಣಪತ್ರವಿಲ್ಲದೆ ಗೂಳಿ, ಎಮ್ಮೆ, ಗೋವು, ಕರು, ಎತ್ತು ಇತ್ಯಾದಿ ಜಾನುವಾರುಗಳನ್ನು ವಧಿಸುವಂತಿಲ್ಲ.

2018ರ ಆ.6ರಂದು ಕೋಲ್ಕತ್ತಾ ಹೈಕೋರ್ಟ್ ನೀಡಿರುವ ತೀರ್ಪು ಮತ್ತು ಇದಕ್ಕೆ ಪೂರಕವಾಗಿ 2022ರ ಜೂ.8ರಂದು ಸರ್ಕಾರ ಜಾರಿಗೊಳಿಸಿದ ನಿಯಮಾವಳಿಗಳಿಗೆ ಬದ್ಧವಾಗಿ ಪ್ರಸ್ತುತ ನಿರ್ದೇಶ ಹೊರಡಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಗೋವು ಅಥವಾ ಹೋರಿಗಳಿಗೆ ತೀರಾ ವಯಸ್ಸಾಗಿದ್ದಲ್ಲಿ, ಗಾಯವಾಗಿದ್ದಲ್ಲಿ ಅಥವಾ ವಾಸಿಯಾಗಲು ಅಸಾಧ್ಯ ಕಾಯಿಲೆಗಳಿಂದ ಬಳಲುತ್ತಿರುವ ಸಂದರ್ಭದಲ್ಲಿ ಮಾತ್ರ ಅಧಿಕೃತ ಕಸಾಯಿಖಾನೆಗಳಲ್ಲಿ ಇವುಗಳ ವಧೆಗೆ ಸಮ್ಮತಿ ಕೊಡಲಾಗುವುದು.



ಕ್ಷಮತಾ ಪ್ರಮಾಣಪತ್ರ ಕಡ್ಡಾಯ
ಜಾನುವಾರು ವಧೆಗೆ ಯೋಗ್ಯವೆಂಬ ಕ್ಷಮತಾ ಅಥವಾ ಯೋಗ್ಯತಾ ಪ್ರಮಾಣಪತ್ರವಿಲ್ಲದೆ ಯಾರೂ ಗೂಳಿಗಳು, ಹೋರಿಗಳು, ಗೋವುಗಳು, ಕರುಗಳು, ಗಂಡು-ಹೆಣ್ಣು ಎಮ್ಮೆಗಳು, ಎಮ್ಮೆ ಮರಿಗಳನ್ನು ವಧಿಸಲು ಅಧಿಸೂಚನೆಯಲ್ಲಿ ಅವಕಾಶವಿಲ್ಲ. ಗೋವು ಅಥವಾ ಗೂಳಿ ವಧೆಗೆ ಅರ್ಹವೆಂಬ ಪ್ರಮಾಣಪತ್ರ ನೀಡುವ ಜವಾಬ್ದಾರಿ ಮುನ್ಸಿಪಾಲಿಟಿ ಅಧ್ಯಕ್ಷರು, ಪಂಚಾಯತ್ ಸಮಿತಿ ಸಭಾಪತಿ, ಸರ್ಕಾರಿ ಪಶುವೈದ್ಯಾಧಿಕಾರಿಗಳಿಗೆ ಇರಲಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 3,00,000 (3,10,000) ಅಪರಂಜಿ ಚಿನ್ನ: 1,62,330 (1,62,000) ಆಭರಣ ಚಿನ್ನ: 1,48,800 (1,48,500) ಚಿನ್ನ 10 ಗ್ರಾಂಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,398 (789↑) ಎನ್‌ಎಸ್‌ಇ 23,629 (277↑)

$1 = ₹95.71

ಇಂಜಿನಿಯರಿಂಗ್ ವಿದ್ಯಾರ್ಥಿಗಳು ನೀರುಪಾಲು

- ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳು
- ಮರಬನಹಳ್ಳಿ ಬಳಿ ಭದ್ರಾ ನಾಲೆಗಿಳಿದು ಹುಡುಗಾಟ
- ನೀರಿನ ಸೆಳೆತಕ್ಕೆ ಸಿಲುಕಿದ ಓರ್ವ, ರಕ್ಷಣೆಗೆ ಮುಂದಾದ ಇತರರು
- ನಾಲೆಯಲ್ಲಿ ಅಪಾರ ನೀರಿದ್ದ ಕಾರಣ ಎಲ್ಲರೂ ಅಪಾಯದಲ್ಲಿದ್ದಾಗ ಸ್ಥಳೀಯರಿಂದ ರಕ್ಷಣೆ
- 8 ಜನರ ಪ್ರಾಣ ರಕ್ಷಣೆ, 2 ವಿದ್ಯಾರ್ಥಿಗಳ ಸಾವು

ದಾವಣಗೆರೆ: ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪೈಕಿ ಇಬ್ಬರು ನೀರು ಪಾಲಾಗಿದ್ದು, ಉಳಿದ 8 ಮಂದಿ ಸ್ಥಳೀಯರ ನೆರವಿನೊಂದಿಗೆ ಪ್ರಾಣಾಪಾಯದಿಂದ ಪಾರಾದ ಘಟನೆ ಜಿಲ್ಲೆಯ ಚನ್ನಗಿರಿ ತಾಲೂಕು ಮರಬನಹಳ್ಳಿ ಗ್ರಾಮ ಸಮೀಪದ ಭದ್ರಾ ನಾಲೆಯಲ್ಲಿ ಗುರುವಾರ ಮಧ್ಯಾಹ್ನ ವರದಿಯಾಗಿದೆ.

ನಗರದ ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಐಎಸ್ ವಿಭಾಗದ 8ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಮಾನಸಿ ಸಿಂಧೆ (22), ಹೆಚ್.ಎಸ್. ವಿವೇಕ್(22) ಮೃತ ದುರ್ದೈವಿಗಳು. ನಾಲ್ಕೈದು ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿ 2 ತಿಂಗಳ ಇಂಟರ್ನ್‌ಶಿಪ್ ಮುಗಿಸಿಕೊಂಡು ಬಂದು ಅಂತಿಮ ಪರೀಕ್ಷೆಗೆ ತಯಾರಾಗುತ್ತಿದ್ದ ನಾಲ್ವರು ವಿದ್ಯಾರ್ಥಿಗಳು, ಆರು ವಿದ್ಯಾರ್ಥಿನಿಯರು ವಿಹಾರಕ್ಕೆಂದು ದ್ವಿಚಕ್ರ ವಾಹನಗಳಲ್ಲಿ ಮರಬನಹಳ್ಳಿ ಸಮೀಪದ ಭದ್ರಾ ನಾಲೆಯ ಬಳಿ ತೆರಳಿದ್ದರು. ಬೇಸಿಗೆ ಬೆಳೆಗೆಂದು ಭದ್ರಾ ನಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಬಿಡಲಾಗಿದ್ದು, ನೀರಿನಲ್ಲಿ ಆಟವಾಡುತ್ತಿದ್ದ ವಿದ್ಯಾರ್ಥಿಗಳ ಪೈಕಿ ಓರ್ವ ವಿದ್ಯಾರ್ಥಿ ಕಾಲು ಜಾರಿ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಆ ವಿದ್ಯಾರ್ಥಿ ರಕ್ಷಣೆಗೆ ಬಂದ ಇನ್ನೊಬ್ಬರು ನೀರಿನ ಸೆಳವಿಗೆ ಸಿಕ್ಕಿದ್ದಾರೆ.

ಹೀಗೆ ಹತ್ತೂ ಜನ ವಿದ್ಯಾರ್ಥಿಗಳು ನಾಲೆಯಲ್ಲಿ ಹರಿಯುತ್ತಿದ್ದ ನೀರಿನ ರಭಸಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ವಿದ್ಯಾರ್ಥಿಗಳ ಕೂಗಾಟ ಕೇಳಿ ಸ್ಥಳೀಯ ರೈತರು, ಗ್ರಾಮಸ್ಥರು, ದಾರಿಹೋಕರು ನಾಲೆಗೆ ಹಾರಿ, ನೀರಿನ ಸೆಳೆತಕ್ಕೆ ಸಿಲುಕಿದ್ದವನ್ನು ರಕ್ಷಣೆ ಮಾಡಿದ್ದು, ಈ ಪೈಕಿ ವಿವೇಕ್ ಸಾಕಷ್ಟು ನೀರು ಕುಡಿದಿದ್ದರಿಂದ ಪ್ರಥಮ ಚಿಕಿತ್ಸೆ ನೀಡಿ ಬದುಕಿಸುವ ಪ್ರಯತ್ನ ಮಾಡುವಷ್ಟರಲ್ಲಾಗಲೇ ಆತ ಪ್ರಾಣ ಬಿಟ್ಟಿದ್ದ. ನೀರಿನಲ್ಲಿ ಕೊಚ್ಚಿ ಹೋಗಿದ್ದ ಮಾನಸಿ ಸಿಂಧೆ ಪತ್ತೆಗೆ ಅಗ್ನಿಶಾಮಕ ದಳದ ಸಿಬ್ಬಂದಿ ತೊಡಗಿದ್ದು, ಸ್ಥಳೀಯ ಈಜು ಪಟುಗಳು ಕೂಡ ಕಾರ್ಯಾಚರಣೆಗೆ ಸಹಕರಿಸಿದ್ದಾರೆ. ಇನ್ನುಳಿದಂತೆ 8 ಜನ ವಿದ್ಯಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದರೂ, ತಮ್ಮ ಸ್ನೇಹಿತರಾದ ಮಾನಸಿ ಸಿಂಧೆ ಹಾಗೂ ವಿವೇಕ್ ಸಾವಿನ ಸುದ್ದಿ ನೋವಿಗೀಡು ಮಾಡಿದೆ. ಈ ಬಗ್ಗೆ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

ಪುಟ ೧➡ ತಮ್ಮ ಗ್ರಾಮದಲ್ಲಿ ರೈತರು ಎದುರಿಸುವ ಸಮಸ್ಯೆಗಳು, ನೀರಿನ ಕೊರತೆ, ಬೆಳೆ ನಷ್ಟ, ಮಾರುಕಟ್ಟೆ ಅಸ್ಥಿರತೆ ಇತ್ಯಾದಿಗಳನ್ನು ಗಮನಿಸಿದ ಅವರು, ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿದರೆ ರೈತರ ಬದುಕು ಬದಲಾಗಬಹುದು ಎಂಬ ನಂಬಿಕೆಯನ್ನು ಹೊಂದಿದ್ದರು. ಅದೇ ದೃಷ್ಟಿಯಿಂದ ಶಿಕ್ಷಕರ ಮಾರ್ಗದರ್ಶನದಲ್ಲಿ ಕೃಷಿ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡ ಅವರು, ಶಾಲಾ ದಿನಗಳಿಂದಲೇ ಓದಿನಲ್ಲಿ ಮುಂದಿದ್ದರು. ನಂತರ ಅವರು ಜಿಕೆವಿಕೆ (ಬೆಂಗಳೂರು ಕೃಷಿ ವಿವಿ)ಯಲ್ಲಿ ಕೃಷಿ ಪದವಿಗೆ ಸೇರಿ, ಶಿಸ್ತಿನ ಅಧ್ಯಯನ ಹಾಗೂ ಪ್ರಾಯೋಗಿಕ ಜ್ಞಾನದಿಂದ ತಮ್ಮ ಸಾಧನೆಯನ್ನು ಮತ್ತಷ್ಟು ವಿಸ್ತರಿಸಿದರು.

ಶಿಸ್ತಿನ ಅಧ್ಯಯನವೇ ಯಶಸ್ಸಿನ ಗುಟ್ಟು: ಪ್ರೇಮ್‌ಕುಮಾರ್ ಅವರ ಯಶಸ್ಸಿನ ಹಿಂದೆ ಅತ್ಯಂತ ಶಿಸ್ತಿನ ಜೀವನಶೈಲಿ ಪ್ರಮುಖ ಕಾರಣವಾಗಿದೆ. ಬೆಂಗಳೂರಿನಲ್ಲಿ ತಮ್ಮ ಚಿಕ್ಕಮ್ಮನ ಮನೆಯಲ್ಲಿ ವಾಸವಿದ್ದು, ದಿನಕ್ಕೆ ಸುಮಾರು 6ರಿಂದ 7 ಗಂಟೆಗಳ ನಿರಂತರ ಅಧ್ಯಯನ ಮಾಡುತ್ತಿದ್ದರು. ತರಗತಿ ಪಾಠಗಳ ಜತೆಗೆ ಗ್ರಂಥಾಲಯ ಅಧ್ಯಯನ, ಪ್ರಾಯೋಗಿಕ ಕೃಷಿ ತರಬೇತಿ ಹಾಗೂ ಕ್ಲಾಸ್ ನೋಟ್ಸ್‌ಗಳ ನಿರಂತರ ಪರಿಶೀಲನೆ ಅವರ ದಿನಚರಿಯಾಗಿತ್ತು.

ಬೀಜ ವಿಜ್ಞಾನದಲ್ಲಿ ಸಂಶೋಧನೆ ಗುರಿ

ಪ್ರಸ್ತುತ ಪ್ರೇಮ್‌ಕುಮಾರ್ ಅವರು ಹೊಸದಿಲ್ಲಿಯ ಪೂಸಾ ಕ್ಯಾಂಪಸ್‌ನಲ್ಲಿ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ(Seed Science Technology) ವಿಷಯದಲ್ಲಿ ಎಂಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪಿಎಚ್‌ಡಿ ಮಾಡಿ, ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿ ನೀಡುವ ಬೀಜಗಳ ಅಭಿವೃದ್ಧಿಯಲ್ಲಿ ಸಂಶೋಧನೆ ನಡೆಸುವುದು ಅವರ ಕನಸಾಗಿದೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ



ಪುಟ ೧➡ ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ(ಟಾಸ್ಮಾಕ್) ಅಂಗಡಿಗಳ ಸಿಬ್ಬಂದಿಗೆ ಗ್ರಾಹಕರ ವಯಸ್ಸನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಅನುಮಾನ ಬಂದಲ್ಲಿ ಆಧಾರ್ ಕಾರ್ಡ್ ಸೇರಿದಂತೆ ಗುರುತಿನ ಚೀಟಿಗಳನ್ನು ಪರಿಶೀಲಿಸಿ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡಬಾರದು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಇದೇ ವೇಳೆ ಮದ್ಯದಂಗಡಿಗಳ ಕಾರ್ಯಾಚರಣೆ ಸಮಯವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಪ್ರಸ್ತುತ ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸುತ್ತಿರುವ ಅಂಗಡಿಗಳನ್ನು ರಾತ್ರಿ 8 ಗಂಟೆಗೆ ಮುಚ್ಚುವ ಪ್ರಸ್ತಾಪವೂ ಚರ್ಚೆಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ

ಪುಟ ೧➡ ಬಿಎಲ್‌ಒಗಳಿಗೆ ನೆರವು ನೀಡಲು 3.42 ಲಕ್ಷ ಬೂತ್ ಮಟ್ಟದ ಏಜೆಂಟರನ್ನು(ಬಿಎಲ್‌ಎ) ರಾಜಕೀಯ ಪಕ್ಷಗಳೇ ನೇಮಕ ಮಾಡಲಿವೆ. ಹಿಮಾಚಲಪ್ರದೇಶ, ಜಮ್ಮು ಕಾಶ್ಮೀರ ಮತ್ತು ಲಡಾಖ್ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಎಸ್‌ಐಆರ್ ಆರಂಭಿಸುವ ದಿನಾಂಕ ಘೋಷಿಸುವುದಾಗಿ ಚುನಾವಣಾ ಆಯೋಗ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಒಮ್ಮೆ ಎಸ್‌ಐಆರ್ 3ನೇ ಹಂತ ಮುಕ್ತಾಯದೊಂದಿಗೆ ದೇಶದೆಲ್ಲೆಡೆ ಎಸ್‌ಐಆರ್ ಪೂರ್ಣವಾಗಲಿದೆ. ಹಿಮಾಚಲ, ಜಮ್ಮು ಕಾಶ್ಮೀರ ಮತ್ತು ಲಡಾಖ್ ಮಾತ್ರ ಉಳಿದುಕೊಳ್ಳಲಿವೆ ಎಂದು ಆಯೋಗ ಹೇಳಿದೆ.

ಅ.7ಕ್ಕೆ ರಾಜ್ಯ ಮತದಾರರ ಅಂತಿಮ ಪಟ್ಟಿ ಘೋಷಣೆ

ಕರ್ನಾಟಕ, ದಿಲ್ಲಿ, ಮೇಘಾಲಯ, ಮಹಾರಾಷ್ಟ್ರ ಮತ್ತು ಜಾರ್ಖಂಡ್ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಅ.7ರಂದು ಪ್ರಕಟವಾಗಲಿವೆ. ಸೆ.6ರಂದು ಒಡಿಶಾ, ಸಿಕ್ಕಿಂ, ಮಿಜೋರಾಂ ಮತ್ತು ಮಣಿಪುರ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿವೆ. ಡಿ.23ರಂದು ತ್ರಿಪುರಾ ರಾಜ್ಯದ ಪಟ್ಟಿ ಪ್ರಕಟವಾಗಲಿದೆ ಎಂದು ಆಯೋಗ ತಿಳಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಮ್ಮ ದೇಶದ ಆತ್ಮ ಹಿಂದುತ್ವ, ಪರಂಪರಾಗತವಾಗಿ ಬಂದಿರುವ ಸಂಸ್ಕಾರ, ಸಂಸ್ಕೃತಿಗಳು ನಮ್ಮ ದೇಶವನ್ನು ಪರಮ ವೈಭವದೆಡೆಗೆ ಕೊಂಡೊಯ್ದಿವೆ
– ಪ್ರಭಾಕರ ಜೋಶಿ

– ಇಂಥಾ ದೇಶದ ಮೇಲೆ ಧಾಳಿ ಮಾಡಿ ಇಲ್ಲಿನ ಸಂಪತ್ತನ್ನು ದೋಚಿದ, ಸಂಸ್ಕೃತಿಯನ್ನು ನಾಶ ಮಾಡಿದ ದುರಾತ್ಮರನ್ನು ದಿ ಗ್ರೇಟ್ ಎಂದು ಹೇಳುವ ಪರಮ ನೀಚರು ಇಲ್ಲಿರುವುದು ದೇಶದ ದೌರ್ಭಾಗ್ಯ!

ದಿನ ಭವಿಷ್ಯ

ಮೇಷ
ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನೀವು ಭಾವಿಸಿದ ಸಮಸ್ಯೆ ಇಲ್ಲ. ವಿವಾದ ಪರಿಹರಿಸಿ.

ವೃಷಭ
ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ಮಿಥುನ
ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಕಟಕ
ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಸಿಂಹ
ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕನ್ಯಾ
ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಬಂಧು ಭೇಟಿ.

ತುಲಾ
ನಿಮ್ಮ ಧೋರಣೆಗೆ ಕೆಲವರಿಂದ ವಿರೋಧ. ಹೊಂದಿಕೊಂಡು ಬಾಳಿ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಸಾಧನೆಯ ಯಶ.

ವೃಶ್ಚಿಕ
ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಧನು
ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ಮಕರ
ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕುಂಭ
ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಆರೋಗ್ಯ ಸಮಸ್ಯೆ ಇದ್ದವರು ಎಚ್ಚರ ವಹಿಸಿ.

ಮೀನ
ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸದ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 8,3,9,1

ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ: ಸಚಿವ ಗುಂಡೂರಾವ್

ಪ್ರತ್ಯೇಕ ಪೋರ್ಟಲ್ ಜಾರಿ

ಬೆಂಗಳೂರು: ದೇಶದಲ್ಲಿ ಇದೇ ಮೊದಲ ಬಾರಿಗೆ ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ ಇರಿಸಲು ಪ್ರತ್ಯೇಕ ಪೋರ್ಟಲ್ ರೂಪಿಸಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳ ನಿಗದಿತ ಬ್ಯಾಚ್‌ಗಳನ್ನು ಮಾರುಕಟ್ಟೆಯಿಂದ ಕೂಡಲೇ ಹಿಂಪಡೆಯಲು ಇದು ಸಹಕಾರಿಯಾಗಲಿದೆ. ಈ ಹಿಂದೆ ಮಾರುಕಟ್ಟೆಯಿಂದ ವಾಪಸ್ ಪಡೆಯುವುದು ಕಷ್ಟಸಾಧ್ಯವಾಗಿತ್ತು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗುರುವಾರ ಆರೋಗ್ಯಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಸಚಿವರು, ಈ ಪೋರ್ಟಲ್ ಮೂಲಕ ಸಗಟು ಮತ್ತು ಚಿಲ್ಲರೆ ಔಷಧಿ ಮಳಿಗೆಗಳಲ್ಲಿ ಲಭ್ಯವಿರುವ ಗುಣಮಟ್ಟದ ಮಾನದಂಡವನ್ನು ಪೂರೈಸದ ಔಷಧಿಗಳ ಬ್ಯಾಚ್‌ಗಳನ್ನು ಪತ್ತೆ ಹಚ್ಚಲಾದ ಔಷಧಿಗಳ ಮಾರಾಟವನ್ನು ತಕ್ಷಣವೇ ಸ್ಥಗಿತಗೊಳಿಸಲಾಗುವುದು. ಔಷಧ ಪ್ರಮಾಣಿತ ಗುಣಮಟ್ಟ ಹೊಂದಿರದಿದ್ದಲ್ಲಿ ಪೋರ್ಟಲ್‌ನಲ್ಲಿ ಆ ಬಗ್ಗೆ ಸೂಕ್ತ ಕಾರಣ ಸಹಿತ ಮಾಹಿತಿ ನಮೂದಿಸಲಾಗುವುದು.

ಈ ಸಂದೇಶ ಎಲ್ಲ ಸಗಟು ವ್ಯಾಪಾರಿಗಳಿಗೆ ರವಾನೆಯಾಗಲಿದ್ದು, ಅವರು ಮುಂದೆ ಅದನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ನಮ್ಮಲ್ಲಿರುವ ಸುಮಾರು 15 ಸಾವಿರ ಔಷಧ ಸಗಟು ವರ್ತಕರ ಮಾಹಿತಿಯನ್ನು ಈ ಪೋರ್ಟಲ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಭವಿಷ್ಯದಲ್ಲಿರುವ 45 ಸಾವಿರ ಚಿಲ್ಲರೆ ಔಷಧ ವರ್ತಕರ ಮಾಹಿತಿಯನ್ನು ಪೋರ್ಟಲ್ ನಲ್ಲಿ ಅಳವಡಿಸಿ ಅವರಿಂದಲೂ ನೈಜ ಸಮಯದಲ್ಲೇ ಔಷಧ ಹಿಂಪಡೆಯಲು ಸಾಧ್ಯವಾಗುವಂತೆ ಮಾಡಲಾಗುತ್ತದೆ ಎಂದರು. ಕಳೆದ ವರ್ಷ ಔಷಧ ಆಡಳಿತ ಇಲಾಖೆಯಿಂದ ಇ-ಸಹಿ ಸೌಲಭ್ಯ ಜಾರಿಗೆ ತರಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಿಗಳ ನಿಗದಿತ ಬ್ಯಾಚ್‌ನ ಮಾಹಿತಿ ಪಡೆಯಲು ಸಹಾಯವಾಯಿತು. ಇದರಿಂದ 1.85 ಕೋಟಿ ರೂ. ಮೌಲ್ಯದ ಅನುತ್ತಮ ಗುಣಮಟ್ಟದ ಔಷಧಿಗಳನ್ನು ಹಿಂಪಡೆಯಲಾಗಿದೆ ಎಂದು ವಿವರಿಸಿದರು.

ಎನ್‌ಡಿಪಿಎಸ್ ದುರ್ಬಳಕೆಗೆ ಕಡಿವಾಣ: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ನೂತನ ಪೋರ್ಟಲ್ ಮೂಲಕ ಮಾದಕ ಔಷಧ (ಎನ್‌ಡಿಪಿಎಸ್)ಗಳ ದುರ್ಬಳಕೆಗೂ ಕಡಿವಾಣ ಹಾಕಲು ಸಾಧ್ಯ. ಎನ್‌ಡಿಪಿಎಸ್ ಮಾರಾಟ ಮಾಡಿದರೆ ಈ ಪೋರ್ಟಲ್ ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ಸೇರಿದಂತೆ ಇತರರಿದ್ದರು.



ಒಂದೇ ತಿಂಗಳಿನಲ್ಲಿ 26 ಮಾದರಿ ಕಳಪೆ ಗುಣಮಟ್ಟ

ಕಳೆದ ಏಪ್ರಿಲ್ ತಿಂಗಳಿನಲ್ಲಿ ಒಟ್ಟು 924 ಔಷಧ ಮಾದರಿಗಳ ನಿಗದಿತ ಬ್ಯಾಚ್‌ಗಳನ್ನು ಸಂಗ್ರಹಿಸಿ ಪರೀಕ್ಷಿಸಿದ್ದು, ಆ ಪೈಕಿ 26 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ. ಕಳೆದ ವರ್ಷ 16,337 ಔಷಧ ಮಾದರಿಗಳನ್ನು ವಿಶ್ಲೇಷಿಸಲಾಗಿದ್ದು, 473 ಔಷಧಗಳ ನಿಗದಿತ ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲ. ಪರವಾನಗಿ ರದ್ದತಿ ಸೇರಿ ವಿವಿಧ ಕ್ರಮ ಕೈಗೊಳ್ಳಲಾಗಿದೆ. ನಿಯಮ ಬಾಹಿರವಾಗಿ ಮಾದಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 1,309 ಔಷಧ ಮಳಿಗೆಗಳನ್ನು ಪರಿಶೀಲಿಸಿ, 457 ಔಷಧ ಮಳಿಗೆಗಳ ಪರವಾನಗಿ ರದ್ದು ಮಾಡಲಾಗಿದೆ ಎಂದು ಸಚಿವ ದಿನೇಶ್ ಗುಂಡುರಾವ್ ಮಾಹಿತಿ ನೀಡಿದರು.

ಜೀತ ಪದ್ಧತಿಯಲ್ಲಿ ಸಿಲುಕಿದ್ದ 37 ಕಾರ್ಮಿಕರ ರಕ್ಷಣೆ

ವಿಜಯನಗರ: ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಗ್ರಾಮದಲ್ಲಿ ಜೀತ ಪದ್ಧತಿಯಲ್ಲಿ ಸಿಲುಕಿದ್ದ ಒಡಿಶಾ ಮೂಲದ 37 ಕಾರ್ಮಿಕರನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಸ್ಪಂದನ ಎಂಬ ಎನ್‌ಜಿಒ ಸಂಸ್ಥೆ ನೀಡಿದ ಖಚಿತ ಮಾಹಿತಿಯ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಹಾಯಕ ಆಯುಕ್ತರು ನಂದಿಬಂಡಿ ಗ್ರಾಮದ ಮೇಲೆ ದಾಳಿ ನಡೆಸಿದರು.

ದಾಳಿಯ ವೇಳೆ ಕಾರ್ಮಿಕರು ನಾಲ್ಕು ಅಡಿ ಅಗಲದ ಪುಟ್ಟ ಮನೆಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದ 10 ಮಕ್ಕಳು, 11 ಮಹಿಳೆಯರು, 16 ಪುರುಷರು ಸೇರಿದಂತೆ ಒಟ್ಟು 37 ಮಂದಿ ಕಾರ್ಮಿಕರು ಇದ್ದು, ಎಲ್ಲರೂ ಒಡಿಶಾದ ಬಲಂಗೀರ್ ಮತ್ತು ನವರಂಗಪುರದ ಜಿಲ್ಲೆಯವರಾಗಿದ್ದಾರೆ.

ಈ ಕಾರ್ಮಿಕರನ್ನು ಒಡಿಶಾದಿಂದ ಕರೆತರಲಾಗಿದ್ದು, 6 ತಿಂಗಳ ಹಿಂದೆ ಪ್ರತಿ ವ್ಯಕ್ತಿಗೆ 40,000 ರೂಪಾಯಿ ಮುಂಗಡ ಹಣ ನೀಡಿ ಇಲ್ಲಿಗೆ ಕರೆ ತರಲಾಗಿತ್ತು. ಆರಂಭದಲ್ಲಿ 6 ತಿಂಗಳ ಅವಧಿಗೆ ಅಷ್ಟೇ ಕೆಲಸ ಮಾಡಿಸುವುದಾಗಿ ಹೇಳಿ ಕರೆತರಲಾಗಿತ್ತು. ಹಾಗೆಯೇ ಕೆಲಸದ ಆಧಾರದ ಮೇಲೆ ಹಣ ನೀಡುತ್ತೇವೆ ಎಂಬ ಭರವಸೆಯೂ ನೀಡಲಾಗಿತ್ತು. ಅದರಂತೆ ಹಣದ ಆಸೆಗೆ ವಾರವಿಡೀ ಮೈ ಮುರಿದು ಕೆಲಸ ಮಾಡಿದರೂ ಸಹ, ಇಡೀ ಕುಟುಂಬಕ್ಕೆ ವಾರಕ್ಕೆ ಕೇವಲ 500 ರೂಪಾಯಿ ಮಾತ್ರ ನೀಡುತ್ತಾರೆ. ಆದ್ದರಿಂದ ನಾವು 6 ತಿಂಗಳ ಹಿಂದೆ ಬಂದಿದ್ದೆವು ಎಂದು ತಿಳಿಸಿದರು.



- ಎನ್‌ಜಿಒ ಸಂಸ್ಥೆ ನೀಡಿದ ಖಚಿತ ಮಾಹಿತಿ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ದಾಳಿ

ನಿಟ್ಟುಸಿರು ಬಿಟ್ಟ ಕಾರ್ಮಿಕರು

ಒತ್ತೆಯಾಳುಗಳಾಗಿದ್ದ ಒಡಿಶಾ ಮೂಲದ 37 ಜೀವಗಳಿಗೆ ಕೊನೆಗೂ ಬಿಡುಗಡೆಯ ಭಾಗ್ಯ ದೊರೆತಿದೆ. ಜಿಲ್ಲಾಡಳಿತದ ಮಿಂಚಿನ ಕಾರ್ಯಾಚರಣೆಯಿಂದಾಗಿ ಜೀತ ಪದ್ಧತಿಯ ಸಂಕೋಲೆಯಲ್ಲಿ ನಲುಗುತ್ತಿದ್ದ 37 ಕಾರ್ಮಿಕರು ಇಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಡಿವೈಎಸ್ಪಿ ಪಿ.ಮುರಳೀಧರ, ಉಪವಿಭಾಗಾಧಿಕಾರಿ ವಿವೇಕಾನಂದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಪುಟ ೧➡ ಹಿಜಾಬ್‌ಗೆ ಅವಕಾಶ ಕೊಡುವುದಾಗಿ ಅಧಿಕೃತ ಮುದ್ರೆ ಒತ್ತಲಾಗಿದೆ. ಶಿಕ್ಷಣ ಸಚಿವರು ಹೇಳಿರುವುದು ಖಂಡಿತ ಸರಿಯಲ್ಲ. ಹಿಂದೆ ಬಿಜೆಪಿ ಸರ್ಕಾರವು ಹಿಜಾಬ್ ನಿಷೇಧಿಸಿತ್ತು. ಇವತ್ತು ಅದು ನ್ಯಾಯಾಲಯದ ಕಟಕಟೆಯಲ್ಲಿದೆ, ಆದರೂ, ಸರ್ಕಾರ ಈ ಹುಚ್ಚು ನಿರ್ಧಾರ ತಗೆದುಕೊಂಡಿದೆ ಎಂದು ವಿಜಯೇಂದ್ರ ಹೇಳಿದರು.

> **ಅಲ್ಪಸಂಖ್ಯಾತರನ್ನು ಖುಷಿ ಪಡಿಸಲು ಯಾವ ಮಟ್ಟಕ್ಕೆ ತೆರಳಲೂ ಇವರು ಹೇಸುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಓಲೈಕೆ ರಾಜಕಾರಣ ಒಂದು ಕಡೆಯಾದರೆ, ಹಿಂದುಗಳಿಗೆ ಅಪಮಾನ ಮಾಡುವ ಕೆಲಸವನ್ನು ನಿರಂತರವಾಗಿ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ.**
> ■ ಬಿ.ವೈ.ವಿಜಯೇಂದ್ರ,
> ಬಿಜೆಪಿ ರಾಜ್ಯಾಧ್ಯಕ್ಷ

ಸಂಘರ್ಷಕ್ಕೆ ನಾಂದಿ

ಬೆಂಗಳೂರು: ನಾಲ್ಕು ವರ್ಷಗಳ ತರುವಾಯ ಕಾಂಗ್ರೆಸ್ ಮತ್ತೆ ಹಿಜಾಬ್‌ಗೆ ಅವಕಾಶ ನೀಡಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಲಾ ಕಾಲೇಜುಗಳಲ್ಲಿ ಸಹೋದರತ್ವ ಇಲ್ಲದಿದ್ದರೆ ಸಮಾಜ ಉತ್ತಮವಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ ನಾಲ್ಕು ವರ್ಷದ ಹಿಂದೆ ಶಾಲಾ ಕಾಲೇಜುಗಳಲ್ಲಿ ತಲೆದೋರಿದ್ದ ಧಾರ್ಮಿಕ ಭಾವನೆ ಕೆರಳಿಸುವ ಹಿಜಾಬ್ ಅನ್ನು ನಿಷೇಧ ಮಾಡಲಾಗಿತ್ತು. ಸಮವಸ್ತ್ರ ಬಿಟ್ಟು ಬಹಿರಂಗವಾಗಿ ಎದ್ದು ಕಾಣುವ ವಸ್ತ್ರ ಧರಿಸಬಾರದು ಎಂದು ತೀರ್ಮಾನ ಮಾಡಲಾಗಿತ್ತು ಎಂದರು. ಹಿಜಾಬ್ ನಿಷೇಧ ಪ್ರಶ್ನಿಸಿ ಕೇಸ್ ಹಾಕಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವಾಗಲೇ ಇವರು ತಕ್ಷಣಕ್ಕೆ ಒಂದು ಸಮುದಾಯ ಓಲೈಸಲು ಮತ್ತೆ ಹಿಜಾಬ್ ಹಾಕಲು ಆದೇಶ ಮಾಡಿದ್ದಾರೆ. ಇದು ದೊಡ್ಡ ತಪ್ಪು, ಕೋರ್ಟ್‌ನಲ್ಲಿರುವಾಗಲೇ ಆದೇಶ ಮಾಡಿರುವುದು ಕೋರ್ಟ್‌ಗೆ ಅಪಚಾರ ಮಾಡಿದಂತೆ ಎಂದು ತಿಳಿಸಿದರು.

ಧರ್ಮ, ಜಾತಿ ಆಚರಣೆ ಗೌರವಿಸುವ ಉದ್ದೇಶ

ಪುಟ ೧➡ ಸಾರ್ವಜನಿಕ ಸುವ್ಯವಸ್ಥೆ, ಸುರಕ್ಷತೆ, ತರಗತಿಯ ವಾತಾವರಣ ಮತ್ತು ಶಿಕ್ಷಣ ಸಂಸ್ಥೆಗಳ ಜಾತ್ಯತೀತ ಸ್ವರೂಪಕ್ಕೆ ಧಕ್ಕೆಯಾಗದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಸಮಾನತೆ ಮತ್ತು ಘನತೆಯನ್ನು ಮರುಸ್ಥಾಪಿಸಲು ನಾವು ಬದ್ಧರಿದ್ದೇವೆ. ಜಾತಿ, ಧರ್ಮಗಳ ಆಧಾರದಲ್ಲಿ ಸಮಾಜವನ್ನು ಒಡೆಯುತ್ತಿರುವವರಿಗೆ ಇದರಿಂದ ನೋವಾಗಿರುವುದು ಸಹಜವೇ ಆಗಿದೆ. ಅವರು ಮೊದಲು ತಮ್ಮೊಳಗೆ ಇಣುಕಿ ಆತ್ಮವಿಮರ್ಶೆ ಮಾಡಲಿ ಎಂದು ಗುಡುಗಿದ್ದಾರೆ.

ಕ್ಷಮತಾ ಪ್ರಮಾಣಪತ್ರ ಕಡ್ಡಾಯ

ಪುಟ ೧➡ ಇವರು ಗೋವಿನ ವಧಾರ್ಹತೆ ಬಗ್ಗೆ ಜಂಟಿ ಪ್ರಮಾಣಪತ್ರ ನೀಡುತ್ತಾರೆ. ದುಡಿಮೆ ಅಥವಾ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಗೋವು ಅಥವಾ ಎಮ್ಮೆ ಅಥವಾ ಗೂಳಿಗೆ 14 ವರ್ಷ ದಾಟಿದೆ ಅಥವಾ ಗೋವು ಅಥವಾ ಹೋರಿಗೆ ವಯಸ್ಸಾಗಿದೆ ಅಥವಾ ಗಾಯ, ನ್ಯೂನತೆ, ವಾಸಿಯಾಗದ ಕಾಯಿಲೆಯಿಂದಾಗಿ ಖಾಯಂ ಆಗಿ ದುರ್ಬಲ ಸ್ಥಿತಿಯಲ್ಲಿದೆ ಎಂಬ ಸಮಾನ ಅಭಿಪ್ರಾಯವನ್ನು ಪಂಚಾಯತ್ ಅಧ್ಯಕ್ಷರು, ಪಶು ವೈದ್ಯಾಧಿಕಾರಿಗಳು ಲಿಖಿತವಾಗಿ ದಾಖಲಿಸಬೇಕು.

ಒಂದು ವೇಳೆ ಜಾನುವಾರಿನ ಫಿಟ್‌ನೆಸ್ ಬಗ್ಗೆ ಕ್ಷಮತಾ ಪ್ರಮಾಣಪತ್ರ ಮಂಜೂರು ಮಾಡಲು ಸಂಬಂಧಿತ ಅಧಿಕಾರಿಗಳು ನಿರಾಕರಿಸಿದಲ್ಲಿ, ಸದರಿ ವ್ಯಕ್ತಿ ಪ್ರಸ್ತುತ ನಿರಾಕರಣೆಯ 15 ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ದೂರು ಸಲ್ಲಿಸಲು ಅಧಿಸೂಚನೆಯಲ್ಲಿ ಅವಕಾಶವಿದೆ.

ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ

ಪುಟ೧➡ ಸಂಘದ ಸ್ವಯಂಸೇವಕ ಸಮಾಜಜೀವನದಲ್ಲಿ ಹೇಗಿರಬೇಕು ಎನ್ನುವುದಕ್ಕೆ ಜಯದೇವರು ಉದಾಹರಣೆ. ಈ ಪುಸ್ತಕದಲ್ಲಿರುವುದು ಜಯದೇವರ ಕುರಿತು ಘಟನೆಗಳಾದರೂ ಅದರಲ್ಲಿ ಅವರು ಆರಂಭಿಸಿದ ಯೋಜನೆಗಳ ಮುನ್ನಡೆಯನ್ನೂ ತಿಳಿಸಿಕೊಡುತ್ತದೆ ಎಂದು ಹೇಳಿದರು.

ಮೈ.ಚ.ಜಯದೇವ ಅವರು ಕೃ.ನರಹರಿ, ಅಜಿತ್ ಕುಮಾರ್, ಅರಕಲಿ ನಾರಾಯಣ್ ಅವರ ತಂಡವು ಸಾಂಘಿಕವಾಗಿ ಸಂಸ್ಥೆಯನ್ನು ಕಟ್ಟಿಬೆಳೆಸುವುದಕ್ಕೆ ಮಾದರಿಯಾದರು. ತಮ್ಮ ಗುರಿಯ ಸಾಧನೆಗಾಗಿ ಜೀವನವನ್ನೇ ತೆತ್ತರು. ಸಂಸ್ಥೆ ಎನ್ನುವುದು ಇಟ್ಟಿಗೆ, ಕಲ್ಲಿನ ಕಟ್ಟಡ ಮಾತ್ರವಲ್ಲ, ಅಲ್ಲಿರುವವರು ತಮ್ಮ ಪ್ರಾಣವನ್ನು ಸಮರ್ಪಿಸಿ ಕೆಲಸ ಮಾಡಿದಾಗ ಅದಕ್ಕೆ ಜೀವಂತಿಕೆ ಬರುತ್ತದೆ ಎಂದಿದ್ದವರು ಜಯದೇವ ಅವರು. ಅದಕ್ಕಿಂತಲೂ ಮೊದಲು ಅದನ್ನು ಜೀವಿಸಿದವರು. ಅವರು ಭಾವನೆಗಳನ್ನುಳ್ಳ ಧ್ಯೇಯಜೀವಿಯಾಗಿದ್ದರು. ಅವರು ಮಾತ್ರ ಅವಿಶ್ರಾಂತರಾಗಿರುತ್ತಿರಲಿಲ್ಲ, ಬೇರೆಯವರೂ ವಿರಮಿಸಲು ಬಿಡುತ್ತಿರಲಿಲ್ಲ ಎಂದು ತಿಳಿಸಿದರು.

ಜಯದೇವ ಹೆಸರಿನ ಆಸ್ಪತ್ರೆ, ನಿಜವಾದ ಸ್ಮಾರಕ: ಆಧುನಿಕ ಚಿಕಿತ್ಸೆಯ ಜೊತೆಗೆ ಭಾರತೀಯ ವೈದ್ಯಕೀಯವೂ ಸೇರಬೇಕು ಎನ್ನುವುದು ಆಸ್ಪತ್ರೆಯ ಮೂಲಕ ಸಾಕಾರಗೊಂಡಿದೆ. ಒಂದು ಸಂಸ್ಥೆಯನ್ನು ಹೇಗೆ ಕಟ್ಟಿಬೆಳೆಸಬೇಕು ಎಂದು ತೋರಿಸಿದವರು ಜಯದೇವರು. ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಅಬಲಾಶ್ರಮದಂತಹ ಅನೇಕ ಸಂಸ್ಥೆಗಳು ಗುರಿಗೆ ತಕ್ಕಂತೆ ನಡೆಯುವಂತೆ ಮಾಡಿದವರು. ಹಾಗಾಗಿ, ಅವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿರುವುದು ನಿಜವಾದ ಸ್ಮಾರಕ. ಈ ಪುಸ್ತಕ ಒಬ್ಬ ವ್ಯಕ್ತಿಯ ಜೀವನ ಮಾತ್ರವಲ್ಲ. ಜಯದೇವರ ಜೀವನವರ ನೆನಪಿಸುತ್ತಾ ನಾವು ಹೇಗೆ ಜೀವಿಸಬೇಕು ಎನ್ನುವುದನ್ನು ಪುಸ್ತಕ ನೆನಪಿಸುತ್ತದೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

ಸಮಾಜದ ದೃಷ್ಟಿಯಿಂದ ಅಗತ್ಯ ವಿಚಾರಗಳನ್ನು ಸಂಪೂರ್ಣ ಪರಿಶ್ರಮದೊಂದಿಗೆ ಪೂರ್ಣಗೊಳಿಸಬೇಕು ಎನ್ನುವುದನ್ನು ನಮಗೆಲ್ಲ ಕಲಿಸಿದರು. ಜಯದೇವ ಅವರು ಮುನ್ನಡೆಸಿದ ಸಂಸ್ಥೆಗಳಲ್ಲಿ ಆರಂಭಿಸಿದ ಪರಂಪರೆಗಳು ಇನ್ನೂ ಮುನ್ನಡೆದಿವೆ. ಶೇಕ್ಸ್‌ಪಿಯರ್ ವಂಶ ವೃದ್ಧಿ ಮತ್ತು ಕಾವ್ಯದ ಮೂಲಕ ಮನುಷ್ಯ ಶಾಶ್ವತನಾಗುತ್ತಾನೆಂದು ಹೇಳುತ್ತಾನೆ. ಆದರೆ, ಭಾರತೀಯ ಸಂಸ್ಕೃತಿ ಇದಕ್ಕಿಂತ ಮುಂದೆ ಸಾಗುತ್ತದೆ. ತ್ಯಾಗದಿಂದ ಶಾಶ್ವತ ಆಗುತ್ತಾರೆ ಎನ್ನುತ್ತದೆ ಭಾರತೀಯ ಸಂಸ್ಕೃತಿ. ಜಯದೇವರು ಹೀಗೆಯೇ ಎಲ್ಲವನ್ನೂ ತ್ಯಾಗ ಮಾಡುತ್ತಾ ಕಾರ್ಯ ಮಾಡಿದರು ಎಂದು ಸ್ಮರಿಸಿದರು.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಸ್ತಕ ಲೋಕಾರ್ಪಣೆ ಮಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು.

ದೇಶವ್ಯಾಪಿ ಮಿತವ್ಯಯ

ಪುಟ ೧➡ ರಾಜ್ಯ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ತಮ್ಮ ಅಧಿಕೃತ ನಿವಾಸದಿಂದ ಸೈಕಲ್‌ನಲ್ಲಿ ಕಚೇರಿಗೆ ತೆರಳಿದರೆ, ಸಚಿವ ದಿನೇಶ್ ಪ್ರತಾಪ್ ಸಿಂಗ್ ಸಾರ್ವಜನಿಕ ಸಾರಿಗೆ ಬಳಸಿದರು.

ಲಖನೌನ ಸಂಜಯ್ ಗಾಂಧಿ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ರಾಧಾ ಕೃಷ್ಣ ಧೀಮನ್ ಸೈಕಲ್‌ನಲ್ಲಿ ಸಂಸ್ಥೆಗೆ ತೆರಳಿ, ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಅಧ್ಯಾಪಕರು ಅನಗತ್ಯ ವಾಹನ ಬಳಕೆಯನ್ನು ಕಡಿಮೆ ಮಾಡುವಂತೆ ಕರೆ ನೀಡಿದರು. ಕ್ಯಾಂಪಸ್‌ನಲ್ಲಿ ಸೈಕಲ್ ನಿಲ್ದಾಣಗಳನ್ನು ಸ್ಥಾಪಿಸುವುದಾಗಿ ಅವರು ಹೇಳಿದರು.

ಬರಾಬಂಕಿಯಲ್ಲಿ ಜಿಲ್ಲಾಧಿಕಾರಿ ಈಶಾನ್ ಪ್ರತಾಪ್ ಸಿಂಗ್ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ನಿರಂಕಾರ್ ಸಿಂಗ್ ನಡೆದು ಕಲೆಕ್ಟರೇಟ್ ಕಚೇರಿಗೆ ತೆರಳಿದರು. ಸಾಧ್ಯವಾದಷ್ಟು ನಡೆದು ಹೋಗುವ ಮೂಲಕ ಇಂಧನ ಉಳಿತಾಯ ಹಾಗೂ ಪರಿಸರ ಸಂರಕ್ಷಣೆಗೆ ಕೈಜೋಡಿಸುವಂತೆ ಅವರು ಸಾರ್ವಜನಿಕರಿಗೆ ಮನವಿ ಮಾಡಿದರು. ವಾರಾಣಸಿ ಮಹಾಪೌರ ಅಶೋಕ್ ಕುಮಾರ್ ತಿವಾರಿ ಕೂಡ ನಡೆದು ಮಹಾನಗರ ಪಾಲಿಕೆ ಕಚೇರಿಗೆ ತೆರಳಿದರು. ಪ್ರತೀ ಶನಿವಾರವನ್ನು 'ನೋ ಫ್ಯುಯೆಲ್ ಡೇ' ಆಗಿ ಆಚರಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಘೋಷಿಸಿದರು. ''ಕಾಶಿಯ ಮೊದಲ ನಾಗರಿಕನಾಗಿ ಮಾದರಿಯಾಗುವುದು ನನ್ನ ಕರ್ತವ್ಯ'' ಎಂದು ತಿವಾರಿ ಹೇಳಿದರು. ಇದಕ್ಕೂ ಮೊದಲು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆ ಶೇ.50ರಷ್ಟು ಕಡಿತಗೊಳಿಸುವಂತೆ ಸೂಚಿಸಿ, ಸಾರ್ವಜನಿಕ ಸಾರಿಗೆ, ವರ್ಚುವಲ್ ಸಭೆಗಳು ಮತ್ತು ವರ್ಕ್ ಫ್ರಂ ಹೋಮ್ ವ್ಯವಸ್ಥೆಗೆ ಉತ್ತೇಜನ ನೀಡಿದ್ದರು.

ಫಡ್ನವೀಸ್ ಬುಲೆಟ್ ಪ್ರಯಾಣ

ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮುಂಬೈನ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ ''ಸಣ್ಣ ತ್ಯಾಗ'' ಮಾತ್ರ ಕೇಳಿದ್ದಾರೆ ಎಂದು ಅವರು ಹೇಳಿ, ಸರ್ಕಾರ ಈಗಾಗಲೇ ಮಂತ್ರಿಗಳ ವಿದೇಶ ಪ್ರವಾಸ ರದ್ದು, ವಾಹನ ದಂಡು ಕಡಿತ ಹಾಗೂ ಆರು ತಿಂಗಳು ಭಾರೀ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿದೆ ಎಂದರು.

ತಿಂಗಳಲ್ಲಿ 4 ದಿನ 'ನೋ ವೆಹಿಕಲ್ ಡೇ': ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ''ಮೇರಾ ಭಾರತ್, ಮೇರಾ ಯೋಗದಾನ್'' ಅಭಿಯಾನದಲ್ಲಿ ವಾರಕ್ಕೆ ಎರಡು ದಿನ ಸರ್ಕಾರಿ ಕಚೇರಿಗಳಲ್ಲಿ ವರ್ಕ್ ಫ್ರಂ ಹೋಮ್, ವಾರದಲ್ಲಿ ಒಂದು ದಿನ 'ನೋ ವೆಹಿಕಲ್ ಡೇ' ಹಾಗೂ ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಪ್ರಯಾಣ ಮಾಡುವ ಕ್ರಮಗಳನ್ನು ಘೋಷಿಸಿದರು. ಸರ್ಕಾರಿ ಅಧಿಕಾರಿಗಳ ಪೆಟ್ರೋಲ್-ಡೀಸೆಲ್ ಕೋಟಾವನ್ನು ಶೇ.20ರಷ್ಟು ಕಡಿತಗೊಳಿಸಲಾಗಿದೆ. ಪಶ್ಚಿಮ ಏಷ್ಯಾದ ಯುದ್ಧದಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದ ಹಿನ್ನೆಲೆಯಲ್ಲಿ, ಕಚ್ಚಾ ತೈಲ ಮತ್ತು ಅನಿಲಕ್ಕಾಗಿ ಆ ರಾಷ್ಟ್ರಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿರುವ ಭಾರತದಲ್ಲಿ ಈ ಮಿತವ್ಯಯ ಅಭಿಯಾನಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ತೆಲಂಗಾಣ ರಾಜ್ಯಪಾಲರಿಂದ ಬೆಂಗಾವಲು ವಾಹನ ಕಡಿತ

ಹೈದರಾಬಾದ್: ತೆಲಂಗಾಣ ರಾಜ್ಯಪಾಲ ಶಿವ ಪ್ರತಾಪ್ ಶುಕ್ಲಾ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿಮೆ ಮಾಡುವುದಾಗಿ ಘೋಷಿಸಿದರು. ರಾಜಕೀಯ ನಾಯಕರು ಅನಗತ್ಯ ವಾಹನ ಬಳಕೆ ತಗ್ಗಿಸಬೇಕು ಎಂದು ಕರೆ ನೀಡಿದ ಅವರು, ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡಬೇಕೆಂದರು.

ಮೋದಿ ಕ್ರಮ ಅನುಸರಿಸಿದ ತ್ರಿಪುರಾ ಮುಖ್ಯಮಂತ್ರಿ

ಅಗರ್ತಲಾ: ತ್ರಿಪುರಾ ಮುಖ್ಯಮಂತ್ರಿ ಮಾನಿಕ್ ಸಾಹಾ ತಮ್ಮ ಬೆಂಗಾವಲಿಗೆ ನಾಲ್ಕು ವಾಹನಗಳಿಗೆ ಸೀಮಿತಗೊಳಿಸುವಂತೆ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ರೊಟೇಷನ್ ಆಧಾರಿತ ವರ್ಕ್ ಫ್ರಂ ಹೋಮ್ ವ್ಯವಸ್ಥೆಯೂ ಜಾರಿಯಾಗಿದೆ. ಇದೇ ವೇಳೆ ಸರ್ಕಾರಿ ವಾಹನಗಳ ದುರುಪಯೋಗ ಕುರಿತು ಸಾರ್ವಜನಿಕ ಚರ್ಚೆ ಹೆಚ್ಚಾಗಿದೆ.

ಸರ್ಕಾರ ಬೀಳಿಸುವ ಸಂಚು!

ಪುಟ ೧➡ ಪಟಿಯಾಲಾ ಹೌಸ್‌ನ ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಆಮಿರ್ ರಶೀದ್ ಮಿರ್, ಜಾಸಿರ್ ಬಿಲಾಲ್ ವಾನಿ, ಡಾ. ಮುಜಮಿಲ್ ಶಕೀಲ್, ಡಾ. ಅದೀಲ್ ಅಹ್ಮದ್ ರಾಥರ್, ಡಾ. ಶಾಹೀನ್ ಸಯೀದ್, ಮುಫ್ತಿ ಇರ್ಫಾನ್ ಅಹ್ಮದ್ ವಾಗೇ, ಸೋಯಬ್, ಡಾ. ಬಿಲಾಲ್ ನಸೀರ್ ಮಲ್ಲಾ ಹಾಗೂ ಯಾಸಿರ್ ಅಹ್ಮದ್ ದಾರ್ ಸೇರಿದಂತೆ 10 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಇವರ ವಿರುದ್ಧ ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ, ಭಾರತೀಯ ನ್ಯಾಯ ಸಂಹಿತೆ, ಸ್ಫೋಟಕ ವಸ್ತುಗಳ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಸಾರ್ವಜನಿಕ ಆಸ್ತಿ ಹಾನಿ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಎನ್‌ಐಎ ತನಿಖೆಯ ಪ್ರಕಾರ, 2022ರಲ್ಲಿ ಶ್ರೀನಗರದಲ್ಲಿ ನಡೆದ ರಹಸ್ಯ ಸಭೆಯಲ್ಲಿ ಈ ಆರೋಪಿಗಳು ಅನ್ಸಾರ್ ಘಜ್ವತ್-ಉಲ್-ಹಿಂದ್ ಇಂಟರಿಂ ಎಂಬ ಹೊಸ ಘಟಕವನ್ನು ಮರುಸಂಘಟಿಸಿದ್ದರು. ಟರ್ಕಿ ಮಾರ್ಗವಾಗಿ ಅಫ್ಘಾನಿಸ್ತಾನಕ್ಕೆ ತೆರಳುವ ಹಿಜ್ರತ್ ಯತ್ನ ವಿಫಲವಾದ ಬಳಿಕ ಭಾರತದಲ್ಲೇ ಭಯೋತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು ಸಂಚು ರೂಪಿಸಲಾಗಿತ್ತು. ನಂತರ 'ಆಪರೇಷನ್ ಹೆವನ್‌ಲಿ ಹಿಂದ್' ಮೂಲಕ ಭಾರತ ಸರ್ಕಾರ ಉರುಳಿಸಿ ಶರಿಯಾ ಆಡಳಿತ ಜಾರಿಗೆ ತರುವ ಗುರಿ ಹೊಂದಿದ್ದರು ಎಂದು ಎನ್‌ಐಎ ಹೇಳಿದೆ.

ಶಸ್ತ್ರಾಸ್ತ್ರ ಸಂಗ್ರಹ: ಈ ಸಂಘಟನೆಯ ಸದಸ್ಯರು ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳುವುದು, ಜಿಹಾದಿ ಸಿದ್ಧಾಂತ ಪ್ರಚಾರ, ಶಸ್ತ್ರಾಸ್ತ್ರ ಸಂಗ್ರಹಣೆ ಹಾಗೂ ವ್ಯಾಪಕ ಪ್ರಮಾಣದಲ್ಲಿ ಸ್ಫೋಟಕ ತಯಾರಿಕೆಯಲ್ಲಿ ತೊಡಗಿದ್ದರು. ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುವ ರಾಸಾಯನಿಕಗಳನ್ನು ಬಳಸಿ ವಿವಿಧ ಬಗೆಯ ಐಇಡಿ ಸ್ಫೋಟಕಗಳನ್ನು ತಯಾರಿಸಿ ಪರೀಕ್ಷೆ ನಡೆಸಿದ್ದರು ಎಂಬ ಸಂಗತಿಯೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಸ್ಫೋಟದಲ್ಲಿ ಬಳಸಲಾಗಿದ್ದ ಟಿಎಟಿಪಿ (ಟ್ರೈಅಸಿಟೋನ್ ಟ್ರೈಪೆರಾಕ್ಸೈಡ್) ಎಂಬ ಅತಿ ಅಪಾಯಕಾರಿ ಸ್ಫೋಟಕವನ್ನು ಆರೋಪಿಗಳು ರಹಸ್ಯವಾಗಿ ತಯಾರಿಸಿದ್ದರು. ಇದಕ್ಕಾಗಿ ವಿಶೇಷ ಪ್ರಯೋಗ ನಡೆಸಿ ಸ್ಫೋಟಕ ಮಿಶ್ರಣವನ್ನು ಪರಿಪೂರ್ಣಗೊಳಿಸಿದ್ದರು ಎಂದು ಎನ್‌ಐಎ ತಿಳಿಸಿದೆ. ಈ ಭಯೋತ್ಪಾದಕ ಘಟಕದಲ್ಲಿ ವೈದ್ಯಕೀಯ ವಲಯದವರು ಭಾಗಿಯಾಗಿದ್ದರಿಂದ ಶ್ರೀನಗರ ಪೊಲೀಸರು ಇದನ್ನು ವೈಟ್ ಕಾಲರ್ ಅಥವಾ ಡಾಕ್ಟರ್ ಮಾಡ್ಯೂಲ್ ಎಂದು ಗುರುತಿಸಿದ್ದರು.

ಡ್ರೋನ್, ರಾಕೆಟ್ ಬಳಕೆಗೆ ಸಂಚು

ಪುಟ ೧➡ 588 ಮೌಖಿಕ ಸಾಕ್ಷ್ಯಗಳು, 395ಕ್ಕೂ ಹೆಚ್ಚು ದಾಖಲೆಗಳು ಹಾಗೂ 200ಕ್ಕೂ ಅಧಿಕ ವಶಪಡಿಸಿಕೊಂಡ ವಸ್ತುಗಳನ್ನು ಆರೋಪಪಟ್ಟಿಯಲ್ಲಿ ಸೇರಿಸಲಾಗಿದೆ. ಘಟನಾ ಸ್ಥಳ ಹಾಗೂ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ ಸಾಕ್ಷ್ಯಗಳನ್ನು ಡಿಎನ್‌ಎ ಪರೀಕ್ಷೆ, ಫರೆನ್ಸಿಕ್ ವಿಶ್ಲೇಷಣೆ ಮತ್ತು ಧ್ವನಿ ಪರೀಕ್ಷೆಗಳಿಗೆ ಒಳಪಡಿಸಲಾಗಿತ್ತು ಎಂದು ಎನ್‌ಐಎ ಹೇಳಿದೆ.

ಪ್ರಶಸ್ತಿ, ಪ್ರೋತ್ಸಾಹಧನ ನೀಡಿ



ಬೆಂಗಳೂರು: ಮಹಾರಾಷ್ಟ್ರ ಸೇರಿದಂತೆ ಗಡಿನಾಡ ಹಾಗೂ ಹೊರನಾಡಿನ ಕನ್ನಡ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಳೆದ ಎರಡು ವರ್ಷಗಳಿಂದ ಬಾಕಿ ಉಳಿದಿದ್ದ ಕನ್ನಡ ಮಾಧ್ಯಮ ಪ್ರಶಸ್ತಿ, ಶಿಷ್ಯವೇತನ ಹಾಗೂ ಪ್ರಸಕ್ತ ಸಾಲಿನ ಪ್ರೋತ್ಸಾಹ ಧನದ ಕುರಿತು ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಗಡಿನಾಡಿನ ಕನ್ನಡಿಗರ ಶೈಕ್ಷಣಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಇಲಾಖೆಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಜಾರಿಯಾಗುವ ಕನ್ನಡ ಮಾಧ್ಯಮ ಪ್ರಶಸ್ತಿ ಯೋಜನೆಯು ಗಡಿನಾಡ, ಹೊರನಾಡಿನ ಕನ್ನಡ ಶಾಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಮಹತ್ವದ ಯೋಜನೆಯಾಗಿದೆ.

ಪ್ರತಿಭಾವಂತರಿಗೆ ಆರ್ಥಿಕ ಪ್ರೋತ್ಸಾಹ

ಈ ಯೋಜನೆಯಡಿ ಹೊರನಾಡಿನ ಕನ್ನಡ ಶಾಲೆಗಳಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪ್ರತಿ ಶಾಲೆಯ ಮೂರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಪ್ರಥಮ ಸ್ಥಾನ 12 ಸಾವಿರ ರೂ, ದ್ವಿತೀಯ ಸ್ಥಾನ 11 ಸಾವಿರ ರೂ, ತೃತೀಯ ಸ್ಥಾನ 10 ಸಾವಿರ ರೂ.ನಗದು ಬಹುಮಾನ ನೀಡಲಾಗುತ್ತದೆ. ಇದರೊಂದಿಗೆ ವಿದ್ಯಾರ್ಥಿಗಳ ಮುಂದಿನ ವ್ಯಾಸಂಗಕ್ಕೆ ನೆರವಾಗುವ ಉಚಿತ ಶೈಕ್ಷಣಿಕ ಕಿಟ್‌ಗಳನ್ನೂ ವಿತರಿಸಲಾಗುತ್ತದೆ. ಈ ಯೋಜನೆಯಿಂದ ಹೊರನಾಡಿನ ಸುಮಾರು 500ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ಈ ಸಂಬಂಧ ಹಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆಯ ಗಂಭೀರತೆಯನ್ನು ಮನವರಿಕೆ ಮಾಡಿಕೊಡಲಾಗಿತ್ತು. ಇದರ ಪರಿಣಾಮವಾಗಿ ಇದೀಗ ಸರ್ಕಾರ ಸ್ಪಂದಿಸಿದ್ದು, ತುರ್ತು ಕ್ರಮ ವಹಿಸಲು ಮುಂದಾಗಿದೆ.

ಶುಭ ಆರೈಕೆ



ಮುಂಬೈನಲ್ಲಿರುವ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದಲ್ಲಿ ಗುರುವಾರ ನಡೆದ ಬಾಗ್ಮನೆ ಕೇಂದ್ರ ಕಚೇರಿಯ ಬೆಲ್ ರಿಂಗಿಂಗ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಾಗ್ಮನೆ ಸಂಸ್ಥೆಗೆ ಶುಭ ಕೋರಿದರು.

ಉಮೇಶ್ ಮೇಟಿ, ಸಮರ್ಥ್ ಪ್ರಮಾಣವಚನ ಸ್ವೀಕಾರ

» ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ, ತಾತನ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕಾರ



ಬೆಂಗಳೂರು: ನೂತನ ಶಾಸಕರಾಗಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಉಮೇಶ್ ಹುಲ್ಲಪ್ಪ ಮೇಟಿ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಬ್ಬರು ನೂತನ ಶಾಸಕರಿಗೆ ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿದರು. ಕಲ್ಲೇಶ್ವರ ಅಜ್ಜ ಹಾಗೂ ಶಾಮನೂರು ಶಿವಶಂಕರಪ್ಪ ಅವರ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕರಿಸಿದರೆ ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ ಪ್ರಮಾಣವಚನ ಸ್ವೀಕರಿಸಿದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಆರ್.ಪಾಟೀಲ್ ಮೊದಲಾದ ಗಣ್ಯರು ಉಪಸ್ಥಿತರಿದ್ದು ನೂತನ ಶಾಸಕರನ್ನು ಅಭಿನಂದಿಸಿದರು.

ಕಿರುಸುದ್ದಿ

ಕೆಎಎಂಎಸ್-ಕರ್ತವ್ಯ ಆ್ಯಪ್ ಜಾರಿಗೆ ಚಿಂತನೆ

ಬೆಂಗಳೂರು: ಡಿಜಿಟಲ್ ಆಡಳಿತ, ಪಾರದರ್ಶಕತೆ ಹಾಗೂ ಆಡಳಿತಾತ್ಮಕ ದಕ್ಷತೆಯನ್ನು ಜಾರಿಗೆ ತರುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಕರ್ನಾಟಕ ಅಡ್ವಾನ್ಸ್ಡ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ -ಕರ್ತವ್ಯ (ಕೆಎಎಂಎಸ್-ಕರ್ತವ್ಯ) ಮೊಬೈಲ್ ಅಪ್ಲಿಕೇಷನ್ ಅನ್ನು ಕಡ್ಡಾಯವಾಗಿ ಜಾರಿಗೆ ತರಲು ಮುಂದಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ ಹಂಚಿಕೊಂಡಿದ್ದು, ರಾಜ್ಯದ ಸರ್ಕಾರಿ ಶಾಲೆಗಳ ಶಿಕ್ಷಕರ ಹಾಜರಾತಿ ಹಾಗೂ ಕರ್ತವ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಈ ಆ್ಯಪ್ ಸಹಕಾರಿಯಾಗಲಿದೆ ಎಂದು ತಿಳಿಸಿದೆ.

ಶಿಕ್ಷಕರ ಸಮಯಪಾಲನೆ, ಶಾಲಾ ಹಾಜರಾತಿ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸುವ ವ್ಯವಸ್ಥೆಯನ್ನು ಇಲಾಖೆ, ರೂಪಿಸಿದೆ. ಈ ಮೂಲಕ ಶಾಲಾ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚುವುದರ ಜತೆಗೆ ಶಿಕ್ಷಕರ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ಗಮನಿಸಲು ಸಾಧ್ಯವಾಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ.

ತನಿಖೆಗೆ ಸಂಪೂರ್ಣ ಸಹಕಾರ: ವಚನಾನಂದ ಶ್ರೀ

ದಾವಣಗೆರೆ: ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಹರ ಪಂಚಮಸಾಲಿ ಮಠದ ಪೀಠಾಧ್ಯಕ್ಷ ಶ್ರೀ ವಚನಾನಂದ ಸ್ವಾಮೀಜಿ ಹರಿಹರ ಗ್ರಾಮಾಂತರ ಠಾಣೆಗೆ ವಿಚಾರಣೆಗೆಂದು ಗುರುವಾರ ಹಾಜರಾದರು. ಸತತ 4 ಗಂಟೆಗಳ ಕಾಲ ಡಿವೈಎಸ್ಪಿ ಬಸವರಾಜ, ಪಿಎಸ್ಐ ಮಂಜುಳಾ ನೇತೃತ್ವದಲ್ಲಿ ನಡೆದ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಸ್ವಾಮೀಜಿಗೆ 50ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದರು. ಮಧ್ಯಾಹ್ನದ ಊಟ ಮುಗಿಸಿದ ನಂತರ ಸ್ವಾಮೀಜಿಯನ್ನು ಸಾರ್ವಜನಿಕ ಆಸ್ಪತ್ರೆಗೆ ಕರೆತಂದು, ವೈದ್ಯಕೀಯ ಪರೀಕ್ಷೆ ಜೊತೆಗೆ ರಕ್ತದ ಮಾದರಿ ಸಂಗ್ರಹಿಸುವ ಪ್ರಕ್ರಿಯೆ ನಡೆಸಲಾಯಿತು. ವಿಚಾರಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀ ವಚನಾನಂದ ಸ್ವಾಮೀಜಿ, ನಾವು ದೇಶದ ಕಾನೂನನ್ನು ಗೌರವಿಸುತ್ತೇವೆ ಮತ್ತು ಅದನ್ನು ಪಾಲಿಸುತ್ತೇವೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

ಹಲ್ಲೆ: ಇಬ್ಬರು ಗಂಭೀರ

ಕಲಬುರಗಿ: ಹಳೆ ವೈಷಮ್ಯದ ಹಿನ್ನೆಲೆ ಎರಡು ಗುಂಪುಗಳ ನಡುವೆ ನಡೆದ ಮಾರಾಮಾರಿಯಲ್ಲಿ ಏರ್ ಗನ್ ಹಾಗೂ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ನಗರದ ಖದೀರ್ ಚೌಕ್ ಪ್ರದೇಶದಲ್ಲಿ ನಡೆದಿದೆ. ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ ನೇತೃತ್ವದ ಗುಂಪು ಹಾಗೂ ನೌಷೇದ್ ಪಟೇಲ್ ಗುಂಪಿನ ನಡುವೆ ಈ ಗಲಾಟೆ ನಡೆದಿದೆ ಎಂದು ತಿಳಿದುಬಂದಿದೆ. ನೌಷೇದ್ ಪಟೇಲ್ ತನ್ನ ಸ್ನೇಹಿತರೊಂದಿಗೆ ಚಹಾ ಸೇವಿಸುತ್ತಿದ್ದ ವೇಳೆ, ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ, ಚಿಲ್ಲು, ಲಂಗಡೆ ಸದ್ದಾಂ, ಸಿಕ್ಕಂದರ್, ಮಾರಿ ಹಾಗೂ ರೇಹಾನ್ ಸೇರಿ ಆರು ಜನರ ಗುಂಪು ಏಕಾಏಕಿ ದಾಳಿ ನಡೆಸಿದೆ ಎನ್ನಲಾಗಿದೆ. ಘಟನೆಯಲ್ಲಿ ಬಾಂಬೆ ಅಸ್ಲಾಂ ಏರ್‌ಗನ್‌ನಿಂದ ಸೈಯದ್ ಜಿಲಾನಿ ಅವರ ಹೊಟ್ಟೆ ಭಾಗಕ್ಕೆ ಎರಡು ಬಾರಿ ಗುಂಡು ಹಾರಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಬಿಜೆಪಿ ಮುಖಂಡರ ಖಂಡನೆ | ಶಾಲಾ-ಕಾಲೇಜು ಸಮವಸ್ತ್ರ ಸಂಹಿತೆಗೆ ಧಕ್ಕೆ | ವೋಟ್ ಬ್ಯಾಂಕ್ ರಾಜಕಾರಣ

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದು ತನ್ನ ತುಷ್ಟೀಕರಣ ನೀತಿಯನ್ನು ಶೈಕ್ಷಣಿಕ ಅಂಗಳಕ್ಕೂ ಹೇರಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಹಿಜಾಬ್ ವಿವಾದದ ಅರ್ಜಿಗಳು ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠದಲ್ಲಿ ಬಾಕಿ ಇರುವಾಗಲೇ ರಾಜ್ಯ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ಅತ್ಯಂತ ದುರದೃಷ್ಟಕರ ಸಂಗತಿ ಎಂದು ಖಂಡಿಸಿದ್ದಾರೆ. ಶಾಲಾ-ಕಾಲೇಜು ಗಳಲ್ಲಿ 'ಸಮವಸ್ತ್ರ ಸಂಹಿತೆ' ವಿದ್ಯಾರ್ಥಿಗಳಲ್ಲಿ ಸಮಾನತೆ ಬೆಳೆಸುವ ಮೂಲ ಉದ್ದೇಶವಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ಧರ್ಮಾಧಾರಿತ ಎನ್ನುವಂತೆ ಸಮವಸ್ತ್ರ ಸಂಹಿತೆಗೆ ಧಕ್ಕೆ ತರುತ್ತಿದೆ. ಸಮಾನತೆ ಬದಲು ತಾರತಮ್ಯ ತೋರುತ್ತಿದೆ ಎಂದು ಆರೋಪಿಸಿದ್ದಾರೆ.



ನ್ಯಾಯಾಂಗದ ಪ್ರಕ್ರಿಯೆಯನ್ನು ಕಡೆಗಣಿಸಿ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ನ್ಯಾಯಾಂಗ ವ್ಯವಸ್ಥೆಗೆ ಮಾಡುವ ಅಪಮಾನವಾಗಿದೆ. ಒಂದು ನಿರ್ದಿಷ್ಟ ವರ್ಗವನ್ನು ಓಲೈಸಲು ಹೋಗಿ ಇಡೀ ಶೈಕ್ಷಣಿಕ ವಾತಾವರಣವನ್ನೇ ಹಾಳು ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿಗಳಲ್ಲೂ 'ವಿಭಜಕ ನೀತಿ' ಅನುಸರಿಸಿ ಶಾಲಾ ಶಿಸ್ತನ್ನು ಹದಗೆಡಿಸುವ ಹುನ್ನಾರಕ್ಕೆ ಮುಂದಾಗಿರುವುದು ನಿಜಕ್ಕೂ ಶೋಚನೀಯ ಎಂದು ಹರಿಹಾಯ್ದಿದ್ದಾರೆ.

ಕೇಂದ್ರ ಸರ್ಕಾರ ದೇಶದೆಲ್ಲೆಡೆ ಏಕರೂಪ ನಾಗರಿಕ ಸಂಹಿತೆ ಜಾರಿ ತರುತ್ತಿರುವ ಬೆನ್ನಲ್ಲೇ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಧರ್ಮಗಳನ್ನು ಒಡೆದಾಳುವ ನೀತಿಗೆ ಕೈ ಹಾಕಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಇನ್ನು ಕೇಸರಿ ಶಾಲು ಧಾರ್ಮಿಕವಲ್ಲ, ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಬಣ್ಣ ಹಾಕಬೇಕು, ಹಾಕಬಾರದೆಂಬ ಹಕ್ಕನ್ನೇ ಕಸಿದುಕೊಳ್ಳುವ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸುತ್ತಿದೆ ಎಂದು ಸಚಿವ ಜೋಶಿ ಆರೋಪಿಸಿದ್ದಾರೆ.

ಒಂದು ವರ್ಗದ ಓಲೈಕೆಗೆ ಹಿಜಾಬ್ ಮತ್ತೆ ಮುನ್ನೆಲೆಗೆ

» ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪ

ಬೆಂಗಳೂರು: ಒಂದು ವರ್ಗವನ್ನು ಸಮಾಧಾನ, ಓಲೈಕೆ ಮಾಡುವುದಕ್ಕೆ ವಿವಾದಿತ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತರಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ದಾವಣಗೆರೆ ಉಪ ಚುನಾವಣೆಯ ಫಲಿತಾಂಶ ಹೊರ ಬಂದ ನಂತರ ಕಾಂಗ್ರೆಸ್ ಪಕ್ಷಕ್ಕೆ ದಿಢೀರ್ ಜ್ಞಾನೋದಯವಾಗಿ ಈ ನಿರ್ಧಾರ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ಅಷ್ಟು ಧೈರ್ಯ ಇದ್ದಿದ್ದರೆ ಅಧಿಕಾರಕ್ಕೆ ಬಂದ ಕೂಡಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಮೂರು ವರ್ಷದಿಂದ ಯಾಕೆ ಸುಮ್ಮನೆ ಇದ್ದರು, ದಾವಣಗೆರೆ ಉಪ ಚುನಾವಣೆಯಲ್ಲಿ ಒಂದು ಸಮುದಾಯದ ಜನರು ಮತ ಚಲಾವಣೆ ಮಾಡಿರುವ ರೀತಿಯನ್ನು ನೋಡಿ ಇವರು ಗಾಬರಿಗೆ ತುತ್ತಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಅವರು ದೂರಿದರು. ಇತ್ತೀಚಿಗೆ ನಡೆದ ಪರೀಕ್ಷೆಯಲ್ಲಿ ಒಬ್ಬ ಹುಡುಗನ ಮೈ ಮೇಲಿದ್ದ ಜನಿವಾರ ತೆಗೆಸಿದರು. ಸಮರ್ಥನೆ ಮಾಡಲು ಆಗುಗುತ್ತದೆಯೇ? ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭದ ದೃಷ್ಟಿ ಬಿಟ್ಟರೆ ಸಮಾಜದ ಶಾಂತಿ ಮುಖ್ಯವಲ್ಲ ಎಂದು ಹೇಳಿದರು.

ಈ ಪ್ರಕರಣ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆಯಲ್ಲಿದೆ. ಹಿಜಾಬ್ ಬಗ್ಗೆ ತಡೆಯಾಜ್ಞೆ ಜಾರಿಯಲ್ಲಿದೆ. ಅದು ತೆರವಾಗದೇ ಇವರು ಇಂಥ ಆದೇಶ ಮಾಡುತ್ತಾರೆ. ನ್ಯಾಯಾಂಗಕ್ಕೂ ಈ ಸರಕಾರ ಅಪಚಾರ ಮಾಡುತ್ತಿದೆ ಎಂದು ಟೀಕಿಸಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರದ ಆದೇಶ: ಸಚಿವ ದಿನೇಶ್

» ಉತ್ತಮ, ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಆದೇಶ ಕೈಗೊಳ್ಳಲಾಗಿದೆ

» ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು ಎಂಬ ಉದ್ದೇಶ



ಬೆಂಗಳೂರು: ರಾಜ್ಯದಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ಸರ್ಕಾರದ ಕ್ರಮವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದು, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿ ಅಲ್ಪಸಂಖ್ಯಾತರನ್ನು ಕಡೆಗಣನೆ ಮಾಡುತ್ತಿದೆ. ನಾವು ಯಾವುದೇ ಒಂದುಸಮುದಾಯದಪರವಾಗಿಲ್ಲ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರ ಈ ಆದೇಶ ಹೊರಡಿಸಿದೆ ಎಂದು ಹೇಳಿದರು. ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿನಿಯರಿಂದ ಹಿಜಾಬ್ ತೆಗೆಸಿದ ವಿಚಾರವನ್ನು ಉಲ್ಲೇಖಿಸಿದ ಅವರು, ಹಿಜಾಬ್ ತೆಗೆಸುವುದು ಎಷ್ಟು ಸರಿ? ಹಿಜಾಬ್ ತೆಗೆಯಿರಿ ಎಂದರೆ ವಿದ್ಯಾರ್ಥಿನಿಯರಿಗೆ ಖಿನ್ನತೆ ಆಗೋದಿಲ್ಲವೇ? ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು. ಉತ್ತಮ ಹಾಗೂ ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಈ ಆದೇಶ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಬಿಜೆಪಿ ವಿರುದ್ಧ ಟೀಕಿಸಿದ ಸಚಿವರು, ಬಿಜೆಪಿ ವಿನಾಕಾರಣ ಹೋರಾಟ ಮಾಡುತ್ತಿದೆ. ವಿದ್ಯಾರ್ಥಿಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ ನೀಟ್ ಪರೀಕ್ಷೆ ವಿರುದ್ಧ ಹೋರಾಟ ಮಾಡಲಿ. ಎನ್‌ಟಿಎ ವಿರುದ್ಧ ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದರು.

ರಾಜ್ಯದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ, ಈ ಹಿಂದೆ ಸಿಇಟಿ ಮಾದರಿಯಲ್ಲಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುವ ವ್ಯವಸ್ಥೆ ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು. 2022ರ ಹಿಜಾಬ್ ಆದೇಶವನ್ನು ಹಿಂಪಡೆದು ಸರ್ಕಾರ ಅವಕಾಶ ನೀಡಿರುವುದನ್ನು ಸಮರ್ಥಿಸಿಕೊಂಡ ಅವರು, ಕೇಸರಿ, ಹಸಿರು, ನೀಲಿ ಶಾಲ್ ಹಾಕಿಕೊಂಡು ಬರುವುದು ಯಾವ ಮಾನದಂಡದಲ್ಲಿದೆ? ಯಾವುದೇ ಶಾಲೆಯಲ್ಲೂ ಇಂತಹ ಶಾಲ್‌ಗಳಿಗೆ ಅವಕಾಶವಿಲ್ಲ, ಸಮವಸ್ತ್ರಕ್ಕೆ ಅನುಗುಣವಾಗಿ ಶಾಲ್ ಹಾಕಿಕೊಂಡು ಬರಬಹುದು. ಹಿಜಾಬ್ ಅಂದರೆ ಒಂದು ಸ್ಕಾರ್ಫ್ ಅಷ್ಟೇ, ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಹೇಳಿದರು.

ವಿಭೂತಿ, ಕುಂಕುಮ ಇಟ್ಟುಕೊಂಡು ಬರುವುದು ತಪ್ಪು ಎಂದು ಹೇಳಲು ಆಗುತ್ತದೆಯೇ? 2022ರ ಮೊದಲು ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಈ ವಿಚಾರ ದೊಡ್ಡ ಸಮಸ್ಯೆಯಾಯಿತು ಎಂದು ಅವರು ತಿಳಿಸಿದರು.

ನಾವು ಯಾವುದೇ ಸಮುದಾಯವನ್ನು ಓಲೈಕೆ ಮಾಡುವ ಕೆಲಸ ಮಾಡುತ್ತಿಲ್ಲ, ಸರ್ಕಾರದ ಆದೇಶ ಸಹಜವಾಗಿರುವ ಒಂದು ಪದ್ಧತಿಯನ್ನು ಮುಂದುವರಿಸುವ ಕ್ರಮ ಮಾತ್ರ. ಹಿಜಾಬ್ ಧರಿಸುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಹಿಂದುಗಳ ಮೇಲೆ ಭಯ ಸೃಷ್ಟಿಸುವುದು ಹಾಗೂ ಅಲ್ಪಸಂಖ್ಯಾತರ ಓಲೈಕೆ ಎಂದು ಭಾವನೆ ಮೂಡಿಸುವುದೇ ಬಿಜೆಪಿಯ ರಾಜಕೀಯ ಕಾಯಕ ಎಂದು ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದರು.

ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶದ ಉಲ್ಲಂಘನೆ: ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಮುಸ್ಲಿಂ ತುಷ್ಟೀಕರಣ ಮುಂದುವರಿಸಿರುವ ರಾಜ್ಯ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶವನ್ನು ಸ್ಪಷ್ಟ ಉಲ್ಲಂಘನೆ ಮಾಡಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಹಿಜಾಬ್ ಧರಿಸಿ ಕಾಲೇಜಿಗೆ ಬರುವುದನ್ನು ಈ ಹಿಂದಿನ ಬಿಜೆಪಿ ಸರ್ಕಾರ ನಿಷೇಧಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿಯೂ ಪ್ರಶ್ನಿಸಲಾಗಿತ್ತು. ಹೈಕೋರ್ಟ್ ಸಮವಸ್ತ್ರ ಸಂಹಿತೆಯಂತೆ ಕಾಲೇಜಿಗೆ ಬರಬೇಕು. ಹಿಜಾಬ್‌ಗೆ ಅವಕಾಶ ವಿಲ್ಲ ಎಂದು ಹೇಳಿತ್ತು. ಆದರೂ ರಾಜ್ಯ ಕಾಂಗ್ರೆಸ್ ಸರ್ಕಾರ ಈಗ ಮತ್ತೊಂದು ಆದೇಶ ಹೊರಡಿಸಿ ವಿವಾದಕ್ಕೆ ಕಾರಣವಾಗಿದೆ ಎಂದರು. ಹಿಜಾಬ್‌ಗೆ ಅವಕಾಶ ಕೊಟ್ಟು, ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ಹೇರಿದರೆ, ಶಾಲಾ ಕಾಲೇಜುಗಳಲ್ಲಿ ಮಾತ್ರವಲ್ಲ ಇಡೀ ರಾಜ್ಯ ಹಾಗೂ ವಿಧಾನ ಮಂಡಲವೂ ಕೇಸರಿಮಯವಾಗಿ ಕಾಂಗ್ರೆಸ್ ನಿರ್ನಾಮವಾಗುವುದು ಖಚಿತ ಎಂದು ಭವಿಷ್ಯ ನುಡಿದರು.



ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆ ಮುಟ್ಟಿದ ಸರ್ಕಾರ: ಆರಗ ಜ್ಞಾನೇಂದ್ರ

ತೀರ್ಥಹಳ್ಳಿ: ಹಿಜಾಬ್ ನಿಷೇಧ ಮಾಡಿ ಶಾಲೆಗಳಲ್ಲಿ ಹಿಜಾಬ್ ಹಾಕಬಾರದು. ಶಾಲೆಯ ಸಮವಸ್ತ್ರಕ್ಕೆ ಆದ್ಯತೆ ನೀಡಬೇಕು ಎಂದು ನಮ್ಮ ಸರ್ಕಾರ ಆದೇಶ ಮಾಡಿತ್ತು. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಇದನ್ನು ತೆಗೆದುಹಾಕುವ ಮೂಲಕ ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆಯನ್ನು ಮುಟ್ಟಿದೆ ಎಂದು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ವಾಗ್ದಾಳಿ ನಡೆಸಿದರು. ಗುರುವಾರ ಮಾಧ್ಯಮಗಳಿಗೆ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹಿಜಾಬ್‌ನ್ನು ಮತ್ತೆ ಧರಿಸಲು ಆದೇಶವನ್ನು ನೀಡಿದೆ. ಜನಿವಾರ, ಶಿವದಾರ, ಹಿಜಾಬ್‌ನ್ನು ಹಾಕಲು ಅವಕಾಶ ಕೊಡುತ್ತೇವೆ ಎಂದು ಹೇಳಿದೆ. ನಾಚಿಕೆ ಇಲ್ಲದ ಕಾಂಗ್ರೆಸ್ ಸರ್ಕಾರ, ಇತ್ತೀಚಿಗೆ 600 ಕೋಟಿ ರೂ.ಗಳನ್ನು ಮುಸ್ಲಿಂ ಕಾನೂನಿನ ಅಭಿವೃದ್ಧಿಗೋಸ್ಕರ ಇಟ್ಟಿದಾರೆ. ಕಳೆದ 3 ಬಜೆಟ್‌ನ ಪ್ರತಿಯೊಂದು ಬಜೆಟ್‌ನಲ್ಲೂ 1600 ಕೋಟಿ ರೂ. ಮುಸ್ಲಿಂ ಮಕ್ಕಳಿಗೆ ಓದಲು, ಶಾಲೆ-ಕಾಲೇಜು ತೆರೆಯಲು ಇಟ್ಟಿದ್ದಾರೆ ಎಂದಿದ್ದಾರೆ.



ಸರ್ಕಾರದಿಂದ ಜನರ ದಾರಿ ತಪ್ಪಿಸುವ ಕೆಲಸ: ಶಾಸಕ ಯಶ್‌ಪಾಲ್ ಸುವರ್ಣ

ಬೆಂಗಳೂರು: ಹಿಜಾಬ್ ಆದೇಶ ಹಿಂಪಡೆ ಯುವ ಮೂಲಕ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ದಾವಣಗೆರೆ ಉಪ ಚುನಾವಣೆ ಸಂದರ್ಭದಲ್ಲೂ ಮತ್ತೊಮ್ಮೆ ಅಲ್ಪಸಂಖ್ಯಾತರನ್ನು ಓಲೈಕೆ ಮಾಡಲು ಮುಂದಾಗಿದ್ದರು ಎಂದು ಶಾಸಕ ಯಶ್‌ಪಾಲ್ ಸುವರ್ಣ ಆಕ್ಷೇಪಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಸ್ತು, ಭೇದಭಾವವಿಲ್ಲದೇ, ಶ್ರೀಮಂತ-ಬಡವ ಎಂಬ ಭಾವನೆಗೆ ಅವಕಾಶ ಇರದಂತೆ ಶಾಲೆ ನಡೆಯಬೇಕೆಂಬ ಉದ್ದೇಶದಿಂದ ಸಮವಸ್ತ್ರ ವ್ಯವಸ್ಥೆಯನ್ನು ಶಾಲಾ-ಕಾಲೇಜುಗಳಲ್ಲಿ ಜಾರಿ ಮಾಡಲಾಗಿದೆ ಎಂದರು. ಮುಂದಿನ ಚುನಾವಣೆಗಳಲ್ಲಿ ಅಲ್ಪಸಂಖ್ಯಾತರು ಕಾಂಗ್ರೆಸ್ಸನ್ನು ಕೈಬಿಡುವರೇ? ಎಂಬ ಆತಂಕ ಕಾಂಗ್ರೆಸ್ಸಿಗರದು. ಎಂಐಎಂ ಅಥವಾ ಮುಸ್ಲಿಂ ಲೀಗಿನ ಮೂಲಕ ಸಂಘಟನೆ ಮಾಡಿ ಕಾಂಗ್ರೆಸ್ಸಿಗೆ ಸೆಡ್ಡು ಹೊಡೆಯುವ ಭಯದ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್, ತನ್ನ ಸ್ವಾರ್ಥ ಮತ್ತು ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ

ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದ ಜಯದೇವ

ಬೆಂಗಳೂರು: ಎಲ್ಲರಿಗೂ ಉದ್ಯೋಗ ಪೂರ್ಣಕಾಲಿಕ ಹಾಗೂ ಬೇರೆಯದ್ದು ಅರೆಕಾಲಿಕ ಆಗಿರುತ್ತದೆ. ಆದರೆ, ಜಯದೇವ ಅವರಿಗೆ ಇಂಡಿಯಾ ಗ್ಯಾರೇಜಿನ ಉದ್ಯೋಗವೇ ಅರೆಕಾಲಿಕವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯವೇ ಪೂರ್ಣಕಾಲಿಕವಾಗಿತ್ತು ಎಂದು ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವರು ಅವಿಶ್ರಾಂತ ಧ್ಯೇಯಜೀವಿ ಮೈ. ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಮಾಡಿದರು. ಜಯದೇವ ಅವರು ಮಠದ ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ಮಾರ್ಗದರ್ಶಕರಾಗಿದ್ದರು. ಭಾರತೀಯ ಸಂಸ್ಕೃತಿಯ ಪುನರುತ್ಥಾನದಲ್ಲಿ ಮಠಮಾನ್ಯಗಳೂ ತೊಡಗಿಸಿಕೊಳ್ಳಬೇಕೆಂದು ಸಿದ್ದೇಶ್ವರ ಸ್ವಾಮೀಜಿ, ಪೇಜಾವರ ಶ್ರೀ ಮುಂತಾದವರು ಊಟಿಯಲ್ಲಿ ಆರಂಭಿಸಿದರು. ಅದರ ಸಭೆಗಳಿಗೆ ಅತ್ಯಂತ ಸಿದ್ಧವಾಗಿ ಆಗಮಿಸುತ್ತಿದ್ದವರು ಜಯದೇವ ಅವರು ಎಂದು ತಿಳಿಸಿದರು.

ವಂದೇ ಮಾತರಂನಲ್ಲಿ ಬರುವಂತೆ ಎಲ್ಲವೂ ತಾಯಿಗಾಗಿಯೇ ಎಂದು ಬದುಕು ನಡೆಸಿದವರು. ಸದಾ ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದವರು. ತುರ್ತು ಪರಿಸ್ಥಿತಿಯ ವೇಳೆ ಸೆರೆಮನೆಗೆ ಉದ್ದೇಶಪೂರ್ವಕವಾಗಿ ಆಗಮಿಸಿ ಅಲ್ಲಿದ್ದವರಿಗೆ ಆತ್ಮಸ್ಥೈರ್ಯ, ದೇಶಭಕ್ತಿಯನ್ನು ನೀಡಿದವರು. ನಿರ್ಲಿಪ್ತವಾದ ಬದುಕನ್ನು ನಡೆಸಿದರು ಎಂದರು.

ಜಯದೇವ ಅವರು ಎಂದೂ ರಾಜ ಆಗಬೇಕೆಂದುಕೊಂಡಿದ್ದವರಲ್ಲ, ಕಿಂಗ್ ಮೇಕರ್ ಆಗಿದ್ದವರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಾವಿರಾರು ಪುಣ್ಯಕರ್ಮಗಳ ಸಂಚಯದಿಂದ ಪ್ರಾಪ್ತವಾದ ಮನುಷ್ಯ ಜೀವನವನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಮಾತಿಗರ ಅನ್ವರ್ಥರಾಗಿದ್ದವರು ಜಯದೇವರು. ಯಾವುದೇ ಅಧಿಕಾರಕ್ಕೆ ಆಸೆ ಪಟ್ಟವರಲ್ಲ, ಅವರು ಇದ್ದಷ್ಟೂ ಕಾಲ ಸಂಸ್ಥೆಗಳಿಗೆ ಮೀಸಲಿಟ್ಟು ಕಟ್ಟಿ ಬೆಳೆಸಿದರು. ಅವರ ಧ್ಯೇಯಾದರ್ಶಗಳು ನಮ್ಮೊಂದಿಗೆ ಇರುತ್ತವೆ ಎಂದು ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪುಸ್ತಕದ ಕುರಿತು ಮಾತನಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು. ಪರಿಷತ್ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕ ಮಾತುಗಳನ್ನಾಡಿದರು.

> ಪರಿಷತ್ತು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ಅವರಿಗೆ ಸ್ಪಷ್ಟತೆ ಇದ್ದಿದ್ದರಿಂದ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಸರ್ವಾಂತರ್ಗತ ವೈದ್ಯಕೀಯ ಸೇವೆ ಸಿಗಬೇಕು ಎಂದು ಅವರ ಅಪೇಕ್ಷೆಯಾಗಿತ್ತು. ಅದು ಇಂದು ರಾಜರಾಜೇಶ್ವರಿ ನಗರದಲ್ಲಿ ಅವರದ್ದೇ ಹೆಸರಿನ ಆಸ್ಪತ್ರೆಯಾಗಿ ಸಾಕಾರಗೊಂಡಿದೆ.
>
> ■ ನಾ. ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ

> ಅನೇಕ ಸಂಸ್ಥೆಗಳನ್ನು ಕಟ್ಟಿ ನೂರಾರು ಚಟುವಟಿಕೆಗಳನ್ನು ಹಾಗೂ ಎಂದಿಗೂ ವಿಶ್ರಮಿಸದೆ ಪಾಲಿಗೆ ಬಂದ ಎಲ್ಲ ಕೆಲಸಗಳನ್ನೂ ಸಮಚಿತ್ತ, ಆತ್ಮವಿಶ್ವಾಸ, ಬದ್ಧತೆಯಿಂದ ಪೂರ್ಣಗೊಳಿಸಿದವರು ಜಯದೇವ ಅವರು. ನಿರ್ಮೋಹಿಯಾಗಿ ಸಂಘಕ್ಕೆ ತನ್ನನ್ನು ಸಮರ್ಪಣೆ ಮಾಡಿಕೊಂಡವರು. ಅವರ ಜೀವನ ನೆನೆದರೆ ಅನೇಕ ಕ್ರಾಂತಿಕಾರಿಗಳ ಜೀವನ ನೆನಪಾಗುತ್ತದೆ.
>
> ■ ಬಾಬು ಕೃಷ್ಣಮೂರ್ತಿ, ಕೃತಿಯ ಲೇಖಕ

ಆರ್‌ಎಸ್‌ಎಸ್ ಸಹಸರಕಾರ್ಯವಾಹ ಸಿ.ಆರ್. ಮುಕುಂದ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಆಡಳಿತಾತ್ಮಕ ವೈಫಲ್ಯ: ಸಿದ್ದರಾಮಯ್ಯ

ನೀಟ್ ಪರೀಕ್ಷೆ ರದ್ದು: ದ್ರೋಹ

ಬೆಂಗಳೂರು: ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ ನೀಟ್-ಯುಜಿ 2026 ಪರೀಕ್ಷೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವು ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವಜನತೆಗೆ ಬಗೆದ ಕ್ರೂರ ದ್ರೋಹವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀಟ್ ರದ್ದತಿ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಕರ್ನಾಟಕದ 1 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದಂತೆ ದೇಶದ 22 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತರಬೇತಿ, ಪ್ರಯಾಣ ಸೇರಿದಂತೆ ಸಾಕಷ್ಟು ಖರ್ಚುಗಳನ್ನು ಮಾಡಿದ್ದರು. ಆದರೆ ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಿದೆ ಎಂದು ಕಿಡಿಕಾರಿದ್ದಾರೆ.

2024ರಲ್ಲೇ ನಮ್ಮ ಸರ್ಕಾರವು ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಮತ್ತು ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಸದನ ನಿರ್ಣಯ ಕೈಗೊಂಡಿದ್ದೆವು. ಅಂದಿನ ನಮ್ಮ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎನ್ನುವುದನ್ನು ಇಂದಿನ ಪರೀಕ್ಷಾ ರದ್ದತಿಯು ಸಾಬೀತುಪಡಿಸಿದೆ ಎಂದು ದೂರಿದ್ದಾರೆ. ಈ ಬಗ್ಗೆ ಪಾರದರ್ಶಕ, ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಹೊಸ ಪರೀಕ್ಷಾ ವೇಳಾಪಟ್ಟಿಯ ಬಗ್ಗೆ ಕೂಡಲೇ ಸ್ಪಷ್ಟನೆ ನೀಡಬೇಕು ಮತ್ತು ಅಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವ ರಾಜ್ಯಗಳ ಅಧಿಕಾರವನ್ನು ಪುನಃ ಸ್ಥಾಪಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಪೇಪರ್ ಲೀಕ್‌ನಿಂದ ತೊಂದರೆಗೀಡಾಗಿರುವ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಪೋಷಕರ ಜೊತೆ ನಾವಿದ್ದೇವೆ. ಅವರ ಪರಿಶ್ರಮಕ್ಕೆ ತಕ್ಕ ಫಲ ಸಿಗುವಂತೆ ಮಾಡುವುದು ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದಿದ್ದಾರೆ.

ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ

ನೇಮಕಾತಿ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪೇಪರ್ ಲೀಕ್ ಪ್ರಕರಣಗಳು ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿವೆ. ಹೊಣೆ ಹೊರಬೇಕಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಾಧ್ಯಮಗಳಿಂದ ದೂರ ಉಳಿದಿದ್ದಾರೆ. ಯುವಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಸಂಪಾದಕೀಯ

ವಿಶ್ವಶಾಂತಿ ಬಯಸಿದರೆ ತಪ್ಪೇನು?

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರಯ ಹೊಸಬಾಳೆಯವರ ಎರಡು ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಸಂಘದ ಪ್ರಮುಖರ ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುವುದು ಉತ್ತಮ ಸಂಗತಿಯೇ ಆದರೂ ಎರಡು ಸಂಗತಿಗಳನ್ನು ಆದಷ್ಟೂ ವಿವಾದವನ್ನಾಗಿ ಪರಿವರ್ತಿಸುವ ಹುನ್ನಾರ ನಡೆಯುತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೊಸಬಾಳೆಯವರು ಅನೇಕ ಸಂಗತಿಗಳ ಬಗ್ಗೆ ಮುಕ್ತ ಮಾತುಕತೆ ನಡೆಸಿದ್ದರು. ಲವ್ ಜಿಹಾದಿನ ಬಗ್ಗೆ ಮಾತನಾಡುತ್ತಾ



ಅವರು ಶುದ್ಧ ಪ್ರೀತಿಗೆ ಯಾರ ವಿರೋಧವಿಲ್ಲ, ಆದರೆ ಉದ್ದೇಶಪೂರ್ವಕ ಮತಾಂತರ ಅಪಾಯಕಾರಿ ಎಂದಿದ್ದರು. ಇದನ್ನು ಚರ್ಚೆ ನಡೆಸುವ ದಾರಿ ಬೇರೆ ಇರಬೇಕಿತ್ತು. ಏಕೆಂದರೆ ಶುದ್ಧ ಪ್ರೀತಿಯನ್ನು ವಿಚಾರವಂತರೆಲ್ಲರೂ ಒಪ್ಪುತ್ತಾರೆ. ಪಾಕಿಸ್ಥಾನದ ಜತೆ ಮಾತುಕತೆಗೆ ಭಾರತ ಮುಕ್ತವಾಗಿರಬೇಕು ಎನ್ನುವ ಇನ್ನೊಂದು ಹೇಳಿಕೆಯನ್ನು ಕಾಂಗ್ರೆಸ್ ವಕ್ತಾರರ ಸಹಿತ ಅನೇಕರು ವ್ಯಂಗ್ಯವಾಡಿದ್ದಾರೆ. ಇದರಲ್ಲೇನೂ ಆಭಾಸ ಇರಲಿಲ್ಲ. ಅದು ಹೊಸಬಾಳೆಯವರ ಅಮೆರಿಕ ಪ್ರವಾಸದ ಕಾರಣ ಇರಬಹುದು ಎಂದು ಹಿರಿಯ ಕಾಂಗ್ರೆಸಿಗ ಜೈರಾಂ ರಮೇಶ್ ಅವರಂಥವರೇ ಪ್ರತಿಕ್ರಿಯಿಸಿದ್ದಾರೆ. ಹಾಗಾದರೆ ಏನು ಮಾಡಬೇಕಿತ್ತು. ಪಾಕಿಸ್ಥಾನದೊಂದಿಗೆ ಚರ್ಚೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕೆನ್ನಬೇಕಿತ್ತೇ? ಪಾಕಿಸ್ಥಾನ ಭಯೋತ್ಪಾದನೆಯನ್ನು ಪೋಷಿಸುತ್ತಿದೆ ಮತ್ತು ಭಾರತದ ವಿರುದ್ಧ ಅದನ್ನು ಬಳಸುತ್ತಿದೆ ಎನ್ನುವುದರಲ್ಲಿ ಯಾವ ದೇಶಗಳಿಗೂ ಇಂದು ಸಂಶಯವಿಲ್ಲ. ಭಾರತ ಸದಾ ಶಾಂತಿಯನ್ನು ಪೋಷಿಸುವ ದೇಶ ಎನ್ನುವುದನ್ನು ಒಪ್ಪುವವರೆಲ್ಲರೂ ಹೊಸಬಾಳೆಯವರ ಹೇಳಿಕೆಯನ್ನು ಸ್ವಾಗತಿಸಲೇಬೇಕು. ಭಾರತವು ಭಯೋತ್ಪಾದನಾ ದಾಳಿಯನ್ನೆದುರಿಸಿದಾಗಲೆಲ್ಲಾ ತಕ್ಕ ಉತ್ತರವನ್ನು ನೀಡಿದೆ. ಆದರೆ ಶಾಂತಿಯ ಹಾದಿ ದೀರ್ಘಾವಧಿಯದ್ದು. ಯುದ್ಧ ಮತ್ತು ಶಾಂತಿ ಎರಡು ಧ್ರುವಗಳದ್ದು. ಶಾಂತಿಯ ಹಾದಿಯಲ್ಲಿ ಅನೇಕ ಪ್ರಕ್ರಿಯೆಗಳು ನಡೆಯಬೇಕಿವೆ.

ಹಿಂದಿನಂತೆ ಕ್ರಿಕೆಟ್ ಪಂದ್ಯಾವಳಿಯೇ ಪರಿಹಾರ ಎಂದು ನಂಬುವ ಸ್ಥಿತಿಯಲ್ಲಿ ಇಂದು ದೇಶ ಇಲ್ಲ. ಭಾರತ ಇಂದು ತನ್ನ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಂಡಿದೆ. ತಾಕತ್ತಿನಲ್ಲಿ ಶಾಂತಿಯನ್ನು ಬಯಸುವುದಕ್ಕೂ ದೌರ್ಬಲ್ಯವಿಟ್ಟುಕೊಂಡು ಶಾಂತಿಯ ಮಾತಾಡುವುದಕ್ಕೂ ವ್ಯತ್ಯಾಸವಿಲ್ಲವೇ? ಒಂದು ವೇಳೆ ಹೊಸಬಾಳೆಯವರು ಮಾತುಕತೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕು ಎಂದಿದ್ದರೂ ಕಾಂಗ್ರೆಸ್ ನಾಯಕರು ಅದನ್ನು ಆರೆಸ್ಸೆಸ್ ಹಿಂಸೆಯನ್ನು ಪ್ರಚೋದಿಸುತ್ತದೆ ಎಂದು ಆರೋಪಿಸುತ್ತಿತ್ತು. ಆರೆಸ್ಸೆಸ್ ಪ್ರತಿಪಾದಿಸುವ ಹಿಂದುತ್ವದ ಸಿದ್ಧಾಂತದ ಅಂತಿಮ ಗುರಿ ವಿಶ್ವಶಾಂತಿ ಎನ್ನುವುದನ್ನು ಅರಿಯದಿದ್ದರೆ ಮೊಸರಲ್ಲೂ ಕಲ್ಲು ಹುಡುಕುವ ಇಂಥ ಹೇಳಿಕೆಗಳು ಹುಟ್ಟುತ್ತವೆ. ಲವ್ ಜಿಹಾದ್ ಪದ ಕೂಡ ಆರೆಸ್ಸೆಸ್ ಕೊಡುಗೆಯಲ್ಲ ಎನ್ನುವುದನ್ನು ಚರ್ಚಿಸಿದ್ದರೆ ಸಮಾಜಿಕ ಶಾಂತಿಯ ಹೊಸ ವ್ಯಾಖ್ಯಾನವನ್ನು ಬರೆಯುವ ಅವಕಾಶಗಳಿದ್ದವು. ಸರಕಾರ್ಯವಾಹರ ಅಮೆರಿಕಾ ಪ್ರವಾಸಕ್ಕೂ ಶಾಂತಿಯನ್ನು ಬಯಸುವ ಹೇಳಿಕೆಗೂ ನಂಟಸ್ಥನ ಕಟ್ಟುವ ಹೇಳಿಕೆ ಬಾಲಿಶತನದ್ದು ಮಾತ್ರವಲ್ಲ, ಮೂರ್ಖತನದ್ದು. ಅದರಲ್ಲೂ ಭಯೋತ್ಪಾದನೆಗೆ ತಿರುಗೇಟು ಕೊಟ್ಟಾಗ ವಿರೋಧಿಸುವ ಮತ್ತು ಸೈನಿಕ ಕಾರ್ಯಾಚರಣೆಗಳಿಗೆ ಸಾಕ್ಷಿ ಕೇಳುವ ಮಾನಸಿಕತೆಗೆ ಪ್ರಾಮಾಣಿಕವಾಗಿ ಶಾಂತಿಯ ಅಪೇಕ್ಷೆ ಇಲ್ಲವೆಂದೇ ಹೇಳಬೇಕು.

ವಿನಾ ಬೀಜಂ ಕಥಂ ವೃಕ್ಷಃ

ಜ್ಞಾನಂ ವಿನಾ ಕುತೋ ಮುಕ್ತಿಃ ವಿನಾ ಸ್ನಾನ ಶಯೇ ಕುತಃ ।
ವಿನಾ ಬೀಜಂ ಕಥಾ ವೃಕ್ಷೋ ವಿನಾ ವಿತ್ತಂ ಕಥಂ ಸುಖಮ್ ॥ -ಸುವಚನಶತಕಮ್

ಜ್ಞಾನವಿಲ್ಲದೆ ಮುಕ್ತಿ ಉಂಟಾಗುವುದು ಹೇಗೆ? ಸ್ನಾನವಿಲ್ಲದೆ ಶುಚಿಯಾಗುವುದು ಹೇಗೆ? ಬೀಜವಿಲ್ಲದೆ ಮರ ಹುಟ್ಟುವುದು ಸಾಧ್ಯವೇ? ಹಣವಿಲ್ಲದೆ ಸುಖ ಎಲ್ಲಿದೆ – ಎಂಬುದು ಶ್ಲೋಕಾರ್ಥ.

'ಅರ್ಥ ಸರ್ವ ಜಗನ್ಮೂಲವ್' ಎಂಬ ಲೋಕೋಕ್ತಿಯಿದೆ. ಲೋಕದ ಸಕಲ ವ್ಯಾಪಾರಕ್ಕೂ ವ್ಯವಹಾರಕ್ಕೂ ಹಣವೇ ಮೂಲ ಎಂಬುದು ಇದರ ಅರ್ಥ. ಆದ್ದರಿಂದ ಎಲ್ಲರೂ ಅರ್ಥವಂತರಾಗಬೇಕು. ಶ್ರಮವರಿಯದೇ ದುಡಿದು ಸಂಪತ್ತನ್ನು ಗಳಿಸಬೇಕು. ತನ್ಮೂಲಕ ಜೀವನವನ್ನು ನಿರ್ವಹಣೆ ಮಾಡಬೇಕು ಎಂಬುದು ತಾತ್ಪರ್ಯ.



ಧರ್ಮ, ಕಾಮಗಳಿಗೂ ಅರ್ಥವೇ ಬೇಕು. ಅರ್ಥವಿಲ್ಲದವನು ಇವೆರಡನ್ನೂ ಪೂರೈಸಿಕೊಳ್ಳಲಾರ.

ಲೋಕದಲ್ಲಿ ಹಣವಿರುವವರಿಗೆ ವಿಶಿಷ್ಟವಾದ ಸ್ಥಾನಮಾನಾದಿಗಳು ಲಭ್ಯವಾಗುತ್ತವೆ. ಲೋಕವೂ ಇಂಥವರನ್ನೇ ಆಧರಿಸುತ್ತದೆ. ಸಂಪತ್ತು ನಮ್ಮಲ್ಲಿಲ್ಲದ ಗುಣಗಳನ್ನು ತಂದುಕೊಡುತ್ತದೆ. 'ಅರ್ಥವಾನ್ ದುಷ್ಕುಲೀನೋಽಪಿ ಲೋಕೇ ಪೂಜ್ಯತಮೋ ನರಃ' ಅಂದರೆ ಹಣವಿರುವಾತನು ಕುಲಹೀನನಾದರೂ ಲೋಕದಲ್ಲಿ ಪರಮಪೂಜ್ಯ ಎಂಬುದು ಇದರ ಅರ್ಥ. ಇದರಿಂದಲೇ ಸಂಪತ್ತಿನ ಮಹಿಮೆ ಮನದಟ್ಟಾಗುತ್ತದೆ. ಆದ್ದರಿಂದಲೇ ಚಾಣಕ್ಯ 'ಅರ್ಥಾರ್ಥಂ ಪ್ರವರ್ತತೇ ಲೋಕಃ' ಎಂದಿದ್ದಾನೆ. 'ಅರ್ಥಾಃ ಬಹಿಷ್ಚರಪ್ರಾಣಾಃ ಅರ್ಥವಾನೇವ ಭೂಪತಿಃ' ಎಂಬ ಸೂಕ್ತಿ ಪ್ರಸಿದ್ಧವೆನಿಸಿದೆ. ಪ್ರಚಲಿತದಲ್ಲಿದೆ ಕೂಡ. ಐಶ್ವರ್ಯಗಳು ಮನುಷ್ಯನ ಹೊರಗಿನ ಪ್ರಾಣಗಳು. ಹಣವುಳ್ಳವನೇ ಭೂಪತಿ. ಇದನ್ನು ಹೊರ ಪ್ರಪಂಚದಲ್ಲಿ ನಿತ್ಯವೂ ಕಾಣುತ್ತೇವೆ.

ಜೀವನದಲ್ಲಿ ಸುಖ ಪಡಬೇಕೆಂದಾದರೆ ಸಂಪತ್ತಿರಬೇಕು. ಸಂಪತ್ತನ್ನು ಗಳಿಸಬೇಕು. ಲೋಕದಲ್ಲಿ ಸಂಪತ್ತಿರುವವರಿಗೆ ಮಿತಿಮೀರಿ ಗೌರವವನ್ನು ಕೊಡುತ್ತಾರೆ. ಆದ್ದರಿಂದ ಏನಕೇನಪ್ರಕಾರೇಣ ಸಂಪತ್ತನ್ನು ಗಳಿಸಬೇಕು. ಸುಖದ ಮೂಲ ಸಂಪತ್ತು. ಸಂಪತ್ತಿಲ್ಲದೆ ಸುಖವಿಲ್ಲ ಎನ್ನುತ್ತಾ ಪ್ರಕೃತ ಶ್ಲೋಕ ಸೋದಾಹರಣವಾಗಿ ಹಣದ ಹಿರಿಮೆಯನ್ನು ಮುಕ್ತವಾಗಿ ಸಾರಿದೆ.

ಮುಕ್ತಿ ಬದುಕಿನ ಪರಮ ಗುರಿ. ಮುಕ್ತಿ ಎಂಬುದು ಸುಲಭವಾಗಿ ಪ್ರಾಪ್ತವಾಗುವುದಿಲ್ಲ. ಮುಕ್ತಿ ಪಡೆಯಲು ಜ್ಞಾನ ಬೇಕು. ಮುಕ್ತಿ ಪ್ರಾಪ್ತಿಗೆ ಇರುವ ಏಕೈಕ ಮಾರ್ಗವೆಂದರೆ ಜ್ಞಾನ ಮಾತ್ರ. ಶರೀರ ಶುದ್ಧವಾಗುವುದಕ್ಕೆ ಸ್ನಾನ ಮಾಡಬೇಕು. ''ಸ್ನಾನೇನ ಶುದ್ಧಿಃ ನ ತು ಚಂದನೇನ' ಸ್ನಾನದಿಂದಲೇ ಶರೀರ ಶುದ್ಧಿಯೇ ವಿನಾ ಚಂದನ ಮೊದಲಾದ ಲೇಪನ ದ್ರವ್ಯದಿಂದ ಶರೀರವೆಂದೂ ಶುದ್ಧವಾಗಲಾರದು. ಇನ್ನು ಅನಿವಾರ್ಯ ಪ್ರಸಂಗಗಳಲ್ಲಿ ಮೃತ್‌ಶುದ್ಧಿ, ಸಂಪ್ರೋಕ್ಷಣಶುದ್ಧಿ, ಮಂತ್ರಶುದ್ಧಿ ಇವುಗಳು ಶರೀರವನ್ನು ಶುದ್ಧಿಗೊಳಿಸುತ್ತದೆ ಎನ್ನುತ್ತಾರೆ. ಏನಿದ್ದರೂ ಸ್ನಾನ ಬೇಕು.

'ಬೀಜವಿಲ್ಲದೆ ವೃಕ್ಷವಿಲ್ಲ' ಎನ್ನುತ್ತಾರೆ. ವೃಕ್ಷದ ಮೂಲ ಬೀಜವೇ. ಉತ್ತಮ ಜಾತಿಯ ಗಿಡಗಳಿಗೆ ಕಸಿ ಮಾಡುವ ಪರಂಪರೆ ಇದೆ. ಆದರೆ ಅದು ಬೀಜದ ಪ್ರತಿರೂಪವೇ. ಒಟ್ಟಿನಲ್ಲಿ ಉತ್ತಮ ಬೀಜ ಉತ್ತಮ ವೃಕ್ಷಕ್ಕೆ ಕಾರಣ ಎಂಬುದು ತ್ರಿಕಾಲಾಬಾಧಿತ ಸತ್ಯ.

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ

ಎರಿಕ್ ಸೋಲ್ಹೈಮ್

ಪರಿಸರದ ಮೇಲೆ ನರೇಂದ್ರ ಮೋದಿಯವರಿಗಿರುವ ಅಚಲ ವಿಶ್ವಾಸದಿಂದ ಪಾಶ್ಚಿಮಾತ್ಯ ದೇಶಗಳು ಕಲಿಯಬೇಕಾದದ್ದು ಸಾಕಷ್ಟಿದೆ. ಮುಂಬರುವ ಸೋಮವಾರ, ಮೇ 18ರಂದು ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ ನಾರ್ವೆಗೆ ಭೇಟಿ ನೀಡಲಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಅಲ್ಲಿನ ದೊರೆ ಹರಾಲ್ಡ್ ಗೌರವಪೂರ್ವಕವಾಗಿ ಬರಮಾಡಿಕೊಳ್ಳಲಿದ್ದಾರೆ. ಈ ಭೇಟಿಯ ಅವಧಿಯಲ್ಲಿ ಮೋದಿ ಅವರು ಭಾರತೀಯ ಉದ್ಯಮಗಳಿಗೆ ಉತ್ತೇಜನ ನೀಡಲಿದ್ದಾರೆ, ಅಲ್ಲಿನ ಅನಿವಾಸಿ ಭಾರತೀಯರನ್ನು ಭೇಟಿಯಾಗಲಿದ್ದಾರೆ ಹಾಗೂ 'ಭಾರತ-ನಾರ್ಡಿಕ್' ಪ್ರಧಾನ ಮಂತ್ರಿಗಳ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ನಿಜ ಹೇಳಬೇಕೆಂದರೆ, ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳು ಮೋದಿಯವರ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಆಲಿಸಬೇಕಿದೆ; ಏಕೆಂದರೆ ತಮ್ಮ ಭಾರತೀಯ ಸಹೋದ್ಯೋಗಿಯಿಂದ ಅವರು ಕಲಿಯಬೇಕಾದ ಅಂಶಗಳು ಸಾಕಷ್ಟಿವೆ.

ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳಿಗೆ ಸ್ವದೇಶದಲ್ಲೇ ಇರುವ ಜನಪ್ರಿಯತೆ ಕೇವಲ ಶೇ. 30ರಷ್ಟಿದ್ದರೆ, ಮೋದಿಯವರು ಸಮೀಕ್ಷೆಗಳಲ್ಲಿ ಶೇ. 70ರಷ್ಟು ಬೆಂಬಲದೊಂದಿಗೆ ಮುನ್ನಡೆಯುತ್ತಿದ್ದಾರೆ. ಇಂದು ವಿಶ್ವದ ಯಾವುದೇ ಪ್ರಮುಖ ದೇಶದ ನಾಯಕನಿಗೂ ತನ್ನ ಸ್ವಂತ ನೆಲದಲ್ಲಿ ಮೋದಿಯವರಿಗಿರುವಷ್ಟು ಜನಪ್ರಿಯತೆ ಇಲ್ಲ ಎನ್ನುವುದು ಗಮನಾರ್ಹ.



ಕಳೆದ ಹನ್ನೆರಡು ವರ್ಷಗಳಿಂದ ಅಧಿಕಾರದಲ್ಲಿರುವ ಮೋದಿ, ಮತ್ತೊಮ್ಮೆ ಚುನಾವಣೆಗೆ ನಿಂತರೆ ಗೆಲ್ಲುವುದು ಖಚಿತ ಎಂಬ ಮಾತುಗಳು ಎಲ್ಲೆಡೆ ಕೇಳಿಬರುತ್ತಿವೆ. ಯುರೋಪಿಯನ್ ನಾಯಕರಿಗೆ ಇದು ಕೇವಲ ಕನಸಿನ ಮಾತಷ್ಟೇ. ಭಾರತದ ವೇಗವಾದ ಆರ್ಥಿಕ ಬೆಳವಣಿಗೆ, ಜನರನ್ನು ಸೆಳೆಯುವ ಸಿದ್ಧಾಂತ, ವಿಶ್ವದ ಅತ್ಯಂತ ಬಲಿಷ್ಠ ರಾಜಕೀಯ ಪಕ್ಷ ಮತ್ತು ಅವರ ಸ್ಫೂರ್ತಿದಾಯಕ ಜೀವನಗಾಥೆ – ಇವೆಲ್ಲವೂ ಮೋದಿಯವರ ಈ ಅಭೂತಪೂರ್ವ ಯಶಸ್ಸಿಗೆ ಕಾರಣವಾಗಿವೆ.

ವಿಶ್ವದ ಬಹುತೇಕ ರಾಷ್ಟ್ರಗಳ ಮುಖ್ಯಸ್ಥರು ಶ್ರೀಮಂತ ಅಥವಾ ಮೇಲ್ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಆದರೆ, ಮೋದಿಯವರ ಹಿನ್ನೆಲೆಯೇ ವಿಭಿನ್ನ. ಭಾರತದ ಅದೆಷ್ಟೋ ಜನರಿಗೇ ತಿಳಿಯದ 'ವಡ್ನಾಗರ' ಎಂಬ ಪುಟ್ಟ ಪಟ್ಟಣದ ರೈಲು ನಿಲ್ದಾಣದಲ್ಲಿ ಅವರ ಪೋಷಕರು ಮೂರು ಸಣ್ಣ ಚಹಾ ಅಂಗಡಿಗಳನ್ನು ನಡೆಸುತ್ತಿದ್ದರು. ಅಂತಹ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಮೋದಿ, ಇಂದು ಈ ಮಟ್ಟಕ್ಕೆ ಬೆಳೆದಿದ್ದಾರೆ ಎಂದರೆ ಅದಕ್ಕೆ ಅವರು ಪಟ್ಟ ಶ್ರಮ ಮತ್ತು ಅವರ ಹಿಂದಿರುವ ಹಿಂದೂ ರಾಷ್ಟ್ರೀಯತಾವಾದಿ ಚಳವಳಿಯೇ ಕಾರಣ. ಅವರೊಬ್ಬ ಸ್ವಪ್ರಯತ್ನದಿಂದ ಬೆಳೆದ ನಾಯಕ. ಅವರನ್ನು ನಾರ್ವೆಯ ಮಾಜಿ ಪ್ರಧಾನಿ, ಸಂಘಟನಾ ಚತುರರಾಗಿದ್ದ 'ಐನಾರ್ ಗೆರ್ಹಾರ್ಡ್ಸೆನ್' ಅವರಿಗೆ ಹೋಲಿಸಬಹುದು; ಇಬ್ಬರೂ ಸ್ವಯಂ ಕಲಿಕೆಯಿಂದ ಬೆಳೆದು ದೇಶವನ್ನು ಮುನ್ನಡೆಸಿದವರು.

ವೇಗವಾಗಿ ಬೆಳೆಯುತ್ತಿರುವ ಭಾರತವನ್ನು ಮುನ್ನಡೆಸುವ ಅದೃಷ್ಟ ಮೋದಿಯವರಿಗೆ ದೊರಕಿದೆ, ಹಾಗೆಯೇ ಆ ಬೆಳವಣಿಗೆಯ ಹಿಂದೆ ಅವರದ್ದೇ ಆದ ಬಲವಾದ ಶ್ರಮವೂ ಇದೆ. ಪ್ರಸ್ತುತ ಭಾರತದ ಆರ್ಥಿಕತೆಯು ಶೇಕಡಾ ಏಳರ ದರದಲ್ಲಿ ವೃದ್ಧಿಸುತ್ತಿದ್ದು, ಇದು ಚೀನಾ ಸೇರಿದಂತೆ ವಿಶ್ವದ ಇತರ ಪ್ರಮುಖ ದೇಶಗಳ ಬೆಳವಣಿಗೆಗಿಂತ ಬಹುದೂರ ಮುಂದಿದೆ.

ಸಹಜವಾಗಿ, ಈ ಬೆಳವಣಿಗೆಯಲ್ಲಿ ಕೆಲವು ಸವಾಲುಗಳಿವೆ; ಭಾರತದ ಶ್ರೀಮಂತ ಮತ್ತು ಬಡ ರಾಜ್ಯಗಳ ನಡುವೆ ಇಂದಿಗೂ ದೊಡ್ಡ ಅಂತರವಿದೆ. ಚೀನಾದಲ್ಲಿರುವಂತೆ ಉನ್ನತ ಶಿಕ್ಷಣ ಪಡೆದ ಬೃಹತ್ ಕಾರ್ಯಪಡೆಯ ಕೊರತೆ ಭಾರತದಲ್ಲಿದೆ ಮತ್ತು ಆಡಳಿತಾತ್ಮಕ ವಿಳಂಬಗಳು ಇನ್ನೂ ಪೂರ್ಣವಾಗಿ ನಿಂತಿಲ್ಲ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ರಫ್ತು ಉದ್ಯಮವನ್ನು ರೂಪಿಸುವಲ್ಲಿ ಭಾರತ ಇಂದಿಗೂ ಹೆಣಗಾಡುತ್ತಿದೆ. ಆದರೂ, ಸದ್ಯದ ಪ್ರಗತಿಯ ವೇಗವನ್ನು ಗಮನಿಸಿದರೆ 2050ರ ವೇಳೆಗೆ ಭಾರತದ ಆರ್ಥಿಕತೆ ನಾಲ್ಕು ಪಟ್ಟು ಹೆಚ್ಚಾಗಲಿದೆ. ಅಂದು ಭಾರತವು ಅಮೆರಿಕದಂತಹ ರಾಷ್ಟ್ರಗಳಿಗೇ ಪೈಪೋಟಿ ನೀಡಿ ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ.

ನಾನು ಭಾರತದ ಬಹುತೇಕ ಎಲ್ಲಾ ರಾಜ್ಯಗಳಿಗೂ ಭೇಟಿ ನೀಡಿದ್ದೇನೆ ಮತ್ತು ಹೋದಲ್ಲೆಲ್ಲಾ ಅಭಿವೃದ್ಧಿಯ ಹೊಸ ಅಲೆ ಎದ್ದಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಇಂದು ದೇಶದ ಮೂಲೆ ಮೂಲೆಗಳಲ್ಲಿ ಸುಸಜ್ಜಿತ ಮತ್ತು ಆಧುನಿಕ ವಿಮಾನ ನಿಲ್ದಾಣಗಳು ತಲೆ ಎತ್ತಿವೆ; ಹಿಂದೆ ತಲುಪಲು ಅಸಾಧ್ಯವೆನಿಸುತ್ತಿದ್ದ ಹಳ್ಳಿಗಳಿಗೂ ಈಗ ಅತ್ಯುತ್ತಮ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಇಷ್ಟೇ ಅಲ್ಲದೆ, ಗುಜರಾತಿನಲ್ಲಿ ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣವಾಗುತ್ತಿದ್ದರೆ, ಆಂಧ್ರಪ್ರದೇಶದಲ್ಲಿ ಸೌರ, ಪವನ ಮತ್ತು ಜಲಶಕ್ತಿಗಳನ್ನು ಒಟ್ಟುಗೂಡಿಸಿ ವಿದ್ಯುತ್ ಉತ್ಪಾದಿಸುವ ಜಗತ್ತಿನಲ್ಲೇ ಅತಿ ದೊಡ್ಡದಾದ ಘಟಕ ಸಿದ್ಧವಾಗುತ್ತಿದೆ.

ಭಾರತದ ಪರಿಸರಸ್ನೇಹಿ ಅಥವಾ 'ಹಸಿರು ಬೆಳವಣಿಗೆ'ಗೆ ಮೋದಿಯವರೇ ದೊಡ್ಡ ಭರವಸೆ. ಸೌರ ಮತ್ತು ಪವನ ಶಕ್ತಿ ಉತ್ಪಾದನೆಯಲ್ಲಿ ಭಾರತ ಇಂದು ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ; ಶೀಘ್ರದಲ್ಲೇ ಭಾರತವು ಅಮೆರಿಕವನ್ನೂ ಹಿಂದಿಕ್ಕಿ ಎರಡನೇ ಸ್ಥಾನಕ್ಕೇರಿದರೆ ಆಶ್ಚರ್ಯವೇನಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ, ಕಳೆದ ವರ್ಷ ಭಾರತದಲ್ಲಿ ಕಲ್ಲಿದ್ದಲಿನಿಂದ ಉಂಟಾಗುವ ಮಾಲಿನ್ಯವು ಮೊದಲ ಬಾರಿಗೆ ಇಳಿಮುಖವಾಗಿದೆ.

ಪರಿಸರದ ಬಗ್ಗೆ ಮೋದಿಯವರು ನೀಡುವ ಸ್ಥಿರವಾದ ಸಂದೇಶದಿಂದ ಪಾಶ್ಚಿಮಾತ್ಯ ನಾಯಕರು ಕಲಿಯಬೇಕಾದದ್ದು ಸಾಕಷ್ಟಿದೆ. ಮೋದಿಯವರು ಪ್ರಮುಖ ಭಾಷಣಕಾರರಾಗಿರುವ ಹಲವಾರು ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದೇನೆ. ಅಲ್ಲಿ ಅವರು ಜಾಗತಿಕ ಹವಾಮಾನ ಒಪ್ಪಂದಗಳ ಬಗ್ಗೆ ಅಥವಾ ಮಾಲಿನ್ಯದ ತಾಂತ್ರಿಕತೆಗಳ ಬಗ್ಗೆ ಮಾತನಾಡುವುದೇ ಅಪರೂಪ. ಅವರು ಪರಿಸರಕ್ಕಾಗಿ ಯಾರನ್ನೂ ತ್ಯಾಗ ಮಾಡುವಂತೆ ಕೇಳುವುದಿಲ್ಲ. ಬದಲಾಗಿ, 'ಹಸಿರು ಬೆಳವಣಿಗೆ'ಯ ಮೂಲಕವೇ ಭಾರತದ 150 ಕೋಟಿ ಜನರನ್ನು ಬಡತನದಿಂದ ಮುಕ್ತಗೊಳಿಸಬಹುದು ಎಂಬುದು ಅವರ ದೃಢವಾದ ನಂಬಿಕೆ. ಅಂದರೆ, ದೇಶದ ಆರ್ಥಿಕತೆ ಬೆಳೆಯಬೇಕೋ ಅಥವಾ ಪರಿಸರ ಉಳಿಯಬೇಕೋ ಎನ್ನುವ ಗೊಂದಲ ಈಗ ಉಳಿದಿಲ್ಲ; ಎರಡನ್ನೂ ಜೊತೆಯಾಗಿಯೇ ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಡುತ್ತಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಜಾತ್ಯತೀತ ಪಕ್ಷಗಳೇ ಅಧಿಕಾರಕ್ಕೆ ಬಂದರೂ ಸಹ, ಭಾರತದ ಸಿದ್ಧಾಂತವು 'ಹಿಂದೂ ರಾಷ್ಟ್ರೀಯತಾವಾದ'ದ ಸುತ್ತಲೇ ಇರಲಿದೆ. ಕೈಗಾರಿಕಾ ಕ್ರಾಂತಿಯ ನಂತರ ಪ್ರತಿಯೊಂದು ಪಾಶ್ಚಿಮಾತ್ಯೇತರ ದೇಶವನ್ನೂ ಒಂದು ಪ್ರಶ್ನೆ ಕಾಡುತ್ತಲೇ ಇತ್ತು: 'ನಮ್ಮತನವನ್ನು ಬಿಟ್ಟುಕೊಡದೆ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವುದು ಹೇಗೆ?' ಈ ಕಠಿಣ ಪ್ರಶ್ನೆಗೆ ಭಾರತ ಕಂಡುಕೊಂಡ ಉತ್ತರವೇ ಈ ಸಿದ್ಧಾಂತ.

ಇದಕ್ಕೆ ಜಪಾನ್ ಅತ್ಯುತ್ತಮ ಉದಾಹರಣೆ; ಅದು ತಾಂತ್ರಿಕವಾಗಿ ಅತ್ಯಂತ ಆಧುನಿಕವಾಗಿದ್ದರೂ, ತನ್ನ ಸಂಸ್ಕೃತಿಯ ವಿಷಯದಲ್ಲಿ ಇಂದಿಗೂ ಅಪ್ಪಟ ಜಪಾನಿ ಶೈಲಿಯನ್ನೇ ಉಳಿಸಿಕೊಂಡಿದೆ. ದಕ್ಷಿಣ ಕೊರಿಯಾ ಕೂಡ ಇಂದು ಜಪಾನಿಗಿಂತ ಶ್ರೀಮಂತವಾಗಿದ್ದು, ತನ್ನ ಸಂಸ್ಕೃತಿ ಮತ್ತು ಸಂಗೀತವನ್ನು ಜಗತ್ತಿನಾದ್ಯಂತ ಪಸರಿಸುತ್ತಿದೆ. ಅತ್ತ ಚೀನಾ ಕೂಡ ತನ್ನ ಆಧುನಿಕತೆಯನ್ನು ತನ್ನದೇ ಆದ ಪುರಾತನ ತತ್ವಗಳಾದ ಕನ್ಫ್ಯೂಷಿಯನಿಸಂ, ತಾವೋಯಿಸಂ ಮತ್ತು ಬೌದ್ಧಧರ್ಮದ ಬೇರುಗಳಲ್ಲಿ ಕಂಡುಕೊಂಡಿದೆ. ಅದರಂತೆ ಭಾರತವೂ ಕೂಡ ತನ್ನದೇ ಆದ ಸಂಸ್ಕೃತಿಯ ಅಡಿಯಲ್ಲಿ ಆಧುನಿಕವಾಗಿ ಬೆಳೆಯಲು ಹವಣಿಸುತ್ತಿದೆ.

ಬಿಜೆಪಿ ಇಂದು 10 ಕೋಟಿಗೂ ಅಧಿಕ ಸದಸ್ಯರನ್ನು ಹೊಂದಿರುವ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿದೆ. ಉತ್ತರ ಮತ್ತು ಮಧ್ಯ ಭಾರತದ ಪ್ರತಿಯೊಂದು ಕ್ಷೇತ್ರದಲ್ಲೂ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸುವ ಕಾರ್ಯಕರ್ತರ ದೊಡ್ಡ ಪಡೆಯೇ ಅಲ್ಲಿದೆ. ಭಾರತದ ರಾಜಕಾರಣದಲ್ಲಿ ಬಿಜೆಪಿ ಒಂದು ಅಪರೂಪದ ಸಾಧನೆ ಮಾಡಿದೆ: ಮೇಲ್ಜಾತಿ, ಕೆಳಜಾತಿ ಹಾಗೂ ದಲಿತ ಸಮುದಾಯಗಳು ಸೇರಿದಂತೆ ಸಮಾಜದ ಎಲ್ಲಾ ಸ್ತರದವರಿಂದಲೂ ಈ ಪಕ್ಷಕ್ಕೆ ಸಮಾನ ಬೆಂಬಲ ಸಿಗುತ್ತಿದೆ. ಅತ್ತ ಬೃಹತ್ ಉದ್ಯಮಿಗಳಿಂದ ಹಿಡಿದು ಇತ್ತ ದೇಶದ ಕುಗ್ರಾಮಗಳಲ್ಲಿರುವ ಬುಡಕಟ್ಟು ಜನಾಂಗದವರೆಗೂ ಎಲ್ಲರೂ ಪಕ್ಷದ ಪರವಾಗಿ ನಿಂತಿದ್ದಾರೆ.

ಪಾಶ್ಚಿಮಾತ್ಯ ವಿಶ್ಲೇಷಕರಿಗೆ ಬಿಜೆಪಿಯಲ್ಲಿ ತಪ್ಪುಗಳನ್ನು ಹುಡುಕುವುದೇ ಒಂದು ಹವ್ಯಾಸವಾಗಿಬಿಟ್ಟಿದೆ. ಬಿಜೆಪಿ ಹಿಂದೂಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದೆ ಎಂಬ ಟೀಕಾಕಾರರ ಮಾತು ನಿಜವಿರಬಹುದು; ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹಿಂದೂ-ಮುಸ್ಲಿಂ ಸಂಘರ್ಷಗಳು ಹೆಚ್ಚಾಗಿವೆ ಎನ್ನುವುದಕ್ಕೆ ಯಾವುದೇ ಬಲವಾದ ಪುರಾವೆಗಳಿಲ್ಲ. ವಾಸ್ತವವಾಗಿ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹೆಚ್ಚಿನ ಹಿಂಸಾಚಾರ ಮತ್ತು ಗಲಭೆಗಳು ನಡೆದಿದ್ದವು. ಇಂದಿಗೂ ನೆರೆಯ ದೇಶಗಳಿಂದ ಲಕ್ಷಾಂತರ ಮುಸ್ಲಿಮರು ಆಶ್ರಯ ಅರಸಿ ಭಾರತಕ್ಕೆ ಬರುತ್ತಿದ್ದಾರೆಯೇ ಹೊರತು, ಇಲ್ಲಿಂದ ಯಾರೂ ಹೊರಗೆ ಓಡಿಹೋಗುತ್ತಿಲ್ಲ.

ಆದರೆ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಹೊರಗಿನಿಂದ ಬಂದವು ಎಂಬ ಬಿಜೆಪಿಯ ನಿಲುವು ಹಾಗೂ ಮಧ್ಯಕಾಲೀನ ಮುಸ್ಲಿಂ ಆಕ್ರಮಣಗಳನ್ನು ಬ್ರಿಟಿಷ್ ವಸಾಹತುಶಾಹಿಗೆ ಹೋಲಿಸುವುದು ಅನೇಕ ಮುಸ್ಲಿಮರಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸುತ್ತಿದೆ. ಅದೇ ಸಮಯದಲ್ಲಿ, ಬಿಜೆಪಿಯ ಕೆಲವು ಪ್ರಸ್ತಾವನೆಗಳು ಸಾಮಾನ್ಯ ಜ್ಞಾನಕ್ಕೆ ಹತ್ತಿರವಾಗಿವೆ. ಉದಾಹರಣೆಗೆ, ಮುಸ್ಲಿಂ ಪುರುಷರಿಗೆ ಇತರರಿಗಿಂತ ಸುಲಭವಾಗಿ ವಿಚ್ಛೇದನ ನೀಡಲು ಅವಕಾಶವಿರುವ ಪ್ರತ್ಯೇಕ ವಿವಾಹ ಕಾನೂನು ಇರಬಾರದು ಎಂಬುದು ಸಮಂಜಸವಾಗಿ ಕಾಣುತ್ತದೆ. ಆದರೆ, ಹಿಂದೂ ಧರ್ಮದ ತಳಹದಿಯ ಮೇಲೆ ಹೊಸದಾದ ಮತ್ತು ಬಲಿಷ್ಠ ಭಾರತವನ್ನು ನಿರ್ಮಿಸುವ ಈ ಪ್ರಯತ್ನದಲ್ಲಿ ಬಿಜೆಪಿಗೆ ಎದುರಾಗುವ ನಿಜವಾದ ಸವಾಲು ಒಂದೇ: ಭಾರತದಲ್ಲಿರುವ ವಿಶ್ವದ ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ 20 ಕೋಟಿ ಮುಸ್ಲಿಮರನ್ನು ಈ ಬೆಳವಣಿಗೆಯಲ್ಲಿ ಹೇಗೆ ಜೊತೆಗೂಡಿಸಿಕೊಳ್ಳುತ್ತಾರೆ ಎಂಬುದು.

ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದ ವಿಶ್ವದ ದೊಡ್ಡ ಮತ್ತು ಅಂದಿನ ಬಡ ರಾಷ್ಟ್ರಗಳ ಪೈಕಿ, ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವದ ಹಾದಿಯನ್ನು ಆರಿಸಿಕೊಂಡ ಏಕೈಕ ದೇಶ ಭಾರತ. ಇದಕ್ಕೆ ಬ್ರಿಟಿಷರು ಹಾಕಿಕೊಟ್ಟ ತಳಹದಿ ಕಾರಣ ಎಂದು ಅವರು ಆಗಾಗ ಹೇಳಿಕೊಳ್ಳುತ್ತಿರುತ್ತಾರೆ, ಆದರೆ ಅದು ನಿಜವಲ್ಲ. ಒಂದು ವೇಳೆ ಅದೇ ನಿಜವಾಗಿದ್ದರೆ, ಬ್ರಿಟಿಷರ ಅಧೀನದಲ್ಲಿದ್ದ ಪಾಕಿಸ್ತಾನ, ಮ್ಯಾನ್ಮಾರ್ ಅಥವಾ ಗಲ್ಫ್ ದೇಶಗಳು ಇಂದು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರಬೇಕಿತ್ತಲ್ಲವೇ? ಭಾರತ ಇಂದು ಪ್ರಜಾಪ್ರಭುತ್ವವಾಗಿ ಉಳಿದಿದೆ ಎಂದರೆ, ಅದಕ್ಕೆ ಇಲ್ಲಿನ ಆಳವಾದ ಸಂಸ್ಕೃತಿ ಮತ್ತು ಜನರಲ್ಲಿ ಬೇರೂರಿರುವ ಪರಂಪರೆಯೇ ಮುಖ್ಯ ಕಾರಣ.

ಜಾಗತಿಕ ನಿಯಮಗಳನ್ನು ಗೌರವಿಸುವ ಹೊಸ ಮಿತ್ರರ ಅಗತ್ಯ ಇಂದು ನಾರ್ವೆಗೆ ಇದೆ; ಹಾಗೆಯೇ ಅಲ್ಲಿನ ಉದ್ಯಮಗಳಿಗೂ ಹೊಸ ಮಾರುಕಟ್ಟೆಯ ಅವಶ್ಯಕತೆಯಿದೆ. ಇಂತಹ ಸಂದರ್ಭದಲ್ಲಿ ಭಾರತದೊಂದಿಗೆ ನಿಕಟ ಸಂಬಂಧ ಬೆಳೆಸುವುದರಿಂದ ನಾರ್ವೆಗೆ ಅಪಾರ ಲಾಭವಿದೆ. ಆದರೆ ಇದು ಸಾಧ್ಯವಾಗಬೇಕೆಂದರೆ, ನಾವು ಭಾರತಕ್ಕೆ ಕೇವಲ ಉಪದೇಶ ಮಾಡುವುದನ್ನು ಬಿಟ್ಟು, ಅವರ ಮಾತುಗಳನ್ನು ಆಲಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ನಾವು ಪರಸ್ಪರ ಗೌರವದಿಂದ ವ್ಯವಹರಿಸಲು ಮುಂದಾದರೆ, ಇಬ್ಬರಿಗೂ ಸಮಾನ ಲಾಭ ತಂದುಕೊಡುವ ಅಸಂಖ್ಯಾತ ಅವಕಾಶಗಳು ತೆರೆದುಕೊಳ್ಳುತ್ತವೆ.

'ಮುಸ್ಲಿಂ ಓಟ್‌ಬ್ಯಾಂಕ್' ಎಂಬ ಬಲೂನು ಒಡೆದ ಕತೆ!

ದಿವಾಕರ ಹನಕೋಡು

ಮೇ 4ರ ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶ ರಾಜಕೀಯ ರಂಗದಲ್ಲಿ ಮನೆ ಮಾಡಿದ್ದ ಹಲವು ಭ್ರಮೆಗಳನ್ನು ಕಳಚಿದೆ. ಇದುವರೆಗೆ ಮುಸ್ಲಿಂ ವೋಟ್ ಬ್ಯಾಂಕಿನ ಬಗ್ಗೆ ಪ್ರತಿ ಚುನಾವಣೆಯಲ್ಲೂ ವಿಶೇಷ ಚರ್ಚೆಯಾಗುತ್ತಿದ್ದವು. ಮುಸ್ಲಿಮರ ಬೆಂಬಲ ಇದ್ದರೆ ಸಾಕು ಚುನಾವಣೆಯಲ್ಲಿ ಗೆಲುವು ನಿಶ್ಚಿತ ಎಂದು ನಮ್ಮ ಮಾಧ್ಯಮಗಳು ಸಾರುತ್ತಿದ್ದವು.

ಹಿಂದೊಮ್ಮೆ ಭಾರತದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು ''ಮುಸ್ಲಿಮರು ಬೆಂಬಲ ಕೊಡದಿದ್ದರೂ ಬಿ.ಜೆ.ಪಿ. ಗೆಲ್ಲುತ್ತದೆ'' ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಿ. ಆಗ ಮಾಧ್ಯಮಗಳು ಈ ವಿಷಯದ ಬಗ್ಗೆ ದೊಡ್ಡ ಗುಲ್ಲೆಬ್ಬಿಸಿದ್ದವು. ಇಂದು ಅನೇಕ ಪತ್ರಕರ್ತರು, ರಾಜಕೀಯ ವಿಶ್ಲೇಷಕರೆನಿಸಿಕೊಂಡವರು ಮುಸ್ಲಿಂ ವೋಟ್ ಬ್ಯಾಂಕ್ ಬಗ್ಗೆ ಮಾತಾಡುವುದನ್ನೂ, ಅದರ ಬಗ್ಗೆ ಅತಿ ವರ್ಣರಂಜಿತವಾಗಿ ಹೇಳುವುದನ್ನೂ ಒಂದು ಚಾಳಿಯಾಗಿಸಿಕೊಂಡಿದ್ದಾರೆ.

ಕೆಲವರಂತೂ ಇಲ್ಲಿಯೇ ಕುಳಿತು ಉತ್ತರಪ್ರದೇಶದ ರಾಜಕೀಯದ ವಿಮರ್ಶೆ ಮಾಡಿಬಿಡುತ್ತಾರೆ! ದೊಡ್ಡ ಲೇಖನಗಳನ್ನು ಬರೆದುಬಿಡುತ್ತಾರೆ. ಉತ್ತರಪ್ರದೇಶದಲ್ಲಿ ಮುಸ್ಲಿಮರ ಪಾತ್ರವೇ ನಿರ್ಣಾಯಕ. ಅವರು 19% ಇದ್ದಾರೆ. ನೂರು ಕ್ಷೇತ್ರಗಳಲ್ಲಿ ಅವರೇ ನಿರ್ಣಾಯಕ. ಇನ್ನು ನೂರು ಕ್ಷೇತ್ರಗಳಲ್ಲಿ ಅವರು ಯಾವ ಪಕ್ಷದತ್ತ ವಾಲುವರೋ ಅವರೇ ಗೆಲ್ಲುವುದು ಎಂದೆಲ್ಲಾ ಬರೆದುಬಿಡುತ್ತಾರೆ!.



ಇದನ್ನು ಓದಿದಾಗ ನಮಗನ್ನಿಸುವುದು... 19% ಇದ್ದವರದ್ದೇ ಮುಖ್ಯಪಾತ್ರ ಎಂದಾದರೆ ಇನ್ನುಳಿದಿರುವ 81% ಇದ್ದವರ ಕತೆ ಏನು?! ಚುನಾವಣೆಗಳಲ್ಲಿ ಅವರ ನಿಲುವುಗಳು ಅದು ಹೇಗೆ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲ?! ಎಂದು ತಲೆ ಕೆಡಿಸಿಕೊಳ್ಳುವಂತಾಗುತ್ತೆ.

ಮೊನ್ನೆ ಪಶ್ಚಿಮಬಂಗಾಳದ ಫಲಿತಾಂಶ ಬರುವುದಕ್ಕೆ ಮುನ್ನ ನಮ್ಮ ರಾಜಕೀಯ ಪಂಡಿತರುಗಳು ಏನೇನು ಹೇಳಿದರು ನೋಡಿ: ಒಬ್ಬ ಪತ್ರಕರ್ತರು ಪಶ್ಚಿಮಬಂಗಾಳದ 65 ಕೇತ್ರಗಳಲ್ಲಿ ಮುಸ್ಲಿಮರು 40% ಗಿಂತಾ ಹೆಚ್ಚಿದ್ದಾರೆ. ಹಾಗಾಗಿ ಈ 65 ಕ್ಷೇತ್ರಗಳಲ್ಲಿ ತೃಣಮೂಲ ಕಾಂಗ್ರೆಸ್ ಸಲೀಸಾಗಿ ಗೆಲ್ಲುತ್ತದೆ. ಆದರಿಂದ ಮತ್ತೊಮ್ಮೆ ವಿಧಾನಸಭೆಯ ಚುನಾವಣೆಯಲ್ಲಿ ಟಿಎಂಸಿ ಗೆಲುವು ಸುಲಭವಾಗುತ್ತದೆ ಎಂದು ವಿಶ್ಲೇಷಿಸಿದ್ದರು.

ಅವರೆನ್ನುವಂತೆ 65 ಕ್ಷೇತ್ರಗಳಲ್ಲಿ ಮುಸ್ಲಿಮರ ಬೆಂಬಲದಿಂದ ಟಿಎಂಸಿ ಗೆಲ್ಲುತ್ತದೆ ಎಂಬುದನ್ನು ಒಪ್ಪಿಕೊಂಡರೂ ರಾಜ್ಯದಲ್ಲಿ ಉಳಿದ 229 ವಿಧಾನಸಭಾ ಕ್ಷೇತ್ರಗಳ ಫಲಿತಾಂಶದ ಕತೆಯೇನು?! ಆ 229 ಕ್ಷೇತ್ರಗಳ ಮತದಾರರ ಒಲವು, ನಿಲುವುಗಳು, ಭಾವನೆಗಳು ಇವುಗಳ್ಯಾವುದೂ ಲೆಕ್ಕಕ್ಕಿಲ್ಲವೇನು?!

ಈ ಬಾರಿ ಕೇರಳದಲ್ಲಿ ಕಾಂಗ್ರೆಸ್ ಗೆದ್ದ ತಕ್ಷಣ ಟಿ.ವಿ. ವಾಹಿನಿಯ ನಿರೂಪಕಿ ಇಬ್ಬರು ಏರುಧ್ವನಿಯಲ್ಲಿ ಕೂಗಿ ಹೇಳುತ್ತಿದ್ದರು, ''ಕೇರಳದಲ್ಲಿ ಮುಸ್ಲಿಮರ ಬೆಂಬಲ ಸಿಕ್ಕಿದ್ದರಿಂದ ಕಾಂಗ್ರೆಸ್‌ಗೆ ಗೆಲುವು'' ಎಂದು. ಮರುದಿನ ಪತ್ರಿಕೆಯೊಂದರ ಖ್ಯಾತ ಅಂಕಣಕಾರರ ಲೇಖನದ ಶೀರ್ಷಿಕೆಯೂ ಸಹ ಮುಸ್ಲಿಮರು ಬೆಂಬಲಿಸಿದ್ದರಿಂದ ಕೇರಳದಲ್ಲಿ ಕಾಂಗ್ರೆಸ್‌ಗೆ ಜಯ ಎಂದು ಬಂದಿತ್ತು!! ಇಲ್ಲಿ ತುಂಬಾ ಆಸಕ್ತಿಯ ವಿಷಯವೆಂದರೆ ಮುಸ್ಲಿಂ ಲೀಗ್ ಕೇರಳದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷ. ಕಳೆದ ಚುನಾವಣೆಗಳಲ್ಲಿಯೂ ಈ ಮುಸ್ಲಿಂ ಲೀಗ್ ಕಾಂಗ್ರೆಸ್‌ನ ಮಿತ್ರ ಪಕ್ಷವಾಗಿತ್ತು! ಆದರೂ ಕಳೆದೆರಡು ಚುನಾವಣೆಗಳಲ್ಲಿಯೂ ಕಾಂಗ್ರೆಸ್‌ಗೆ ಸೋಲಾಗಿದೆ!! ಮುಸ್ಲಿಂ ಬೆಂಬಲ ಪಡೆದ ಮೇಲೂ ಕಾಂಗ್ರೆಸ್‌ಗೆ ಏಕೆ ಸೋಲಾಯಿತು ಎಂಬ ಬಗ್ಗೆ ಯಾರೂ ಚರ್ಚೆ ಮಾಡಲಿಲ್ಲ!! ಈಗ ಗೆದ್ದ ತಕ್ಷಣ ಮುಸ್ಲಿಮರ ಕಾರಣದಿಂದ ಗೆಲುವು ಎಂಬ ಪಾಂಡಿತ್ಯದ ಪ್ರದರ್ಶನ!! 24% ಇರುವ ಮುಸ್ಲಿಮರ ಜೊತೆಗೆ ಉಳಿದ 76% ಇರುವವರ ಕತೆಯೇನು?! ಅವರ ರಾಜಕೀಯ ಒಲವು, ನಿಲುವುಗಳ ವಿವರವೇನು? ಅವರುಗಳು ಯಾಕೆ ಮುಖ್ಯವಾಗುವುದಿಲ್ಲ?!.

2017ರ ಉತ್ತರ ಪ್ರದೇಶದ ಚುನಾವಣೆಗಳ ಫಲಿತಾಂಶ ಬರುವುದಕ್ಕೆ ಮುಂಚೆ ಟಿ.ವಿ.ಗಳಲ್ಲಿ ರಾಜಕೀಯ ಪರಿಣಿತರ ಚರ್ಚೆ ನಡೆಯುತ್ತಿದ್ದ ವೇಳೆ ಒಬ್ಬ ರಾಜಕೀಯ ವಿಶ್ಲೇಷಕರು ಮಾಯಾವತಿಯವರನ್ನು 'ಸ್ಮಾರ್ಟ್ ಪೊಲಿಟಿಷಿಯನ್' ಎಂದು ಹೊಗಳಿದರು. ಅವರ ಪ್ರಕಾರ ನಾನೂರಕ್ಕೂ ಹೆಚ್ಚು ಕ್ಷೇತ್ರಗಳಿರುವ ಉತ್ತರಪ್ರದೇಶದಲ್ಲಿ 95 ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ಕೊಟ್ಟಿದ್ದರಿಂದ ಮಾಯಾವತಿ 'ಸ್ಮಾರ್ಟ್ ಪೊಲಿಟಿಷಿಯನ್' ಅಂತೆ. ಆ ಚುನಾವಣೆಯಲ್ಲಿ ಬಿಎಸ್‌ಪಿ ಉತ್ತಮ ಸಾಧನೆ ಮಾಡಿದ್ದರೆ ಮಾಯಾವತಿಯನ್ನು ಚಾಣಕ್ಯನ ಪ್ರತಿರೂಪವೆಂಬಂತೆ ಇವರು ವರ್ಣಿಸಿಬಿಡುತ್ತಿದ್ದರು!!

ಒಂದು ರೀತಿಯ ಸ್ಥಾಪಿತ ಸಿದ್ಧಾಂತ ಇಂತಹ ಪತ್ರಕರ್ತರಲ್ಲಿರುತ್ತದೆ. ಫಲಿತಾಂಶಕ್ಕೂ ಮೊದಲು ಮುಸ್ಲಿಮರ ಬೆಂಬಲ ಇಲ್ಲದ್ದರಿಂದ ಬಿಜೆಪಿ ಗೆಲ್ಲುವುದಿಲ್ಲ ಎನ್ನುವುದು. ಬಿ.ಜೆ.ಪಿ.ಗೆ ಗೆಲುವು ಸಿಕ್ಕಿದರೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಗೆಲುವು ಸಿಗಬೇಕಾದರೆ ಮುಸ್ಲಿಮರಲ್ಲೂ ಒಂದು ಭಾಗ ಬಿಜೆಪಿಗೆ ಮತ ಹಾಕಿದ್ದಾರೆ. ಆದ್ದರಿಂದಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಿಜೆಪಿಗೆ ಜಯ ಸಿಕ್ಕಿದೆ ಎಂದು ಪ್ರತಿಪಾದಿಸುವುದು!!

ಚುನಾವಣೆಗೆ ಮುಂಚೆ ಯಾವುದಾದರೂ ರಾಜಕೀಯ ಪಕ್ಷಗಳು ಮುಸ್ಲಿಮರ ಪರವಾದ ನಿರ್ಣಯಗಳನ್ನು ಮಾಡಿದರೆ ಸಾಕು. ಈ ಪತ್ರಕರ್ತರು ''ತುಂಬಾ ಚಾಣಾಕ್ಷ ನಡೆ'', ''ವಿರೋಧಿಗಳಿಗೆ ಚೆಕ್‌ಮೇಟ್'' ಎಂಬ ಪದಪುಂಜಗಳಿಂದ ಈ ಮುಸ್ಲಿಂ ಓಲೈಕೆ ರಾಜಕಾರಣವನ್ನು ಹೊಗಳತೊಡಗುತ್ತಾರೆ.

ಇಂತಹ ಕ್ರಮಗಳಿಂದ ಹಿಂದೂ ಮತದಾರರ ಮೇಲೆ ಬೀರುವ ಪರಿಣಾಮಗಳೇನು ಎಂಬ ಬಗ್ಗೆ ಇವರು ವಿಮರ್ಶೆ ಮಾಡಲು ಹೋಗುವುದಿಲ್ಲ!! ಅತಿಯಾಗಿ ಮುಸ್ಲಿಂ ವೋಟ್ ಬ್ಯಾಂಕ್ ಹಿಂದೆ ಬಿದ್ದಿರುವುದರಿಂದಲೇ ಇಂದು ಕಾಂಗ್ರೆಸ್‌ಗೆ ಕೆಟ್ಟ ಸ್ಥಿತಿ ಬಂದಿರುವುದು.

''ಮಮತಾ ಬ್ಯಾನರ್ಜಿಯವರ ಮತಗಳ ಎಣಿಕೆ ಆರಂಭವಾಗುವುದೇ 30%ನ ಮೇಲಿನಿಂದ'' ಎಂಬ ಮಾತುಗಳನ್ನು ನಂಬಿ ಅತಿಯಾದ ಮುಸ್ಲಿಂ ಓಲೈಕೆಯಲ್ಲಿ ಮುಳುಗಿ ಹಿಂದುಗಳನ್ನು ದಮನ ಮಾಡಿದ ಕಾರಣ ಇಂದು ಮಮತಾ ಬ್ಯಾನರ್ಜಿಯವರಿಗೆ ಸೋಲಾಗಿದೆ. ಅಕ್ರಮವಾಗಿ ನುಸುಳಿ ಬರುವ ಬಾಂಗ್ಲಾದೇಶೀಯರಿಗೆ, ರೋಹಿಂಗ್ಯಾಗಳಿಗೆ ಸಹಾಯ ಮಾಡದೆ, ಎಲ್ಲಾ ಪ್ರಜೆಗಳನ್ನು ಸಮಾನವಾಗಿ ನೋಡುತ್ತಾ ಅಭಿವೃದ್ಧಿ ಪರವಾದ ಆಡಳಿತ ನೀಡಿದ್ದರೆ ಮಮತಾ ಬ್ಯಾನರ್ಜಿಯವರನ್ನು ಇನ್ನು ಹಲವು ವರ್ಷಗಳ ಕಾಲ ಸೋಲಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ.

ರಾಜಕೀಯ ಎಂದ ಮೇಲೆ ಸ್ವಾರ್ಥ ಸಾಧನೆ ಇದ್ದೇ ಇರುತ್ತದೆ ಎಂಬುದು ಹಲವರ ಅಭಿಪ್ರಾಯ. ಈ ಪ್ರಾದೇಶಿಕ ಪಕ್ಷಗಳ ನಾಯಕರ ಸ್ವಾರ್ಥ ದೃಷ್ಟಿಯಲ್ಲೂ ಭವಿಷ್ಯದ ಬಗ್ಗೆ ಆಳವಾದ ಯೋಚನೆ, ಯೋಜನೆ ಇರಬಾರದೆ?! ಯಾದವರ ಪಕ್ಷದ ನಾಯಕನಾದ ಅಖಿಲೇಶ್ ಸಿಂಗ್ ಯಾದವ್‌ಗೆ ಮುಸ್ಲಿಂ ಜನಸಂಖ್ಯೆ ಹೆಚ್ಚಾದರೆ ಖುಷಿ!! ಅದೇ ಕಾಲಕ್ಕೆ ಯಾದವರ ಜನಸಂಖ್ಯೆ ಕಡಿಮೆ ಆಗುತ್ತಿರುವುದರ ಬಗ್ಗೆ ಈತನಿಗೆ ಎಳ್ಳಷ್ಟೂ ಗಮನವಿಲ್ಲ!! ದೇಶದ ವಿಷಯ ಬೇಡ... ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆಯಾದರೂ... ಅವರ ರಾಜಕೀಯ ಭವಿಷ್ಯದ ಬಗ್ಗೆಯಾದರೂ ಈ ನಾಯಕರುಗಳು ಯೋಚಿಸಬೇಕಲ್ಲವೇ?! ಮುಸ್ಲಿಮರ ಸಂಖ್ಯೆ 35% ಮೇಲೆ ಹೋದರೆ ನಂತರ ಅವರದ್ದೇ ಅಧಿಪತ್ಯವಾಗುತ್ತದೆ. ಆಗ ನಮ್ಮ ಮುಂದಿನ ಪೀಳಿಗೆಯ ಕತೆಯೇನು? ತಾವು ಗಳಿಸಿದ ಸಂಪತ್ತಿಗೆ ಭದ್ರತೆಯೇನು?! ಎಂಬ ಬಗ್ಗೆ ಒಮ್ಮೆಯಾದರೂ ಇವರುಗಳು ಯೋಚಿಸಬೇಕಲ್ಲವೇ?!

ಕಣ್ಣಿಗೆ ಬಟ್ಟೆ ಕಟ್ಟಿಕೊಂಡವರಂತೆ ಮುಸ್ಲಿಂ ಓಲೈಕೆ ರಾಜಕಾರಣದ ದಾರಿಯಲ್ಲಿ ಮುನ್ನುಗ್ಗುತ್ತಿರುವ ಇಂತಹ ರಾಜಕೀಯ ಪಕ್ಷಗಳನ್ನು ಕಂಡು ಇಂದು ದೇಶಭಕ್ತರು ದಿಗಿಲುಗೊಳಗಾಗಿದ್ದಾರೆ.

ಇಂದು ಅಸ್ಸಾಂನಲ್ಲಿ 34%ನಷ್ಟು ಮುಸ್ಲಿಮರು ಇದ್ದಾಗಲೂ, ಪಶ್ಚಿಮಬಂಗಾಳದಲ್ಲಿ 30% ನ ಆಸುಪಾಸು ಮುಸ್ಲಿಂ ಜನಸಂಖ್ಯೆ ಇದ್ದಾಗಲೂ ಆ ರಾಜ್ಯಗಳ ಹಿಂದುಗಳು ಒಗ್ಗಟ್ಟಾಗಿ, ಸಂಘಟಿತರಾಗಿ ರಾಷ್ಟ್ರಹಿತದ ಪಕ್ಷವನ್ನು ಗೆಲ್ಲಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಹಿಂದುಗಳು ಸಂಘಟಿತರಾಗಿ ಮತ ಚಲಾಯಿಸುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ರಾಜಕೀಯ ಪಕ್ಷಗಳು ಇನ್ನು ಮುಂದಾದರೂ ತಮ್ಮ ಓಲೈಕೆ ರಾಜಕಾರಣವನ್ನು ಕಡಿಮೆ ಮಾಡಿಕೊಂಡು ಹಿಂದುಗಳ ಒಲವನ್ನೂ ಗಳಿಸಿಕೊಳ್ಳಲು ಪ್ರಯತ್ನ ಮಾಡಲಿವೆಯೇ?! ಕಾದು ನೋಡಬೇಕು.

ವಿದ್ಯಾರ್ಥಿಗಳ ಭವಿಷ್ಯವೂ... ಪ್ರಶ್ನೆಪತ್ರಿಕೆ ಸೋರಿಕೆಯ ಕರಿನೆರಳೂ...

ಡಾ. ಮೈತ್ರಿ ಭಟ್, ವಿಟ್ಲ

ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜ್ಞಾನ, ಪರಿಶ್ರಮ ಮತ್ತು ಸಾಮರ್ಥ್ಯವನ್ನು ಅಳೆಯುವ ಅತ್ಯಂತ ಮುಖ್ಯವಾದ ಸಾಧನ. ವಿದ್ಯಾರ್ಥಿಯ ಭವಿಷ್ಯ, ಶ್ರಮ ಮತ್ತು ಕನಸುಗಳೆಲ್ಲವೂ ಪರೀಕ್ಷೆಯ ಫಲಿತಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ನಡೆಯುವ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ಜನರ ನಂಬಿಕೆಯನ್ನು ಕುಗ್ಗಿಸುತ್ತಿವೆ. ಒಂದು ಪ್ರಶ್ನೆಪತ್ರಿಕೆ ಸೋರಿಕೆಯಾಗುವುದು ಎಂದರೆ ಕೇವಲ ಕೆಲವು ಪ್ರಶ್ನೆಗಳು ಹೊರಬೀಳುವುದಲ್ಲ; ಅದು ಲಕ್ಷಾಂತರ ವಿದ್ಯಾರ್ಥಿಗಳ ಕನಸುಗಳ ಮೇಲೆ ಬೀಳುವ ಕರಿನೆರಳ ಛಾಯೆ. ಇದು ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯ, ಶಿಕ್ಷಣದ ಮೌಲ್ಯ ಮತ್ತು ಸಮಾಜದ ನೈತಿಕತೆಯ ಮೇಲೆ ಬೀಳುವ ದೊಡ್ಡ ಹೊಡೆತವಾಗಿದ್ದು, ಅದೆಷ್ಟೋ ವಿದ್ಯಾರ್ಥಿಗಳ ಕನಸುಗಳನ್ನೇ ನುಚ್ಚುನೂರಾಗಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ದಿನರಾತ್ರಿ ಶ್ರಮಿಸುತ್ತಾರೆ. ಹೆತ್ತವರ ಆಶಾಭಾವನೆ, ಶಿಕ್ಷಕರ ಮಾರ್ಗದರ್ಶನ ಮತ್ತು ತಮ್ಮ ಕನಸುಗಳ ಜೊತೆಗೆ ಅವರು ಪರೀಕ್ಷಾ ಕೇಂದ್ರಕ್ಕೆ ಹೋಗುತ್ತಾರೆ. ಆದರೆ ಕೆಲವೇ ಕೆಲವು ನೈತಿಕತೆ ಮರೆತ ವ್ಯಕ್ತಿಗಳು ಹಣಕ್ಕಾಗಿ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡುವ ಮೂಲಕ ವಿದ್ಯಾರ್ಥಿಗಳ ವರುಷದ ಪರಿಶ್ರಮವನ್ನು, ಬದುಕಿನ ಕನಸನ್ನು ವ್ಯರ್ಥಗೊಳಿಸುತ್ತಾರೆ. ಪರಿಣಾಮವಾಗಿ ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳು ಅನ್ಯಾಯಕ್ಕೊಳಗಾಗುತ್ತಾರೆ; ಮೋಸದ ಮಾರ್ಗ ಅನುಸರಿಸಿದವರು ಮುನ್ನಡೆಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಶಿಕ್ಷಣದ ಮೂಲಭೂತ ಉದ್ದೇಶವನ್ನೇ ಹಾಳುಮಾಡುವ ದುಃಸ್ಥಿತಿಯಾಗಿದೆ.



ಪ್ರಶ್ನೆಪತ್ರಿಕೆ ಸೋರಿಕೆಯಿಂದ ಪರೀಕ್ಷೆಗಳು ರದ್ದಾಗುವುದು, ಮರುಪರೀಕ್ಷೆ ನಡೆಸುವುದು, ವಿದ್ಯಾರ್ಥಿಗಳು ಮತ್ತೆ ಸಿದ್ಧತೆ ಮಾಡಿಕೊಳ್ಳುವುದು ಇವೆಲ್ಲವೂ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಸಹನೆ ಮತ್ತು ನಿರಾಶೆಯನ್ನು ಹುಟ್ಟಿಸುತ್ತವೆ. ಕೆಲವರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

ಈ ಪ್ರಶ್ನೆಪತ್ರಿಕೆ ಸೋರಿಕೆಯ ಹಿಂದೆ ದೊಡ್ಡ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದಂತೂ ಸ್ಪಷ್ಟ. ಪರೀಕ್ಷಾ ಮಂಡಳಿ ಗಳಲ್ಲಿನ ಕೆಲವು ಭ್ರಷ್ಟ ಅಧಿಕಾರಿಗಳು, ಮುದ್ರಣ ಕೇಂದ್ರದ ಸಿಬ್ಬಂದಿಗಳು, ಮಧ್ಯವರ್ತಿಗಳು ಮತ್ತು ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಳ್ಳುವ ಕೆಲವರು ಸೇರಿಕೊಂಡು ಈ ದಂಧೆಯನ್ನು ನಡೆಸುತ್ತಾರೆ. ಕೆಲವೊಮ್ಮೆ ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಮತ್ತು ಮೆಸೇಜಿಂಗ್ ಆ್ಯಪ್‌ಗಳ ಮೂಲಕ ಪ್ರಶ್ನೆಪತ್ರಿಕೆ ಕ್ಷಣಾರ್ಧದಲ್ಲಿ ಸಾವಿರಾರು ಜನರಿಗೆ ತಲುಪುತ್ತದೆ. ಶಿಕ್ಷಣಕ್ಕೆ ವರವಾಗಬೇಕಾದ ತಂತ್ರಜ್ಞಾನವೇ ದುರುಪಯೋಗವಾಗುವ ಉದಾಹರಣೆಯಿದು.

ಈ ಸಮಸ್ಯೆಯ ಮತ್ತೊಂದು ಗಂಭೀರ ಅಂಶವೆಂದರೆ – ತನ್ನ ಯಶಸ್ಸಿಗಾಗಿ ಯಾವುದೇ ಮಾರ್ಗ ಹಿಡಿದರೂ ಸರಿ ಎಂಬ ಅಪಾಯಕಾರಿ ಮನೋಭಾವವೂ ಸಮಾಜದಲ್ಲಿ ಬೆಳೆದುಬರುತ್ತಿರುವುದು. ಕೆಲವರು ದುಡಿಮೆಗೆ ಬದಲಾಗಿ ಅಕ್ರಮ ಮಾರ್ಗಗಳನ್ನು ಆರಿಸುತ್ತಿದ್ದಾರೆ. ಪೋಷಕರಲ್ಲಿಯೂ ಕೆಲವೊಮ್ಮೆ ಮಕ್ಕಳನ್ನು ಯಾವ ರೀತಿಯಲ್ಲಾದರೂ ಮುನ್ನಡೆಸಬೇಕು ಎಂಬ ಒತ್ತಡ ಕಾಣಿಸುತ್ತದೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಗ್ಗುತ್ತಿರುವುದು ಪ್ರಶ್ನೆಪತ್ರಿಕೆ ಸೋರಿಕೆಗಳಂತಹ ಅಪರಾಧಗಳಿಗೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತಿದೆ. ಹೀಗಿರುವಾಗ, ಶಿಕ್ಷಣವು ಕೇವಲ ಅಂಕಗಳಿಗಾಗಿ ಮಾತ್ರವೇ ಅಲ್ಲ; ಅದು ವ್ಯಕ್ತಿತ್ವ ನಿರ್ಮಾಣಕ್ಕಾಗಿ ಎಂಬ ಅರಿವನ್ನು ಮತ್ತೆ ಮೂಡಿಸಬೇಕಾಗಿದೆ.

ಈ ಪ್ರಶ್ನೆಪತ್ರಿಕೆ ಸೋರಿಕೆ ಎಂಬುದು ಕೇವಲ ವಿದ್ಯಾರ್ಥಿಗಳ ಸಮಸ್ಯೆಯಲ್ಲ; ಅದು ದೇಶದ ಭವಿಷ್ಯಕ್ಕೂ ಅಪಾಯಕಾರಿಯಾಗಿದೆ. ಅಕ್ರಮ ಮಾರ್ಗದಿಂದ ಪರೀಕ್ಷೆ ಪಾಸಾದವರು ಮುಂದಿನ ದಿನಗಳಲ್ಲಿ ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ಪೊಲೀಸ್ ಅಧಿಕಾರಿಗಳು ಅಥವಾ ಆಡಳಿತಾಧಿಕಾರಿಗಳಾಗುವ ಸಾಧ್ಯತೆ ಇದೆ. ಅರ್ಹತೆ ಇಲ್ಲದವರು ಪ್ರಮುಖ ಹುದ್ದೆಗಳಿಗೆ ಬಂದರೆ ಅದರ ಪರಿಣಾಮ ಸಂಪೂರ್ಣ ಸಮಾಜದ ಮೇಲೆ ಬೀಳುತ್ತದೆ. ಆದ್ದರಿಂದ ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ಪರೀಕ್ಷಾ ಅಕ್ರಮವಲ್ಲ; ಅದು ರಾಷ್ಟ್ರದ ಅಭಿವೃದ್ಧಿಯನ್ನೇ ದುರ್ಬಲಗೊಳಿಸುವ ಸಾಮಾಜಿಕ ಅಪರಾಧವೂ ಹೌದು.

ಈ ಸಮಸ್ಯೆಗೆ ಕಠಿಣ ಕಾನೂನು ಕ್ರಮಗಳು ಅತ್ಯಗತ್ಯ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರಿಗೆ ಕೇವಲ ಸಣ್ಣ ಶಿಕ್ಷೆಗಳು ಸಾಲದು. ವೇಗದ ತನಿಖೆ, ತ್ವರಿತ ನ್ಯಾಯ ಮತ್ತು ಕಠಿಣ ದಂಡನೆಗಳು ಜಾರಿಯಾಗಬೇಕು. ಆಗ ಮಾತ್ರ ಇಂತಹ ಅಕ್ರಮಗಳು ಕಡಿಮೆಯಾಗಬಹುದು. ಜೊತೆಗೆ ಪರೀಕ್ಷಾ ಪ್ರಕ್ರಿಯೆಯನ್ನು ಸಂಪೂರ್ಣ ಡಿಜಿಟಲ್ ಭದ್ರತೆಯೊಳಗೆ ತರಬೇಕು. ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದರಿಂದ ಹಿಡಿದು ಪರೀಕ್ಷಾ ಕೇಂದ್ರಕ್ಕೆ ತಲುಪುವವರೆಗಿನ ಪ್ರತಿಯೊಂದು ಹಂತವೂ ಕಟ್ಟುನಿಟ್ಟಿನ ನಿಗಾ ವ್ಯವಸ್ಥೆಯಡಿ ಇರಬೇಕು. ಎನ್‌ಕ್ರಿಪ್ಷನ್ ತಂತ್ರಜ್ಞಾನ, ಸುರಕ್ಷಿತ ಸರ್ವರ್‌ಗಳು ಮತ್ತು ಕೃತಕ ಬುದ್ಧಿಮತ್ತೆಯ ನೆರವಿನಿಂದ ಪ್ರಶ್ನೆಪತ್ರಿಕೆ ಸೋರಿಕೆಗಳನ್ನು ತಡೆಯಲು ನಮ್ಮ ಸರ್ಕಾರಗಳು ಮುಂದಾಗಬೇಕು.

ಇವುಗಳೊಂದಿಗೆ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು ಅಗತ್ಯ. ಮತ್ತೆ ಮತ್ತೆ ನಡೆಯುವ ಸೋರಿಕೆಗಳು ವಿದ್ಯಾರ್ಥಿಗಳಲ್ಲಿ 'ಪ್ರಾಮಾಣಿಕ ಪರಿಶ್ರಮಕ್ಕೆ ಬೆಲೆಯೇ ಇಲ್ಲ' ಎಂಬ ನಿರಾಶಾ ಮನೋಭಾವವನ್ನು ಹುಟ್ಟಿಸುತ್ತವೆ. ಈ ಮನೋಭಾವ ಅಪಾಯಕಾರಿ.

ನಮ್ಮ ಶಿಕ್ಷಣ ಸಂಸ್ಥೆಗಳೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ''ಯಶಸ್ಸಿಗಿಂತ ಪ್ರಾಮಾಣಿಕತೆ ಮುಖ್ಯ'' ಎಂಬ ಪಾಠವನ್ನು ಬಾಲ್ಯದಿಂದಲೇ ಕಲಿಸಬೇಕು.

ಒಟ್ಟಿನಲ್ಲಿ, ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ನಮ್ಮ ಶಿಕ್ಷಣ ಹಾಗೂ ವ್ಯವಸ್ಥೆಯ ದೌರ್ಬಲ್ಯವಷ್ಟೇ ಅಲ್ಲ, ಇದು ನಮ್ಮ ಸಮಾಜದ ನೈತಿಕ ಕುಸಿತದ ಪ್ರತಿಬಿಂಬವೂ ಆಗಿದೆ. ಇದನ್ನು ತಡೆಯಲು ಕಾನೂನು, ತಂತ್ರಜ್ಞಾನ ಮತ್ತು ನೈತಿಕ ಶಿಕ್ಷಣ ಈ ಮೂರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು.

ಮೂಲಸೌಕರ್ಯಗಳನ್ನೇ ಗುರಿಯಾಗಿಸುವುದು ನಿಲ್ಲಿಸಿ: ಜೈಶಂಕರ್

ಯುದ್ಧ ನಿಲ್ಲಿಸಲು ಭಾರತ ಕೊಡುಗೆ



•**ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಈ ಬಿಕ್ಕಟ್ಟು ಇಂಧನ ಪೂರೈಕೆಗಳು ಹಾಗೂ ಹೋರ್ಮುಜ್ ಜಲಸಂಧಿಯಲ್ಲಿ ಸಾಗರ ಸ್ಥಿರತೆ ಮೇಲೆ ಬೀರಿರುವ ಪರಿಣಾಮಗಳ ಕುರಿತು ತೀವ್ರತರ ನಾದ ಕಳವಳ ವ್ಯಕ್ತಪಡಿಸಿರುವ ಭಾರತ, ಭೌಗೋಳಿಕ -ರಾಜಕೀಯ ಅಸ್ಥಿರತೆ ನಿವಾರಣೆ ಮತ್ತು ಏಕ ಪಕ್ಷೀಯ ಬಲವಂತದ ನಿರ್ಬಂಧಗಳನ್ನು ಕೈಬಿಡಲು ಕಾರ್ಯಾರ್ಥ ಮಾರ್ಗೋಪಾಯಗಳನ್ನು ಕಂಡು ಕೊಳ್ಳುವಂತೆ ಬ್ರಿಕ್ಸ್ ರಾಷ್ಟ್ರಗಳನ್ನು ಒತ್ತಾಯಿಸಿದೆ.

ಅಂತಾರಾಷ್ಟ್ರೀಯ ಬಾಂಧವ್ಯಗಳನ್ನು ಬಲಿಷ್ಠಗೊಳಿಸಲು ಪೂರಕವಾಗಿ ಪರಸ್ಪರರ ಸಾರ್ವಭೌಮತೆ ಮತ್ತು ಭೌಗೋಳಿಕ ಸಮಗ್ರತೆಗಳನ್ನು ಗೌರವಿಸಬೇಕು. ಸಂಘರ್ಷ ಮುಕ್ತಾಯಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯೊಂದೇ ಸಹ್ಯ ಮಾರ್ಗವಾಗಿದೆ. ಯುದ್ಧ ನಿಲ್ಲಿಸೋ ಪ್ರಯತ್ನಗಳಿಗೆ ಮತ್ತು ಸ್ಥಿರತೆ ಕಾಪಾಡುವ ಉದ್ದೇಶದ ಉಪಕ್ರಮಗಳಿಗೆ ತುಂಬು ರಚನಾತ್ಮಕ ಕೊಡುಗೆ ನೀಡಲು ಭಾರತ ಸಿದ್ಧವಿದೆ ಎಂದು ಎರಡು ದಿನಗಳ ಬ್ರಿಕ್ಸ್ ಸಮಾವೇಶದ ಉದ್ಘಾಟನಾ ಸಂದರ್ಭ ಭಾರತದ ವಿದೇಶ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ನಿರ್ದಿಷ್ಟ ರಾಷ್ಟ್ರಗಳನ್ನು ಹೆಸರಿಸದೆ ಹೇಳಿದ್ದಾರೆ.

ಶಾಂತಿ ಎಂದರೆ ಇರುವ ಶಾಂತಿಯನ್ನೂ ಚೂರುಚೂರು ಮಾಡೋದಲ್ಲ, ಅಂತಾರಾಷ್ಟ್ರೀಯ ಕಾನೂನನ್ನು ಎತ್ತಿಹಿಡಿಯುವುದು, ನಾಗರಿಕರ ರಕ್ಷಣೆ ಜತೆ ಸಾರ್ವಜನಿಕ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡೋದನ್ನು ನಿಲ್ಲಿಸುವುದು ಮುಖ್ಯ ಎಂದು ಸಚಿವರು ಸಲಹೆ ಮಾಡಿದ್ದಾರೆ.

ಸುರಕ್ಷಿತ, ಅಡೆತಡೆಮುಕ್ತ ನೌಕಾ ಸಂಚಾರಕ್ಕೆ ಆಗ್ರಹ: ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮುಖೇನ ಹಡಗುಗಳು ಸುರಕ್ಷಿತ ಮತ್ತು ಅಡೆತಡೆಮುಕ್ತವಾಗಿ ಸಂಚರಿಸುವಂತಾಗಬೇಕೆಂದು ಬಲವಾಗಿ ಪ್ರತಿಪಾದಿಸಿರುವ ಸಚಿವ ಜೈಶಂಕರ್, ಜಾಗತಿಕ ವಿತ್ತೀಯ ಹಿತದೃಷ್ಟಿಯಿಂದ ಇದು ತೀರಾ ಮುಖ್ಯ ಎಂದಿದ್ದಾರೆ. ಗಾಜಾದಲ್ಲಿನ ಸಂಘರ್ಷವು ಗಂಭೀರ ಮಾನವೀಯ ಬಿಕ್ಕಟ್ಟುಗಳನ್ನು ಸೃಜಿಸಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಸುಸ್ಥಿರ ಕದನ ವಿರಾಮ, ಮಾನವೀಯ ನೆರವು ಮತ್ತು ದೀರ್ಘಕಾಲೀನ ಹಾಗೂ ಶಾಂತಿಯುತ ಪರಿಹಾರಕ್ಕೆ ಪೂರಕವಾಗಬಲ್ಲ ವಿಶ್ವಾಸಾರ್ಹ ಮಾರ್ಗೋಪಾಯಗಳು ಅತ್ಯವಶ್ಯವೆಂದು ಹೇಳಿದ್ದಾರೆ. ಪ್ಯಾಲೆಸ್ತೀನ್ ಸಮಸ್ಯೆಗೆ ಸಂಬಂಧಿಸಿ ದ್ವಿರಾಷ್ಟ್ರ ಪರಿಹಾರವನ್ನು ಭಾರತ ಬೆಂಬಲಿಸುತ್ತದೆ ಎಂದು ಗಮನ ಸೆಳೆದಿದ್ದಾರೆ.

ಹಿರಿಯ ನಾಯಕರು ಭಾಗಿ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ, ರಷ್ಯಾದ ವಿದೇಶಾಂಗ ಸಚಿವ ಸರ್ಗೇ ಲಾವ್ರೊ, ಬ್ರೆಜಿಲ್‌ನ ಮೌರೊ ವಿಯೆರಾ, ಇಂಡೋನೇಷ್ಯಾ ಸಚಿವ ಸುಗಿಯೊನೊ, ದ.ಆಫ್ರಿಕಾ ಅಂತಾರಾಷ್ಟ್ರೀಯ ವ್ಯವಹಾರ ಸಚಿವ ರೊನಾಲ್ಡ್ ಲಮೋಲ ಮತ್ತಿತರ ಹಿರಿಯ ನಾಯಕರು ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ. ಪ.ಏಷ್ಯಾ ಬಿಕ್ಕಟ್ಟು ಸೃಜಿಸಿರುವ ಆರ್ಥಿಕ ದುಷ್ಪರಿಣಾಮಗಳು, ಮುಖ್ಯವಾಗಿ ಇಂಧನ ಪೂರೈಕೆ ಬಿಕ್ಕಟ್ಟು, ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಅಮೆರಿಕದ ನೀತಿ ಇತ್ಯಾದಿ ವಿಚಾರಗಳು ಚರ್ಚೆಗೀಡಾಗಲಿರುವ ಹಿನ್ನೆಲೆಯಲ್ಲಿ, ಭಾರತ ಆತಿಥೇಯದ ಬ್ರಿಕ್ಸ್ ಸಮಾವೇಶ ತುಂಬು ಮಹತ್ತ್ವ ಪಡೆದಿದೆ.

ಇರಾನ್ ಸಚಿವರ ಜತೆ ಮೋದಿ ಚರ್ಚೆ

•**ಹೊಸದಿಲ್ಲಿ:** ಸಂಘರ್ಷ ನಿರತ ಇರಾನ್, ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸನ್ನಿವೇಶಗಳ ಮಧ್ಯೆ, ಭಾರತದ ಆತಿಥ್ಯದಲ್ಲಿ ದಿಲ್ಲಿಯ ಭಾರತ ಮಂಡಪಮ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ವಿದೇಶಾಂಗ ಸಚಿವರುಗಳ ಶೃಂಗಸಭೆ ಸಂದರ್ಭ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಮತ್ತು ರಷ್ಯಾದ ವಿದೇಶಾಂಗ ಸಚಿವ ಸರ್ಗೇ ಲಾವ್ರೊವ್ ಜತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಾಂಪ್ರದಾಯಿಕವಾಗಿ ಮಾತುಕತೆ ನಡೆಸಿದರು.

ಉನ್ನತ ಮಟ್ಟದ ರಾಜತಾಂತ್ರಿಕ ಕಾರ್ಯಕ್ರಮವೆಂದು ಬಣ್ಣಿಸಲ್ಪಟ್ಟ ಬ್ರಿಕ್ಸ್ ಸಮಾವೇಶದಲ್ಲಿ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು, ಪಾಲುದಾರ ರಾಷ್ಟ್ರಗಳು ಪಾಲ್ಗೊಂಡಿದ್ದು, ಅಧಿಕೃತ ಬ್ರಿಕ್ಸ್ ಫ್ಯಾಮಿಲಿ ಫೋಟೋ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಭಾರತಕ್ಕೆ ಭೇಟಿ ನೀಡಿರುವ ವಿದೇಶಿ ಸಚಿವರುಗಳು, ಪ್ರತಿನಿಧಿಗಳೊಂದಿಗೆ ಸೇರಿಕೊಂಡರು.

ಮೊತ್ತ ಮೊದಲು ಭಾರತಕ್ಕೆ ಚೀನಾ ರಾಯಭಾರಿ ಆಗಿರುವ ಕ್ಸು ಫೈಹಾಂಗ್ ಅವರನ್ನು ಎಸ್.ಜೈಶಂಕರ್ ಸ್ವಾಗತಿಸಿದ್ದರು. ಅಮೆರಿಕ ಅಧ್ಯಕ್ಷ ಟ್ರಂಪ್ ಚೀನಾ ಭೇಟಿ ಹಿನ್ನೆಲೆಯಲ್ಲಿ ಚೀನಾದ ವಿದೇಶಾಂಗ ಸಚಿವ ವಾಂಗ್ ಇ ಬ್ರಿಕ್ಸ್ ಸಮಾವೇಶಕ್ಕೆ ಬಂದಿರಲಿಲ್ಲ. ಯುಎಇ ಸಚಿವ ಖಲೀಫಾ ಶಹೀನ್ ಅಲಂ ಮರಾರ್, ಇಂಡೋನೇಷ್ಯಾದ ಸುಗಿಯೋನೋ, ದ.ಆಫ್ರಿಕಾದ ರೊನಾಲ್ಡ್ ಲಮೋಲ, ಇಥಿಯೋಪಿಯಾದ ಗೆಡಿಯೋನ್ ತೈಮೊಥೆವೋಸ್ ಹೆಸ್ಸೆಬಾನ್ ಭಾಗವಹಿಸಿದ್ದರು.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ವ್ಯಾಪಾರ, ತೈವಾನ್, ಇರಾನ್ ಯುದ್ಧ, ಇಂಧನ ಭದ್ರತೆ ಮತ್ತು ತಂತ್ರಜ್ಞಾನದ ಕುರಿತು ಗುರುವಾರ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಉಭಯ ರಾಷ್ಟ್ರಗಳ ನಾಯಕರು ಸ್ಥಿರತೆ ಪ್ರದರ್ಶಿಸಿದರೂ, ತೈವಾನ್ ವಿಚಾರದಲ್ಲಿನ ತೀವ್ರ ಭಿನ್ನಾಭಿಪ್ರಾಯಗಳು ಉಭಯ ದೇಶಗಳ ನಡುವಿನ ಸಂಬಂಧದ ಸೂಕ್ಷ್ಮತೆಯನ್ನು ಮತ್ತೊಮ್ಮೆ ಜಗಜ್ಜಾಹೀರು ಮಾಡಿದವು.

ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ ತೈವಾನ್ ವಿಚಾರ ರಣರಂಗ

» ಉಭಯ ನಾಯಕರ ನಡುವಿನ ಸಹಮತ ಮತ್ತು ಭಿನ್ನಾಭಿಪ್ರಾಯಗಳು



ಚೀನಾಗೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಡೊನಾಲ್ಡ್ ಟ್ರಂಪ್

» ಕ್ಸಿ-ಟ್ರಂಪ್ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ, ಔತಣಕೂಟದಲ್ಲಿ ಭಾಗಿ

ಚೀನಾಗೆ ಬಂದ ಅಮೆರಿಕದ ಮೊದಲ ಅಧ್ಯಕ್ಷ

ಕಳೆದ ಹತ್ತು ವರ್ಷಗಳಲ್ಲಿ ಅಮೆರಿಕದ ಹಾಲಿ ಅಧ್ಯಕ್ಷರೊಬ್ಬರು ಚೀನಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ಗುರುವಾರ ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ದಿ ಪೀಪಲ್‌ನಲ್ಲಿ ಟ್ರಂಪ್ ಮತ್ತು ಜಿನ್‌ಪಿಂಗ್ ಎರಡು ಗಂಟೆಗಳಿಗೂ ಹೆಚ್ಚು ಕಾಲ ನೇರ ಮಾತುಕತೆ ನಡೆಸಿದರು. ಸುಂಕ ಸಮರ, ಕಾರ್ಯತಂತ್ರದ ಪೈಪೋಟಿ ಮತ್ತು ಜಾಗತಿಕ ವ್ಯವಸ್ಥೆಯ ಬಗ್ಗೆ ಇರುವ ವಿಭಿನ್ನ ದೃಷ್ಟಿಕೋನಗಳಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಸ್ಥಿರಗೊಳಿಸಲು ಉಭಯ ರಾಷ್ಟ್ರಗಳು ಈ ಮೂಲಕ ಪ್ರಯತ್ನಿಸಿದವು.

ವ್ಯಾಪಾರ, ಆರ್ಥಿಕ ಸಂಬಂಧಗಳು

ಶೃಂಗಸಭೆಯ ಕಾರ್ಯಸೂಚಿಯಲ್ಲಿ ವ್ಯಾಪಾರಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ಅಕ್ಟೋಬರ್‌ನಲ್ಲಿ ಮಾಡಿಕೊಂಡಿದ್ದ ತಾತ್ಕಾಲಿಕ ವ್ಯಾಪಾರ ಒಪ್ಪಂದ ಪ್ರಗತಿಯಲ್ಲಿದೆ ಎಂದು ಕ್ಸಿ, ಟ್ರಂಪ್‌ಗೆ ತಿಳಿಸಿದರು. ಈ ಹಿಂದೆ ಚೀನಾದ ಸರಕುಗಳ ಮೇಲೆ ಅಮೆರಿಕದ ಸುಂಕಗಳು ಶೇ.145 ರಷ್ಟು ಏರಿಕೆಯಾಗಿದ್ದು, ಈ ಸಕಾರಾತ್ಮಕ ಮಾತುಕತೆಗಳು ಬಿಕ್ಕಟ್ಟನ್ನು ತಗ್ಗಿಸಿವೆ.

ತೈವಾನ್: ತೀವ್ರ ಭಿನ್ನಾಭಿಪ್ರಾಯ

ತೈವಾನ್ ವಿಚಾರ ಮಾತುಕತೆಯಲ್ಲಿ ಅತ್ಯಂತ ವಿವಾದಾತ್ಮಕ ವಿಷಯವಾಗಿ ಹೊರಹೊಮ್ಮಿತು. ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅದು ಉಭಯ ದೇಶಗಳ ನಡುವೆ ಸಂಘರ್ಷ ಮತ್ತು ಘರ್ಷಣೆಗೆ ಕಾರಣವಾಗಬಹುದು ಮತ್ತು ಇಡೀ ಸಂಬಂಧವನ್ನೇ ಅಪಾಯಕ್ಕೆ ತಳ್ಳಬಹುದು ಎಂದು ಕ್ಸಿ ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿದರು.

ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ

ಜಾಗತಿಕ ಇಂಧನ ಕಾರಿಡಾರ್ ಆದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಸಂಘರ್ಷದಿಂದ ಉಂಟಾಗಿರುವ ಹಡಗು ಸಂಚಾರದ ಅಡಚಣೆಯ ಬಗ್ಗೆ ಶೃಂಗಸಭೆಯಲ್ಲಿ ಚರ್ಚಿಸಲಾಯಿತು. ಇಂಧನ ಪೂರೈಕೆಯ ಸುಗಮ ಸಂಚಾರಕ್ಕಾಗಿ ಜಲಸಂಧಿಯು ಮುಕ್ತವಾಗಿರಬೇಕು ಎಂದು ಇಬ್ಬರೂ ನಾಯಕರು ಒಪ್ಪಿದ್ದಾರೆ. ಕೊಲ್ಲಿ ರಾಷ್ಟ್ರಗಳ ಮೇಲಿನ ಇಂಧನ ಅವಲಂಬನೆಯನ್ನು ತಗ್ಗಿಸಲು ಅಮೆರಿಕದ



ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಕ್ಸಿ ಆಸಕ್ತಿ ವ್ಯಕ್ತಪಡಿಸಿದರು ಎಂದು ವಾಷಿಂಗ್ಟನ್ ತಿಳಿಸಿದೆ. ಇರಾನ್ ಬಿಕ್ಕಟ್ಟನ್ನು ಬಗೆಹರಿಸಲು ಚೀನಾ ಹೆಚ್ಚು ಸಕ್ರಿಯ ಪಾತ್ರ ವಹಿಸಬೇಕು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಈ ಮೊದಲೇ ಒತ್ತಾಯಿಸಿದ್ದರು. ಚೀನಾ ಈ ಸಂಘರ್ಷದಲ್ಲಿ ರಾಜತಾಂತ್ರಿಕ ಮಧ್ಯಸ್ಥಿಕೆ ವಹಿಸಲು ಆಸಕ್ತಿ ತೋರಿದೆ.

ಟ್ರಂಪ್ ಲಾಬಿ

ತಾಂತ್ರಿಕವಲ್ಲದ ಸರಕುಗಳ ವಿನಿಮಯವನ್ನು ನಿರ್ವಹಿಸಲು ಮತ್ತು ಹೂಡಿಕೆಯ ಮೇಲೆ ಸರ್ಕಾರದ ಮಟ್ಟದ ವೇದಿಕೆಯನ್ನು ಸ್ಥಾಪಿಸಲು ಯುಎಸ್-ಚೀನಾ ವ್ಯಾಪಾರ ಮಂಡಳಿ ಮತ್ತು ಯುಎಸ್-ಚೀನಾ ಹೂಡಿಕೆ ಮಂಡಳಿಗಳ ರಚನೆಯ ಬಗ್ಗೆ ಉಭಯ ಸರ್ಕಾರಗಳು ಚರ್ಚಿಸಿದವು. ಏರೋಸ್ಪೇಸ್, ಕೃಷಿ ಮತ್ತು ಇಂಧನ ಕ್ಷೇತ್ರಗಳಲ್ಲಿನ ಒಪ್ಪಂದಗಳಿಗೆ ಮೊದಲ ಆದ್ಯತೆ ನೀಡಲಾಯಿತು. ಕಳೆದ ವರ್ಷದ ವ್ಯಾಪಾರ ಸಮರದಿಂದ ಉಂಟಾಗಿದ್ದ ಆರ್ಥಿಕ ಹಿನ್ನಡೆಯನ್ನು ಸರಿದೂಗಿಸಲು ಅಮೆರಿಕದ ಕೃಷಿ ಉತ್ಪನ್ನಗಳು ಮತ್ತು ಪ್ರಯಾಣಿಕ ವಿಮಾನಗಳನ್ನು ಚೀನಾ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವಂತೆ ಟ್ರಂಪ್ ಒತ್ತಾಯಿಸಿದರು.



ಯುಎಸ್ ಮಿಲಿಟರಿ ನೆರವು; ಚೀನಾ ಕೆಂಡ

ತೈವಾನ್ ಅನ್ನು ಚೀನಾ ತನ್ನ ಭೂಭಾಗ ಎಂದು ಪ್ರತಿಪಾದಿಸುತ್ತಿದೆ ಮತ್ತು ತೈಪೆಗೆ ಅಮೆರಿಕ ನೀಡುತ್ತಿರುವ ಮಿಲಿಟರಿ ಬೆಂಬಲವನ್ನು ನಿರಂತರ ವಿರೋಧಿಸುತ್ತಿದೆ. ಡಿಸೆಂಬರ್‌ನಲ್ಲಿ ಟ್ರಂಪ್ ಅವರು ತೈವಾನ್‌ಗೆ 11 ಬಿಲಿಯನ್ ಡಾಲರ್ ಶಸ್ತ್ರಾಸ್ತ್ರ ಪ್ಯಾಕೇಜ್ ಅನ್ನು ಅನುಮೋದಿಸಿದ ನಂತರ ಉದ್ವಿಗ್ನತೆ ಹೆಚ್ಚಾಗಿದೆ. ವಾಷಿಂಗ್ಟನ್ ಮತ್ತು ತೈಪೆ ನಡುವಿನ ರಕ್ಷಣಾ ಸಂಬಂಧಗಳು ಗಟ್ಟಿಯಾಗುತ್ತಿರುವುದು ಚೀನಾದ ಕಳವಳಕ್ಕೆ ಕಾರಣವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ತೈವಾನ್ ಕುರಿತು ಚರ್ಚಿಸಲಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲು ಟ್ರಂಪ್ ನಿರಾಕರಿಸಿದರು.

ಇರಾನ್ ವಿಚಾರದಲ್ಲಿ ಸಹಮತ

ಉಕ್ರೇನ್ ಯುದ್ಧ ಮತ್ತು ಕೊರಿಯನ್ ಪರ್ಯಾಯ ದ್ವೀಪದ ಬೆಳವಣಿಗೆಗಳ ಬಗ್ಗೆಯೂ ಉಭಯ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇರಾನ್ ಎಂದಿಗೂ ಪರಮಾಣು ಅಸ್ತ್ರವನ್ನು ಹೊಂದಬಾರದು ಎಂಬ ವಿಷಯದಲ್ಲಿ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿರುವುದು ವಿಶೇಷ.

ಹಳೆ ಸಮಸ್ಯೆಗಳಿಗೆ ಸಿಗದ ಪರಿಹಾರ

ಆರೋಗ್ಯ, ಕೃಷಿ, ಪ್ರವಾಸೋದ್ಯಮ ಮತ್ತು ಕಾನೂನು ಜಾರಿಯಲ್ಲಿ ಸಹಕಾರವನ್ನು ವಿಸ್ತರಿಸಲು ಕ್ಸಿ ಕರೆ ನೀಡಿದರು. ಕ್ಸಿ-ಟ್ರಂಪ್ ಬೀಜಿಂಗ್‌ನ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ ನೀಡಿ ಔತಣಕೂಟದಲ್ಲಿ ಭಾಗವಹಿಸಿದರೂ, ತೈವಾನ್ ಮತ್ತು ತಂತ್ರಜ್ಞಾನ ನಿಯಂತ್ರಣದಂತಹ ಮೂಲಭೂತ ಭಿನ್ನಾಭಿಪ್ರಾಯಗಳು ಇನ್ನೂ ಬಗೆಹರಿಯದೆ ಉಳಿದಿವೆ.

ಪರಸ್ಪರ ಲಾಭದಾಯಕ ಸಂಬಂಧ ಎಂದ ಕ್ಸಿ!

ದ್ವಿಪಕ್ಷೀಯ ಆರ್ಥಿಕ ಸಂಬಂಧಗಳು ಪರಸ್ಪರ ಲಾಭದಾಯಕ ಎಂದು ಬಣ್ಣಿಸಿದ ಕ್ಸಿ, ಚೀನಾದ ಮಾರುಕಟ್ಟೆಯನ್ನು ಇನ್ನಷ್ಟು ಮುಕ್ತಗೊಳಿಸುವುದಾಗಿ ಭರವಸೆ ಇತ್ತರು. ಇದೇ ವೇಳೆ, ಚೀನಾದಿಂದ ಅಮೆರಿಕಕ್ಕೆ ಅಕ್ರಮ ರವಾನೆಯಾಗುತ್ತಿರುವ ಫೆಂಟಾನಿಲ್ ಪೂರ್ವಗಾಮಿ ರಾಸಾಯನಿಕಗಳ ಹರಿವನ್ನು ತಡೆಗಟ್ಟಲು ಎರಡೂ ದೇಶಗಳು ಒಮ್ಮತ ವ್ಯಕ್ತಪಡಿಸಿದವು.



ತಂತ್ರಜ್ಞಾನ ಸಹಕಾರ

ಅರೆವಾಹಕಗಳ (ಸೆಮಿಕಂಡಕ್ಟರ್) ರಫ್ತು ನಿಯಂತ್ರಣ ಮತ್ತು ಎಐ ಚಿಪ್‌ಗಳ ಲಭ್ಯತೆ, ಅಮೆರಿಕ-ಚೀನಾ ನಡುವಿನ ಪೈಪೋಟಿಯ ಪ್ರಮುಖ ವಿಷಯವಾಗಿ ಹೊರಹೊಮ್ಮಿದೆ. ಎನ್ವಿಡಿಯಾದ ಎಚ್200 ಕೃತಕ ಬುದ್ಧಿಮತ್ತೆ ಚಿಪ್‌ಗಳನ್ನು ಖರೀದಿಸಲು ಚೀನಾದ ಸುಮಾರು 10 ಕಂಪನಿಗಳಿಗೆ ವಾಷಿಂಗ್ಟನ್ ಅನುಮೋದನೆ ನೀಡಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಟ್ರಂಪ್ ನಿಯೋಗದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಕಿರುಸುದ್ದಿ

ಇಂದಿನಿಂದ ಪ್ರಧಾನಿ ಪಂಚ ರಾಷ್ಟ್ರಗಳ ಪ್ರವಾಸ ಆರಂಭ

•**ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಮೇ 15ರಿಂದ 20ರವರೆಗೆ ಪಂಚ ರಾಷ್ಟ್ರಗಳಿಗೆ ಪ್ರವಾಸಗೈಯಲಿದ್ದು, ಮೊತ್ತ ಮೊದಲು ಮೇ 15ರಂದು ಯುಎಇಗೆ ಭೇಟಿ ಕೊಡಲಿದ್ದಾರೆ. ಉಭಯ ರಾಷ್ಟ್ರಗಳ ನಡುವಣ ವ್ಯೂಹಾತ್ಮಕ ಪಾಲುದಾರಿಕೆ ಬಲಪಡಿಸುವುದು ಪ್ರಧಾನಿಯ ಯುಎಇ ಭೇಟಿ ಹಿಂದಿನ ಆಶಯವಾಗಿದೆ. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್‌ರನ್ನು ಭೇಟಿಯಾಗಿ ವ್ಯಾಪಾರ, ಹೂಡಿಕೆ, ಇಂಧನ ರಂಗದಲ್ಲಿ ಸಹಕಾರ, ತಂತ್ರಜ್ಞಾನ ಮತ್ತು ಸಂಸ್ಕೃತಿ ಹಾಗೂ ಜನ-ಜನ ಸಂಪರ್ಕ ಇತ್ಯಾದಿ ವಲಯಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ಕೊಂಡಿಗಳನ್ನು ಗಾಢಗೊಳಿಸುವ ಅವಕಾಶಗಳ ಕುರಿತು ಮತ್ತು ವಲಯದ ಸಮಸ್ಯೆಗಳ ಬಗ್ಗೆ ಉಭಯ ನಾಯಕರು ಚರ್ಚಿಸಲಿದ್ದಾರೆ ಎಂದು ವಿದೇಶಾಂಗ ಖಾತೆ ಕಾರ್ಯದರ್ಶಿ ಸಿಬಿ ಜಾರ್ಜ್ ವಿಶೇಷ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೆಣಕಿದರೆ ನಿರ್ಣಾಯಕ ತಿರುಗೇಟು: ರಾಜನಾಥ್

•**ಜೈಪುರ:** ಭಯೋತ್ಪಾದನೆಯ ವಿಚಾರದಲ್ಲಿ ಪಾಕಿಸ್ತಾನಕ್ಕೆ ಗುರುವಾರ ಎಚ್ಚರಿಕೆ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತವನ್ನು ಕೆಣಕಿದರೆ ನಿರ್ಣಾಯಕ ತಿರುಗೇಟು ನೀಡಲಾಗುವುದು ಎಂದು ಗುಡುಗಿದ್ದಾರೆ. ನಾಗೌರ್ ಜಿಲ್ಲೆಯ ಮೆರ್ಟಾ ಪಟ್ಟಣದಲ್ಲಿ ರಜಪೂತ ಆಡಳಿತಗಾರ ರಾವ್ ದುಡಾ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಸಿಂಗ್, ಪಹಲ್ಗಾಮ್ ದಾಳಿಯ ನಂತರ ನಡೆಸಲಾದ ಆಪರೇಷನ್ ಸಿಂಧೂರ ಪಾಕಿಸ್ತಾನಕ್ಕೆ ಬಲವಾದ ಸಂದೇಶ ರವಾನಿಸಿದೆ. ಭಾರತ ಯಾರನ್ನೂ ಕೆಣಕುವುದಿಲ್ಲ, ಆದರೆ ಕೆಣಕಿದರೆ ಸುಮ್ಮನೆ ಕೂರುವುದಿಲ್ಲ. 2016ರ ಸರ್ಜಿಕಲ್ ಸ್ಟ್ರೈಕ್ ಮತ್ತು 2019ರ ಬಾಲಾಕೋಟ್ ವಾಯು ದಾಳಿಗಳು, ಭಾರತದ ಬದಲಾದ ನಿಲುವಿಗೆ ಸಾಕ್ಷಿ ಎಂದು ಅವರು ತಿಳಿಸಿದರು.

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ

•**ಚೆನ್ನೈ:** ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಹಾಗೂ ಅವರ ಬೆಂಬಲಿಗ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿರುವ ಸಿ.ವಿ. ಷಣ್ಮುಗಂ ಮತ್ತು ಎಸ್.ಪಿ. ವೇಲುಮಣಿ ನೇತೃತ್ವದ ಬಣ, ಅವರ ಅನರ್ಹತೆಗೆ ಗುರುವಾರ ಒತ್ತಾಯಿಸಿದೆ. ಬಣದ ವಿಪ್ ಸಿ. ವಿಜಯಭಾಸ್ಕರ್, ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್‌ರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದಾರೆ. ಬುಧವಾರ ನಡೆದ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದ ವಿಶ್ವಾಸಮತ ಯಾಚನೆಯ ವೇಳೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ನೀಡಿದ್ದ ಸೂಚನೆಯನ್ನು ಪಳನಿಸ್ವಾಮಿ ಸೇರಿದಂತೆ 22 ಶಾಸಕರು ಉಲ್ಲಂಘಿಸಿದ್ದಾರೆ, ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಮಮತಾ ವಕೀಲಿ ಲೈಸನ್ಸ್ ಕೇಳಿದ ಬಾರ್ ಕೌನ್ಸಿಲ್

•**ಕೋಲ್ಕತ್ತಾ:** ಇತ್ತೀಚಿನ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಕುರಿತು ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಖುದ್ದಾಗಿ ವಾದ ಮಂಡಿಸಿದರು. ಅವರ ಪರವಾನಗಿ ಮತ್ತು ವಕೀಲಿ ವೃತ್ತಿಜೀವನದ ಬಗ್ಗೆ ಭಾರತೀಯ ಬಾರ್ ಕೌನ್ಸಿಲ್ (ಬಿಸಿಐ) ಮಾಹಿತಿ ಸಲ್ಲಿಸುವಂತೆ ತನ್ನ ಪಶ್ಚಿಮ ಬಂಗಾಳ ಘಟಕಕ್ಕೆ ಸೂಚಿಸಿದೆ. ಅಲ್ಲದೆ, ಮಮತಾ ಮುಖ್ಯಮಂತ್ರಿಯಾಗಿದ್ದಾಗ ಅವರ ವಕೀಲಿ ಪರವಾನಗಿ ರದ್ದಿನಲ್ಲಿ ಇಡಲಾಗಿತ್ತೇ ಎಂದು ಪ್ರಶ್ನಿಸಿದೆ.



ವಕೀಲರ ಕೋಟು ಧರಿಸಿ ನ್ಯಾಯಾಲಯಕ್ಕೆ ಆಗಮಿಸಿದ ಮಮತಾ, ತೀವ್ರ ಘೋಷಣೆಗಳ ನಡುವೆಯೇ ವಾದ ಮಂಡಿಸಿದರು. ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಹಿಂಸಾಚಾರ ನಡೆಯುತ್ತಿದೆ ಎಂದು ಆರೋಪಿಸಿದ ಅವರು, 10 ಮಂದಿ ಕೊಲೆಯಾದವರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಪೊಲೀಸರ ಸಮ್ಮುಖದಲ್ಲೇ ಮನೆ ಮತ್ತು ಕಚೇರಿಗಳನ್ನು ಲೂಟಿ ಮಾಡಲಾಗುತ್ತಿದೆ ಎಂದು ದೂರಿದ್ದಾರೆ. ಜನರ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದು, ಬಂಗಾಳ ಬುಲ್ಡೋಜರ್ ರಾಜ್ಯವಲ್ಲ ಎಂದು ಪ್ರತಿಪಾದಿಸಿದರು.

ಸೋಲು ಜೀರ್ಣಸಲಾಗುತ್ತಿಲ್ಲ: ಮಮತಾರ ಕಾನೂನು ಹೋರಾಟವನ್ನು ಟಿಎಂಸಿ ಶ್ಲಾಘಿಸಿದ್ದರೆ, ಮಮತಾರಿಗೆ ಸೋಲನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ ಎಂದು ಬಿಜೆಪಿ ಟೀಕಿಸಿದೆ. ಎನ್‌ವಿ ಸುಭಾಷ್ ಸೇರಿ ಬಿಜೆಪಿ ಮುಖಂಡರು ಮಮತಾ ನಡೆಯನ್ನು ರಾಜಕೀಯ ಪ್ರೇರಿತ ಎಂದು ಬಣ್ಣಿಸಿದ್ದಾರೆ.

ತೈವಾನ್ ವಿಚಾರದಲ್ಲಿ ಬಹಳ ಎಚ್ಚರಿಕೆ ಇರಲಿ

•**ಬೀಜಿಂಗ್:** ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅಮೆರಿಕ ಮತ್ತು ಚೀನಾ ನಡುವೆ ಘರ್ಷಣೆಗಳಷ್ಟೇ ಅಲ್ಲ ಸಂಘರ್ಷಗಳೂ ಉಂಟಾಗಬಹುದು ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ.

ತೈವಾನ್ ಬಗ್ಗೆ ತಲೆ ಹಾಕದಂತೆ ಟ್ರಂಪ್‌ಗೆ ಕ್ಸಿ ಎಚ್ಚರಿಕೆ

ಬೀಜಿಂಗ್‌ನಲ್ಲಿ ಗುರುವಾರ ನಡೆದ ಉಭಯ ನಾಯಕರ ವ್ಯಾಪಕ ಮಾತುಕತೆಯಲ್ಲಿ ಇರಾನ್ ಯುದ್ಧ, ಇಂಧನ ಭದ್ರತೆ, ವ್ಯಾಪಾರ, ಸುಂಕ, ತಂತ್ರಜ್ಞಾನ ಮತ್ತು ತೈವಾನ್ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಗೆ ಬಂದವು. ಸುಮಾರು ಎರಡು ಗಂಟೆಗಳ ಕಾಲ ನಡೆದ ಮೊದಲ ಸುತ್ತಿನ ಮಾತುಕತೆ ಬಳಿಕ ಟ್ರಂಪ್ ಅವರು ಕ್ಸಿ ಜಿನ್‌ಪಿಂಗ್ ಮತ್ತು ಅವರ ಪತ್ನಿಯನ್ನು ಸೆಪ್ಟೆಂಬರ್ 24ರಂದು ವೈಟ್‌ಹೌಸ್‌ಗೆ ಆಹ್ವಾನಿಸಿದರು. ಆದರೆ, ಚೀನಾ-ಅಮೆರಿಕ ಸಂಬಂಧಗಳಲ್ಲಿ ತೈವಾನ್ ಪ್ರಶ್ನೆಯೇ ಅತ್ಯಂತ ಪ್ರಮುಖ ವಿಷಯ ಎಂದು ಕ್ಸಿ ಒತ್ತಿ ಹೇಳಿದರು.

ಈ ವಿಷಯವನ್ನು ಸರಿಯಾಗಿ ನಿಭಾಯಿಸಿದರೆ ದ್ವಿಪಕ್ಷೀಯ ಸಂಬಂಧಗಳಲ್ಲಿ ಒಟ್ಟಾರೆ ಸ್ಥಿರತೆ ಇರುತ್ತದೆ. ಇಲ್ಲದಿದ್ದರೆ ಎರಡೂ ದೇಶಗಳು ಘರ್ಷಣೆ ಹಾಗೂ ಸಂಘರ್ಷಗಳತ್ತ ಸಾಗಬಹುದು, ಇದರಿಂದ ಸಂಬಂಧಗಳು ಗಂಭೀರ ಅಪಾಯಕ್ಕೆ ಸಿಲುಕಬಹುದು ಎಂದು ಅವರು ಎಚ್ಚರಿಸಿದರು. ತೈವಾನ್ ವಿಚಾರದಲ್ಲಿ ಅಮೆರಿಕ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದೂ ಜಿನ್‌ಪಿಂಗ್ ಸೂಚಿಸಿದರು.

ಭಾರತದ ಸರಕು ನೌಕೆಗೆ ದಾಳಿ: ಎಂಇಎ ಖಂಡನೆ

•**ಹೊಸದಿಲ್ಲಿ:** ಒಮಾನ್ ಸಮುದ್ರ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ಧ್ವಜ ಹೊಂದಿದ್ದ ಎಂಎಸ್‌ವಿ ಹಾಜಿ ಅಲಿ ಎಂಬ ಸರಕು ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿ ಅದನ್ನು ಮುಳುಗಿಸಿರುವುದನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತೀವ್ರವಾಗಿ ಖಂಡಿಸಿದೆ.

ಸೋಮಾಲಿಯಾದ ಬೆರ್ಬೆರಾ ಬಂದರಿನಿಂದ ಶಾರ್ಜಾಕ್ಕೆ ಜಾನುವಾರುಗಳನ್ನು ಹೊತ್ತೊಯ್ಯುತ್ತಿದ್ದ ಈ ಹಡಗಿನ ಮೇಲೆ ಮೇ 13ರಂದು ಸ್ಥಳೀಯ ಕಾಲಮಾನ ಬೆಳಗಿನ ಜಾವ 3:30ರ ಸುಮಾರಿಗೆ ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆದಿದೆ. ಒಮಾನ್‌ನ ಲಿಮಾ ಬಳಿ ನಡೆದ ಈ ದಾಳಿಯಿಂದಾಗಿ ಹಡಗಿನಲ್ಲಿ ಸ್ಫೋಟ ಮತ್ತು ಅಗ್ನಿ ಅವಘಡ ಸಂಭವಿಸಿ, ಅದು ಸಮುದ್ರದಲ್ಲಿ ಮುಳುಗಿದೆ. ಒಮಾನ್ ಕರಾವಳಿ ರಕ್ಷಣಾ ಪಡೆ ತಕ್ಷಣ ಕಾರ್ಯಪ್ರವೃತ್ತರಾಗಿ ಹಡಗಿನಲ್ಲಿದ್ದ ಎಲ್ಲಾ 14 ಭಾರತೀಯ ನಾವಿಕರನ್ನು ಲೈಫ್‌ಬೋಟ್‌ಗಳ ಮೂಲಕ ರಕ್ಷಿಸಿದೆ. ಇದಕ್ಕಾಗಿ ಒಮಾನ್ ಅಧಿಕಾರಿಗಳಿಗೆ ಭಾರತ ಸರ್ಕಾರ ಕೃತಜ್ಞತೆ ಸಲ್ಲಿಸಿದೆ.

ರಾಜತಾಂತ್ರಿಕ ಪ್ರತಿಕ್ರಿಯೆ: ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, ನಾವಿಕರನ್ನು ಗುರಿಯಾಗಿಸಿಕೊಂಡಿರುವುದು ಅಸ್ವೀಕಾರಾರ್ಹ ಎಂದಿದ್ದಾರೆ. ದಿಲ್ಲಿಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆ ನಡೆಯುತ್ತಿರುವಾಗಲೇ ಈ ಘಟನೆ ಸಂಭವಿಸಿದೆ. ಅಡೆತಡೆಯಿಲ್ಲದ ಸಮುದ್ರ ವ್ಯಾಪಾರಕ್ಕೆ ಒತ್ತು ನೀಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಪಶ್ಚಿಮ ಏಷ್ಯಾದ ಸಮುದ್ರ ಮಾರ್ಗಗಳಲ್ಲಿನ ಕಾನೂನುಬಾಹಿರ ಕೃತ್ಯಗಳು ಜಾಗತಿಕ ವ್ಯಾಪಾರದ ಅಡಿಪಾಯಕ್ಕೆ ಬೆದರಿಕೆಯೊಡ್ಡುತ್ತಿವೆ ಎಂದು ಎಚ್ಚರಿಸಿದ್ದಾರೆ.

ಭಾರತ-ಪಾಕ್: ಹೊಸಬಾಳೆ ನಿಲುವಿಗೆ ನರಾವಣೆ ಸಹಮತ

•**ಹೊಸದಿಲ್ಲಿ:** ಭಾರತ, ಪಾಕಿಸ್ತಾನದ ಜನಸಾಮಾನ್ಯರ ನಡುವಣ ಬಲಿಷ್ಠ ಬಾಂಧವ್ಯವು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ಸುಧಾರಿಸಲು ನೆರವಾಗಲಿದೆ ಎಂದು ಭಾರತೀಯ ಸೇನಾ ಮಾಜಿ ಮುಖ್ಯಸ್ಥ (ನಿವೃತ್ತ) ಮನೋಜ್ ಮುಕುಂದ್ ನರಾವಣೆ ಅಭಿಪ್ರಾಯಪಟ್ಟಿದ್ದಾರೆ ಮತ್ತು ಈ ನಿಟ್ಟಿನಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನಿಲುವನ್ನು ಸಮರ್ಥಿಸಿದ್ದಾರೆ.

ಮಿತ್ರರಾಗಲು ಸಾಧ್ಯ: ಗಡಿಯ ಎರಡೂ ಬದಿಯ ಸಾಮಾನ್ಯ ಜನರಿಗೆ ರಾಜಕೀಯ ಅನಗತ್ಯ. ಸಾಮಾನ್ಯ ಜನರಿಗೇನಿದ್ದರೂ ರೋಟಿ, ಕಪಡಾ ಮತ್ತು ಮಕಾನ್ (ಆಹಾರ, ಬಟ್ಟೆ, ಸೂರು) ಮಾತ್ರ ಅಗತ್ಯ. ಎರಡೂ ರಾಷ್ಟ್ರಗಳ ಜನಸಾಮಾನ್ಯರ ಮಧ್ಯೆ ಸ್ನೇಹ ಬೆಳೆದಲ್ಲಿ, ಎರಡೂ ರಾಷ್ಟ್ರಗಳು ಮಿತ್ರರಾಗಲು ಸಾಧ್ಯವಿದೆ. ಹಾಗಾಗಿ ಇದೇ ಸರಿಯಾದ ವಿಚಾರ. ಜನ-ಜನ ಸಂಪರ್ಕ ತೀರಾ ಮುಖ್ಯ ಎಂದು ನರಾವಣೆ ಹೇಳಿದ್ದಾರೆ. ಆ ರಾಷ್ಟ್ರದ ಪಾಲಿಗೆ ಬಾಗಿಲು ಮುಚ್ಚಕೂಡದು, ಬದಲಾಗಿ ಮಾತುಕತೆಗೆ ಸದಾ ಸಿದ್ಧರಿರಬೇಕೆಂದು ಹೊಸಬಾಳೆ ಅಭಿಪ್ರಾಯಿಸಿದ್ದರು.

ಹತ್ತು ದಿನಗಳ ಕಾಂಗ್ರೆಸ್ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ

ವಿ.ಡಿ. ಸತೀಶನ್ ಕೇರಳದ ನೂತನ ಸಿಎಂ

•**ತಿರುವನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜ ಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.

ಮಾಜಿ ವಿರೋಧ ಪಕ್ಷದ ನಾಯಕ ಸತೀಶನ್ (61) ಅವರನ್ನು ಕಾಂಗ್ರೆಸ್ ಹೈಮಾಂಡ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ತನ್ನ ಆಯ್ಕೆಯ ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿಯಾಗಿಸುವ ಕಾಂಗ್ರೆಸ್ ಹೈಕಮಾಂಡಿನ ಲೆಕ್ಕಾಚಾರ ತಪ್ಪಿದೆ. ಕಾಂಗ್ರೆಸ್ ಕಾರ್ಯಕರ್ತರು, ಮುಸ್ಲಿಂ ಲೀಗ್ ಮತ್ತು ಇತರ ಗುಂಪುಗಳು ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹೇರುವ ಯತ್ನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. 2026ರ ವಿಧಾನಸಭಾ ಚುನಾವಣೆಯಲ್ಲಿ 140 ಸ್ಥಾನಗಳ ಪೈಕಿ ಯುಡಿಎಫ್ 102 ಸ್ಥಾನ (ಕಾಂಗ್ರೆಸ್ 63, ಮುಸ್ಲಿಂ ಲೀಗ್ 22, ಇತರ 14) ಗಳೊಂದಿಗೆ ಭರ್ಜರಿ ಜಯ ಸಾಧಿಸಿ ಅಧಿಕಾರಕ್ಕೆ ಬಂದಿದೆ.



ದೈವೇಚ್ಛೆ ಎಂದ ಸತೀಶನ್: ಮುಖ್ಯಮಂತ್ರಿ ಸ್ಥಾನಕ್ಕೆ ತಾವು ಆಯ್ಕೆಯಾಗಿರುವುದನ್ನು ವೈಯಕ್ತಿಕ ಸಾಧನೆ ಎಂದು ಭಾವಿಸುವುದಿಲ್ಲ, ಇದು ದೈವೇಚ್ಛೆ ಎಂದುಕೊಳ್ಳುತ್ತೇನೆ. ಎಲ್ಲರನ್ನೂ ಜತೆಗೂಡಿಸಿ ಮುಂದುವರಿಯುವುದಾಗಿ ತಿಳಿಸಿದ ಸತೀಶನ್, ಆಡಳಿತದಲ್ಲಿ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ. ರಾಹುಲ್ ಗಾಂಧಿ ಮತ್ತು ಯುಡಿಎಫ್ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ರಾಜ್ಯಪಾಲರಿಗೆ ಹಕ್ಕು ಮಂಡಿಸಿದ ಸತೀಶನ್: ಶಾಸಕಾಂಗ ಪಕ್ಷದ ಸಭೆಯ ನಂತರ ಸತೀಶನ್, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್‌ರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಲಿದ್ದಾರೆ.

ಯಾರು ವಿ.ಡಿ. ಸತೀಶನ್? ಕೊಚ್ಚಿ ಬಳಿಯ ತೇವರ ನೆಟ್ಟೂರು ಮೂಲದ ವಿ.ಡಿ.ಸತೀಶನ್ 1964ರ ಮೇ 31ರಂದು ದಾಮೋದರ ಮೆನನ್-ವಿಲಾಸಿನಿ ಅಮ್ಮ ದಂಪತಿ ಸುಪುತ್ರರಾಗಿ ಜನಿಸಿದರು. ಕಾನೂನು ಪದವಿ ಪಡೆದಿರುವ ಸತೀಶನ್ ಅವರು ಪೆರಾವೂರು ಕ್ಷೇತ್ರದಿಂದ ಈ ಬಾರಿ ಆಯ್ಕೆಯಾಗಿದ್ದಾರೆ.

ಕೇರಳದಲ್ಲಿ ಮಾತ್ರ ವಿಳಂಬ

ಇತ್ತೀಚೆಗೆ ಚುನಾವಣೆ ನಡೆದ ಪಂಚರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯಾಗಿ ಅವರು ಅಧಿಕಾರ ಸ್ವೀಕರಿಸಿದ್ದರೂ, ಕೇರಳದಲ್ಲಿ ಸಿಎಂ ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗಿದ್ದುದು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮಿತ್ರಕೂಟದ ಪಕ್ಷಗಳಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು.

72 ಮಂದಿಗೆ ಗಾಯ, 170 ಜಾನುವಾರುಗಳ ಸಾವು

ಉ.ಪ್ರದೇಶ: ಬಿರುಗಾಳಿ ಮಳೆಗೆ 111 ಜನರು ಬಲಿ

•**ಲಖನೌ:** ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.

ಭಾರೀ ವೇಗದಲ್ಲಿ ಬೀಸಿದ ಗಾಳಿಯಿಂದಾಗಿ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ವಾಹನಗಳು ಜಖಂಗೊಂಡಿವೆ, ಹಲವೆಡೆ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಜಿಲ್ಲಾವಾರು ಮಾಹಿತಿ ಪ್ರಕಾರ, ಭದೋಹಿಯಲ್ಲಿ 16, ಪ್ರಯಾಗ್‌ರಾಜ್‌ನಲ್ಲಿ 17 ಮತ್ತು ಫತೇಪುರ್‌ನಲ್ಲಿ 9 ಮಂದಿ ಮೃತಪಟ್ಟಿದ್ದಾರೆ. ಪ್ರತಾಪ್‌ಗಢ, ಕಾನ್ಪುರ ದೇಹತ್ ಮತ್ತು ದೇವರಿಯಾ ಜಿಲ್ಲೆಗಳಲ್ಲೂ ಸಾವು-ನೋವುಗಳು ವರದಿಯಾಗಿವೆ.

ಪರಿಹಾರ ಕಾರ್ಯಾಚರಣೆ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಮೃತರ ಕುಟುಂಬಗಳಿಗೆ 24 ಗಂಟೆಗಳ ಒಳಗಾಗಿ ಹಣಕಾಸಿನ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಬಾರಾಬಂಕಿ, ಬಹ್ರೈಚ್ ಮತ್ತು ಉನ್ನಾವೊ ಸೇರಿದಂತೆ ಬಾಧಿತ 19 ಜಿಲ್ಲೆಗಳಿಗೆ ಹಣಕಾಸು ನೆರವು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ.

ಕಿರುಸುದ್ದಿ

ರಾಷ್ಟ್ರಮಟ್ಟದ ಎನ್‌ಎಬಿಎಚ್ ಮಾನ್ಯತೆ

ಬಾಗಲಕೋಟೆ: ನಗರದ ಬಿವ್ಹಿವ್ಹಿ ಸಂಘದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲದ ಆಸ್ಪತ್ರೆ ರಾಷ್ಟ್ರೀಯ ಮಟ್ಟದ ಎನ್.ಎ.ಬಿ.ಎಚ್. ಮಾನ್ಯತೆ ಪಡೆದುಕೊಂಡಿದೆ. ಆಸ್ಪತ್ರೆಯಲ್ಲಿ ನೀಡಲಾಗುವ ವೈದ್ಯಕೀಯ ಸೇವೆಗಳು, ಆಸ್ಪತ್ರೆಯಲ್ಲಿಯ



ನೈರ್ಮಲ್ಯ, ವೈದ್ಯ-ರೋಗಿ ಸಮಾಲೋಚನೆ, ನಾನಾ ವೈದ್ಯಕೀಯ ತಪಾಸಣೆಗಳು, ವೈದರು ಹಾಗೂ ರೋಗಿಗಳ ಸುರಕ್ಷತಾ ಕ್ರಮಗಳು ಸೇರಿದಂತೆ ವಿವಿಧ ಅಂಶಗಳನ್ನು ಪರಿಶಿಲಿಸಿ, ಭಾರತ ಸರ್ಕಾರದ ರಾಷ್ಟ್ರೀಯ ಗುಣಮಟ್ಟ ನಿಯಂತ್ರಣ ಮಂಡಳಿ ಈ ಮಾನ್ಯತೆ ನೀಡಿದೆ ಎಂದು ಪ್ರಾಂಶುಪಾಲ ಡಾ. ಅರುಣ ಹೂಲಿ ತಿಳಿಸಿದ್ದಾರೆ. ಕೇವಲ 6 ವರ್ಷಗಳಲ್ಲಿ ಎಲ್ಲ ಸಿಬ್ಬಂದಿ ವರ್ಗ ಮಾಡಿದ ಸಾಧನೆಯನ್ನು ಬಿವ್ಹಿವ್ಹಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಶ್ಲಾಘಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2111	5871
ಉದ್ದಿನಕಾಳು	5289	5289
ಒಣ ಮೆಣಸಿನಕಾಯಿ	38000	53999
ಹೆಸರುಕಾಳು	1009	7589
ನೆಲಗಡಲೆ (ಶೇಂಗಾ)	1209	7810
ಜೋಳ	2416	3529
ಮೆಕ್ಕೆಜೋಳ	1961	1961
ಮಡಿಕೆ (ಮಟಕಿ)	8111	8111
ಈರುಳ್ಳಿ	500	1900
ಆಲೂಗಡ್ಡೆ	1200	1800
ಕುಸುಬೆ	5329	5351
ಸೋಯಾಬಿನ್	6570	7449
ತೊಗರಿ	4339	4339
ಗೋಧಿ	1857	2655

ಹೆದ್ದಾರಿ ಕಾಮಗಾರಿ ವಿಳಂಬ | ಸಾರ್ವಜನಿಕರ ಆಕ್ರೋಶ

ಸಚಿವ, ಡಿಸಿ ಎದುರೇ ಅಧಿಕಾರಿಗಳಿಗೆ ತರಾಟೆ

ಭಟ್ಕಳ: ಪಟ್ಟಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಹಾಗೂ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರು ವೀಕ್ಷಿಸುವ ಸಂದರ್ಭದಲ್ಲಿ ಸಾರ್ವಜನಿಕರು ಹೆದ್ದಾರಿ ಪ್ರಾಧಿಕಾರದ ಹಾಗೂ ಐಆರ್‌ಬಿ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಸಾರ್ವಜನಿಕರು ಪಟ್ಟಣದಲ್ಲಿ ವಿಳಂಬಗತಿಯಲ್ಲಿ ನಡೆಯುತ್ತಿರುವ ಹೆದ್ದಾರಿ ಕಾಮಗಾರಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಮಳೆ ಆರಂಭದೊಳಗಾದರೂ ಕಾಮಗಾರಿ ಮುಗಿಸುವ ಕೆಲಸ ಮಾಡಿ. ಮತ್ತೆ ತಡ ಮಾಡಿದರೆ ಮಳೆಗಾಲದಲ್ಲಿ ಜನರು ತೊಂದರೆ ಅನುಭವಿಸಬೇಕಾಗುತ್ತದೆ ಎಂದರು.

ಮೂಡಭಟ್ಕಳ ಬೈಪಾಸ್ ಬಳಿ ಅಂಡರ್ ಪಾಸ್ ಕಾಮಗಾರಿ ಪಡೆದುಕೊಂಡ ಗುತ್ತಿಗೆದಾರನನ್ನು ತರಾಟೆಗೆ ತೆಗೆದುಕೊಂಡ ಸಚಿವ ಮಂಕಾಳ ವೈದ್ಯ ಅವರು ಕಾಮಗಾರಿ ಕಾಮಗಾರಿ ಮುಗಿಸಲು ಇನ್ನೆಷ್ಟು ದಿನಗಳು ಬೇಕು. ಇನ್ನೇಷ್ಟು ಜನರ ಹೆಣ ಇಲ್ಲಿ ಬೀಳಬೇಕು ಎಂದು ಖಾರವಾಗಿ ಪ್ರಶ್ನಿಸಿದರು.

ಹೆದ್ದಾರಿ ಕಾಮಗಾರಿ ಅದ್ವಾನದ ಬಗ್ಗೆ ತಿಳಿಸಿದ ಭಟ್ಕಳ ಹೆದ್ದಾರಿ ಹೋರಾಟ ಸಮಿತಿ ಅಧ್ಯಕ್ಷ ಸತೀಶಕುಮಾರ ನಾಯ್ಕ, ಹೆದ್ದಾರಿ ಪ್ರಾಧಿಕಾರದ ಯೋಜನಾಧಿಕಾರಿಯವರು ಕೆಲಸ ಆರಂಭಿಸುವ ಮುನ್ನ ಮಳೆಗಾಲದ ನೀರು ಹರಿದು ಹೋಗಲು ಚರಂಡಿ ಹಾಗೂ ಸರ್ವಿಸ್ ರಸ್ತೆ ಮಾಡುವ ಭರವಸೆ ನೀಡಿದ್ದರು. ಆದರೆ, ಈಗ ಆ ಕಾಮಗಾರಿಯನ್ನು



ಅರ್ಧಕ್ಕೆ ಕೈಬಿಟ್ಟು ತುರಾತುರಿಯಲ್ಲಿ ರಸ್ತೆ ಕಾಮಗಾರಿ ನಡೆಸುತ್ತಿದ್ದಾರೆ. ಮೇ 17ಕ್ಕೆ ಮಾನ್ಸೂನ್ ಮುನ್ಸೂಚನೆ ಇದ್ದು, ಮಳೆ ಆರಂಭವಾದರೆ ಭಟ್ಕಳ ಸಂಪೂರ್ಣ ಮುಳುಗಡೆಯಾಗಲಿದೆ. ಹೆದ್ದಾರಿಯವರು ತಮ್ಮ ಸ್ವಾರ್ಥಕ್ಕಾಗಿ ನಮ್ಮನ್ನು ಸಾಯಿಸುವ ಬರದಲ್ಲಿದ್ದಾರೆ. ಇದಕ್ಕೆ ಒಂದು ಪರಿಹಾರ ಕಂಡುಕೊಳ್ಳದಿದ್ದಲಿ ಹೆದ್ದಾರಿ ಕಾಮಗಾರಿ ಮುಂದುವರೆಸಲು ನಾವು ಅವಕಾಶ ನೀಡುವುದಿಲ್ಲ ಎಂದರು.

ಮೂಡಭಟ್ಕಳ ಬೈಪಾಸ್ ಸನಿಹದ ವೆಂಕಟೇಶ ನಾಯ್ಕ, ತಂಝೀಂ ಅಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ, ರಾಜೇಶ ನಾಯಕ, ತಂಝೀಂ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರಖೀಬ್ ಸ ಸಹ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಸಂಶುದ್ದೀನ್ ವೃತ್ತ ಹಾಗೂ ರಂಗಿನಕಟ್ಟೆ ಬಳಿ ತಂಝೀ ಕಾರ್ಯದರ್ಶಿ ಅಬ್ದುರ್ ರಕೀಬ್ ಹಾಗೂ ರಾಜೇಶ ನಾಯಕ ಮಾತನಾಡಿದರು.

ಸಾರ್ವಜನಿಕರ ಸಮಸ್ಯೆ ಆಲಿಸಿದ ಸಚಿವ ಮಂಕಾಳ ವೈದ್ಯ ಹಾಗೂ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರು ಮಳೆಗಾಲದಲ್ಲಿ ನೀರು ನಿಲ್ಲದಂತೆ ನದಿಗೆ ಹರಿದು ಹೋಗಲು ಜೆಸಿಬಿ ತುರ್ತು ಕಾಲುವೆ ನಿರ್ಮಿಸುವಂತೆ ಸೂಚಿಸಿದರು. ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಭಟ್ಕಳ ಉಪವಿಭಾಗಾಧಿಕಾರಿ ಜೆ ಮಹೇಶ, ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ, ಭಟ್ಕಳ ಡಿವೈಎಸ್ಪಿ ಬಿ ಗಿರೀಶ, ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ, ಹೆದ್ದಾರಿ ಯೋಜನಾಧಿಕಾರಿ ಶ್ರೀನಿವಾಸ, ಐಆರ್‌ಬಿ ಎಂಜಿನಿಯರ್ ಸುದೇಶ, ಪುರಸಭೆ ಅಭಿಯಂತರರಾದ ಅರವಿಂದ್, ವೆಂಕಟೇಶ ನಾವುಡ ಮುಂತಾದವರಿದ್ದರು.

ವಿದ್ಯಾರ್ಥಿಗಳು ಕೌಶಲ್ಯ ಹೆಚ್ಚಿಸಿಕೊಳ್ಳಲಿ: ಪಾಟೀಲ

ಹುಬ್ಬಳ್ಳಿ: ವಿದ್ಯಾರ್ಥಿಗಳು ತಮ್ಮ ಜ್ಞಾನ ಹಾಗೂ ಕೌಶಲ್ಯಗಳನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಬೇಕು. ನವೀನ ಕಲಿಕಾ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅಮೆರಿಕದ ಬೋಸ್ಟನ್ನ ಐಸೆಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಸ್ಥಾಪಕ ಮತ್ತು ಸಿಇಒ ಪ್ರಸಾದ್ ಪಾಟೀಲ ತಿಳಿಸಿದರು.

ಇಲ್ಲಿಯ ವಿದ್ಯಾನಗರ ಕೆಎಲ್‌ಇ ಸಂಸ್ಥೆ ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜು, ತನ್ನ ವಾರ್ಷಿಕ ದಿನ ಮತ್ತು ಹಳೆಯ ವಿದ್ಯಾರ್ಥಿಗಳ ದಿನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾಂಪ್ರದಾಯಿಕ



ಕಲಿಕೆಯ ವಿಧಾನಗಳೊಂದಿಗೆ ಸಂಪರ್ಕದಲ್ಲಿದ್ದಾಗ ಆಯಾ ಕ್ಷೇತ್ರಗಳಲ್ಲಿ ನಾಯಕರಾಗಲು ಸಾಧ್ಯ ಎಂದರು.

ಜನಪದ ಕಲಾವಿದ ಡಾ. ರಾಮು ಮುಳಗಿ ಮಾತನಾಡಿ, ಜಾನಪದ ಸಾಹಿತ್ಯವನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಮಾನವೀಯತೆಯ ಮೌಲ್ಯಗಳನ್ನು ಮತ್ತು ಹಿರಿಯರಿಗೆ ಗೌರವವನ್ನು ಒತ್ತಿ ಹೇಳಿದರು. ಕಾಲೇಜಿನ ಪ್ರಾಂಶುಪಾಲೆ ಸಂಧ್ಯಾ ಕುಲಕರ್ಣಿ, ಕಾಲೇಜ್ ವೇದಿಕೆ ಉಪಾಧ್ಯಕ್ಷೆ ಡಾ. ಸುಧಾ ಪಾಟೀಲ, ಕಾಲೇಜು ಜಿಮ್‌ಖಾನಾದ ಉಪಾಧ್ಯಕ್ಷ ಡಾ. ಪ್ರಭಾಕರ್ ಟಿ. ಹಾಗೂ ಅನೇಕರಿದ್ದರು.

ವೈಜ್ಞಾನಿಕ ಕ್ರಿಯಾ ಯೋಜನೆ ರೂಪಿಸಿ



ಧಾರವಾಡ: ಹವಾಮಾನ ವೈಪರೀತ್ಯವು ಕೇವಲ ಜಾಗತಿಕ ಸಮಸ್ಯೆಯಲ್ಲ, ಅದು ಸ್ಥಳೀಯ ಮಟ್ಟದ ಜೀವನೋಪಾಯದ ಮೇಲೆಯೂ ಗಂಭೀರವಾದ ಪರಿಣಾಮ ಬೀರುತ್ತಿದೆ ಎಂದು ಜಿಲ್ಲಾ ಪಂಚಾಯತಿ ಸಿಇಒ ಭುವನೇಶ ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ನಗರದ ಜಿಪಂ ಭವನದಲ್ಲಿ ನಡೆದ ಹವಾಮಾನ ಬದಲಾವಣೆ ಕ್ರಿಯಾ ಯೋಜನೆ ಜಿಲ್ಲಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ, ಹವಾಮಾನ ಬದಲಾವಣೆ ಸವಾಲು ಎದುರಿಸಲು ವೈಜ್ಞಾನಿಕ ಮತ್ತು ಪ್ರಾಯೋಗಿಕ ಕ್ರಿಯಾ ಯೋಜನೆ ಅಗತ್ಯವಿದೆ ಎಂದರು.

ಅಭಿವೃದ್ಧಿ ಕಾರ್ಯಗಳ ಜೊತೆಗೆ ಪರಿಸರಸಂರಕ್ಷಣೆಗೆಆದ್ಯತೆನೀಡಬೇಕು. ಮಳೆ ಕೊರತೆ, ಅಕಾಲಿಕ ಮಳೆ ಮತ್ತು ಏರುತ್ತಿರುವ ತಾಪಮಾನವು ಕೃಷಿ ವಲಯದ ಮೇಲೆ ನೇರ ಪರಿಣಾಮ ಬೀರುತ್ತಿದೆ ಎಂದರು.

ಹವಾಮಾನ ಬದಲಾವಣೆ ಕಾರ್ಯಯೋಜನೆಯುಕೇವಲಒಂದು ಇಲಾಖೆಗೆ ಸೀಮಿತವಾಗಬಾರದು. ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಜಲಸಂಪನ್ಮೂಲ ಇಲಾಖೆಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು. ಜಿಲ್ಲೆಯ ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಮುಂದಿನ 10-20 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಸುಸ್ಥಿರ ಯೋಜನೆಗಳನ್ನು ಸಿದ್ಧಪಡಿಸುವಂತೆ ಭುವನೇಶ ಪಾಟೀಲ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಾಗಾರದಲ್ಲಿ ಡಾ.ರಾಜೇಂದ್ರ ಪೋದ್ದಾರ್, ಡಾ.ಪ್ರಕಾಶ ಭಟ್, ಡಾ.ಉಷಾ,

ಡಾ.ಬಿ.ಸರಿತ, ಜಗದಂಬಾ ಬಿ.ಆರ್., 34 ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಪರಿಸರ ತಜ್ಞರು ಮತ್ತು ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಇದ್ದರು.

» ಜಿಲ್ಲಾ ಮಟ್ಟದ ಕಾರ್ಯಾಗಾರ

» ಸಿಇಒ ಭುವನೇಶ ಸಲಹೆ

ಗ್ರಾಮಗಳಲ್ಲಿ ಜನಜಾಗೃತಿ

ಹವಾಮಾನ ಬದಲಾವಣೆ ದುಷ್ಪರಿಣಾಮಗಳ ಕುರಿತು ಗ್ರಾಮೀಣ ಮಟ್ಟದಲ್ಲಿಯೂ ಜಾಗೃತಿ ಮೂಡಿಸಬೇಕು ಎಂದ ಸಿಇಒ ಭುವನೇಶ ಪಾಟೀಲ ಅವರು ನೀರಿನ ಮಿತಬಳಕೆ, ಮರುಪೂರಣ, ಹಸಿರೀಕರಣದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಅವಶ್ಯಕತೆ ಒತ್ತಿ ಹೇಳಿದರು.

ಪ್ರಕೃತಿ ಮೇಲಿನ ಮಾನವನ ಅತಿಯಾದ ಹಸ್ತಕ್ಷೇಪವೇ ಇಂದಿನ ಹವಾಮಾನ ಏರುಪೇರಿಗೆ ಕಾರಣ. ಈಗಲೇ ಎಚ್ಚೆತ್ತುಕೊಂಡು ಕಾರ್ಯಪ್ರವೃತ್ತರಾಗದಿದ್ದರೆ ಮುಂದಿನ ಪೀಳಿಗೆಗೆ ಭೀಕರ ಪರಿಸ್ಥಿತಿ ಎದುರಾಗಲಿದೆ.

■ **ಭುವನೇಶ ಪಾಟೀಲ,** ಸಿಇಒ, ಜಿಪಂ, ಧಾರವಾಡ

ಪ್ರಮುಖ ಕಾಮಗಾರಿಗಳು ಅಪೂರ್ಣ: ಅಸಮಾಧಾನ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರದ ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಅನೇಕ ಕಾಮಗಾರಿಗಳು ಪೂರ್ಣಗೊಂಡು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಸಹಕಾರಿಯಾಗಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಆದರೆ, ಇನ್ನೂ ಹಲವು ಪ್ರಮುಖ ಕಾಮಗಾರಿಗಳು ಅಪೂರ್ಣವಾಗಿಯೇ ಉಳಿದಿರುವುದು ಸಾರ್ವಜನಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಕೆಸಿಸಿಐ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ನಿರಂತರ ಕುಡಿಯುವ ನೀರಿನ ಯೋಜನೆ, ಸ್ಮಾರ್ಟ್ ರಸ್ತೆಗಳ ಕಾಮಗಾರಿ, ಚರಂಡಿ ಹಾಗೂ ನಾಲಾ ಅಭಿವೃದ್ಧಿ ಕಾಮಗಾರಿ, ಕ್ರೀಡಾ ಸಂಕೀರ್ಣ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳು ವಿಳಂಬಗೊಳ್ಳುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ. ಅನೇಕ ಕಡೆಗಳಲ್ಲಿ ರಸ್ತೆಗಳನ್ನು ಮರುಮರು ತೋಡುತ್ತಿರುವ ಪರಿಣಾಮ ವಾಹನ ಸವಾರರು ಮತ್ತು ನಾಗರಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ, ಮಹಾನಗರ ಪಾಲಿಕೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಮನ್ವಯದೊಂದಿಗೆ ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಉಣಕಲ್ ಕೆರೆಯ ಅಭಿವೃದ್ಧಿ ಮತ್ತು ಸೌಂದರ್ಯೀಕರಣ ಕಾರ್ಯಗಳು ನಡೆದಿರುವುದು ಶ್ಲಾಘನೀಯವಾದರೂ,ಇತ್ತೀಚಿನ ದಿನಗಳಲ್ಲಿ ಅದರ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಕಂಡು ಬರುತ್ತಿರುವುದು ವಿಷಾದನೀಯ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ.

ಮಹಾನಗರ ಪಾಲಿಕೆ ಮತ್ತು ಸ್ಮಾರ್ಟ್ ಸಿಟಿ ಅಧಿಕಾರಿಗಳು ಉಣಕಲ್ ಕೆರೆಯ ಸುತ್ತಮುತ್ತ ನಿಯಮಿತ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ನಗರದ ಅಭಿವೃದ್ಧಿಗೆ ರೂಪಿಸಲಾದ ಸ್ಮಾರ್ಟ್ ಸಿಟಿ ಯೋಜನೆಯ ನಿಜವಾದ ಉದ್ದೇಶ ಜನಸಾಮಾನ್ಯರಿಗೆ ಉತ್ತಮ ಮೂಲಸೌಕರ್ಯ ಮತ್ತು ಸುಸಜ್ಜಿತ ನಾಗರಿಕ ಸೌಲಭ್ಯ ಒದಗಿಸುವುದಾಗಿದೆ. ಹೀಗಾಗಿ ಅಧಿಕಾರಿಗಳು ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವುದರ ಜೊತೆಗೆ ಈಗಾಗಲೇ ನಿರ್ಮಾಣಗೊಂಡಿರುವ ಸೌಲಭ್ಯಗಳ ಸಮರ್ಪಕ ನಿರ್ವಹಣೆಯ ಮೇಲೂ ಹೆಚ್ಚಿನ ಗಮನ ಹರಿಸಬೇಕೆಂದು ಗೌರವ ಕಾರ್ಯದರ್ಶಿ ಉದಯ ರೇವಣಕರ ಅವರು ತಿಳಿಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

ಹುಬ್ಬಳ್ಳಿ: ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯ(ನೀಟ್) ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.



ಗುರುವಾರ ಇಲ್ಲಿಯ ವಿದ್ಯಾನಗರ ಬಿ.ವಿ.ಬಿ ಕಾಲೇಜ್ ಎದುರಿಗೆ ಸಮಾವೇಶಗೊಂಡ ಪ್ರತಿಭಟನಾಕಾರರು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನೀಟ್ ಯುಜಿ-2026 ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳ ಆರೋಪಗಳ ಕುರಿತು ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿದರು.

ದೇಶದ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆ ಕುರಿತು ಆತಂಕ ಮತ್ತು ಅನಿಶ್ಚಿತತೆಯನ್ನು ಉಂಟು ಮಾಡಿದೆ. ವರ್ಷಪೂರ್ತಿ ಪರಿಶ್ರಮಪಟ್ಟು ತಯಾರಿ ನಡೆಸುವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲಿನ ಅನ್ಯಾಯವಾಗಿದೆ. ಹೀಗಾಗಿ ಈ ಸಂಪೂರ್ಣ ಪ್ರಕರಣದ ಕುರಿತು ಕೇಂದ್ರ ಸರಕಾರವು ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ನ್ಯಾಯಸಮ್ಮತ, ನಿಷ್ಪಕ್ಷಪಾತ ಹಾಗೂ ನಿಗದಿತ ಅವಧಿಯೊಳಗಿನ ತನಿಖೆಯನ್ನು ನಡೆಸಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯ ಕಾರ್ಯದರ್ಶಿ ದರ್ಶನ ಹೆಗಡೆ ಮಾತನಾಡಿ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನೀಟ್ ಪರೀಕ್ಷೆ ನಡೆಸಲು ಸಂಪೂರ್ಣ ವಿಫಲವಾಗಿದೆ. 2024 ರಲ್ಲಿ ಇದೇ ರೀತಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿತ್ತು. ಆಗಲೂ ಎಬಿವಿಪಿ ಹೋರಾಟ ಮಾಡಿ ತನಿಖೆಗೆ ಆಗ್ರಹಿಸಿತ್ತು ಎಂದು ತಿಳಿಸಿದರು.

ನೀಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಸಾಕಷ್ಟು ಪರಿಶ್ರಮ ಹಾಕಿ ಓದಿರುತ್ತಾರೆ. ಈಗ ಪರೀಕ್ಷೆಯಲ್ಲಿ ಅಕ್ರಮ ನಡೆದರೆ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಲಿದೆ. ಇನ್ನೂ ಅವರ ಪಾಲಕರಲ್ಲಿ ಆತಂಕ ಮೂಡಿದೆ. ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣಿಭೂತರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಎನ್‌ಟಿಎ ನಿರ್ದೇಶಕರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಧಾರವಾಡ ಜಿಲ್ಲಾ ಸಂಚಾಲಕ ಸಿದ್ಧಾರ್ಥ್ ಕೋರಿ, ನಗರ ಸಹ ಕಾರ್ಯದರ್ಶಿ ಮನೋಜ್ ವಾಲ್ಮೀಕಿ, ಲಕ್ಷ್ಮಣ್ , ಅನ್ಮೊಲ್, ಸುಜನ, ಲೋಕೇಶ್, ಇಶಿಕಾ ಇದ್ದರು.

ಧರಣಿ ಅಂತ್ಯಗೊಳಿಸಿದ ನಾಗರಾಜ ನಾಯಕ

ಅಂಕೋಲಾ: ಗೃಹ ಮಂತ್ರಿಗಳು ಬಂದು ಅಹವಾಲು ಆಲಿಸಬೇಕೆಂದು ಕಳೆದ 8 ದಿನಗಳಿಂದ ಧರಣಿ ಸತ್ಯಾಗ್ರಹ ಮತ್ತು 6 ದಿನಗಳಿಂದ ಅನ್ನನಿರಶನ ನಡೆಸುತ್ತಿದ್ದ ಬಿಜೆಪಿ ಪ್ರಮುಖ ವಕೀಲ ನಾಗರಾಜ ನಾಯಕ ಅವರು ಭಾರತೀಯ ಜನತಾ ಪಕ್ಷದ ಪ್ರಮುಖರ ಆಗ್ರಹ ಮತ್ತು ಕಾನೂನಾತ್ಮಕ ಹೋರಾಟಕ್ಕೆ ಬೆಂಬಲ ನೀಡುವ ಭರವಸೆಯೊಂದಿಗೆ ತಮ್ಮ ಧರಣಿ ಸತ್ಯಾಗ್ರಹವನ್ನು ನಿಲ್ಲಿಸಿದರು.

ತಾಲೂಕಿನ ವಂದಿಗೆಯಲ್ಲಿ ನಡೆದ ಹಿರಿಯ ಯಕ್ಷಗಾನ ಕಲಾವಿದರ ಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ತಾವು ಸಂಘಟಕರ ಆಹ್ವಾನದ ಮೇರೆಗೆ ಪಾಲ್ಗೊಂಡು ವೇದಿಕೆಯಲ್ಲಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಕೆಲವರು ಮಾತಿಗೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಬಯ್ದು ಹಲ್ಲೆಗೆ ಯತ್ನಿಸಿದರು ವಕಾಲತ್ತಿಗೆ ಸಂಬಂಧಿಸಿದ ಸಿಟ್ಟಿನಿಂದ ಈ ಕೃತ್ಯ ನಡೆಸಲಾಗಿದೆ ಎಂದು ನಾಗರಾಜ ನಾಯಕ ದೂರಿದ್ದರು. ರಾತ್ರಿ ಅಂಕೋಲಾ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಎಫ್.ಐ.ಆರ್ ದಾಖಲು ಮಾಡದೇ ದೂರು ನೀಡಲು ಹೋದವರ ಮೇಲೆ ಮರು ದೂರು ದಾಖಲಿಸುವ ಪ್ರಯತ್ನ ನಡೆದಿದೆ. ಕಾರ್ಯಕ್ರಮದಲ್ಲಿ ನಡೆದ ಘಟನೆಗೆ ಗೃಹ ಸಚಿವರ ಆಪ್ತ ಗೋಪಾಲಕೃಷ್ಣ ನಾಯಕ



ಅವರ ಚಿತಾವಣೆ ಇದೆ ಎಂದು ಆರೋಪಿಸಿ ನಾಗರಾಜ ನಾಯಕ ಧರಣಿ ಆರಂಭಿಸಿದ್ದರು.

ಧರಣಿಯ ಎಂಟನೇ ದಿನದಂದು ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಪ್ರಮುಖರುಗಳಾದ ಶಾಸಕ ದಿನಕರ ಶೆಟ್ಟಿ, ಶ್ರೀಕಾಂತ ಘೋಟ್ನೇಕರ್, ಅನಂತಮೂರ್ತಿ ಹೆಗಡೆ ಸೇರಿದಂತೆ ಬಿಜೆಪಿಯ ಪ್ರಮುಖರು ಭೇಟಿ ನೀಡಿ ನಿರಶನ ಅಂತ್ಯಗೊಳಿಸಲು ಆಗ್ರಹಿಸಿದ್ದು ಕಾನೂನಾತ್ಮಕ ಹೋರಾಟಕ್ಕೆ ಪಕ್ಷದ ವತಿಯಿಂದ ಸಂಪೂರ್ಣ ಬೆಂಬಲ ನೀಡುವ ಭರವಸೆ ನೀಡಿದ್ದರಿಂದ ನಾಗರಾಜ ನಾಯಕ ಅವರು ಧರಣಿ ಮತ್ತು ಅನ್ನ ನಿರಶನ ಕೈಬಿಟ್ಟರು.

ತಾಲೂಕಿನಲ್ಲಿ ನಡೆಯುತ್ತಿರುವ ಅನ್ಯಾಯ, ಅಕ್ರಮ ಚಟುವಟಿಕೆಗಳ ವಿರುದ್ಧ ತಮ್ಮ ಹೋರಾಟ ಮುಂದುವರಿಯಲಿದೆ ಎಂದು ನಾಗರಾಜ ನಾಯಕ ತಿಳಿಸಿದರು.

ಪ್ರವಾಸಿಗರ ರಕ್ಷಿಸಿದ ಜೀವರಕ್ಷಕ ಸಿಬ್ಬಂದಿ

ಗೋಕರ್ಣ: ಸಮುದ್ರ ಸುಳಿಗೆ ಸಿಲುಕಿ ಜೀವಾಪಾಯದಲ್ಲಿದ್ದ ಪ್ರವಾಸಿಗರನ್ನ ಜೀವ ರಕ್ಷಕ ಸಿಬ್ಬಂದಿ ರಕ್ಷಿಸಿದ ಘಟನೆ ಗುರುವಾರ ಸಂಜೆ ಓಂ ಕಡಲತೀರದಲ್ಲಿ ನಡೆದಿದೆ.

ಇಬ್ಬರು ಪ್ರವಾಸಿಗರು ನೀರಿನಲ್ಲಿ ಈಜಾಡಲು ತೆರಳಿದ ವೇಳೆ ಓರ್ವ ಸುಳಿಗೆ ಸಲುಕಿ ಅಪಾಯದಲ್ಲಿರುವುದನ್ನ ಗಮನಿಸಿದ ಕರ್ತವ್ಯದಲ್ಲಿದ್ದ ಜೀವರಕ್ಷಕ ಸಿಬ್ಬಂದಿಗಳಾದ ಹರೀಶ್ ಮೂಡಂಗಿ, ಮಂಜೇಶ ಹರಿಕಂತ್ರ ತಕ್ಷಣ ಧಾವಿಸಿ ಹರಸಾಹಸ ಮಾಡಿ ದಡಕ್ಕೆ ತಂದು ಜೀವ ಉಳಿಸಿದ್ದಾರೆ. ಮಧ್ಯಪ್ರದೇಶ ಮೂಲದ ಸಂಜಯ ಗುಪ್ತಾ (30) ರಕ್ಷಣೆಗೆ ಒಳಗಾದ ಪ್ರವಾಸಿಗನಾಗಿದಾದ್ದು ತನ್ನ ಗೆಳೆಯನೊಂದಿಗೆ ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದ. ತಮ್ಮ ಜೀವದ ಹಂಗು ತೊರೆದು



ಪ್ರವಾಸಿಗನ ಜೀವ ಉಳಿಸಿದ ಜೀರಕ್ಷಕ ಸಿಬ್ಬಂದಿಗೆ ಸಾರ್ವಜನಿಕರು ಪ್ರಶಂಸಿಸಿ ಅಭಿನಂದಿಸಿದ್ದಾರೆ. ಪ್ರಸ್ತುತ ಕಡಲ ಅಬ್ಬರವು ಹೆಚ್ಚಿದ್ದು, ನೀರಿಗಿಳಿಯದಂತೆ ಜೀವರಕ್ಷಕ ಸಿಬ್ಬಂದಿ ಹೇಳುತ್ತಿದ್ದರು ಇವರ ಮಾತು ಧಿಕ್ಕರಿಸಿ ನೀರಿಗಿಳಿದ್ದು, ಅದರಲ್ಲಿಯೂ ಕುಡಿತ ಮತ್ತಿನಲ್ಲಿದ್ದರು ಎಂದು ತಿಳಿದು ಬಂದಿದೆ.

ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್ ಪಲ್ಟಿ

ಹಾವೇರಿ: ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್ ಪಲ್ಟಿಯಾದ ಘಟನೆ ತಾಲೂಕಿನ ಹೊಸರಿತ್ತಿಯಿಂದ ನೆಗಳೂರು ಕಡೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಸಂಭವಿಸಿದೆ.

ಹಾವೇರಿಯಿಂದ ಕೋಡಬಾಳ ಮಾರ್ಗವಾಗಿ ಶಿರಹಟ್ಟಿಗೆ ಹೋಗುವ ಬಸ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ನೆಗಳೂರು ಗ್ರಾಮದ ಸಮೀಪ ರಸ್ತೆಯಲ್ಲಿ ಅಡ್ಡ ಬಂದ ಎಮ್ಮೆಗಳನ್ನು ಉಳಿಸಲು ಹೋಗಿದ್ದರಿಂದ ಈ ಘಟನೆ ಸಂಭವಿಸಿದೆ ಎಂದು ಚಾಲಕರು ಹೇಳುತ್ತಾರೆ. ಹೊಸರಿತ್ತಿಯಿಂದ ನೆಗಳೂರ ಕಡೆಗೆ ಹೋಗುವಲ್ಲಿ ರಸ್ತೆ ದುರಸ್ಥಿಯಾಗದ ಕಾರಣ ಮಣ್ಣನ್ನು ಮೇಲ್ಭಾಗದಲ್ಲಿ ಹಾಕಿಸಲಾಗಿದೆ. ಆದರೆ ಆ ಮಣ್ಣು ಸರಿಯಾಗಿ ಗಟ್ಟಿಯಾಗದ ಪರಿಣಾಮ ಚಾಲಕ ಬಸ್ಸನ್ನು ರಸ್ತೆ ಬದಿಗೆ ತೆಗೆದುಕೊಂಡಾಗ ಮಣ್ಣು ಏಕಾಏಕಿ ಕುಸಿತಗೊಂಡಿದ್ದರಿಂದ ಬಸ್ ಚಾಲಕನ ನಿಯಂತ್ರಣಕ್ಕೆ ಸಿಗದ ಪರಿಣಾಮ ಪಲ್ಟಿಯಾಗಿದೆ.



ಬಸ್‌ನಲ್ಲಿದ್ದ ಚಾಲಕ, ನಿರ್ವಾಹಕ ಸೇರಿದಂತೆ ಒಂಭತ್ತು ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಗಾಯಾಳು ಪ್ರಯಾಣಿಕರು ಸಮೀಪದ ನೆಗಳೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಗುತ್ತಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡು ಊರುಗಳಿಗೆ ತೆರಳಿದ್ದಾರೆ. ಈ ಕುರಿತು ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಕೋಟಾ ಬಸ್ ಸಂಚಾರ: ತಾಲೂಕಿನ ಗಡಿ ಭಾಗದಲ್ಲಿರುವ ಕೊಡಬಾಳ, ಮರಡೂರು, ಗೂಡುರು, ಗುಡಿಸಲಕೊಪ್ಪ, ಹಾಲಗಿ, ಮರೋಳ ಹೀಗೆ ಅನೇಕ ಗ್ರಾಮಗಳ ಜನರು ಎರಡ್ಮೂರು ದಶಕಗಳಿಂದ ಕೆಎಸ್ ಆರ್‌ಟಿಸಿ ಡಕೋಟಾ ಬಸ್‌ಗಳಲ್ಲಿಯೇ ಸಂಚರಿಸುತ್ತಿದ್ದಾರೆ. ಒಂದು ಟ್ರಿಪ್‌ಗೆ ಕನಿಷ್ಠ 100 ರಿಂದ 120 ಜನ ಪ್ರಯಾಣಿಕರು ಇರುತ್ತಾರೆ. ಗಡಿ ಭಾಗದ ಹಳ್ಳಿಗಳಿಗೆ ಹೋಗುವ ಜನರು ಜೋತು ಬಿದ್ದು ಹೋಗುತ್ತಾರೆ. ಅವಧಿ ಮೀರಿದ ಹಾಳಾದ ಬಸ್ಸುಗಳನ್ನೇ ಪುನಃ ಹಳ್ಳಿ ರಸ್ತೆಗೆ ಬಿಡುವುದರಿಂದ ಬಸ್ಸು ಯಾವಾಗ ಎಲ್ಲಿ ಕೆಟ್ಟು ನಿಲ್ಲುತ್ತೋ, ಯಾವಾಗ ಪಂಚರ್ ಆಗುತ್ತೋ ಎಂಬುದು ಗೊತ್ತಾಗಲ್ಲ. ಈ ಬಗ್ಗೆ ಸಂಬಂಧಿಸಿದ ಸಾರಿಗೆ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದ್ರೂ ಕೂಡ ಯಾವುದೇ ಪ್ರಯೋಜನ ಆಗುತ್ತಿಲ್ಲ ಎಂದು ಈ ಭಾಗದ ಸಾರ್ವಜನಿಕ ಪ್ರಯಾಣಿಕರು ಸಾರಿಗೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಸ್ತೆಯಲ್ಲಿದ್ದ ಗುಂಡಿ ತಪ್ಪಿಸಲು ಹೋಗಿ ಚಾಲಕ ಬಸ್ಸನ್ನು ಎಡಕ್ಕೆ ತಿರುವಿಸಿಕೊಂಡ ಪರಿಣಾಮ ಕೊಡಬಾಳ ಬಸ್ ಪಲ್ಟಿಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಬಗ್ಗೆ ಠಾಣೆಯಲ್ಲಿ ದೂರು ದಾಖಲಿಸಿ, ತನಿಖೆ ಮಾಡಿಸಲಾಗುತ್ತದೆ. ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

■ **ಅಶೋಕ ಪಾಟೀಲ,** ವಿಭಾಗೀಯ ಸಂಚಾರಿ ಸಾರಿಗೆ ಅಧಿಕಾರಿ, ಹಾವೇರಿ

IN THE COURT OF THE CIVIL JUDGE AND J.M.F.C. AT KUDLIGI
Crl. Misc. No. 536/2026

Between :
1. Smt. Durugamma D/o. late Kurubara Durugappa, aged about 65 years,
2. Revanna. K S/o late Kurubara Durugappa, aged about 63 years,
3. Veereshappa. K . S/o late Kurubara Durugappa, aged about 53 years,
4. Chandrappa. K. S/o late Kurubara Durugappa, aged about 47 years,
5. Ramesha.K. S/o late Kurubara Durugappa, aged about 43 years,
.....Petitioners

All are Hindus, agriculturists, R/o Kanamadagu village, in Kudligi Taluk, Vijayanagara District.

And

The Tahasildar Kudligi .....Respondent

SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of their deceased petitioner's father by name late Kurubara Durugappa s/o late Korajja Veerappa was died on 24-03-1994 at Kanamadagu village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 22-06-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 13-06-2026.

By Order of the court
Sd/- Chief Ministerial Officer
Civil Judge & J.M.F.C. at Kudligi
Sd/- Sri. H.G. Prakash Patil [HGP]
Advocate, Kudligi

IN THE COURT OF THE CIVIL JUDGE AND J.M.F.C. AT KUDLIGI
Crl. Misc. No. 2301/2025

Between:
1. Eshwaramma D/o late Nagappa wife of Siddappa, aged about 68 years,
2. Pushpakka D/o late Nagappa wife of Siddappa, aged about 66 years,
.....Petitioners

All are Hindus, agriculturists, R/o Koracharahatti Village. Kudligi Taluk Taluk, Vijayanagara District

And

The Tahasildar Kudligi .....Respondent

SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of petitioner mother by name Nagamma w/o late Korachara Nagappa was died on 18-07-1999 at Koracharahatti Village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 24-06-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 13-05-2026.

By Order of the court
Sd/- Chief Ministerial Officer
Civil Judge & J.M.F.C at kudligi
Sd/- Sri. H.G. Prakashpatil, Advocate, Kudligi

IN THE COURT OF THE CIVIL JUDGE AND J.M.F.C. AT KUDLIGI
Crl. Misc. No. 2302/2025

Between:
1) Eshwaramma D/o. late Nagappa wife of Siddappa, aged about 68 years,
2) Pushpakka D/o. late Nagappa wife of Siddappa, aged about 66 years,
.....Petitioners

All are Hindus, agriculturists, R/o Koracharahatti Village. Kudligi Taluk Taluk, Vijayanagara District

And

The Tahasildar Kudligi .....Respondent

SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of petitioner sister by name Venkatamma w/o late Doneppa was died on 18-06-2007 at Koracharahatti Village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 24-06-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 13-05-2026.

By Order of the court
Sd/- Chief Ministerial Officer
Civil Judge & J.M.F.C at kudligi
Sd/- Sri. H.G. Prakashpatil, Advocate, Kudligi

ಹೆಸರಿನಲ್ಲಿ ಬದಲಾವಣೆ

ನಾನು, ಶ್ರೀ ರಾಜಕುಮಾರ ತಂದೆ ಕಾಂತಪ್ಪ ತಳವಾರ, ಲೋಣಿ ಜಿ: ತಾ: ಇಚಿಡಿ, ಜಿಲ್ಲಾ: ವಿಜಯಪುರ, ನನ್ನ ಡ್ರೈವಿಂಗ ಲೈಸನ್ಸ ನಂ: ಕೆ. ಎ. 28-20120014951 ಹೊಂದಿದ್ದು ಇದ್ದು ಸದರಲ್ಲಿ ನನ್ನ ಹೆಸರು ರಾಜಶೇಖರ ಚಂದ್ರಕಾಂತ ತಳವಾರ ಅಂತಾ ಇದ್ದು ನನ್ನ ಜನನ ದಿನಾಂಕ: 01-08-1988 ಅಂತಾ ಇದ್ದು, ನನ್ನ ಆಧಾರ ಕಾರ್ಡ ಸಂಖ್ಯೆ: 8419 9417 0253 ನಲ್ಲಿ ನನ್ನ ಹೆಸರು ರಾಜಕುಮಾರ ಕಾಂತಪ್ಪ ತಳವಾರ ಅಂತಾ ಇದ್ದು ಇದ್ದು ನನ್ನ ಜನನ ದಿನಾಂಕ: 01-08-1986 ಅಂತಾ ಇದ್ದು, ನನ್ನ ಡ್ರೈವಿಂಗ ಲೈಸನ್ಸದಲ್ಲಿ ಹೆಸರು ಮತ್ತು ಜನನ ದಿನಾಂಕವನ್ನು ತೆಗೆದು ಹಾಕಿ ಸದರಿ ಜಾಗೆಯಲ್ಲಿ ಆಧಾರ ಕಾರ್ಡ ಪ್ರಕಾರ ತದ್ವುಪಡಿ ಮಾಡಿಕೊಳ್ಳಲು ಈ ಕುರಿತು ನಾನು ಶ್ರೀ. ಜಿ. ಕೆ ಇಂಡಿ, ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 14-05-2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.



ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ವಲಯ-2, ಹೆಚ್ಎಸ್ಆರ್ ವಿಭಾಗ, ಹೆಚ್ಎಸ್ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102.

ಸಂಖ್ಯೆ:ಬೆಂದನಪಾ/ಕಾಅ/ಹೆಚ್ಎಸ್ಆರ್ಡಿ/ಟೆಂಡರ್-04/2026-27 (2ನೇ ಕರೆ) ದಿನಾಂಕ: 14-05-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ-ಲಕೋಟೆ ಟೆಂಡರ್) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ-2, ಹೆಚ್ಎಸ್ಆರ್ ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಬೆಂದನ ಪಾಲಿಕೆಯಲ್ಲಿ ನೋಂದಾಯಿತರಾದ ಅಥವಾ ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ಬಿಡಬ್ಲ್ಯೂಎಸ್ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯ-2 ರಲ್ಲಿನ ವಿವಿಧ ಸ್ಥಳಗಳಲ್ಲಿ ಹೌಸ್ ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡುವುದು. (2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 295.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,95,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 15-05-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 20-05-2026 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್ಎಸ್ಆರ್ ವಿಭಾಗ, ಹೆಚ್ಎಸ್ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು – 560102 ಇಲ್ಲಿ ನಡೆಯುವುದು. 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 23-05-2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ. 4) ಟೆಂಡರ್‌ಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 25-05-2026 ರಂದು 16.30 ಗಂಟೆಯ ನಂತರ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್ಎಸ್ಆರ್ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಚ್ಎಸ್ಆರ್ ವಿಭಾಗ, ಬೆಂದನಪಾ.

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -2,3&4 ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ-04/2026-27 ದಿನಾಂಕ: 13.05.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಮಾಲೂರು ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443-ಠೇವಣಿ ವಂತಿಗೆ ಮತ್ತು 5054-ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಟ- ರೂ.50.00 ಲಕ್ಷಗಳು ಹಾಗೂ ಗರಿಷ್ಟ- ರೂ.150.00 ಲಕ್ಷಗಳು ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ**, ಕಾಲಾವಧಿ : 06 ತಿಂಗಳು ನಿರ್ವಹಿಸಲು **ಕೆಡಬ್ಲ್ಯು-2,3&4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು-2,3&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 27.05.2026 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.** ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **29.05.2026 ರಂದು ಬೆಳಿಗ್ಗೆ 11.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz., http://kppp.karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ. **ವಿಶೇಷ ಸೂಚನೆ:** ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:70/ಕೆಎಸ್ಎಂಸಿಎ/2026-27

CHANGE OF NAME

I, **MRUTTUNJAYA PHATTEPUR (Old Name)** R/o Junipeth Taluka, Ramdurg, Ramdurg-591123 have changed my name to **MRUTTUNJAYA SHREEDHAR PHATTEPUR (New Name)** Vide Affidavit Sworn Before Notary Shivalli M.A. on 13-05-2026

CHANGE OF NAME

I, **KHUSHNOOD GOUS JAMADAR (Old Name)** R/o Plot No. 6, Byali Plot, 4th Cross, Mantoor Road, Hubballi-580020 have changed my name to **KHUSHNOOD MOHAMMED IMTIYAZ MUNSHI (New Name)** Vide Affidavit Sworn Before Notary Shivalli M.A. on 12-05-2026

CHANGE OF NAME

I, **MEHBOOB BI KALAS (Old Name)** R/o #127, Altaf Nagar, Old Hubballi-580024 have changed my name to **MEHABOOB BI TADAS (New Name)** Vide Affidavit Sworn Before Notary Shivalli M.A. on 12-05-2026

CHANGE OF NAME

I, **VISHAL BORADE (Old Name)** as per my Educational Documents, R/o: Yelihadalagi-591248, Belagavi, have changed my name as **VISHAL TANAJI BORADE (New Name)** as per my KYC Documents, for all Purposes, Vide Affidavit Sworn Before Notary T.G.BALANNAVAR, at Hubballi on 13/05/2026

CHANGE OF NAME

I, **SHALINI RAMESH CHINNAMULAGUND** (Old Name) Resident of Noorani Galli, Hanagal, Haveri, Karnataka, Pin Code: 581104, have changed my name as **SHALINI CHINNAMULAGUNDA** (New Name) henceforth I will be called and recognized by new name for all future purposes, dated: 13/05/2026.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 487/2026

ಅರ್ಜಿದಾರರು : ಶ್ರೀಮತಿ ಸಂಗಮ್ಮನವರ ಸಣ್ಣ ಜೋಗಪ್ಪ, ವಯಸ್ಸು 51 ವರ್ಷ, ಸಾ॥ ಹೊಳಲು ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ಅಜ್ಜನಾದ ಬಸಪ್ಪ ಸಂಗಮ್ಮನವರ ತಂದೆ ಹಿರಿಯಪ್ಪ ಇವರು ದಿನಾಂಕ: 08-06-1985 ರಂದು ಹೊಳಲು ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 15/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 13/5/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ
ಹೂವಿನಹಡಗಲಿ
ಸಹಿ/- ಶ್ರೀ ಎಸ್.ಸುಭಾಸ್‌ಗೌಡ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್
ಉಪನಿರ್ದೇಶಕರು (ಆಡಳಿತ) ರವರ ಕಾರ್ಯಾಲಯ,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಕೊಡಿಯಾಲ್‌ಬೈಲ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ 575 003.
Phone: 0824 2492337 email: dknddahvs@gmail.com

ಸಂಖ್ಯೆ: ಉನಿಮಂ/ಪಪಾಇ/ಎ-2/ವಿವ-2/2026-27/156 ದಿನಾಂಕ: 14.05.2026

ಇ-ಟೆಂಡರ್ ಪ್ರಕಟಣೆ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ Veterinary Haemotology Analyser ಪೂರೈಸುವ ಸಂಬಂಧ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕ: 30/05/2026 ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. ಟೆಂಡರ್‌ನ ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/- ಉಪನಿರ್ದೇಶಕರು (ಆಡಳಿತ),
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಮಂಗಳೂರು, ದಕ್ಷಿಣ ಕನ್ನಡ.

DIPR/DK/KSMCA/207/26-27 dt. 14.05.2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಎಸ್.ಬಿ. ಜೈರಾಜ್ ಸಿಂಗ್, ವಾಸ ಫ್ಲಾಟ್ ನಂ.8, ಶ್ರೀ ಬಾಲಾಜಿ ಸದನ, ಬಸವೇಶ್ವರ ಬಡಾವಣೆ, ಹೊಸಪೇಟೆ-583 201, ಬಳ್ಳಾರಿ ಜಿಲ್ಲೆ, ಇವರು (1) ದಿನಾಂಕ 13.02.2008ರ ಮೂಲ ಕ್ರಯ ಪತ್ರ, ದಾಖಲೆ ನಂ. ABL-1-05114/2007-08, ಸಿಡಿ ನಂ. ABLD16 ನಲ್ಲಿ ಸಂಗ್ರಹಿಸಲಾಗಿದ್ದು, ಕರ್ನಾಟಕ ವಸತಿ ಮಂಡಳಿಯಿಂದ ಬರೆದುಕೊಡಲಾಗಿದ್ದು, ಸಬ್-ರಿಜಿಸ್ಟ್ರಾರ್ ಕಚೇರಿ, ಅತ್ತಿಬೆಲೆ, ಆನೇಕಲ್ ತಾಲ್ಲೂಕು, (2) ದಿನಾಂಕ 08.07.2007ರ ಹಂಚಿಕೆ ಪತ್ರ, (3) ಸ್ವಾಧೀನ ಪ್ರಮಾಣಪತ್ರ ಮತ್ತು (4) ದಿನಾಂಕ 04.08.2012ರಂದು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಇಗ್ಗಲೂರು ಬನಹಳ್ಳಿಯಲ್ಲಿ ಕರ್ನಾಟಕ ವಸತಿ ಮಂಡಳಿಯು ನೀಡಿದ ಖಾತಾ ಅನುಮೋದನೆ, ಬೆಂಗಳೂರಿನ ಸೂರ್ಯನಗರ ಯೋಜನೆಯ ಐದನೇ ಮಹಡಿಯಲ್ಲಿ, ಕರ್ನಾಟಕ ವಸತಿ ಮಂಡಳಿಯು ಅಭಿವೃದ್ಧಿಪಡಿಸಿದ ನಂ.503 HB-6, 3BHK-6 ಹೊಂದಿರುವ ಅಪಾರ್ಟ್‌ಮೆಂಟ್‌ನ ಶೀರ್ಷಿಕೆಗೆ ಸಂಬಂಧಿಸಿದ ದಾಖಲೆಗಳು ಕಳೆದುಹೋಗಿದೆ. ಇದರ ವಿಚಾರವಾಗಿ ಅವರು ದಿನಾಂಕ 04.09.2025ರಂದು ನ್ಯಾಯವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಯಾರಿಗಾದರು ಮೇಲ್ಕಂಡ ದಾಖಲೆಗಳು ಸಿಕ್ಕಲ್ಲಿ ಅಥವಾ ತಮ್ಮ ವಶದಲ್ಲಿದ್ದರೆ ಕೂಡಲೆ ನನ್ನ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಬಿ. ಸುಬ್ರಾಯ ಪಾರ್ಥಿ, ವಕೀಲರು
ನಂ.231, 11ನೇ ಮೈನ್, 37ನೇ ಅಡ್ಡರಸ್ತೆ,
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು.

CHANGE OF NAME

I, **BAKKIALAKSHMI P** (Old Name) Resident of No: 5, Chavan Plot, Priya Darshini Colony Gokul Road, Gokul Hubli - 580030, have changed my name as **BAKKIALAKSHMI** (New Name) henceforth I will be called and recognized by new name for all future purposes, dated: 13/05/2026.

CHANGE OF NAME

I, **MOHAMMED ANUS PATHAN** (Old Name) Resident of Ambewadi Dandeli Hasamnal Dandeli 581325 (address), have changed my name as **MOHAMMED ANUS ASHFAQ PATHAN** (New Name) henceforth I will be called and recognized by new name for all future purposes, dated: 13/05/2026.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ
ದೂರವಾಣಿ: (ಕಛೇರಿ) 08254-230349 ಫ್ಯಾಕ್ಸ್: 232720
ಈ-ಮೇಲ್: kpurforest@yahoo.com, dcfknd@aranya.gov.in

ಸಂ.ಸ.ಅ.ಸಂ./ವಿವ-04/ಇ-ಟೆಂಡರು/2026-27 ದಿನಾಂಕ: 05-05-2026

ಸಂಕ್ಷಿಪ್ತ ಇ-ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಉಪ ವಿಭಾಗದಲ್ಲಿ 2026-27ನೇ ಸಾಲಿನಲ್ಲಿ K-SHORE ಯೋಜನೆಯಡಿ ನದಿ ತೀರದ ನೆಡುತೋಪು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಪೂರಕ ಕೆಲಸಗಳನ್ನು ಕೈಗೊಳ್ಳಲು ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ-ಟೆಂಡರನ್ನು ದಿನಾಂಕ: 18-05-2026 ರಂದು ಸಂಜೆ 4.00 ರವರೆಗೆ ಆಹ್ವಾನಿಸಲಾಗಿದೆ.

ಒಂದು ವೇಳೆ ಸದ್ರಿ ದಿನಾಂಕದಂದು ಯಾವುದೇ ಟೆಂಡರ್ ಬಾರದೇ ಇದ್ದಲ್ಲಿ, ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಮರು ಟೆಂಡರನ್ನು ದಿನಾಂಕ: 05-06-2026 ರಂದು ಸಂಜೆ 4.00 ವರೆಗೆ ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ. ದೂರವಾಣಿ ಸಂ: 08254: 230349 ಫ್ಯಾಕ್ಸ್: 232720

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು,
ಕುಂದಾಪುರ ವಿಭಾಗ, ಕುಂದಾಪುರ.

ವಾಸಾಇ/ಸನಿಉ/ಕೆಎಸ್ಎಂಸಿಎ/91/26-27 ದಿ: 14-05.2026

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 377/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 485/2026

ಅರ್ಜಿದಾರರು : ಶ್ರೀ ದ್ಯಾಮಪ್ಪ ತೋಟ್ರ ತಂದೆ ಹೊನ್ನಪ್ಪ ಟಿ., ವಯಸ್ಸು 83 ವರ್ಷ, ಸಾ॥ ಹೊಳಲು ಗ್ರಾಮ, ಹೂವಿನಹಡಗಲಿ ತಾಲೂಕು ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

ಕ್ರ.ಸಂ.	ಹೆಸರು	ಮರಣ ದಿನಾಂಕ	ಸಂಬಂಧ	ಮರಣ ಸ್ಥಳ:
1	ತೋಟ್ರ ಹೊನ್ನಪ್ಪ ತಂದೆ ಮಲ್ಲಪ್ಪ	06-05-1984	ತಂದೆ	ಹೊಳಲು
2	ತೋಟ್ರ ಚನ್ನಮ್ಮ ಗಂಡ ಹೊನ್ನಪ್ಪ	05-06-1989	ತಾಯಿ	ಹೊಳಲು

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 03/06/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 13/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಎಸ್.ಸುಭಾಸ್‌ಗೌಡ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

CHANGE OF NAME

I, **BABAJAN MOHIYODDIN SAHEB BAGEWADI** (Old Name) Resident of H No 39/A Bapuji Colony Near Masjid E Aqsa Anand Nagar Hubli 580024 (address), have changed my name as **BABAJANA BAGEWADI** (New Name) henceforth I will be called and recognized by new name for all future purposes, dated: 13/05/2026.

CHANGE OF NAME

I, **MASIRA PATHAN** (Old Name) Resident of Ambewadi Dandeli Hasamnal Dandeli 581325 (address), have changed my name as **MASIRA ASHFAQ PATHAN** (New Name) henceforth I will be called and recognized by new name for all future purposes, dated: 13/05/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN : U31401KA2002SGC030437)
ಅಧಿಕ್ಷಕ ಅಭಿಯಂತರರು (ವಿ), ಟೆಂಡರಿಂಗ್ & ಪ್ರೊಕ್ಯುರ್‌ಮೆಂಟ್,
ಗೋಪನಕೊಪ್ಪ, ಹುಬ್ಬಳ್ಳಿ – 580 023, ದೂ. : 94482 77602.
ಮಿಂಚಂಚೆ : seetp.hescom@gmail.com, seetp@hescom.co.in

ಸಂಖ್ಯೆ : ಹು.ವಿ.ಸ.ಕಂ.ನಿ./ಅ.ಇಂ.(ಟಿ&ಪಿ)/ಇ-(7)/ಎ.ಇ.ಇ.-2/2026-27/ ಸಿ.ವೈ.ಎಸ್.-1460 ದಿನಾಂಕ : 13-05-2026

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹು.ವಿ.ಸ.ಕಂ.ನಿ., ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ.-ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ-ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

Particulars : 1) ಸಿ-ಟೈಪ್ ವೆಡ್ಜ್ ಕನೆಕ್ಟರ್ ಪೂರೈಕೆ ಮಾಡುವುದು. Enq.No. : HESCOM/2026-27/IND0174, 2) ಟ್ರಾನ್ಸ್ ಫಾರ್ಮರ್ ಪ್ರೊಟೆಕ್ಷನ್ ಬೂಟ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0176, 3) ಪೊಟೆನ್ಷಿಯಲ್ ಡಿಟೆಕ್ಟರ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0177.

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್‌ನ್ನು ದಿನಾಂಕ : 14-05-2026 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/- ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರಮೆಂಟ್,
ಹು.ವಿ.ಸ.ಕಂ.ನಿ., ನವನಗರ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/173/ಮಣಿಪಾಲ್/2026-27

IN THE COURT OF THE CIVIL JUDGE AND J.M.F.C. AT KUDLIGI
Crl. Misc. No. 537/2026

Between :
1. Smt. Durugamma D/o. late Kurubara Durugappa, aged about 65 years,
2. Revanna. K S/o late Kurubara Durugappa, aged about 63 years,
3. Veereshappa. K . S/o late Kurubara Durugappa, aged about 53 years,
4. Chandrappa. K. S/o late Kurubara Durugappa, aged about 47 years,
5. Ramesha.K. S/o late Kurubara Durugappa, aged about 43 years,
.....Petitioners

All are Hindus, agriculturists, R/o Kanamadagu village, in Kudligi Taluk, Vijayanagara District.

And

The Tahasildar Kudligi .....Respondent

SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of their deceased petitioner's mother by name late Kurubara Veeramma w/o late Kurubara Durugappa was died on 20-02-2012 at Kanamadagu village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 22-06-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 20-04-2026.

By Order of the court
Sd/- Chief Ministerial Officer
Civil Judge & J.M.F.C. at Kudligi
Sd/- Sri. H.G. Prakash Patil [HGP]
Advocate, Kudligi

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 484/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 486/2026

ಅರ್ಜಿದಾರರು : ಶ್ರೀಮತಿ ಜಗ್ಗಿನ ಮಾಳಪ್ಪ ಗಂಡ ಲೇಟ್ ಲಕ್ಕಪ್ಪ, ವಯಸ್ಸು 73 ವರ್ಷ, ಸಾ॥ ಹೊಳಲು ಗ್ರಾಮ, ಹೂವಿನಹಡಗಲಿ ತಾಲೂಕು ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

ಕ್ರ.ಸಂ.	ಹೆಸರು	ಮರಣ ದಿನಾಂಕ	ಸಂಬಂಧ	ಮರಣ ಸ್ಥಳ:
1	ಜಗ್ಗಿನ ಕಾಳಪ್ಪ ತಂದೆ ಬಿಳ್ಳಪ್ಪ	01-06-1950	ಮಾವ	ಹೊಳಲು
2	ಈರಮ್ಮ ಗಂಡ ಜಗ್ಗಿನ ಕಾಳಪ್ಪ	01-07-1958	ಅತ್ತೆ	ಹೊಳಲು

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 15/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 13/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಎಸ್.ಸುಭಾಸ್‌ಗೌಡ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

IN THE COURT OF THE CIVIL JUDGE AND J.M.F.C. AT KUDLIGI
Crl. Misc. No. 2178/2025

Between:
Smt. H. Reshma & Others .....Petitioners

And

The Chief Officer Town Panchayath Kotturu .....Respondent

SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of petitioner deceased Husband by name H.Mehabub Sab S/o H.Nabi Sab was died on 27-10-2023 at Kotturu Town, in Kotturu Taluk, and Vijayanagara District. On the file of the civil Judge & JMFC at Kudligi, The Chief Officer town Panchayath Kotturu is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 11-08-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 10-04-2026.

By Order of the court
Sd/- Chief Ministerial Officer
Civil Judge & J.M.F.C at kudligi
Sd/- Sri. K.Naganagouda, Advocate, Kudligi

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2026-27/ಐ.ಎಫ್.ಟಿ.ಸಂ.23/675 ದಿನಾಂಕ: 13-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ-ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಫರ್ಮ್ / ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಹೆಸರು: **1) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ 75 ವರ್ಷದ ಪ್ಲಾಟಿನಂ ಜುಬಿಲಿ ಸಮಾರಂಭದ ಸಂದರ್ಭದಲ್ಲಿ ಗಣ್ಯರು, ಮುಖ್ಯ ಅತಿಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಉಪಹಾರ, ತಿಂಡಿ, ಮಧ್ಯಾಹ್ನ ಭೋಜನ ಒದಗಿಸುವ ಮೊತ್ತ ರೂ. 61,91,000/- (ತೆರಿಗೆ ರಹಿತ) ಮತ್ತು 2) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ ಪ್ಲಾಟಿನಂ ಜುಬಿಲಿ ಸಮಾರಂಭದ ಕಾರ್ಯಕ್ರಮಕ್ಕೆ ವೇದಿಕೆಯ ಸೆಟ್‌ಅಪ್ ಜರ್ಮನ್ ಟೆಂಟ್, ವೇದಿಕೆಯ ವಿನ್ಯಾಸ, ಆಸನ ವ್ಯವಸ್ಥೆ, ಗೋಡೆಗಳಿಗೆ ಎಲ್.ಇ.ಡಿ. ಬೆಳಕಿನ ವ್ಯವಸ್ಥೆ ಮತ್ತು ಸೌಂಡ್ ಸಿಸ್ಟಮ್ ವ್ಯವಸ್ಥೆಯನ್ನು ಒದಗಿಸುವ ಮೊತ್ತ ರೂ. 96,66,000/- (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು https://kppp.kanataka.gov.in ವೆಬ್‌ಸೈಟ್ ಮೂಲಕ ದಿನಾಂಕ: 13-05-2026 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾಸಾಸಂಇ/ಬೆಳಗಾವಿ/248/ಆಡ್ವಟೋರ್/2026-27

ಪುರಸಭೆ ಕಾರ್ಯಾಲಯ ತಾಳಿಕೋಟಿ

ಕ್ರ.ಸ.ಪುಸತಾ/ವಾರ್ಷಿಕ ಲೀಲಾವು/2025-26 ದಿನಾಂಕ: 14/05/2026

ಜಾಹೀರ ಲೀಲಾವು ಪ್ರಕಟಣೆ

ತಾಳಿಕೋಟಿ ಪಟ್ಟಣದ ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಯಪಡಿಸುವದೇನೆಂದರೆ. ತಾಳಿಕೋಟೆ ಪುರಸಭೆಯಿಂದ ಈ ಕೆಳಗೆ ಕಾಣಿಸಿದ ಬಜಾರ ಫೀ ವಸೂಲಿ ಜಾಹೀರ ಲೀಲಾವನ್ನು ದಿನಾಂಕ: 01-06-2026 ರಿಂದ ದಿನಾಂಕ: 31-03-2027 ವರೆಗೆ ವಸೂಲಿ ಮಾಡುವ ಕುರಿತು ಬಹಿರಂಗ ಹರಾಜು ಮೂಲಕ ನೀಡಲಾಗುವುದು.

ಕಾರಣ ಲೀಲಾವಿನಲ್ಲಿ ಭಾಗವಹಿಸುವರು ಲೀಲಾವಿನ ಷರತ್ತುಗಳಿಗೆ ಭಾದ್ಯಸ್ಥರಿದ್ದ ಬಗ್ಗೆ ಒಪ್ಪಿಗೆ ನೀಡಿ ಸಂತೇ ಕರ ಲೀಲಾವಿನಲ್ಲಿ ಭಾಗವಹಿಸುವವರು ದಿನಾಂಕ: 26-05-2026 ಬೆಳಗ್ಗೆ 11.00 ಘಂಟೆ ಒಳಗೆ ಇ.ಎಂ.ಡಿ. ಹಣವನ್ನು ಮುಖ್ಯಾಧಿಕಾರಿಗಳು ಪುರಸಭೆ ತಾಳಿಕೋಟಿ ಇವರ ಹೆಸರಿನಲ್ಲಿ ಡಿಡಿ ಮುಖಾಂತರ ರೂ. 50.000/- ಗಳನ್ನು ತುಂಬಿ ಲೀಲಾವಿನಲ್ಲಿ ಭಾಗವಹಿಸತಕ್ಕದ್ದು ಇ.ಎಂ.ಡಿ ಹಣ ತುಂಬಿದವರಿಗೆ ಮಾತ್ರ ಲೀಲಾವಿನಲ್ಲಿ ಬಾಗವಹಿಸಲು ಅವಕಾಶ ನೀಡಲಾಗುವುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಾರ್ಯಾಲಯದ ವೇಳೆ ಕಂದಾಯ ವಿಭಾಗದಲ್ಲಿ ಪಡೆಯಬಹುದು ಮತ್ತು ಹರಾಜಿನಲ್ಲಿ ಕರಾರುಗಳನ್ನು ಹರಾಜಿನ ಕಾಲಕ್ಕೆ ಓದಿ ಹೇಳಲಾಗುವುದು.

ವಿವರ	ಹರಾಜು ನಡೆಯುವ ಸ್ಥಳ	ಡಿಪಾಜಿಟ್ ಮೊತ್ತ	ದಿನಾಂಕ ಮತ್ತು ಸಮಯ	ಕನಿಷ್ಠ ಮಾಗಣಿ ಮಾಡಬೇಕಾದ ಮೊತ್ತ
ಪುರಸಭೆ ಹದ್ದಿನಲ್ಲಿ ಬರುವ ರಸ್ತೆ ಬದಿ ಕುಳಿತ ವ್ಯಾಪಾರ ಮಾಡುವವರಿಂದ ದಿನಾಂಕ: 01-06-2026 ರಿಂದ 31-03-2027 ರ ವರೆಗೆ ಬಜಾರ ಫೀ ವಸೂಲಿ ಮಾಡಲು ಮುಕ್ತ ಲೀಲಾವು.	ನೂತನ ಪುರಸಭೆ ಕಾರ್ಯಾಲಯದ ಸಭಾಂಗಣ	50,000/-	ದಿನಾಂಕ: 26-05-2026 ಮುಂಜಾನೆ 11.30 ಘಂಟೆಗೆ	ರೂ. 7,50,000/-

ಸಹಿ/- ಆಢಳಿತಾಧಿಕಾರಿಗಳು,
ಪುರಸಭೆ ತಾಳಿಕೋಟಿ

ಸಹಿ/- ಮುಖ್ಯಾಧಿಕಾರಿಗಳು,
ಪುರಸಭೆ ತಾಳಿಕೋಟಿ

ಲೋಕೋಪಯೋಗಿ ಇಲಾಖೆ,
ತುಮಕೂರು,

ಕ್ರಸಂ:ಕಾಇಂ:ಲೋಇವಿ:ತುಮ:ಕಿಇಂ-3: ಟೆಂಡರ್ 12:2026-27. ದಿನಾಂಕ:12-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 12/2026-27 ದಿನಾಂಕ 12-05-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **12/2026-27** ದಿನಾಂಕ **12-05-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ** ಅಡಿಯಲ್ಲಿ 01 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ **ರೂ. 117.34 ಲಕ್ಷಗಳು** ಇ.ಎಂ.ಡಿ ಮೊತ್ತ **ರೂ. 2,00,000/-** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 09 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ **ಕೊನೆ ದಿನಾಂಕ ಮತ್ತು ವೇಳೆ: 18-05-2026 ರ 17-00 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 12-05-2026 ರಿಂದ 19-05-2026 ರ 16-00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು **ಕೊನೆಯ ದಿನಾಂಕ ಮತ್ತು ವೇಳೆ: 19-05-2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು **ತೆರೆಯುವ ದಿನಾಂಕ ಮತ್ತು ವೇಳೆ: 20-05-2026ರ 16-30 ಗಂಟೆಗೆ,** ಆರ್ಥಿಕ ಬಿಡ್ ಅನ್ನು **ತೆರೆಯುವ ದಿನಾಂಕ ಮತ್ತು ವೇಳೆ: 21-05-2026ರ 17-00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-31/26-27/Oysters

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ-571313.

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್

ಪ್ರಕಟಣೆ ಸಂಖ್ಯೆ-04/2026-27, ದಿನಾಂಕ :- 13-05-2026 (ದ್ವಿಲಕೋಟೆ ಪದ್ಧತಿ)

★★★★

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ಚಾಮರಾಜನಗರ ತಾಲ್ಲೂಕಿನ ಶಿಕ್ಷಣ ಇಲಾಖೆಯ ಅನುದಾನ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-3 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ:- 14-05-2026 ರಿಂದ ದಿನಾಂಕ: 02-06-2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿನಾಂಕ: 25-05-2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:-04-06-2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.


ಕ್ರ. ಸಂ.	ಕಾಮಗಾರಿ ಹೆಸರು / ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್ ಮೆಂಟ್ ಮೊಬಲಗು (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	ಕೊಳ್ಳೆಗಾಲ ಸರ್ಕಾರಿ ನ್ಯಾ.ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಂಥಾಲಯ ಕೊಠಡಿ ನಿರ್ಮಾಣ ಮತ್ತು ಸುತ್ತಗೋಡೆ ನಿರ್ಮಾಣ ಕಾಮಗಾರಿ (02ನೇ ಕರೆ)	75.00	-	62297.00	3ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ. 08226-223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಮೊಬೈಲ್ ಸಂಖ್ಯೆ :- ಸ.ಇಂ. 8073339806

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾನಗರ : 108 : 2026-27



ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್

ಕ್ಲಾಸೆನ್ (ಹೈದರಾಬಾದ್) 508 ರನ್

ಭುವನೇಶ್ವರ್ (ಬೆಂಗಳೂರು) 22 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	12	8	4	0	16	+1.065
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	11	6	4	1	13	+0.428
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ದಿಲ್ಲಿ	12	5	7	0	10	-0.993
ಕೆಕೆಆರ್	11	4	6	1	9	-0.198
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕಿರುಸುದ್ದಿ

ಜೂ. ಹಾಕಿ ತಂಡಕ್ಕೆ ಫ್ರೆಡೆರಿಕ್ ಕೋಚ್

ಹೊಸದಿಲ್ಲಿ: ರಾಷ್ಟ್ರೀಯ ಜೂನಿಯರ್ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಆಗಿ ಫ್ರೆಂಚ್ ಆಟಗಾರ ಫ್ರೆಡೆರಿಕ್ ಸೋಯೆಜ್ ಅವರನ್ನು ನೇಮಕ ಮಾಡಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಪಿ.ಆರ್. ಶ್ರೀಜೇಶ್ ಅವರಿಗೆ ದೊಡ್ಡ ಶಾಕ್ ನೀಡಿದೆ. ಮಾಜಿ ಸ್ಟಾರ್ ಗೋಲ್‌ಕೀಪರ್ ಆಗಿದ್ದ ಶ್ರೀಜೇಶ್ ಅವರನ್ನು ಕಳೆದ ವರ್ಷ ಚೆನ್ನೈ ಮತ್ತು ಮಧುರೈನಲ್ಲಿ ನಡೆದ ಎಫ್‌ಐಎಚ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತ ಕಂಚಿನ ಪದಕ ಗೆಲ್ಲಲು ಕಾರಣರಾದ ನಂತರ, ಅವರ ಒಪ್ಪಂದದ ಅವಧಿ ಮುಗಿದ 17 ತಿಂಗಳ ನಂತರ ಅವರನ್ನು ಕೆಳಗಿಳಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ಪಂದ್ಯಾವಳಿಗಳಲ್ಲಿ ಐದು ಪದಕಗಳನ್ನು ಗೆದ್ದಿದ್ದರೂ ತಮ್ಮ ಅಧಿಕಾರಾವಧಿ ಕೊನೆಗೊಂಡಿದೆ ಎಂದು ಶ್ರೀಜೇಶ್ ತಮ್ಮ ಹತಾಶೆ ಹೊರಹಾಕಿದ್ದಾರೆ. ಆದರೆ 2036 ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸುವ ಭಾರತದ ಮಹತ್ವಾಕಾಂಕ್ಷೆಗಳಿಗೆ ಅನುಗುಣವಾಗಿ ಸುಸ್ಥಿರ ಉನ್ನತ-ಕಾರ್ಯಕ್ಷಮತೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ದೀರ್ಘಾವಧಿಯ ದೃಷ್ಟಿಕೋನವನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಾಕಿ ಇಂಡಿಯಾ ವಾದಿಸಿದೆ. ಯುರೋಪಿಯನ್ ಹಾಕಿಯಲ್ಲಿ ಅತ್ಯಂತ ಸಾಧನೆಗೈದ ತರಬೇತುದಾರರಲ್ಲಿ ಒಬ್ಬರಾದ ಸೋಯೆಜ್, ಫ್ರಾನ್ಸ್‌ಗೆ 15 ವರ್ಷ ಅಂತರರಾಷ್ಟ್ರೀಯ ಆಟಗಾರನಾಗಿ ಮತ್ತು 15 ವರ್ಷಗಳಿಗೂ ಹೆಚ್ಚು ಕಾಲ ಉನ್ನತ ಮಟ್ಟದಲ್ಲಿ ಮುಖ್ಯ ಕೋಚ್ ಆಗಿ ಮೂರು ದಶಕಗಳಿಗೂ ಹೆಚ್ಚು ಕಾಲದ ಗಣ್ಯ ತರಬೇತಿ ಅನುಭವವನ್ನು ಹೊಂದಿದ್ದಾರೆ.

ಪ್ರಜ್ಞಾನಂದಗೆ ಅಲಿರೆಝಾ ಎದುರಾಳಿ



ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಬುಖಾರೆಸ್ಟ್ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ ವಿರುದ್ಧ ಆಡಲಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್ ಈ ವರ್ಷದ ಕ್ಲಾಸಿಕಲ್ ಮಾದರಿಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ, ಟೂರ್ನಿಯಲ್ಲಿ ಭಾರತದಿಂದ ಏಕೈಕ ಆಟಗಾರನಾಗಿ ಪ್ರಜ್ಞಾನಂದ ಸ್ಪರ್ಧಿಸುತ್ತಿದ್ದಾರೆ. 10 ಆಟಗಾರರ ರೌಂಡ್-ರಾಬಿನ್ ಮಾದರಿಯ ಈ ಟೂರ್ನಿಯಲ್ಲಿ ಅವರಿಗೆ ಒಂಬತ್ತು ಸುತ್ತುಗಳಲ್ಲಿ ಐದು ಬಾರಿ ಬಿಳಿ ಗೂಟಗಳೊಂದಿಗೆ ಆಡಲು ಅವಕಾಶ ದೊರೆತಿದೆ. ಟೂರ್ನಿಯ ಒಟ್ಟು ಬಹುಮಾನ ಮೊತ್ತ 3.5 ಲಕ್ಷ ಅಮೆರಿಕನ್ ಡಾಲರ್ ಆಗಿದ್ದು, ಹೆಚ್ಚುವರಿಯಾಗಿ 1.25 ಲಕ್ಷ ಡಾಲರ್ ಬೋನಸ್ ಕೂಡ ಇದೆ. ಚಾಂಪಿಯನ್‌ಗೆ 1 ಲಕ್ಷ ಡಾಲರ್ ಬಹುಮಾನ ಸಿಗಲಿದೆ. ಏಪ್ರಿಲ್‌ನಲ್ಲಿ ನಡೆದ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸಾಧಾರಣ ಪ್ರದರ್ಶನ ನೀಡಿದ್ದ ಪ್ರಜ್ಞಾನಂದ ಇದೀಗ ವಿಶ್ವ ರ್‍ಯಾಂಕಿಂಗ್‌ನ ನೇರ ಪಟ್ಟಿಯಲ್ಲಿ 16ನೇ ಸ್ಥಾನಕ್ಕೆ ಕುಸಿದಿದ್ದಾರೆ. ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಮರಳಿ ಲಯ ಕಂಡುಕೊಳ್ಳುವ ನಿರೀಕ್ಷೆಯಿದೆ. ಅಮೆರಿಕದ ಫ್ಯಾಬಿಯಾನೊ ಕಾರುವಾನಾ ಅಗ್ರ ಶ್ರೇಯಾಂಕಿತರಾಗಿ ಟೂರ್ನಿಗೆ ಪ್ರವೇಶಿಸಿದ್ದು, ಮೊದಲ ಸುತ್ತಿನಲ್ಲಿ ನೆದರ್‌ಲ್ಯಾಂಡ್ಸ್‌ನ ಜೋರ್ಡನ್ ವಾನ್ ಫೊರೆಸ್ಟ್ ಅವರನ್ನು ಎದುರಿಸಲಿದ್ದಾರೆ. ಇತ್ತೀಚೆಗೆ ನಡೆದ ಟೆ ಪೆ ಸಿಗೇಮನ್ ಟೂರ್ನಿಯಲ್ಲಿ ವಿಶ್ವ ನಂ. 1 ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದ್ದ ವಾನ್ ಫೊರೆಸ್ಟ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಗುಕೇಶ್ ಹಿಂದೆ ಸರಿದ ಬಳಿಕ ಅವರ ಸ್ಥಾನವನ್ನು ಉಜ್ಬೆಕಿಸ್ತಾನದ ಜಾವೊಖಿರ್ ಸಿಂದಾರೋವ್‌ಗೆ ನೀಡಲಾಗಿತ್ತು. ಬಳಿಕ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಸಿಂದಾರೋವ್, ಈ ವರ್ಷದ ಕೊನೆಯಲ್ಲಿ ಗುಕೇಶ್ ವಿರುದ್ಧ ವಿಶ್ವ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಅರ್ಹತೆ ಗಿಟ್ಟಿಸಿಕೊಂಡರು.

ದಾಖಲೆಗಳ ಸುರಿಮಳೆಗೈದ ವಿರಾಟ್ | ಕೆಕೆಆರ್‌ಗೆ ಸೋಲು | ಆರ್‌ಸಿಬಿ ಪ್ಲೇಆಫ್ ಹಾದಿ ಸುಗಮ

ರಾಯ್ಪುರದಲ್ಲಿ ವಿರಾಟ್ ಕೊಹ್ಲಿ ನಂ.1 ಆಟ

ರಾಯ್ಪುರ: ನಂಬರ್ 1 ಸ್ಥಾನದ ಗುರಿಯಿಟ್ಟು ಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲಖನೌ ಸೂಪರ್ ಜೇಂಟ್ಸ್ ತಂಡದ ವಿರುದ್ಧ ಸೋತಿತು. ಮುಂಬೈ ವಿರುದ್ಧವೂ ಬ್ಯಾಟಿಂಗ್ ಕುಸಿತ ಕಂಡ ನಂತರ ಕೊನೆಯ ಓವರ್ ಥ್ರಿಲ್ಲಿಂಗ್‌ನಲ್ಲಿ ಗೆದ್ದಿತ್ತು. ಇದೇ ಸಮಯದಲ್ಲಿ ಕೊಹ್ಲಿ ಎರಡು ಶೂನ್ಯ ಸುತ್ತಿದ್ದರು. ಅತ್ತ ಗೆಲ್ಲಬೇಕಿದ್ದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 193 ರನ್ ಗುರಿ ಕೊಟ್ಟಿತು. ದೊಡ್ಡ ಗುರಿ ಬೆನ್ನತ್ತಿದ ಆರ್‌ಸಿಬಿಗೆ ಆಸರೆ ಯಾರಾಗುತ್ತಾರೆ ಎಂಬ ಪ್ರಶ್ನೆ ಮೂಡುತ್ತಿದ್ದಂತೆ, ಅಬ್ಬರಿಸಿದರು ವಿರಾಟ್ ಕೊಹ್ಲಿ. ಮೊದಲನೇ ಬಾಲ್‌ನಿಂದ ಪಂದ್ಯದ ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ ಅಜೇಯ ಶತಕ ಬಾರಿಸಿದರು. ಅವರ ಆಟಕ್ಕೆ ನಲುಗಿದ ಕೆಕೆಆರ್ ಪಂದ್ಯ ಮೇಲಿನ ಆಸೆಯನ್ನೇ ಬಿಟ್ಟಿತು. ಆರ್‌ಸಿಬಿ 19.1 ಓವರ್‌ಗಳಲ್ಲಿ 194 ರನ್ ಗಳಿಸಿತು. ಅದರಲ್ಲಿ ವಿರಾಟ್ ಒಬ್ಬರೇ 105★ ರನ್ ಗಳಿಸಿದರು. ಪಡಿಕ್ಕಲ್ 39, ಪಾಟಿದಾರ್ 11 ರನ್ ಗಳಿಸಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ 3 ವಿಕೆಟ್ ಪಡೆದರು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್‌ಗೆ ಅಂಗ್ರಿಶ್ ರಘುವಂಶಿ(71) ಮತ್ತು ರಿಂಕು ಸಿಂಗ್ (49★) ರನ್ ಗಳಿಸಿ ಆಸರೆಯಾಗಿದ್ದರು. ನೂರು ರನ್ ಗಳಿಸಿದ ಕೊಹ್ಲಿ ಪಂದ್ಯದ ಹೀರೋ. ಎರಡು ಡಕ್ ನಂತರ ಅಬ್ಬರಿಸಿದ ಕಿಂಗ್ ಅನಿಸಿದರು. ಪಡಿಕ್ಕಲ್ ಕೊಹ್ಲಿಗೆ ತಕ್ಕ ಸಾಥ್ ಕೊಟ್ಟಿದ್ದೇ ದೊಡ್ಡ ಪಂದ್ಯದ ತಿರುವು. ಅಂಗ್ರಿಶ್, ರಿಂಕು ಮತ್ತು ತ್ಯಾಗಿ ಹೋರಾಟ ನಡೆಸಿದವರಾದರೆ, ಭುವನೇಶ್ವರ್ ಮತ್ತೊಮ್ಮೆ ಆಪದ್ಬಾಂಧವ ಅನಿಸಿದರು.

ಸಂಕ್ಷಿಪ್ತ ಸ್ಕೋರ್

ಕೆಕೆಆರ್ 20 ಓವರ್‌ಗಳಲ್ಲಿ 192/4: ರಘುವಂಶಿ 71, ರಿಂಕು 49★; ಭುವನೇಶ್ವರ್ 34/1
ಆರ್‌ಸಿಬಿ 19.1 ಬಾಲ್‌ಗಳಲ್ಲಿ 194/4: ಕೊಹ್ಲಿ 105★, ಪಡಿಕ್ಕಲ್ 39; ತ್ಯಾಗಿ 39/3

ಆರ್‌ಸಿಬಿ ತಂಡದ ದಾಖಲೆಗಳು

- ಕೆಕೆಆರ್ ವಿರುದ್ಧ ಅತಿ ಹೆಚ್ಚು ರನ್ ಚೇಸ್: 193
- ರಾಯ್ಪುರದಲ್ಲಿ ಅತಿ ಹೆಚ್ಚು ರನ್ ಚೇಸ್

ನಂಬರ್ 1 ಸ್ಥಾನಕ್ಕೆ ಆರ್‌ಸಿಬಿ

ಈ ಗೆಲುವಿನೊಂದಿಗೆ ತನ್ನ ನಂಬರ್ 1 ಪಟ್ಟ ಉಳಿಸಿಕೊಂಡ ಬೆಂಗಳೂರು ಬಹುತೇಕ ಪ್ಲೇಆಫ್‌ಗೇರಿದೆ. ಕೆಕೆಆರ್ ತಂಡ ಇನ್ನಷ್ಟು ಸಂಕಷ್ಟದಲ್ಲಿ ಸಿಲುಕಿಕೊಂಡಿದೆ. ಬೇಕಿರುವ 16 ಅಂಕ ಗಳಿಸಿರುವ ಆರ್‌ಸಿಬಿ ಇನ್ನೂ ಎರಡು ಪಂದ್ಯಗಳನ್ನು ಆಡಬೇಕಿದ್ದು, ಅದರಲ್ಲೂ ಗೆದ್ದರೆ ಟಾಪ್ 2ರಲ್ಲೇ ಉಳಿಯಲಿದೆ.

ಇನ್ನಷ್ಟು ದಾಖಲೆಗಳು

- ಕೆಕೆಆರ್‌ನೊಂದಿಗೆ 1126★ ರನ್ ಗಳಿಸಿರುವ ಕೊಹ್ಲಿ ಒಂದೇ ತಂಡದ ವಿರುದ್ಧ ಹೆಚ್ಚು ರನ್ ಮಾಡಿದವರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.
- ಅತಿ ಹೆಚ್ಚು ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿ(21) ಜಂಟಿ ಮೂರನೇ ಸ್ಥಾನ
- ಒಂದೇ ತಂಡದ ವಿರುದ್ಧ 2 ಶತಕ

ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಅತಿ ಹೆಚ್ಚು ಶತಕ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ತಮ್ಮ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಗೊಳಿಸಿದ್ದಾರೆ. ತಮ್ಮ 9ನೇ ಶತಕ ಬಾರಿಸಿದ ಅವರು, ಅಗ್ರಸ್ಥಾನದಲ್ಲೇ ರಾರಾಜಿಸುತ್ತಿದ್ದಾರೆ.

ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಆಟವಾಡಿದರು. ಟಿ20ಯಲ್ಲಿ ಚೇಸಿಂಗ್ ವೇಳೆ ಶತಕ ಬಾರಿಸುವುದು ಸಾಮಾನ್ಯವಾಗಿ ಕಷ್ಟಕರ. ಆದರೆ ಕೊಹ್ಲಿ ಈ ಸಾಧನೆ ಮೂರು ಬಾರಿ ಮಾಡಿದ್ದಾರೆ. ಇದರೊಂದಿಗೆ ಬಟ್ಲರ್ ದಾಖಲೆ ಸರಿಗಟ್ಟಿದ್ದಾರೆ.

ಮನೀಶ್ ಕ್ಯಾಚ್ ಕಮಾಲ್

ಕನ್ನಡಿಗ ಮನೀಶ್ ಪಾಂಡೆ ಕ್ಯಾಚ್ ಮೂಲಕ ಗಮನ ಸೆಳೆದರು. ತ್ಯಾಗಿ ಎಸೆದ 18ನೇ ಓವರ್‌ನಲ್ಲಿ ಸ್ಟ್ರೈಕ್‌ನಲ್ಲಿದ್ದ ಟೀಮ್ ಡೇವಿಡ್ ಪಾಯಿಂಟ್‌ನತ್ತ ಬಾರಿಸಿದರು. ಲೋ ರೇಂಜ್‌ನಲ್ಲಿ ಶರವೇಗದೊಂದಿಗೆ ಹೊರಡುತ್ತಿದ್ದ ಬಾಲ್ ಅನ್ನು ಕ್ಯಾಚ್ ಮಾಡಿದ ಮನೀಶ್ ಪಾಂಡೆ ಸಂಪೂರ್ಣ ಗಾಳಿಯಲ್ಲೇ ಇದ್ದರು. ಕ್ಯಾಚ್‌ಗೆ ಕೊಹ್ಲಿ, ಡೇವಿಡ್ ಕೂಡ ಹೊಗಳಿದರು.

ದಾಖಲೆಗಳ ಸುರಿ ಮಳೆಗೈದ ಕೊಹ್ಲಿ

ಕೊಹ್ಲಿ ಶತಕ ದಾಖಲೆಗಳ ಸುರಿಮಳೆಗೈದಿತು. ವಿರಾಟ್ ಗಳಿಸುವ ಪ್ರತಿಯೊಂದು ರನ್‌ಗೂ ದಾಖಲೆಗಳು ಆಗುತ್ತಲೇ ಇರುತ್ತವೆ. ರಾಯ್ಪುರದ ಪಂದ್ಯವೂ ಇದಕ್ಕೆ ಸಾಕ್ಷಿ. ಶತಕ ಬಾರಿಸಿ ಗೆಲ್ಲಿಸಿದ ಕೊಹ್ಲಿ ಹತ್ತಾರು ಮೈಲಿಗಲ್ಲು ತಲುಪಿದ್ದಾರೆ.

ಕೆಕೆಆರ್ ವಿರುದ್ಧ ಅಬ್ಬರದ ಶತಕ

108 ನಿಮಿಷಗಳ ಕಾಲ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ 105 ರನ್ ಗಳಿಸಿದರು. ಮೊದಲನೇ ಬಾಲ್‌ನಿಂದ ಕೊನೆಯ ಬಾಲ್‌ವರೆಗೆ ಒಟ್ಟು 60 ಬಾಲ್‌ಗಳನ್ನು ಎದುರಿಸಿದ ಕೊಹ್ಲಿ 11 ಬೌಂಡರಿ, 3 ಸಿಕ್ಸರ್‌ಗಳನ್ನು ಬಾರಿಸಿದರು. ಪಡಿಕ್ಕಲ್ 39 ರನ್ ಗಳಿಸಿದರು. ಕೆಕೆಆರ್ ಪವರ್‌ಪ್ಲೇನಲ್ಲಿ 56/2, ಆರ್‌ಸಿಬಿ 66/1 ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ 97/1, ಆರ್‌ಸಿಬಿ 91 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಕೆಕೆಆರ್ 39 ರನ್‌ಗೆ ನಿಂತರೆ, 5 ಬಾಲ್ ಉಳಿದಿರುವಂತೆ ಆರ್‌ಸಿಬಿ 37 ರನ್ ಗಳಿಸಿತು. 105 ಗಳಿಸಿದ ವಿರಾಟ್ ಕೊಹ್ಲಿ ಇತಿಹಾಸ ನಿರ್ಮಿಸಿದ್ದಾರೆ.



14 ಸಾವಿರ ರನ್

ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೂರ್ಯೈಸಿದರು. ಇದಕ್ಕೂ ಹೆಚ್ಚಾಗಿ ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ ಇಷ್ಟೊಂದು ರನ್ ಮಾಡಿದ ಆಟಗಾರ ಎಂಬ ದೊಡ್ಡ ದಾಖಲೆಯನ್ನೂ ಕೊಹ್ಲಿ ಮಾಡಿದ್ದಾರೆ.

ಐಪಿಎಲ್: ಹೆಚ್ಚು ಶತಕ




- ವಿರಾಟ್ ಕೊಹ್ಲಿ 9
- ಬಟ್ಲರ್ 7
- ಕ್ರಿಸ್ ಗೇಲ್ 6
- ಕೆ. ಎಲ್. ರಾಹುಲ್ 6
- ಸಂಜು ಸ್ಯಾಮ್ಸನ್ 5

ವೇಗದ 14 ಸಾವಿರ ರನ್




ಆಟಗಾರ/ತೆಗೆದುಕೊಂಡ ಇನ್ನಿಂಗ್ಸ್

- ವಿರಾಟ್ 409★
- ಗೇಲ್ 423
- ಬಟ್ಲರ್ 468
- ಅಲೆಕ್ಸ್ ಹೇಲ್ಸ್ 505
- ಕೀರನ್ ಪೊಲಾರ್ಡ್ 633

ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ




ಆಟಗಾರ/ಶತಕ

- ವಿರಾಟ್ 3★
- ಬಟ್ಲರ್ 3★
- ಸ್ಟೋಕ್ಸ್ 2

ಭಾರತ ಎ ತಂಡಕ್ಕೆ ವೈಭವ್ ಆಯ್ಕೆ




ಮುಂಬೈ: ಭಾರತ ಕ್ರಿಕೆಟ್ ಕ್ಷೇತ್ರದಲ್ಲಿ ಐತಿಹಾಸಿಕ ದಾಖಲೆಯೊಂದಾಗಿದ್ದು, 15 ವರ್ಷದ ವೈಭವ್ ಸೂರ್ಯವಂಶಿ ಭಾರತ ಎ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಮತ್ತೊಮ್ಮೆ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಭಾರತ ಎ, ಶ್ರೀಲಂಕಾ ಎ ಮತ್ತು ಅಫ್ಘಾನಿಸ್ತಾನ ಎ ತಂಡಗಳ ನಡುವಿನ ತ್ರಿಕೋನ ಏಕದಿನ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು ತಂಡದಲ್ಲಿ ವೈಭವ್ ಅವರನ್ನು ಆಯ್ಕೆ ಮಾಡಲಾಗಿದೆ. ತಂಡವನ್ನು ತಿಲಕ್ ವರ್ಮಾ ಮುನ್ನಡೆಸಲಿದ್ದು, ಅದರಲ್ಲಿ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಕೂಡ ಸೇರಿದ್ದಾರೆ. ಭಾರತ ಎ ತಂಡ ಅಲ್ಲಿ ಎರಡು ದಿನದ ಟೆಸ್ಟ್ ಪಂದ್ಯಗಳನ್ನೂ ಆಡಲಿದೆ. ರಿಯಾನ್ ಪರಾಗ್ ಉಪನಾಯಕರಾಗಿದ್ದಾರೆ. ಸರಣಿಯ ನಂತರ ಭಾರತ ಎ, ಶ್ರೀಲಂಕಾ ಎ ವಿರುದ್ಧ ಎರಡು ಬಹು-ದಿನದ (ರೆಡ್-ಬಾಲ್) ಪಂದ್ಯಗಳನ್ನು ಸಹ ಆಡಲಿದೆ. ಈ ಟೆಸ್ಟ್ ಪಂದ್ಯಗಳಿಗೆ ತಂಡವನ್ನು ನಂತರ ಪ್ರಕಟಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ. ತ್ರಿಕೋನ ಸರಣಿಯು ಜೂನ್ 9 ರಂದು ಪ್ರಾರಂಭವಾಗಲಿದ್ದು, ಜೂನ್ 21 ರಂದು ಅಂತಿಮ ಪಂದ್ಯ ನಡೆಯಲಿದೆ. ಎಲ್ಲಾ ತಂಡಗಳು ಪರಸ್ಪರ ಎರಡು ಬಾರಿ ಮುಖಾಮುಖಿಯಾಗಲಿದ್ದು, ಅಗ್ರ ಎರಡು ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಶ್ರೀಲಂಕಾ ಎ, ಅಫ್ಘಾನ್ ಎ ವಿರುದ್ಧದ ತ್ರಿಕೋನ ಸರಣಿಗೆ ತಂಡ ಪ್ರಕಟ

ಐಪಿಎಲ್ ಸ್ಟಾರ್‌ಗಳಿಗೆ ಅವಕಾಶ: ಐಪಿಎಲ್‌ನಲ್ಲಿ ರನ್ ಮಳೆ ಹರಿಸುತ್ತಿರುವ ಪ್ರಿಯಾಂಶ್ ಆರ್ಯ, ಆಯುಷ್ ಬಡೋನಿ ಮತ್ತು ಪ್ರಭಸಿಮ್ರನ್ ಸಿಂಗ್ ಅವರಂತಹ ಯುವ ಆಟಗಾರರನ್ನು ಸಹ ಏಕದಿನ ತ್ರಿಕೋನ ಸರಣಿಗೆ ಆಯ್ಕೆ ಮಾಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಯಶ್ ಠಾಕೂರ್, ಯುದ್ಧ್ವೀರ್ ಸಿಂಗ್, ಅನ್ಶುಲ್ ಕಂಬೋಜ್ ಮತ್ತು ಅರ್ಷದ್ ಖಾನ್ ಅವರನ್ನೂ ಆಯ್ಕೆ ಮಾಡಲಾಗಿದೆ.

ಭಾರತ ತಂಡ

ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪನಾಯಕ), ಆಯುಷ್ ಬಡೋಣಿ, ನಿಶಾಂತ್ ಸಿಂಧು, ಹರ್ಷ ದುಬೆ, ಸೂರ್ಯಾಂಶ್ ++++, ಪ್ರಭಸಿಮ್ರನ್ ಸಿಂಗ್ (ವಿಕೆಟ್ ಕೀಪರ್), ಕುಮಾರ್ ಕುಶಾಗ್ರಾ (ವಿಕೆಟ್ ಕೀಪರ್), ವಿಪ್ರಜ್ ನಿಗಮ್, ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅನ್ಶುಲ್ ಕಂಬೋಜ್,

ಸರಣಿ ವೇಳಾಪಟ್ಟಿ

- ಜೂನ್ 9: ಭಾರತ ಎ VS ಶ್ರೀಲಂಕಾ ಎ
- ಜೂನ್ 11: ಭಾರತ ಎ VS ಅಫ್ಘಾನಿಸ್ತಾನ ಎ
- ಜೂನ್ 13: ಅಫ್ಘಾನಿಸ್ತಾನ ಎ VS ಶ್ರೀಲಂಕಾ ಎ
- ಜೂನ್ 15: ಭಾರತ ಎ ವಿರುದ್ಧ ಶ್ರೀಲಂಕಾ ಎ
- ಜೂನ್ 17: ಭಾರತ ಎ VS ಅಫ್ಘಾನಿಸ್ತಾನ ಎ
- ಜೂನ್ 19: ಅಫ್ಘಾನಿಸ್ತಾನ ಎ VS ಶ್ರೀಲಂಕಾ ಎ
- ಜೂನ್ 21: ಫೈನಲ್ ಪಂದ್ಯ

ಮುಂಬೈ ಇಂಡಿಯನ್ಸ್‌ಗೆ ಕಠಿಣ ಗುರಿ

ಧರ್ಮಶಾಲಾ: ಪ್ರಭಸಿಮ್ರನ್(57), ಓಮರ್‌ಝೈ(38) ಅವರ ಸ್ಫೋಟಕ ಬ್ಯಾಟಿಂಗ್ ನಡುವೆಯೂ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶಾರ್ದೂಲ್ ಠಾಕೂರ್(39/4) ಪಂಜಾಬ್ ತಂಡಕ್ಕೆ ಕಡಿವಾಣ ಹಾಕಿದ ನಂತರ ಮುಂಬೈ ವಿರುದ್ಧದ ಪಂದ್ಯದಲ್ಲಿ ಶ್ರೇಯಸ್ ಪಡೆ ದೊಡ್ಡ ಗುರಿ ನಿರ್ಮಿಸಿದೆ.

ನಿಧಾನ ಆರಂಭ ಪಡೆದ ಪಂಜಾಬ್ ಮಧ್ಯಮ ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡಿತು. ಆದಾಗ್ಯೂ ಡೆತ್ ಓವರ್‌ನಲ್ಲಿ ಅಬ್ಬರಿಸಿ 60 ರನ್ ಗಳಿಸಿದ ನಂತರ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿದೆ. ಮುಂಬೈ ಪರ ಶಾರ್ದೂಲ್ 4, ದೀಪಕ್ 2, ಬಾಷ್ ಮತ್ತು ರಾಜ್ ತಲಾ 1 ವಿಕೆಟ್ ಪಡೆದರು.

ಶಾರ್ದೂಲ್ ಕಮಾಲ್: ಟಾಸ್ ಗೆದ್ದ ಮುಂಬೈ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಸೂರ್ಯ ಮತ್ತು ಹಾರ್ದಿಕ್ ಇಲ್ಲದ ಕಾರಣದಿಂದಾಗಿ ಜಸ್‌ಪ್ರೀತ್ ಬೂಮ್ರಾ ತಂಡದ ನಾಯಕತ್ವ ನಿಭಾಯಿಸಿದರು. ಬರುತ್ತಿದ್ದಂತೆ ಅತ್ತ ಪ್ರಿಯಾಂಶ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ ಅವರ ಆಟ 17 ರನ್‌ಗೆ ನಿಂತಿತು. ಮೂರನೇ ಕ್ರಮಾಂಕದಲ್ಲಿ ಬಂದ ಕೊನೊಲಿ ಸೆಟ್ ಆಗುವತ್ತ ಸಾಗಿದರು. ಅತ್ತ ಪ್ರಭಸಿಮ್ರನ್ ಅಬ್ಬರಿಸುತ್ತಿದ್ದಂತೆ ಪವರ್‌ಪ್ಲೇ ಮುಕ್ತಾಯವಾಯಿತು. ಪಂಜಾಬ್ 55 ರನ್‌ಗೆ 1 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಶಾರ್ದೂಲ್ ಠಾಕೂರ್ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸಿದ್ದ ಪ್ರಭಸಿಮ್ರನ್ ವಿಕೆಟ್ ಪಡೆದರು. ಕೊನೊಲಿ ಕೂಡ 21 ರನ್‌ಗೆ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಅಯ್ಯರ್ ಬರುತ್ತಲೇ ಬೌಂಡರಿ ಬಾರಿಸಿ ಬೋಲ್ಡ್ ಆದರು. ಮುಂದಿನ ಓವರ್‌ನಲ್ಲಿ ಶಾರ್ದೂಲ್ ಸೂರ್ಯಾಂಶ್‌ಗೂ ಪೆವಿಲಿಯನ್ ಹಾದಿ ತೋರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 85 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು.



ಡೆತ್ ಓವರ್‌ನಲ್ಲಿ ಪಂಜಾಬ್ ಅಬ್ಬರ: ಕೊನೆಯ ಓವರ್‌ಗಳಲ್ಲಿ ಪಂಜಾಬ್ ಕಿಂಗ್ಸ್ ಅಬ್ಬರದ ಬ್ಯಾಟಿಂಗ್ ಮಾಡಿತು. ಅಜ್ಮತ್ತುಲ್ಲಾ ಓಮರ್‌ಝೈ ಬರುತ್ತಿದ್ದಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 4 ಸಿಕ್ಸರ್ 2 ಬೌಂಡರಿ ಬಾರಿಸಿದ ಅವರು, 17 ಬಾಲ್ ಮಾತ್ರದಲ್ಲಿ 38 ರನ್ ಗಳಿಸಿದರು. ಪಂದ್ಯದ ತಿರುವೇ ಬದಲಾಯಿತು. ಸಾಮಾನ್ಯ ಸ್ಕೋರ್‌ನತ್ತ ಸಾಗುತ್ತಿದ್ದ ಪಂಜಾಬ್ ಅವರ ಬ್ಯಾಟಿಂಗ್‌ನಿಂದಾಗಿ ದೊಡ್ಡ ಸ್ಕೋರ್‌ನತ್ತ ಸಾಗಿತು. ಅವರ ವಿಕೆಟ್ ಬಿದ್ದರೂ ಕೊನೆಯ ಓವರ್‌ಗಳಲ್ಲಿ ಬಾರ್ಟಲೆಟ್ ಮತ್ತು ವಿಷ್ಣು ವಿನೋದ್ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ 200ರ ಗಡಿ ದಾಟಿಸಿದರು.

ಬ್ಯಾಡ್ಮಿಂಟನ್: ಸೇನ್, ಸಿಂಧು ಕ್ವಾರ್ಟರ್‌ಗೆ

ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತೀಯ ತಾರೆಯರ ಅದ್ಭುತ ಪ್ರದರ್ಶನ ಮುಂದುವರಿದಿದೆ. ಪ್ರಮುಖ ಬ್ಯಾಡ್ಮಿಂಟನ್ ಕೂಟಗಳಲ್ಲಿ ಒಂದಾದ ಸೂಪರ್ 500 ಪಂದ್ಯಾವಳಿಯಲ್ಲಿ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ತಮ್ಮ ತಮ್ಮ ಪಂದ್ಯಗಳಲ್ಲಿ ನೇರ ಗೇಮ್‌ಗಳಲ್ಲಿ ಗೆದ್ದು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಹಾಗೂ ಆರನೇ ಶ್ರೇಯಾಂಕಿತ ಪಿ. ವಿ. ಸಿಂಧು, ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ವಿರುದ್ಧ ಕೇವಲ 28 ನಿಮಿಷಗಳಲ್ಲಿ 21-13, 21-15 ಅಂತರದಲ್ಲಿ ಗೆಲುವು ಸಾಧಿಸಿದರು.

ಸೇನ್ ಪ್ರಾಬಲ್ಯ: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಶ್ರೇಯಾಂಕಿತ ಲಕ್ಷ್ಯ ಸೇನ್, ಚೀನಾದ ಝು ಶುವಾನ್ ಚೆನ್ ವಿರುದ್ಧ 21-12, 21-13 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. 39 ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಲಕ್ಷ್ಯ ಸಂಪೂರ್ಣ ಮೇಲುಗೈ ಸಾಧಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಸಿಂಧುಗೆ ಜಪಾನ್‌ನ ಅಗ್ರ ಶ್ರೇಯಾಂಕಿತ ಹಾಗೂ ವಿಶ್ವ ನಂ. 3 ಅಕಾನೆ ಯಮಗುಚಿ ಸವಾಲಾಗಲಿದ್ದಾರೆ. ಲಕ್ಷ್ಯ ಸೇನ್, ಚೈನೀಸ್ ತೈಪೆಯ ಲೀ ಚಿಯಾ ಹಾವೊ ಮತ್ತು ಥೈಲ್ಯಾಂಡ್‌ನ ಕುನ್ಲಾವುತ್ ವಿಟಿಡ್ಸಾರ್ನ್ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಸಾತ್ವಿಕ್-ಚಿರಾಗ್ ಪಾರುಪತ್ಯ: ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕಿತ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯೂ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮಲೇಶಿಯಾದ ಬ್ರಯಾನ್ ಜೆರೆಮಿ ಗುಂಟಿಂಗ್ ಮತ್ತು ಮಹಮ್ಮದ್ ಹೈಕಲ್ ಜೋಡಿಯನ್ನು 21-12, 21-19 ಅಂತರದಲ್ಲಿ ಮಣಿಸಿದ ಭಾರತೀಯ ಜೋಡಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ತಕುಮಿ ನೋಮುರಾ ಮತ್ತು ಯುಇಚಿ ಶಿಮೊಗಾಮಿ ಜೋಡಿಯನ್ನು ಎದುರಿಸಲಿದೆ.

ಇದೇ ವೇಳೆ ಯುವ ಆಟಗಾರ್ತಿ ದೇವಿಕಾ ಸಿಹಾಗ್ ಅಭಿಯಾನ ಅಂತ್ಯಗೊಂಡಿದೆ. ಥೈಲ್ಯಾಂಡ್‌ನ ಪಿಚಮೋನ್ ಒಪಾಟ್ನಿಪುತ್ ವಿರುದ್ಧ 21-23, 11-21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು. ಇನ್ನೂ ದಿನದ ಬಳಿಕ ಮಾಜಿ ವಿಶ್ವ ನಂ. 1 ಕಿಡಂಬಿ ಶ್ರೀಕಾಂತ್, ಚೈನೀಸ್ ತೈಪೆಯ ಸು ಲಿ ಯಾಂಗ್ ವಿರುದ್ಧ ಸೆಣಸಲಿದ್ದಾರೆ.

ಸೂಪರ್ ಕಿಂಗ್ಸ್-ಲಖನೌ ಜೇಂಟ್ಸ್ ಪಂದ್ಯ ಇಂದು

ಲಖನೌ: ಲಯದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈಗಿದು ಮಹತ್ವದ ಪಂದ್ಯವಾಗಿರಲಿದೆ.

ಭಾನುವಾರ ನಡೆದ ಇಬ್ಬರ ನಡುವಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಗೆಲುವು ಸಾಧಿಸಿದೆ. ಹಿಂದಿನ ಪಂದ್ಯಗಳಲ್ಲಿ ಸತತ ಗೆಲುವು ಸಾಧಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಸತತ ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ ಪಂದ್ಯಾವಳಿಯ ನಾಲ್ಕನೇ ಗೆಲುವಿಗಾಗಿ ಪಂದ್ಯವನ್ನಾಡಲಿದೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈ ಈ ಪಂದ್ಯದಲ್ಲಿ ಗೆಲ್ಲಲೇಬೇಕಿದೆ. 12 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಗೆದ್ದರೆ, ಹೆಚ್ಚಿನ ಅವಕಾಶ ಪಡೆಯಲಿದೆ. ಇತ್ತ ಲಖನೌ ಗೌರವ ವಿದಾಯಕ್ಕಾಗಿ ಆಡಲಿದೆ. ಕಳೆದುಕೊಳ್ಳಲು ಲಖನೌ ಕಡೆ ಏನು ಇಲ್ಲ. ಇದೇ ಸಮಯದಲ್ಲಿ ಚೆನ್ನೈಗೆ ಮತ್ತೊಂದು ಗಾಯದ ಸಮಸ್ಯೆ ಎದುರಾಗಿದ್ದು ಪಂದ್ಯಗಳಲ್ಲಿ ಮಿಂಚುತ್ತಿದ್ದ ಜಿಮಿ ಓವರ್‌ಟನ್ ಹೊರಬಿದ್ದಿದ್ದಾರೆ. ಪಂದ್ಯ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.




ಪ್ಲೇಆಫ್ ಲೆಕ್ಕಾಚಾರ: ಐದನೇ ಸ್ಥಾನದಲ್ಲಿರುವ ಚೆನ್ನೈ ಗೆದ್ದರೆ 14 ಅಂಕಗಳನ್ನು ಹೊಂದಲಿದ್ದು, ನಾಲ್ಕನೇ ಸ್ಥಾನಕ್ಕೇರುವ ಅವಕಾಶ ಪಡೆಯಲಿದೆ. ಸದ್ಯ ಸನ್‌ರೈಸರ್ಸ್ ಹೈದರಾಬಾದ್ ಕೂಡ ಅಷ್ಟೇ ಅಂಕಗಳನ್ನು ಹೊಂದಿದ್ದು ಮೂರನೇ ಸ್ಥಾನದಲ್ಲಿದೆ. ಹೆಚ್ಚಿನ ರನ್‌ರೇಟ್ ಚೆನ್ನೈಗೆ ಅವಕಾಶವನ್ನು ಭದ್ರ ಮಾಡಿಕೊಡಲಿದೆ. ಉಳಿದ ಪಂದ್ಯಗಳಲ್ಲಿ ಚೆನ್ನೈ ಎಲ್ಲಾದರಲ್ಲೂ ಗೆಲ್ಲಬೇಕಿದೆ. 1 ಸೋತರು ಬೇರೆ ತಂಡಗಳ ಮೇಲೆ ಅವಲಂಬಿತವಾಗಬೇಕಿದೆ.

ಪಿಚ್: ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಆರ್‌ಸಿಬಿ ಹಾಗೂ ಲಖನೌ ನಡುವೆ ಇತ್ತೀಚೆಗೆ ನಡೆದ ಪಂದ್ಯದಲ್ಲಿ ದೊಡ್ಡ ಸ್ಕೋರ್ ಮೂಡಿಬಂದಿತ್ತು. ಚೇಸಿಂಗ್ ಆಗಿರಲಿಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವಿದ್ದು, ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5984

ಎಡದಿಂದ ಬಲಕ್ಕೆ

1.ಬೌದ್ಧರ ಮೂರು ಪವಿತ್ರ ಗ್ರಂಥಗಳು (4)
4.ಕೆನ್ನೆ-ಕಪೋಲ (3)
5.ಹುಣ್ಣಿಮೆಯ ಚಂದಿರನೀತ (5)
7.ಕಡಿದಾದ ಕೊರಕಲು ಕಣಿವೆ (3)
8.ಹಲ್ಲಿನಿಂದ ಕಡಿಯು (2)
9.ಮಂತ್ರೋಪದೇಶವನ್ನು ತಿರುಗಿ ಮಾಡುತ್ತಿದ್ದಾರೆ (2)
12.ಪಾಕದ ನಡುವೆ ಹೊಗಳುಭಟನಿದ್ದಾನೆ (3)
13.ಲಲಿತವಿದ್ಯೆಗಳನ್ನು ಆರಾಧಿಸುವವನು (5)
16.ಧಣಿಯು ತರಿಸಿದ ಕೊತ್ತಂಬರಿಬೀಜ (3)
17.ಭಾರತದಲ್ಲಿ ಲೋಕಸಭೆ-ರಾಜ್ಯಗಳಲ್ಲಿ ವಿಧಾನಸಭೆ (4)

ಮೇಲಿನಿಂದ ಕೆಳಕ್ಕೆ

1.ದೈತ್ಯರ ಮೂರು ಊರುಗಳನ್ನು ನಾಶಮಾಡಿದವನು (5)
2.ಗಣಪತಿಗೆ ನೈವೇದ್ಯವಾಗಿ ಪ್ರಸಿದ್ಧ ಈ ಮೋದಕ (3)
3.ಗಡಬಡಿಸಿ ತಿರುಗಿದ್ದು ಈ ಉತ್ತರದಿಕ್ಕಿನೆಡೆಗೆ (3)
5.ವಸ್ತುವಿನಿಂದ ಬೇರ್ಪಟ್ಟ ಒಂದು ಭಾಗ (2)
6.ದಯಾಮಯಿ ತಲೆಕೆಳಗಾಗಿದ್ದಾನೆ (4)
7.ಊರಿಂದೂರಿಗೆ ಸಂಚರಿಸುತ್ತಿರುವವ (4)
10.ಸೊಡರುಗಳನ್ನು ಹೊತ್ತಿಸಿ ಮಾಡುವ ಪೂಜೆ (5)
11.ಸುಲಭವಾಗಿ ಮೋಸಕ್ಕೊಳಗಾಗುವ ಪ್ರಾಣಿ (2)
14.ನೇತಾಡುವಂತಿರುವ ಕಿವಿಯ ಆಭರಣ (3)
15.ಮಣ್ಣು ಎತ್ತಲು ಬಳಸುವ ಸಾಧನ (3)

5983 ಉತ್ತರ

ಎಡದಿಂದ ಬಲಕ್ಕೆ:
1.ಮೃದುಯಾನ
3.ನರಮೇಧ 5.ಕಸರತ್ತು
8.ಮೂಲಪ್ರತಿ 10.ಹಡಗು
11.ಮೇದಿನಿ 12.ಚಂಪಕ
14.ಮಾನಿನಿ 16.ಕುಜವಾರ
17.ಪರಿಪಾಕ

ಮೇಲಿನಿಂದ ಕೆಳಕ್ಕೆ :
2.ಯಾವಾರ 4.ರಸಾಲ
6.ಸನಾದಿ 7.ಹತ್ತು
8.ಮೂಗು 9.ಪ್ರತಾಪ
11.ಮೇಲುಮುಸುಕು
13.ಚಂದ್ರಕಲಾಪ
14.ಮಾತುಗಾರ
15.ನಿಯಾಮಕ

ಕಿರುಸುದ್ದಿ

ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆ **ಗದಗ:** ಅಖಿಲ ಭಾರತ ಗಾಣಿಗ ವಿದ್ಯಾ ಹಾಗೂ ಉದ್ಯೋಗ ವರ್ಧಕ ಟ್ರಸ್ಟ್ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಜಿಲ್ಲಾ ಗಾಣಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ನಿವೃತ್ತರಾಗಿರುವ ಜಿಲ್ಲಾ ಗಾಣಿಗ ಸಮಾಜದ ನಿವೃತ್ತ ಸರ್ಕಾರಿ ನೌಕರರಿಗೆ ಸನ್ಮಾನಿಸಲಾಗುತ್ತಿದೆ. ಆದ್ದರಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳು ಜೂ.1ರರೊಳಗಾಗಿ ಅಂಕಪಟ್ಟಿಯ ನಕಲು ಪ್ರತಿ, ಹಾಗೂ ಪಾಸ್‌ಪೋರ್ಟ್ ಸೈಜ್ ಫೋಟೊದೊಂದಿಗೆ ಮಾಹಿತಿ ನೀಡಲು ಸೂಚಿಸಿದೆ. ಅರ್ಹ ವಿದ್ಯಾರ್ಥಿಗಳು ಹಾಗೂ ನಿವೃತ್ತ ನೌಕರರು ವಿವೇಕಾನಂದ ನಗರದ ಗಾಣಿಗ ಭವನ ಕಾರ್ಯಾಲಯ, ಕಾಟನ್ ಮಾರ್ಕೆಟ್ ರಸ್ತೆಯ ಲಕ್ಕುಂಡಿ ಸ್ಟೀಲ್ ಹಾಗೂ ಎಪಿಎಂಸಿ ಯಾರ್ಡನ ಎಂ.ಬಿ. ಬಡ್ಡಿ ಕಂ. ಸಂಪರ್ಕಿಸಬಹುದು ಎಂದು ಅಖಿಲ ಭಾರತ ಗಾಣಿಗ ವಿದ್ಯಾ ಹಾಗೂ ಉದ್ಯೋಗ ವರ್ಧಕ ಟ್ರಸ್ಟ್ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆ **ಗದಗ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿಯಿಂದ ಡಿಗ್ರಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ sw.kar.nic.in ವೆಬ್‌ಸೈಟ್ ಸ್ಟೇಟ್ ಹಾಸ್ಟೆಲ್ ಪೋರ್ಟಲ್ ಹಾಗೂ ಎಸ್‌ಎಸ್‌ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಇಲಾಖೆ ತಿಳಿಸಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಯಲ್ಲಿ ತೊಂದರೆ ಅನುಭವಿಸುವ ವಿದ್ಯಾರ್ಥಿಗಳಿಗೆ ಇಲಾಖೆಯ ಕಚೇರಿಯಲ್ಲಿ ಅರ್ಜಿ ನಮೂನೆ ನೀಡಲಾಗುವುದು. ಬಳಿಕ ಆನ್‌ಲೈನ್ ಅರ್ಜಿಯ ಪ್ರಿಂಟ್ ಪ್ರತಿಯನ್ನು ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸಿ ಅಗತ್ಯ ದಾಖಲೆಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಅರ್ಜಿಯೊಂದಿಗೆ ಜಾತಿ ಹಾಗೂ ಆದಾಯ ಪ್ರಮಾಣಪತ್ರ, ವಿದ್ಯಾರ್ಥಿ ಮತ್ತು ತಂದೆ-ತಾಯಿಯ ಆಧಾರ್ ಕಾರ್ಡ್ ಪ್ರತಿಗಳು, ಕಳೆದ ಸಾಲಿನ ಅಂಕಪಟ್ಟಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಲಗತ್ತಿಸಬೇಕು. ಖಾಲಿ ಇರುವ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ.75 ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇ.25 ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುವುದು ಎಂದು ಇಲಾಖೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆ **ಲಕ್ಷ್ಮೇಶ್ವರ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಈಶ್ವರ ಬಿ. ಖಂಡ್ರೆ ಅವರ ಅನುಮತಿ ಮೇರೆಗೆ 2025–26ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇ.90 ಹಾಗೂ 90 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಮಹಾಸಭೆಯ www.aivlm.org ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮೇ 25, 2026ರೊಳಗೆ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಬಂದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಅಂಚೆ ಅಥವಾ ಕೊರಿಯರ್ ಅಥವಾ ಖುದ್ದಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ವೀರಶೈವ ಲಿಂಗಾಯತ ಸಮಾಜದ ತಾಲೂಕಿನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ತಾಲೂಕು ವೀರಶೈವ ಮಹಾಸಭಾ ಸಂಚಾಲಕ ಎಸ್.ಬಿ. ಅಣ್ಣಿಗೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	4495-7652
ಅಲಸಂದಿ	4411-6259
ಕಡಲೆ	2011-6189
ಉದ್ದು	4814-4814
ಹೆಸರು	1412-6109
ಹುರಳಿ	3069-3339
ಜೋಳ	2112-4409
ಗೋವಿನಜೋಳ	2009-2009
ಮಡಕಿ	9019-9019
ಸಾಸವಿ	4869-4869
ನವಣಿ	2244-2244
ಕುಸಬಿ	5312-5231
ಸೂರ್ಯಕಾಂತಿ	6789-6772
ಗೋಧಿ	4221-2409
ನವಣಕ್ಕಿ	4900-4900



ಮುಂಡರಗಿ: ಪಟ್ಟಣದಲ್ಲಿ ಪಿಎಸ್‌ಐ ಚನ್ನಯ್ಯ ದೇವೂರ ಅವರು ಬುಧವಾರ ರಸ್ತೆ ಸಂಚಾರ ನಿಯಮ ಉಲ್ಲಂಘನೆ ಮತ್ತು ಹೆಲ್ಮೆಟ್ ಧರಿಸದ ಬೈಕ್ ಸವಾರರನ್ನು ನಿಲ್ಲಿಸಿ ನಿಯಮಾನುಸಾರ ದಂಡ ವಿಧಿಸಿದರು. ನಂತರ ಪೊಲೀಸ್ ಠಾಣೆಗೆ ಕರೆಯಿಸಿ ಸಂಚಾರ ನಿಯಮ ಪಾಲಿಸುವಂತೆ ತಿಳುವಳಿಕೆ ನೀಡಿದರು. ಪಿಎಸ್‌ಐ ಚನ್ನಯ್ಯ ಅವರು ಅವರನ್ನೆಲ್ಲ ಬುಧವಾರ ಒಂದೆಡೆ ಸೇರಿಸಿ ನಿಯಮ ಪಾಲನೆ ಮಾಡುವಂತೆ ಹಾಗೂ ತಮ್ಮ ಜೀವ ಮತ್ತು ಜೀವನದ ಮೌಲ್ಯದ ಕುರಿತು ಬುದ್ಧಿವಾದ ಹೇಳಿ ರಸ್ತೆ ಸುರಕ್ಷತೆ ಕ್ರಮಗಳನ್ನು ಅನುಸರಿಸಬೇಕು ಎಂದು ತಿಳುವಳಿಕೆ ನೀಡಿ ಕಳುಹಿಸಿದ್ದಾರೆ.

ಬಡ ಕುಟುಂಬಕ್ಕೆ ಸಾಮೂಹಿಕ ವಿವಾಹ ಆಶಾಕಿರಣ

◆ **ಲಕ್ಷ್ಮೇಶ್ವರ:** ಸಾಮೂಹಿಕ ವಿವಾಹಗಳು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ವೆಚ್ಚದ ಭಾರ ಕಡಿಮೆ ಮಾಡಿ ಹೊಸ ಬದುಕಿಗೆ ರಹದಾರಿಯಾಗಿವೆ. ಈ ನಿಟ್ಟಿನಲ್ಲಿ ಸಂಘಟನೆ, ಸಮಾಜ, ಧಾರ್ಮಿಕ ಕೇಂದ್ರ, ಮಠ ಮಾನ್ಯಗಳು ಮಾಡುವ ಸಾಮೂಹಿಕ ವಿವಾಹ ಬಡ ಕುಟುಂಬಗಳಿಗೆ ಆಶಾಕಿರಣವಾಗಿವೆ ಎಂದು ಧಾರ್ಮಿಕ ಚಿಂತಕ ರಾಯಪ್ಪ ಅಮೋಘಿಮಠ ಹೇಳಿದರು.

ಅವರು ಪಟ್ಟಣದ ಮ್ಯಾಗೇರಿ ಓಣಿಯ ಶ್ರೀ ಬೀರೇಶ್ವರ ಆವರಣದಲ್ಲಿ ಗುರುವಾರ ಕತ್ರಿಗಾರ ಹಬ್ಬದ ಪ್ರಯುಕ್ತ ಸಾಮೂಹಿಕ ವಿವಾಹ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು, ಸಾಮೂಹಿಕ ವಿವಾಹಗಳು ಸಮಾಜದಲ್ಲಿ ಸಮಾನತೆ, ಸಹಕಾರ ಹಾಗೂ ಸರಳತೆಯ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ವಿವಾಹ ಬಂಧನಕ್ಕೊಳಗಾದ ಸತಿಪತಿಗಳು ಗುರುಹಿರಿಯರನ್ನು ಗೌರವದಿಂದ ಕಾಣುತ್ತಾ ಒಂದಾಗಿ ಚಂದಾಗಿ ಬಾಳಬೇಕು ಎಂದರು.

ಸಾಮೂಹಿಕ ವಿವಾಹ ಸಮಾರಂಭದಲ್ಲಿ 7 ಜೋಡಿಗಳು ಸತಿ-ಪತಿ ಆದರು. ಬೀರೇಶ್ವರ ದೇವಸ್ಥಾನದಲ್ಲಿ ವಿವಾಹದ ವಿಧಿ ವಿಧಾನಗಳು ಸಂಪ್ರದಾಯಬದ್ಧವಾಗಿ ನೆರವೇರಿಸಲಾಯಿತು. ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಹಿರಿಯರಾದ ಪಿ.ಆರ್.ಕುಲಕರ್ಣಿ, ಮಹೇಶ ಲಿಂಬಯ್ಯಸ್ವಾಮಿಮಠ, ಪುರಸಭೆ ಮಾಜಿ ಅಧ್ಯಕ್ಷರಾದ ವಿ.ಜಿ ಪಡಗೇರಿ, ಯಲ್ಲವ್ವ ದುರ್ಗಣ್ಣವರ, ನೀಲಪ್ಪ ಪೂಜಾರ, ಗಂಗಪ್ಪ ದುರ್ಗಣ್ಣವರ, ಶಿವಾನಂದ ಉಳ್ಳಟ್ಟಿ, ಸಿದ್ದಪ್ಪ ಪೂಜಾರ, ದೇವಪ್ಪ ಉಳ್ಳಟ್ಟಿ, ಮಾಳಿಂಗರಾಯ ಪೂಜಾರ, ಪಾಪಣ್ಣ ಬನ್ನಿ, ಪುಟ್ಟಪ್ಪ ಕೋರಿ, ಹಣಮಂತ ಉಳ್ಳಟ್ಟಿ, ನಾಗಪ್ಪ ಬಿಂಗಿ, ಶೇಖಪ್ಪ ಕೋರಿ, ನಿಂಗಪ್ಪ ಗೌಡನಾಯ್ಕರ ಸೇರಿದಂತೆ ಮುಂತಾದವರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಮ್ಯಾಗೇರಿ ಓಣಿಯ ಶ್ರೀ ಬೀರೇಶ್ವರ ಆವರಣದಲ್ಲಿ ಗುರುವಾರ ಕತ್ರಿಗಾರ ಹಬ್ಬದ ಪ್ರಯುಕ್ತ ಸಾಮೂಹಿಕ ವಿವಾಹ ನೆರವೇರಿಸಿದರು. 7 ಜೋಡಿಗಳು ಸತಿ-ಪತಿ ಆದರು. ಬೀರೇಶ್ವರ ದೇವಸ್ಥಾನದಲ್ಲಿ ವಿವಾಹದ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ಅಂತರ್ಜಲ ವೃದ್ಧಿಯೂ ಖಾತ್ರಿ | ಉದ್ಯೋಗ ಖಾತ್ರಿ ದಿನಕ್ಕೆ 370 ರೂ.

ಸಮುದಾಯ ಕಾಮಗಾರಿ ಚುರುಕು

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

◆ **ಗದಗ:** ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಂದಕ ಬದು ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಫಲವತ್ತಾದ ಮಣ್ಣು ಅದೇ ಜಮೀನಿನಲ್ಲಿಯೇ ಉಳಿಯುವುದರ ಜತೆಗೆ ಅಂತರ್ಜಲ ವೃದ್ಧಿಗೆ ಪೂರಕವಾಗಿದ್ದು ರೈತರಿಗೆ ವರದಾನವಾಗಿದೆ.

ತಾಲೂಕು ಪಂಚಾಯತಿ ವ್ಯಾಪ್ತಿಯ ಚಿಕ್ಕಹಂದಿಗೋಳ, ಅಡವಿಸೋಮಾಪುರ, ಬಿಂಕದಕಟ್ಟಿ, ಲಕ್ಕುಂಡಿ, ಬೆಳಹೋಡ, ತಿಮ್ಮಾಪುರ, ಹುಯಿಲಗೋಳ, ಬೆಳದಡಿ, ಹರ್ತಿ, ನೀರಳಗಿ ಸೇರಿ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಸಮುದಾಯ ಕಾಮಗಾರಿಗಳು ಪ್ರಾರಂಭವಾಗಿದ್ದು ನಿತ್ಯ ಸಾವಿರಕ್ಕೂ ಹೆಚ್ಚು ಜನರು ಕೆಲಸದಲ್ಲಿ ತೊಡಗಿದ್ದಾರೆ. ಎನ್‌ಆರ್‌ಇಜಿಎ ಯೋಜನೆಯಡಿ ಮಹಿಳೆ, ಪುರುಷ ಎಂಬ ಭೇದವಿಲ್ಲದೆ ಎಲ್ಲರಿಗೂ ದಿನಕ್ಕೆ 370 ರೂ.ಗೆ ಕೂಲಿ ಹಣ ನೀಡಲಾಗುತ್ತದೆ. ಸರಿಯಾದ ಅಳತೆಯಲ್ಲಿ ಕಂದಕ ಬದು ನಿರ್ಮಾಣ ಮಾಡದಾಗ ಮಾತ್ರ ಪೂರ್ಣ ಪ್ರಮಾಣದ ಕೂಲಿ ಹಣ ದೊರೆಯಲಿದೆ. ನೇರವಾಗಿ ಕೂಲಿಕಾರರ ಉಳಿತಾಯ ಖಾತೆಗೆ ಪಾವತಿಯಾಗಲಿದೆ. ತಮ್ಮದೇ ಕುಟುಂಬ ಸದಸ್ಯರು ಕೂಡಿಕೊಂಡು ಕೆಲಸ ಮಾಡಿ ಹಣ ಪಡೆಯಬಹುದಾಗಿದೆ. ಇದರಿಂದ ಕುಟುಂಬದ ಸಣ್ಣ-ಪುಟ್ಟ ಅಗತ್ಯತೆ, ಮಕ್ಕಳ ಮುಂದಿನ ವ್ಯಾಸಂಗಕ್ಕೆ ಬಳಕೆ ಮಾಡಿಕೊಳ್ಳಬಹುದಾಗಿದೆ. ಜೊತೆಗೆ ಮುಂಗಾರು ಬೆಳೆ ಬೆಳೆಯಲು ಗೊಬ್ಬರ, ಬೀಜ ಮತ್ತು ಜಮೀನಿನ ಇನ್ನಿತರ ಕೆಲಸ ಕಾರ್ಯಗಳಿಗೆ ಇದನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ಗ್ರಾಮೀಣ ಜನರಿಗೆ ಅವರ ಗ್ರಾಮದಲ್ಲಿಯೇ ಉದ್ಯೋಗ ನೀಡಲು ಮನರೇಗಾ ಯೋಜನೆಯಡಿ ಕೆಲಸ ನೀಡಲು ಸಮುದಾಯ ಬದು ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ.

ಸಮಾನ ಕೂಲಿ

ತಾಲೂಕಿನ ಬಹುತೇಕ ಗ್ರಾಮ ಪಂಚಾಯಿತಿ ಹಾಗೂ ಗ್ರಾಮಗಳಲ್ಲಿ ಬದು ನಿರ್ಮಾಣ ಹಾಗೂ ಹಳ್ಳ ಹೂಳೆತ್ತುವ ಕಾಮಗಾರಿ ಆರಂಭಿಸಲಾಗಿದೆ. ಎನ್‌ಎಂಎಂಎಸ್ ತಂತ್ರಾಂಶದ ಮೂಲಕ ಎರಡು ಬಾರಿ ಹಾಜರಾತಿ ಹಾಕುವುದು ಕಡ್ಡಾಯವಾಗಿದೆ. ಅಳತೆಗನುಸಾರ ಕೆಲಸ ಮಾಡಿದಾಗ ಮಾತ್ರ ಪ್ರತಿ ವ್ಯಕ್ತಿಗೆ 370ರೂ. ಸಮಾನವಾಗಿ ಕೂಲಿ ನೀಡಲಾಗುತ್ತದೆ ಎಂದು ತಾಪಂ ಸಹಾಯಕ ನಿರ್ದೇಶಕ ಕುಮಾರ ಪೂಜಾರ ತಿಳಿಸಿದ್ದಾರೆ.

> **ಬದು ನಿರ್ಮಾಣ ಮಾಡಿಕೊಳ್ಳುವುದರಿಂದ ಮಳೆಗಾಲದಲ್ಲಿ ಆಗುವ ಅನುಕೂಲಗಳ ಕುರಿತು ರೈತರಿಗೆ ಮಾಹಿತಿ ನೀಡಲಾಗಿದೆ. ಮಣ್ಣು ಮತ್ತು ನೀರು ಸಂರಕ್ಷಣೆಗೆ ಇದು ಉತ್ತಮ ಯೋಜನೆ ಆಗಿದೆ. ಇದರಿಂದ ರೈತರ ಜಮೀನಿನ ಫಲವತ್ತತೆ ಹೆಚ್ಚಾಗುವುದರ ಜೊತೆಗೆ ಸಣ್ಣ- ಅತೀ ಸಣ್ಣ ರೈತರು ದಿನಕ್ಕೆ 370 ರೂ. ಕೂಲಿ ಪಡೆಯಬಹುದಾಗಿದೆ.**
>
> ■ **ಡಾ.ಎಚ್.ಎಸ್.ಜನಗಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ,**



- ಬದು ನಿರ್ಮಾಣದಿಂದ ಅಂತರ್ಜಲ ಪ್ರಮಾಣ ಹೆಚ್ಚಳ
- ಬದು ನಿರ್ಮಾಣದಿಂದ ಜಮೀನಿನಲ್ಲಿಯ ಮಣ್ಣು ಕೊಚ್ಚಿ ಹೋಗದೆ ಗುಂಡಿಗಳಲ್ಲಿಯೇ ಸಂಗ್ರಹ
- ಮಳೆಯಾದಾಗ ಹೆಚ್ಚುವರಿ ನೀರು ಹರಿದು ಕೊಚ್ಚಿ ಹೋಗದಂತೆ ಬದುವಿನಲ್ಲಿ ಮಣ್ಣಿನ ಏರಿ ಹಾಕುವುದರಿಂದ ಫಲವತ್ತಾದ ಮಣ್ಣು ಜಮೀನಿನಲ್ಲಿಯೇ ಉಳಿಯಲಿದೆ
- ಅಂತರ್ಜಲ ಪ್ರಮಾಣ ವೃದ್ಧಿ ಮತ್ತು ಉತ್ತಮ ಇಳುವರಿ
- 10 ಅಡಿ ಉದ್ದ, 5 ಅಡಿ ಅಗಲ, 2 ಅಡಿ ಕಂದಕಕ್ಕೆ ಅವಕಾಶ
- ಪ್ರತಿ ಕಂದಕವೂ ಅಂದಾಜು 2,700 ಲೀಟರ್ ನೀರು ಹಿಡಿದಿಡುವ ಸಾಮರ್ಥ್ಯ

ಎರಡು ಬಾರಿ ಹಾಜರಾತಿ ಕಡ್ಡಾಯ

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಕೆಲಸಕ್ಕೆ ಬರುವ ಕೂಲಿಕಾರರ ಹಾಜರಾತಿ ಪಡೆಯಲು ಕೇಂದ್ರ ಸರ್ಕಾರ ಎನ್‌ಎಂಎಂಎಸ್ (ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಮ್) ತಂತ್ರಾಂಶ ಅಭಿವೃದ್ಧಿ ಪಡಿಸಿದೆ. ದಿನಕ್ಕೆ ಎರಡು ಬಾರಿ ಹಾಜರಾತಿ ಹಾಕುವುದು ಕಡ್ಡಾಯವಿದೆ. ಮುಖಚಹರೆ ಆಧಾರದ ಮೂಲಕ ಹಾಜರಾತಿಯನ್ನು ಇಂದೀಕರಿಸಿ ತಂತ್ರಾಂಶದಲ್ಲಿ ದಾಖಲಿಸಲಾಗುತ್ತದೆ.

ಕಾಮಗಾರಿ ಸ್ಥಳದಲ್ಲಿ ರೋಜಗಾರ್ ದಿನಾಚರಣೆ

◆ **ಲಕ್ಷ್ಮೇಶ್ವರ:** ನರೇಗಾ ಯೋಜನೆ ಅಡಿ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದ್ದು ನರೇಗಾ ಕೂಲಿಕಾರರು ಕಡ್ಡಾಯವಾಗಿ ಎರಡು ಬಾರಿ ಹಾಜರಾತಿ ನೀಡಬೇಕೆಂದು ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಹಕಾರಿ ತಿಳಿಸಿದರು.

ತಾಲೂಕಿನ ಸೂರಣಗಿ ಗ್ರಾಪಂ ಮೊದಲನೇ ದಿನದ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಕೂಲಿಕಾರರ ಕೆಲಸವನ್ನು ಪರಿಶೀಲಿಸಿ ಅಳತೆಗೆ ತಕ್ಕ ಕೆಲಸವನ್ನು ನೀಡಿ ಕೂಲಿಕಾರ್ಮಿಕರು ಎರಡು ಬಾರಿ ಹಾಜರಾತಿ ಹಾಕಿಸದಿದ್ದರೆ ಕೂಲಿ ಪಾವತಿ ಆಗುವುದಿಲ್ಲ ಎಂದರು.

ತಾಪಂ ಗ್ರಾಮೀಣ ಉದ್ಯೋಗ ಖಾತ್ರಿಯ ಸಹಾಯಕ ನಿರ್ದೇಶಕ ಧರ್ಮರ ಕೃಷ್ಣಪ್ಪ ಮಾತನಾಡಿ, ಮುಂಜಾನೆ ಬೇಗ ಬಂದು ಅಳತೆಗೆ ತಕ್ಕ ಕೆಲಸ ನೀಡಿ ಬೇಗ ಮುಗಿಸಿಕೊಂಡು ಹಾಜರಾತಿ ನೀಡಿ ಮನೆಗೆ ಹೋಗಬೇಕು. ಎರಡು ಬಾರಿ ಹಾಜರಾತಿ ನೀಡಿದವರಿಗೆ 370 ರೂ. ಕೂಲಿ ತಮ್ಮ ಖಾತೆಗೆ ನೇರವಾಗಿ ವರ್ಗಾವಣೆಯಾಗುತ್ತದೆ ಎಂದರು.

ಸೂರಣಗಿ ಪಿಡಿಒ ಜಿಎಂ ರೋಣದ, ಟಿಐಇಸಿ ಮಂಜುನಾಥ್ ಸ್ವಾಮಿ ಎಚ್.ಎಂ,. ಟಿ ಎಂ ಐ ಎಸ್ ಚಂದ್ರಶೇಖರ್ ಹಳ್ಳಿ, ತಾಂತ್ರಿಕ ಸಹಾಯಕ ಫಕೀರೇಶ ನಿಟ್ಟಾಲಿ, ಬಿ ಎಫ್ ಟಿ ಕಾಸಿಂ ಸಾಬ್ ನದಾಫ್, ಡಿಇಒ ಗುಡ್ಡದಪ್ಪ ಕಮತ, ಕಾಯಕ ಬಂಧುಗಳು, 450 ನರೇಗಾ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

> **ನರೇಗಾ ಕೂಲಿ ಕಾರ್ಮಿಕರು ಕೆಲಸದಿಂದ ಬಂದ ಕೂಲಿ ಹಣವನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಿ. ಮಕ್ಕಳ ಶಿಕ್ಷಣದ ಅಗತ್ಯತೆಗಳಿಗೆ, ಬಳಸಿಕೊಳ್ಳಬೇಕು.**
>
> ■ **ಮಂಜುಳಾ ಹಕಾರಿ, ತಾಪಂ ಇಒ**

> **2026-27ರ ಕ್ರಿಯಾಯೋಜನೆ ಅನುಮೋದನೆ ನಂತರ ಹಾಗೂ ಮುಂಗಾರು ಮಳೆ ಬಿದ್ದು ಕೃಷಿ ಚಟುವಟಿಕೆ ಪ್ರಾರಂಭವಾಗುವವರೆಗೂ ಕೆಲಸ ನೀಡಲಾಗುವುದು.**
>
> ■ **ಧರ್ಮರ ಕೃಷ್ಣಪ್ಪ, ತಾಪಂ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ)**



ಬೃಹತ್ ಜಲಾಗಾರ ಕಾಮಗಾರಿ ಸ್ಥಳಾಂತರಕ್ಕೆ ಆಗ್ರಹ

◆ **ಲಕ್ಷ್ಮೇಶ್ವರ:** ಪಟ್ಟಣದ ಪುರಸಭೆ ಕಲಾ ಮಹಾವಿದ್ಯಾಲಯ ಕ್ಯಾಂಪಸ್‌ನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ಮಾಣ ಮಾಡುತ್ತಿರುವ ಬೃಹತ್ ಜಲಾಗಾರ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಿ ಬೇರೆಡೆ ಸ್ಥಳಾಂತರಿಸಬೇಕು ಎಂದು ಕರವೇ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಶರಣು ಗೋಡಿ ಮತ್ತು ದಲಿತ ಯುವ ಮುನ್ನಡೆ ರಾಜ್ಯಾಧ್ಯಕ್ಷ ಡಿ.ಬಿ ಫಕೀರಪ್ಪ ನೇತೃತ್ವದಲ್ಲಿ ಆಗ್ರಹಿಸಿದ್ದಾರೆ.

ಈ ವೇಳೆ ಮಾತನಾಡಿದ ಶರಣು ಗೋಡಿ, ಪುರಸಭೆ ಕಲಾ ಮಹಾವಿದ್ಯಾಲಯಕ್ಕೆ ನೂರಾರು ವರ್ಷಗಳ ಸಾಧನಾ ಶ್ರೇಷ್ಠ ಇತಿಹಾಸವಿದೆ. ಕೆಲವೇ ದಿನಗಳಲ್ಲಿ ಈ ಪದವಿ ಕಾಲೇಜು ಸರ್ಕಾರಕ್ಕೆ ಹಸ್ತಾಂತರಗೊಳ್ಳಲಿದೆ. ಕಾಲೇಜು ಕಟ್ಟಡ ಸೇರಿ ಇಲ್ಲಿರುವುದು ಕೇವಲ 2 ಎಕರೆ 17 ಗುಂಟೆ ಮಾತ್ರ. ಇದರಲ್ಲಿ ಕಾಲೇಜು ಕಟ್ಟಡ, ಲೈಬ್ರರಿ, ಕಾರ್ಯಾಲಯ ನಿರ್ಮಾಣಗೊಂಡಿದೆ. ಉಳಿದ ಅಲ್ಪಸ್ವಲ್ಪ ಖಾಲಿ ಜಾಗದಲ್ಲಿ ಟ್ಯಾಂಕ್ ನಿರ್ಮಾಣಗೊಂಡರೆ ಭವಿಷ್ಯದಲ್ಲಿ ಶಿಕ್ಷಣ, ಕ್ರೀಡೆ ಇತರೇ ಪಠ್ಯೇತರ ಚಟುವಟಿಕೆಗಳಿಗೆ ಜಾಗವೇ ಇಲ್ಲದಂತಾಗುತ್ತದೆ. ಇದೇ ಕ್ಯಾಂಪಸ್‌ನಲ್ಲಿ ಈಗಾಗಲೇ ಕೇಂದ್ರ ಹವಾಮಾನ ಇಲಾಖೆ ಮ್ಯಾಪಿಂಗ್ ಸೆಂಟರ್ ಅಳವಡಿಸಿ ಇದನ್ನು ಯಾರೂ ಒತ್ತುವರಿ, ಅಡಚಣೆ ಮಾಡಬಾರದು ಎಂಬ ಸೂಚಿಸಿದ್ದಾರೆ. ಕಾಲೇಜು ನಿರ್ಮಾಣ, ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಈ ಭೂಮಿಯನ್ನು ದಾನ ಮಾಡಿದ್ದಾರೆ. ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಮಾಡುವ ಕಾಮಗಾರಿಗೆ ನಮ್ಮದೇನೂ ತಕರಾರಿಲ್ಲ. ಆದರೆ ಜಲಾಗಾರ ನಿರ್ಮಾಣಕ್ಕೆ ಪಟ್ಟಣದಲ್ಲಿ ಸಾಕಷ್ಟು ಸ್ಥಳಾವಕಾಶ (ಸಿಎ ಸೈಟ್) ಗಳಿವೆ. ಆದ್ದರಿಂದ ಬೇರೆ ಜಾಗದಲ್ಲಿ ನಿರ್ಮಾಣ ಮಾಡಬೇಕು ಎಂದರು.

ದಲಿತ ಯುವ ಮುನ್ನಡೆ ಸಂಘಟನೆಯ ಡಿ.ಬಿ. ಫಕೀರಪ್ಪ ಮಾತನಾಡಿ, ಪುರಸಭೆಯವರು ಗುತ್ತಿಗೆದಾರರ ತಾಳಕ್ಕೆ ತಕ್ಕಂತೆ ಕುಣಿದಿದ್ದಾರೆ. ಕಾಲೇಜು ಅಭಿವೃದ್ಧಿ ಸಮಿತಿ, ಊರಿನ ಹಿರಿಯರ ಅಭಿಪ್ರಾಯ ಪಡೆಯದೇ ಕಾಮಗಾರಿಗೆ ಪರವಾನಗಿ ನೀಡಿರುವುದು ಸರಿಯಲ್ಲ. ಕಾಮಗಾರಿ ಸ್ಥಳದಲ್ಲಿನ ಗಿಡ-ಮರಗಳನ್ನು ತೆರವುಗೊಳಿಸಿದ್ದಾರೆ. ಕಾಲೇಜಿನ ಕ್ಯಾಂಪಸ್‌ನಲ್ಲಿ ತಗಡಿನ ಶೆಡ್ ನಿರ್ಮಾಣ, ಕಬ್ಬಿಣ, ಮರಳು, ಖಡಿ ಇತರೇ ಸಾಮಗ್ರಿಗಳನ್ನು ಸಂಗ್ರಹಿಸಿ ನಿತ್ಯದ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಪಡಿಸಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ನಾಗೇಶ ಅಮರಾಪುರ, ಮಹಾಂತೇಶ ಮನಕವಾಡ, ದುದ್ದು ತೋಟದ, ಮಹಾಂತೇಶ ಉಮಚಗಿ ಇತರರಿದ್ದರು.



ನಾಳೆಯಿಂದ ಮೇ ಸಾಹಿತ್ಯ ಸಮ್ಮೇಳನ



◆ **ಗದಗ:** ದಲಿತರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಮೇ ಸಾಹಿತ್ಯ ಮೇಳ ಪ್ರತಿ ವರ್ಷ ಆಯೋಜನೆ ಮಾಡಿಕೊಂಡು ಬರಲಾಗಿದ್ದು, ಪ್ರಸಕ್ತ ವರ್ಷ ಸಂವಿಧಾನಿಕ ಪ್ರಜಾಸತ್ತೆಯ ಮೇಲಿನ ದಾಳಿ ಎನ್ನುವ ಹೆಸರಿನ ಮೇಲೆ 12ನೇ ಮೇ ಸಾಹಿತ್ಯ ಸಮ್ಮೇಳನ ಮೇ 16, 17ರಂದು ಹುಬ್ಬಳ್ಳಿಯಲ್ಲಿ ನಡೆಯಲಿದೆ ಎಂದು ಡಾ.ರಾಮಚಂದ್ರ ಹಂಸನೂರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಉದ್ಘಾಟನೆಯನ್ನು ಮಾನಸ, ಬೆಂಗಳೂರು ನೇರವೇರಿಸಲಿದ್ದಾರೆ. ಅತಿಥಿಗಳಾಗಿ ಪಲ್ಲವ ವೆಂಕಟೇಶ, ಸುರೇಶ ಬಿಜಾಪುರ, ಎಸ್ .ಎ.ಮುಲ್ಲಾ, ಎಲ್. ಎಚ್. ಅರುಣಕುಮಾರ ಆಗಮಿಸಲಿದ್ದಾರೆ. ಚಿತ್ರಕಲಾ ಪ್ರದರ್ಶನ ಮಳಿಗೆ'ಯನ್ನು ಶ್ಯಾಮಲಾ ಗುರುಪ್ರಸಾದ್ ಉದ್ಘಾಟಿಸಲಿದ್ದಾರೆ ಎಂದರು. ದಿಕ್ಸೂಚಿ ಮಾತುಗಳನ್ನಾಡಲು ನ್ಯಾ.ಬಿ.ಜಿ. ಕೋಳ್ಸೆ ಪಾಟೀಲ್ ಮುಂಬೈನ ಪಾಣೆಯಿಂದ ಆಗಮಿಸಲಿದ್ದಾರೆ. ಜೊತೆಗೆ ವಿ. ಬಾಲಸುಬ್ರಮಣಿಯನ್ ಹಾಗೂ ಕೆ.ನೀಲಾ ಆಗಮಿಸಲಿದ್ದಾರೆ. ಗುರುನಾಥ ಉಳ್ಳಿಕಾಶಿ, ಮಹೇಶ ಪತ್ತಾರ ಹಕ್ಕೋತ್ತಾಯಗಳ ಮಂಡನೆ ಮಾಡಲಿದ್ದಾರೆ ಎಂದರು. ಈ ಕಾರ್ಯಕ್ರಮದಲ್ಲಿ ಹಲವಾರು ವಿಷಯಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಯಲಿದ್ದು, ಜಿಲ್ಲೆಯಿಂದ 15,00ಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಸಂವಿಧಾನ ಅಪಾಯದಲ್ಲಿದ್ದು, ಇದನ್ನು ಕಾಪಾಡುವ ಹಿತದೃಷ್ಟಿಯಿಂದಾಗಿ ಇಂತಹ ಹಲವಾರು ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ ಎಂದರು.

ಈ ವೇಳೆ ಬಿ.ಕೆ. ಪೂಜಾರ, ನೂರುಂದಪ್ಪ ಕೋಳೂರು, ಸರೋಜಾ ಕೋಳೂರು, ಶರಣು ಪೂಜಾರ, ಪರಶು ಕಾಳೆ, ರಮೇಶ್ ಕೋಳೂರು, ಯೂಸೂಫ್ ಮಜ್ಜಗಿ, ಮಲ್ಲಪ್ಪ ಕೊಳೂರು ಇದ್ದರು.

ಆಸ್ಪತ್ರೆಯಲ್ಲಿ ದಾದಿಯರ ಸೇವೆ ಅನನ್ಯ

◆ **ನರಗುಂದ:** ಆಸ್ಪತ್ರೆಯಲ್ಲಿ ದಾದಿಯರ ಸೇವೆ ಅತಿ ಮುಖ್ಯವಾದ ಅಂಗವಾಗಿದೆ. ಪ್ರತಿಯೊಬ್ಬ ರೋಗಿಗಳ ಜೊತೆಗೆ ನಾವು ಸಂಪರ್ಕದಲ್ಲಿ ಇರುತ್ತೇವೆ. ಕಾಯಿಲೆಗೆ ನಾವು ಕೊಡುವ ಔಷಧ ಜೊತೆಗೆ ನಮ್ಮ ಮಾತೃ ಹೃದಯದ ಪ್ರೀತಿಯಿಂದ ಅವರನ್ನು ನೋಡಿಕೊಂಡರೆಸಮಾಜದ ಪ್ರತಿಯೊಬ್ಬ ಜನರು ನಮ್ಮನ್ನು ಗೌರವದಿಂದ ಕಾಣುತ್ತಾರೆಂದು ಭಾರತಿ ಪಾಟೀಲ ಹೇಳಿದರು.

ಬಾಬಾಸಾಹೇಬ ಭಾವೆ ತಾಲೂಕು ಆಸ್ಪತ್ರೆ ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಸಹಯೋಗದಲ್ಲಿ ಆಚರಿಸಲಾದ ವಿಶ್ವ ದಾದಿಯರ ದಿನಾಚರಣೆಯಲ್ಲಿ ಮಾತನಾಡಿ, ದಿನನಿತ್ಯದ ಕರ್ತವ್ಯದಲ್ಲಿ ಯಾವುದೇ ರಜೆಯನ್ನು ತೆಗೆದುಕೊಳ್ಳುವುದೇ ಸೇವೆ ಮಾಡುವ ಯಾವುದಾದರೂ ಒಂದು ವೃತ್ತಿ ಇದ್ದರೆ ಅದು ದಾದಿಯರ ವೃತ್ತಿ ಮಾತ್ರ, ಒಬ್ಬ ವ್ಯಕ್ತಿಗೆ ಔಷಧೀಯ ಜೊತೆಗೆ ನಮ್ಮ ಭರವಸೆಯ ಮಾತುಗಳು ಆ ವ್ಯಕ್ತಿಯ ಜೀವನವನ್ನು ಇನ್ನಷ್ಟು ಚೇತರಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದರು.

ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ.ಜಡೇಶ ಭದ್ರಗೌಡ್ರ ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಯಾವುದಾದರೂ ಒಂದು ಸೇವೆ ಅದು ಸಮಾಜಕ್ಕೆ ಹಾಗೂ ಇಲಾಖೆಗೆ ಗೌರವ ತರುವಂತಹ ಯಾವುದಾದರೂ ಕೆಲಸಕಾರ್ಯ ಇದ್ದರೆ ಅದು ದಾದಿಯರ ಹುದ್ದೆ ಎಂದರು. ರಾಜ್ಯ ಸರ್ಕಾರಿನೌಕರಸಂಘದತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಮಾತನಾಡಿ, ದಿನದ 24 ಗಂಟೆ ಸೇವೆ ಸಲ್ಲಿಸುತ್ತಿರುವ ದಾದಿಯರ ಸೇವೆ ಈಶ್ವರನಿಗೆ ಸಮನಾದ ಸೇವೆ ಎಂದರು. ನರಗುಂದ ಆರೋಗ್ಯ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸದ 12 ಜನ ದಾದಿಯರನ್ನು ಗುರುತಿಸಿ ಅವರನ್ನು ಸನ್ಮಾನಿಸಲಾಯಿತು. ಇತರರು ಕೂಡ ಅವರನ್ನು ಅನುಸರಿಸುವಂತೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ರೇಣುಕಾ ಕೊರವನ್ನವರ ಹೇಳಿದರು. ಪ್ರದೀಪ ಕುರುಗೋವಿನಕೊಪ್ಪ ಹಾಗೂ ಸುರೇಶ ಹಡಪದ ನಿರೂಪಿಸಿದರು. ಸರೋಜಿನಿ ಬಿರಾದಾರ ವಂದಿಸಿದರು.



ನವ ಭಾರತ ನಿರ್ಮಾಣಕ್ಕೆ ಬದ್ಧರಾಗೋಣ: ದೊಡ್ಡಮನಿ

◆ **ಲಕ್ಷ್ಮೇಶ್ವರ:** ಸರ್ವರಿಗೂ ಸಮಬಾಳು ಎಂಬ ತತ್ವದಡಿ ದೇಶದ ಎಲ್ಲ ವರ್ಗ, ಜಾತಿ ಮತ್ತು ಧರ್ಮಗಳ ಜನರಿಗೆ ಸಮಾನ ನ್ಯಾಯ ಕಲ್ಪಿಸಿದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್‌ರಾಮ್ ಅವರ ತತ್ವ, ಚಿಂತನೆ, ಆದರ್ಶವನ್ನು ಅಳವಡಿಸಿಕೊಂಡು ನವ ಭಾರತ ನಿರ್ಮಾಣಕ್ಕೆ ಬದ್ಧರಾಗೋಣ ಎಂದು ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಹೇಳಿದರು.

ಅವರು ಶಿಗ್ಲಿ ಗ್ರಾಮದಲ್ಲಿ ಮಾದಿಗ ಮಹಾಸಭಾ ರಿ (ಬೆಂಗಳೂರ) ಶಿಗ್ಲಿ ಗ್ರಾಮ ಘಟಕದಿಂದ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್‌ರಾಮ್ ಅವರ ಜಯಂತೋತ್ಸವ ಅಂಗವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದರು.

ಫಕೀರೇಶ ಮ್ಯಾಟಣ್ಣವರ ಮಾತನಾಡಿ, ಸಮಾಜದಲ್ಲಿ ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಹೀಗೆ ಎಲ್ಲ ರೀತಿಯ ಸ್ಥಾನಮಾನಗಳನ್ನು ಕಲ್ಪಿಸಿದ ಅಂಬೇಡ್ಕರರ ತತ್ವ-ಸಿದ್ಧಾಂತಗಳು, ಸಂದೇಶ-ವಿಚಾರಗಳು ದಾರಿ ದೀಪವಾಗಿವೆ. ಸಮಾಜ ಬಾಂಧವರು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡಬೇಕು ಎಂದರು.

ಕೆಪಿಸಿಸಿ ಸದಸ್ಯೆ ಸುಜಾತಾ ದೊಡ್ಡಮನಿ ಮಾತನಾಡಿ, ಸಮ ಸಮಾಜದ ಹಿತಕ್ಕಾಗಿ ಮಾಡಿದ ತ್ಯಾಗ ಮೆಲುಕು ಹಾಕುವ ಮೂಲಕ ಅವರನ್ನು ಗೌರವಿಸುವ, ಸ್ಮರಿಸುವ ಮನೋಧರ್ಮ ನಮ್ಮದಾಗಬೇಕು ಎಂದರು. ಡಿವೈಎಸ್‌ಪಿ ಎಸ್. ಎಂ ರಾಗಿ, ಪಿಎಸ್‌ಐ ನಾಗರಾಜ ಗಡಾದ, ಜಿಪಂ ಮಾಜಿ ಅಧ್ಯಕ್ಷ ಎಸ್ .ಪಿ ಬಳಿಗಾರ, ಡಿ.ವೈ. ಹುನಗುಂದ, ಯಲ್ಲಪ್ಪ ತಳವಾರ, ಮುತ್ತು ಯಲವಗಿ, ಮುದಕಪ್ಪ ಗದಾಡ, ಬಸಣ್ಣ ಕರ್ಜಗಿ, ರಂಜನಗೌಡ ಪಾಟೀಲ, ಪ್ರವೀಣ ಹುಲಗೂರ, ರಾಮಣ್ಣ ಲಮಾಣಿ, ಅಶೋಕ ಶಿರಹಟ್ಟಿ, ಎನ್.ಡಿ ಮೇಗಿಲಮನಿ, ಶಿವಾನಂದ ತಳಗೇರಿ, ಆನಂದ ಕರ್ಜಗಿ ಸೇರಿ ಅನೇಕರಿದ್ದರು. ದೇವೇಂದ್ರಪ್ಪ ಸುಂಕಮ್ಮನವರ ನಿರೂಪಿಸಿದರು.



ಅಧ್ಯಕ್ಷರಾಗಿ ಅವಿರೋಧ ಆಯ್ಕೆ

◆ **ನರಗುಂದ:** ಪಟ್ಟಣದ ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಬಾಕಿ ಉಳಿದಿರುವ ಎರಡು ವರ್ಷಗಳ ಅವಧಿಗೆ ತಾಲೂಕು ಘಟಕದ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಸಮಿತಿಗೆ ಸದಸ್ಯರ ಆಯ್ಕೆ ಪ್ರಕ್ರಿಯೆ ಜರುಗಿತು.

ಪ್ರವೀಣಕುಮಾರ ಅರ್ಜುನಪ್ಪ ಅಳಗವಾಡಿ ಇವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಸದಸ್ಯರಾಗಿ ಪ್ರವೀಣ ಬ್ಯಾಹಟ್ಟಿ, ಬಸವರಾಜ ಬೋಳಶೆಟ್ಟಿ, ಪ್ರಶಾಂತಗೌಡ ಪಾಟೀಲ, ಪ್ರಕಾಶ ಯತ್ನಳ್ಳಿ, ಮಂಜುನಾಥಗೌಡ ಪಾಟೀಲ, ನಾಗರಾಜ ಪ್ರಚಂಡಿ, ಶಾಲಿನಿ ಗವಿಮಠ, ಯಶೋಧ ಮಂಗಳಿ, ಪೂಜಾ ವಸ್ತ್ರದ, ಜ್ಯೋತಿ ಪತ್ರಿ, ರೇಣುಕಾ ಶಿವನಗೌಡ್ರ, ಸುಜಾತಾ ಹಸಬಿ, ಮಂಜುಳಾ ಹಸಬಿ, ಶಂಕರ ಮುದೆನವರ, ಬಸವರಾಜ ಗಡೇಕಾರ, ಯು ಎಚ್ ಹಿರೇಮಠ, ಸತೀಶ ಅಂಗಡಿ, ರಾಚನಗೌಡ ಲಿಂಗನಗೌಡ್ರ, ನಂದೀಶಗೌಡ ಹುಡೇದಮನಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಶಿವಯೋಗೆಪ್ಪ ಹೆಗಡಾಳ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಚನ್ನಯ್ಯ ಸಂಗಳಮಠ, ಅಪ್ಪನಗೌಡ ನಾಯ್ಕರ, ಚನ್ನಬಸಪ್ಪ ಕಂಠಿ, ಸಿ.ಎಸ್.ಪಾಟೀಲ, ರಾಜುಗೌಡ ಪಾಟೀಲ, ಅಜೀತಗೌಡ ಪಾಟೀಲ, ನಂದೀಶ ಮಠದ, ಶಿವಶಂಕರಯ್ಯ ಹಿರೇಮಠ, ಸುಕನ್ಯಾ ಸಾಲಿ ಇತರರಿದ್ದರು.



ಪ್ರತಿಯೊಬ್ಬರೂ ಕಡ್ಡಾಯವಾಗಿ ಶಿಕ್ಷಣ ಪಡೆಯಲಿ: ಎಸ್.ಬಿ. ಗವಿ

◆ **ನರೇಗಲ್ಲ:** ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿರುವ ಶಾಲಾ ದಾಖಲಾತಿ ಆಂದೋಲನದ ಅಂಗವಾಗಿ ಜಕ್ಕಲಿ ಗ್ರಾಮದ ಕೆ.ಜಿ.ಎಸ್ ಹಾಗೂ ಎಂ.ಸಿ.ಎಸ್ ಸರ್ಕಾರಿ ಶಾಲೆಗಳಲ್ಲಿ ಬುಧವಾರ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಮುಖ್ಯ ಶಿಕ್ಷಕ ಎಸ್. ಬಿ. ಗವಿ ಮಾತನಾಡಿ, 6 ರಿಂದ 14 ವರ್ಷದೊಳಗಿನ ಪ್ರತಿಯೊಂದು ಮಗು ಕಡ್ಡಾಯವಾಗಿ ಶಾಲೆಗೆ ಸೇರಬೇಕು. ಶಿಕ್ಷಣದಿಂದ ಯಾವುದೇ ಮಗು ವಂಚಿತವಾಗಬಾರದು ಎಂಬ ಉದ್ದೇಶದಿಂದ ಸರ್ಕಾರ ಶಾಲಾ ದಾಖಲಾತಿ ಆಂದೋಲನ ಹಮ್ಮಿಕೊಂಡಿದೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ ಉತ್ತಮ ಶಿಕ್ಷಣದ ಸದುಪಯೋಗ ಪಡೆಯಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಹಾಗೂ ಉಚಿತ ಶಿಕ್ಷಣದೊಂದಿಗೆ ಪಠ್ಯಪುಸ್ತಕ, ಸಮವಸ್ತ್ರ ಶೂ-ಸಾಕ್ಸ್, ಪೌಷ್ಟಿಕ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ, ಕಂಪ್ಯೂಟರ್ ಶಿಕ್ಷಣ, ಸುಸಜ್ಜಿತ ಗ್ರಂಥಾಲಯ ಸೇರಿದಂತೆ ಹಲವು ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ ಎಂದರು.

ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಅನುಭವಿ ಶಿಕ್ಷಕರಿಂದ ನಲಿ-ಕಲಿ ಪದ್ಧತಿಯಲ್ಲಿ ಬೋಧನೆ ನಡೆಯುತ್ತಿದ್ದು, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಜೊತೆಗೆ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನೂ ನಿಯಮಿತವಾಗಿ ನಡೆಸಲಾಗುತ್ತಿದೆ ಎಂದರು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವ ಕಾರ್ಯದಲ್ಲಿ ಸಾರ್ವಜನಿಕರು ಹಾಗೂ ಪೋಷಕರು ಸಹಕರಿಸಬೇಕು ಎಂದರು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಎಚ್. ಎಸ್. ಬಿಂಗಿ, ಶಿಕ್ಷಕ ಎಂ. ವಿ. ತಾಳಿಕೋಟಿ, ಎಸ್. ಎ. ಪಲ್ಲೇದ, ಶಿಕ್ಷಕಿಯರಾದ ಎ. ಬಿ. ಜಕ್ಕಲಿ, ಎ. ಪಿ. ಶೆಟ್ಟರ, ಪಿ. ಜಿ. ಹುಯಿಲಗೋಳ, ಎಸ್. ಎಸ್. ಯಲ್ಲರಡ್ಡಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಅಂದಪ್ಪ ಮಾದರ, ಮುತ್ತು ಮೇಟಿ, ಬಸವರಾಜ ಮುಕ್ಕಣ್ಣವರ, ಹನಮಪ್ಪ ಜಂಗಣ್ಣವರ, ವಿಜಯ ತಳವಾರ, ಕಳಕಪ್ಪ ರಂಗಣ್ಣವರ, ಶಿವಯೋಗಿ ಹಡಪದ, ಸಂಗಪ್ಪ ಕಿಟಗೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ದಕ್ಷಿಣ ಭಾರತ ಪ್ರತ್ಯೇಕ ರಾಷ್ಟ್ರವನ್ನಾಗಿಸಲು ಹುನ್ನಾರ

ವಿಶ್ವ ಹಿಂದೂ ಪರಿಷತ್ ಅಖಿಲ ಭಾರತ ಕೇಂದ್ರೀಯ ಸಂಯುಕ್ತ ಮಹಾಮಂತ್ರಿ ಸ್ಥಾನು ಮಾಲಯನ್ ಜಿ. ಆಕ್ರೋಶ



ಯಲ್ಲಾಪುರ: ಇಂದು ಹಿಂದೂಗಳಿಗೆ ಸಹಾಯ ಮಾಡದೇ ಇರುವುದೇ ಜಾತ್ಯಾತೀಯತೆ ಎಂಬಂತಾಗಿದೆ. ಹಿಂದೂ ವಿರೋಧಿಗಳು ದಕ್ಷಿಣ ಭಾರತವನ್ನು ಪ್ರತ್ಯೇಕ ರಾಷ್ಟ್ರವನ್ನಾಗಿಸಲು ಹುನ್ನಾರ ನಡೆಸುತ್ತಿದ್ದಾರೆ. ಇದನ್ನು ತಡೆಗಟ್ಟಲು ಸಂಘಟಿತ ಹಿಂದೂ ಶಕ್ತಿ ಹೊರಬರಬೇಕಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ಅಖಿಲ ಭಾರತ ಕೇಂದ್ರೀಯ ಸಂಯುಕ್ತ ಮಹಾಮಂತ್ರಿ ಸ್ಥಾನು ಮಾಲಯನ್ ಜಿ. ಹೇಳಿದರು.

ಅವರು ಗುರುವಾರ ಸಂಜೆ ಪಟ್ಟಣದ ವಿಶ್ವದರ್ಶನ ಸಮೂಹ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆಯುತ್ತಿರುವ ವಿಶ್ವ ಹಿಂದೂ ಪರಿಷತ್‌ನ ಭಜರಂಗದಳದ ಕರ್ನಾಟಕ ಉತ್ತರ ಪ್ರಾಂತ ಶೌರ್ಯ ಪ್ರಶಿಕ್ಷಣ ಶಿಬಿರದಲ್ಲಿ ಗಣ್ಯರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಮ್ಮ ಮಕ್ಕಳಿಗೆ ಹಿಂದೂ ಸಂಪ್ರದಾಯ, ಹಿಂದೂ ಎಂಬ ಅಭಿಮಾನ ಕಲಿಸುತ್ತಿಲ್ಲ, ದೇವತಾ ಕಥೆ, ವೀರ ಪುರುಷರ ಕಥೆಗಳನ್ನು ತಿಳಿಸುತ್ತಿಲ್ಲ, ಹೀಗಾಗಿ ಹಿಂದೂ ಧರ್ಮದ ಮಹತ್ವ ನಮ್ಮ ಮಕ್ಕಳಲ್ಲಿ ಒಡಮೂಡುತ್ತಿಲ್ಲವಾಗಿದೆ. ಸಮಾಜದಲ್ಲಿ ಹಿಂದೂ ಧಾರ್ಮಿಕ ಭಾವನೆ ಜಾಗೃತಗೊಳಿಸಬೇಕಾಗಿದೆ. ಸಂಸ್ಕಾರ, ಶೌರ್ಯ, ಆಚರಣೆಯ ಮಹತ್ವ ತಿಳಿಸಲು ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಧರ್ಮದ ರಕ್ಷಣೆ, ಸತ್ಯಮೇವ ಜಯತೆ, ಧರ್ಮಾಚರಣೆ ವಿಶ್ವ ಹಿಂದೂ ಪರಿಷತ್‌ನ ಮುಖ್ಯ ಧ್ಯೇಯವಾಗಿದೆ. ಕಳೆದ 60 ವರ್ಷಗಳಲ್ಲಿ 61 ದೇಶಗಳಲ್ಲಿ ವಿಶ್ವಹಿಂದೂ ಪರಿಷತ್ ಶಾಖೆಗಳಿವೆ. ಆಚರಣೆ, ಯೋಗ ಧ್ಯಾನದ ಮೂಲಕ ಧರ್ಮಪ್ರಚಾರ ನಡೆಸಲಾಗುತ್ತದೆ ಎಂದರು.

ವಿಹಿಂಪ ಉತ್ತರ ಪ್ರಾಂತ ಉಪಾಧ್ಯಕ್ಷ ಗಂಗಾಧರ ಹೆಗಡೆ, ಶಿರಸಿ ಜಿಲ್ಲಾಧ್ಯಕ್ಷ ಎಸ್.ಎನ್.ಭಟ್ಟ ವಿಕಾನ ವೇದಿಕೆಯಲ್ಲಿದ್ದರು. ಗಣ್ಯರಾದ ಪ್ರಮೋದ ಹೆಗಡೆ, ಶಿವಲಿಂಗಯ್ಯ ಅಲ್ಲಯ್ಯನವರಮಠ, ಡಿ.ಶಂಕರ ಭಟ್ಟ, ಶ್ರೀಪಾದ ಭಟ್ಟ, ಪ್ರಸಾದ ಹೆಗಡೆ, ಈಶ್ವರದಾಸ ಕೊಪ್ಪೇಸರ, ಎಂ.ಬಿ.ಶೇಟ್, ವಿನಾಯಕ ಭಟ್ಟ ಕವಾಳೆ ಸಂವಾದದಲ್ಲಿ ಪಾಲ್ಗೊಂಡಿದ್ದರು.

ವಿಶ್ವ ಹಿಂದೂ ಪರಿಷತ್ ನ ಪ್ರಮುಖ ಪದಾಧಿಕಾರಿಗಳಾದ ಮಂಜಣ್ಣ ಅರೆಕಟ್ಟಾ, ನಾರಾಯಣ ನಾಯಕ, ನಾಗರಾಜ ಮದ್ಗುಣಿ, ಎಸ್.ವಿ.ಭಟ್ಟ, ಗಜಾನನ ನಾಯ್ಕ, ನಾಗೇಶ ಯಲ್ಲಾಪುರಕರ್, ವಿಶ್ವ ಹಿಂದೂ ಪರಿಷತ್ ಕರ್ನಾಟಕ ಉತ್ತರ ಪ್ರಾಂತ ಸಹಕಾರ್ಯದರ್ಶಿ ಪುಂಡಲಿಕ ದಳವಾಯಿ ಸ್ವಾಗತಿಸಿ, ನಿರೂಪಿಸಿದರು. ಸಂವಾದ ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳಿಂದ ಶೌರ್ಯ ಕವಾಯತು ಪ್ರದರ್ಶನ ನಡೆಯಿತು.

ಮೂವರು ಬಿಜೆಪಿ ಸದಸ್ಯರ ಸದಸ್ಯತ್ವ ಅನರ್ಹತೆ ವಿಚಾರಣೆಗೆ ತಡೆಯಾಜ್ಞೆ

ಗದಗ: ಇಲ್ಲಿನ ಗದಗ ಬೆಟಗೇರಿ ನಗರಸಭೆಯ ಮೂವರು ಬಿಜೆಪಿ ಸದಸ್ಯರ ಸದಸ್ಯತ್ವ ಅನರ್ಹತೆಗೆ ಸಂಬಂಧಿಸಿದಂತೆ ಬೆಳಗಾವಿ ಪ್ರಾದೇಶಿಕ ಆಯುಕ್ತರು ನಡೆಸಬೇಕಿದ್ದ ವಿಚಾರಣೆಗೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದೆ. ಇದರಿಂದಾಗಿ ಬಿಜೆಪಿಯ ಉಷಾ ದಾಸರ, ಅನಿಲ್ ಅಬ್ಬಿಗೇರಿ ಹಾಗೂ ಮುತ್ತು ಮುಶಿಗೇರಿ ಅವರ ಸದಸ್ಯತ್ವ ಮುಂದುವರಿಯಲಿದೆ.

ನಕಲಿ ಠರಾವು ಸೃಷ್ಟಿಸಿದ ಆರೋಪದ ಮೇಲೆ ಬಿಜೆಪಿಯ ಮೂವರು ನಗರಸಭಾ ಸದಸ್ಯರ ಸದಸ್ಯತ್ವ ರದ್ದುಗೊಳಿಸಿ ಪ್ರಾದೇಶಿಕ ಆಯುಕ್ತರು ಆದೇಶಿಸಿದ್ದರು. ಈ ಆದೇಶ ಪ್ರಶ್ನಿಸಿ ಬಿಜೆಪಿ ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರು. ಜತೆಗೆ ಈ ಪ್ರಕರಣ ಇತ್ಯರ್ಥಗೊಳ್ಳದೇ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಾರದು ಎಂದು ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು.

ಉಷಾ, ಅನಿಲ್ ಮತ್ತು ಮುತ್ತು ಅವರ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ, ದ್ವಿಸದಸ್ಯ ಪೀಠ ತಡೆಯಾಜ್ಞೆ ನೀಡಿತ್ತು. ಅದರ ಜತೆಗೆ, ಪ್ರಾದೇಶಿಕ ಆಯುಕ್ತರ ಬಳಿ ವಿಚಾರಣೆಗೆ ಮತ್ತೊಮ್ಮೆ ವಿನಂತಿಸಬಹುದು ಎಂದು ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿತ್ತು. ಹೈಕೋರ್ಟ್‌ನ ಆದೇಶದಂತೆ ಪ್ರಾದೇಶಿಕ ಆಯುಕ್ತರ ಕಚೇರಿಯಿಂದ ಮೇ 13ರಂದು ಮಧ್ಯಾಹ್ನ 3ಕ್ಕೆ ವಿಚಾರಣೆಗೆ ಹಾಜರಾಗುವಂತೆ ಮೂವರಿಗೆ ಮತ್ತೇ ನೋಟಿಸ್ ಜಾರಿಯಾಗಿತ್ತು.

ಪ್ರಾದೇಶಿಕ ಆಯುಕ್ತರು ಸರ್ಕಾರದ ಭಾಗ ಆಗಿರುವುದರಿಂದ ಅವರ ಮೇಲೆ ನಮಗೆ ವಿಶ್ವಾಸ ಇಲ್ಲ. ಈ ಹಿಂದೆ ಕೋರ್ಟ್ ಆದೇಶ ಇದ್ದಾಗಲೂ ನಮ್ಮವರ ಸದಸ್ಯತ್ವ ಅನರ್ಹಗೊಳಿಸಿದ್ದರು. ಚುನಾವಣಾಧಿಕಾರಿ ನ್ಯಾಯಾಲಯದ ಆದೇಶ ಮೀರಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಿದ್ದರು. ಈ ಎಲ್ಲ ಬೆಳವಣಿಗೆಗಳನ್ನು ನ್ಯಾಯಾಲಯದ ಗಮನಕ್ಕೆ ತಂದು, ಪ್ರಾದೇಶಿಕ ಆಯುಕ್ತರಿಂದ ಮತ್ತೇ ವಿಚಾರಣೆ ನಡೆಸುವುದಕ್ಕೆ ತಡೆ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ಅದರಂತೆ, ಮೇ 13ರಂದು ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ನಗರಸಭೆಯ ಬಿಜೆಪಿ ಸದಸ್ಯ ಚಂದ್ರು ತಡಸದ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿರುವ ವಿಷಯವನ್ನು ಮೇ 13ರಂದು ಮಧ್ಯಾಹ್ನ 3ಕ್ಕೆ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರಲಾಗಿದೆ. ಅವರು ಆದೇಶ ಪ್ರತಿಯನ್ನು ಮೇ 18ರ ಒಳಗೆ ಒದಗಿಸುವಂತೆ ನಮಗೆ ಗಡುವು ನೀಡಿದ್ದಾರೆ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ಆರ್‌ಸಿ ವಿಚಾರಣೆಗೆ ತಡೆ ಸಿಕ್ಕಿರುವುದರಿಂದ ನಮಗೆ ದೊಡ್ಡ ಜಯ ಸಿಕ್ಕಿದೆ. ಬಿಜೆಪಿಯ ಮೂವರು ಸದಸ್ಯರ ಸದಸ್ಯತ್ವ ಅಬಾಧಿತವಾಗಿದೆ. ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸದಂತೆ ಈ ಹಿಂದೆ ನಾವೇ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದು, ಅದನ್ನು ಈಗ ಹಿಂಪಡೆಯುವೆವು. ಇನ್ನೂ ಎಂಟೂವರೆ ತಿಂಗಳ ಅಧಿಕಾರವಧಿ ಬಾಕಿ ಇದ್ದು, ಚುನಾವಣೆ ನಡೆದರೆ ಮತ್ತೊಮ್ಮೆ ಬಿಜೆಪಿ ನಗರಸಭೆಯ ಆಡಳಿತ ಚುಕ್ಕಾಣಿ ಹಿಡಿಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕಿರುಸುದ್ದಿ

ರಾಷ್ಟ್ರೀಯ ಪ್ರಸ್ತುತಿಕರಣ ಸ್ಪರ್ಧೆಯಲ್ಲಿ ದ್ವಿತೀಯ

ಲಕ್ಷ್ಮೇಶ್ವರ: ಪಟ್ಟಣದ ವಿದ್ಯಾರ್ಥಿ ಸಮರ್ಥ ಶಿವಮೂರ್ತಯ್ಯ ಬಾಳಿಹಳ್ಳಿಮಠ ಸದ್ಯ ಹಾಸನದ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದು ರಾಷ್ಟ್ರೀಯ ಪ್ರಸ್ತುತಿಕರಣ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ನಗದು ಬಹುಮಾನ ಪಡೆದುಕೊಂಡು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿ ಕರ್ನಾಟಕ ಹೆಸರು ತಂದಿದ್ದಾನೆ.



ಇತ್ತೀಚೆಗೆ ಯೂತ್ ಯುನಿಟಿ ಫೌಂಡೇಶನ್, ಇಂಡಿಯನ್ ಇನ್ಸ್ಟಿಟ್ಯೂಟ್ ಟೆಕ್ನಾಲಜಿ ಕಾನಪುರ, ಶಿಕ್ಷಣ ಕೇಂದ್ರ ಬೃಹತ್ ಸಂಸ್ಥೆ ಇವರ ಸಹಯೋಗದಲ್ಲಿ ದೆಹಲಿ ಎನ್‌ಸಿಆರ್ ಗಾಜಿಯಾಬಾದನಲ್ಲಿ ಭಾರತ ಮತ್ತು ಅದರ ವೈಜ್ಞಾನಿಕ ವೈಭವ ಅಧ್ಯಾಯ 2 ರಾಷ್ಟ್ರೀಯ ಪ್ರಸ್ತುತಿಕರಣ ಸ್ಪರ್ಧೆಯಲ್ಲಿ ದೇಶದ ವಿವಿಧ ರಾಜ್ಯಗಳು ಮತ್ತು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ ಆಯ್ಕೆಯಾದ ಅಂತಿಮ 25 ತಂಡಗಳ ಪಟ್ಟಿಯಲ್ಲಿ ದೆಹಲಿ, ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳ ತಂಡಗಳು ಸ್ಥಾನ ಪಡೆದವು. ಕರ್ನಾಟಕದಿಂದ ಹಲವು ತಂಡಗಳು ಆಯ್ಕೆಯಾಗಿದ್ದು, ಅವುಗಳಲ್ಲಿ 'ಹಿಮ ಉಪಕ್ರಮ' ತಂಡವು 'ಅಕ್ಷೋಹಿಣಿ ಕೃಷಿ ಪಾದ ಮಾದರಿ' ಎಂಬ ವಿಷಯದೊಂದಿಗೆ ಅಂತಿಮ 25ರಲ್ಲಿ ಸ್ಥಾನ ಪಡೆದುಕೊಂಡಿದೆ ವಿದ್ಯಾರ್ಥಿ ತಂಡ ಸದಸ್ಯನಾಗಿದ್ದಾನೆ.

ವೈದ್ಯ ಹನುಮಂತ ಗೌಡರಿಗೆ ಜೀವ ವೈವಿಧ್ಯ ಪ್ರಶಸ್ತಿ

ಅಂಕೋಲಾ: ತಾಲೂಕಿನ ಬೆಳಂಬಾರದ ನಾಟಿ ವೈದ್ಯ, ಹಾಲಕ್ಕಿ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಹನುಮಂತ ಬೊಮ್ಮು ಗೌಡ ಅವರಿಗೆ ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ವತಿಯಿಂದ ಪರಿಸರ ಸಂರಕ್ಷಣೆ ಮತ್ತು ಜೀವವೈವಿಧ್ಯತೆಯ ನಿರ್ವಹಣೆ, ಸಾರ್ವಜನಿಕ ಸೇವೆಗೆ ನೀಡಲಾಗುವ ಕರ್ನಾಟಕ ಜೀವ ವೈವಿಧ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮೇ 22 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಹನುಮಂತ ಗೌಡ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನಾಟಿ ವೈದ್ಯಕೀಯ ಕ್ಷೇತ್ರದಲ್ಲಿ ಪಾರ್ಶ್ವವಾಯು ಪೀಡಿತರಿಗೆ ಗಿಡ ಮೂಲಿಕೆಯ ಔಷಧೋಪಚಾರ ನೀಡುವ ಮೂಲಕ ದೇಶದ ವಿವಿಧ ಭಾಗಗಳ ರೋಗಿಗಳಿಗೆ ಆಶಾಕಿರಣವಾಗಿರುವ ಹನುಮಂತ ಗೌಡ ಅವರು ಗಣ್ಯರೂ ಸೇರಿದಂತೆ ಹಲವಾರು ರೋಗಿಗಳಿಗೆ ಉಪಚರಿಸಿದ್ದಾರೆ. ಹಾಲಕ್ಕಿ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷರಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಅವರು ಹಲವಾರು ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಂಡಿದ್ದಾರೆ.



ಬಾಲ್ಯ ವಿವಾಹ ತಡೆದು ಬಾಲಕಿ ರಕ್ಷಣೆ

ಸಿಂಧನೂರು: ತಾಲೂಕಿನ ಗೊನ್ವಾರ ಗ್ರಾಮದ ಅಪ್ರಾಪ್ತಬಾಲಕಿಯನ್ನು ಧಡೇಸ್ಗೂರು ಗ್ರಾಮದ ಯುವಕನಿಗೆ ವಿವಾಹ ನಿಶ್ಚಯಿಸಿ ಮದುವೆ ಮಾಡಲು ಸಿದ್ಧತೆ ಮಾಡಿ ಗುರುವಾರ ಮಾಂಗಲ್ಯ ಜರುಗುತ್ತಿತ್ತು. ಮಕ್ಕಳ ರಕ್ಷಣಾ ಉಚಿತ ಸಹಾಯವಾಣಿ 1098 ದೂರಿನ ಮೇರೆಗೆ ಧಡೇಸ್ಗೂರು ಗ್ರಾಮಕ್ಕೆ ದೌಡಾಯಿಸಿದ ಅಧಿಕಾರಿಗಳು ಬಾಲಕಿ ಜನ್ಮ ದಿನಾಂಕ ಸಂಬಂಧಪಟ್ಟ ಶಾಲೆಯ ಮುಖ್ಯ ಗುರುಗಳಿಂದ ಪಡೆದು ಪರಿಶೀಲಿಸಿದಾಗ ವಿವಾಹವಾಗಲು ಸರ್ಕಾರ ನಿಗದಿಪಡಿಸಿದ 18 ವರ್ಷಕ್ಕೆ 2 ತಿಂಗಳು 6 ದಿನಗಳ ಬಾಕಿಯಿತ್ತು.ಈ ಮಾಹಿತಿಯನ್ನು ಪಡೆದ ಅಧಿಕಾರಿಗಳು ಬಾಲಕಿಯನ್ನು ರಕ್ಷಿಸಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಕಳಿಸಿ ಕೊಡಲಾಗಿದೆ. ಈ ವೇಳೆ ಸಿಂಧನೂರ ಸಿಡಿಪಿಒ ಲಿಂಗನಗೌಡ, ಪಿಡಿಒ ಸಿದ್ದಮ್ಮ, ಕಂದಾಯ ನಿರೀಕ್ಷಕರು, ಸಿಂಧನೂರು ಗ್ರಾಮೀಣ ಠಾಣೆಯ ಪೊಲೀಸರು ಸೇರಿದಂತೆ ಅಧಿಕಾರಿಗಳ ತಂಡ ಆ ಗ್ರಾಮಕ್ಕೆ ಹೋಗಿತ್ತು. ನಂತರ ತನಿಖೆ ನಡೆಸಿ ಅಪರಾಧಿಗಳಿಗೆ ಕ್ರಮ ಜರುಗಿಸಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ.

ಅಲ್ಪಸಂಖ್ಯಾತರ ಮತಬ್ಯಾಂಕ್‌ಗಾಗಿ ಹಿಜಾಬ್ ಅಸ್ತ್ರ: ಶಾಸಕ ಬೆಲ್ಲದ

ಹುಬ್ಬಳ್ಳಿ: ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲೆ ಮುನಿಸಿಕೊಂಡಿದ್ದ ಅಲ್ಪಸಂಖ್ಯಾತ ಮತ ಬ್ಯಾಂಕ್ ಉಳಿಸಿಕೊಳ್ಳಲು ಇದೀಗ ಸರ್ಕಾರ ಹಿಜಾಬ್ ಅಸ್ತ್ರ ಕೈಗೆತ್ತಿಗೊಂಡಿದೆ ಎಂದು ವಿಧಾನಸಭೆ ವಿಪಕ್ಷ ಉಪ ನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯದ ಜನರ ಸಮಸ್ಯೆಗಳನ್ನು ಪರಿಹರಿಸಬೇಕಾದ ಸರ್ಕಾರ, ಶಾಲೆಗಳಲ್ಲಿ ಕೇಸರಿ ಶಾಲು ಧರಿಸುವಂತಿಲ್ಲ ಎಂದು ಹೇಳುವ ಮೂಲಕ ಒಂದು ಸಮುದಾಯದ ಓಲೈಕೆಗೆ ಮುಂದಾಗಿದೆ.

ಶಾಲಾ-ಕಾಲೇಜುಗಳಲ್ಲಿ ಕೇಸರಿ ಶಾಲು ಧರಿಸಲು ಅವಕಾಶವಿಲ್ಲ ಎಂಬ ಮುಖ್ಯಮಂತ್ರಿಗಳ ಹೇಳಿಕೆ ಅತ್ಯಂತ ದುರದೃಷ್ಟಕರ ಮತ್ತು ಪಕ್ಷಪಾತದಿಂದ ಕೂಡಿದೆ. ಸರ್ಕಾರದ ಈ ಧೋರಣೆಯು ಹಿಂದು ಸಂಸ್ಕೃತಿ ಮತ್ತು ವಿದ್ಯಾರ್ಥಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಪ್ರಯತ್ನವಾಗಿದೆ.

ಒಂದು ಸಮುದಾಯದ ತುಷ್ಟೀಕರಣಕ್ಕಾಗಿ ಸರ್ಕಾರವು ಬಹುಸಂಖ್ಯಾತ ಹಿಂದೂ ವಿದ್ಯಾರ್ಥಿಗಳ ಹಕ್ಕುಗಳನ್ನು ಹತ್ತಿಕ್ಕುತ್ತಿದೆ. ಸಮವಸ್ತ್ರ ಸಂಹಿತೆ ಹೆಸರಿನಲ್ಲಿ ಕೇಸರಿಯನ್ನು ಮಾತ್ರ ಗುರಿ ಮಾಡಲಾಗುತ್ತಿರುವುದು ಖಂಡನೀಯ. ಕೇಸರಿ ಎನ್ನುವುದು ಕೇವಲ ಬಣ್ಣವಲ್ಲ, ಅದು ಈ ನಾಡಿನ ಸಂಸ್ಕೃತಿ ಮತ್ತು ತ್ಯಾಗದ ಸಂಕೇತ. ವಿದ್ಯಾರ್ಥಿಗಳು ಸ್ವಇಚ್ಛೆಯಿಂದ ಸಾಂಸ್ಕೃತಿಕ ಗುರುತನ್ನು ಧರಿಸುವುದನ್ನು ತಡೆಯುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ.

ರಾಜ್ಯದಲ್ಲಿ ಶೈಕ್ಷಣಿಕ ವಾತಾವರಣವನ್ನು ಸುಧಾರಿಸುವ ಬದಲು, ಇಂತಹ ವಿವಾದಾತ್ಮಕ ಹೇಳಿಕೆಗಳ ಮೂಲಕ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಮತ್ತು ಮತಬ್ಯಾಂಕ್ ರಾಜಕಾರಣ ಮಾಡಲು ಸರ್ಕಾರ ಮುಂದಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಇರಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ, ಆದರೆ, ನಿಯಮಗಳು ಎಲ್ಲರಿಗೂ ಸಮಾನವಾಗಿರಲಿ.

ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಚ್ಚುವ ಕೆಲಸವನ್ನು ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ಹೇರುವ ಮೂಲಕ ಹಿಂದೂ ವಿರೋಧಿ ನೀತಿಯನ್ನು ಸರ್ಕಾರ ಪ್ರದರ್ಶಿಸುತ್ತಿದೆ. ಸರ್ಕಾರವು ಕೂಡಲೇ ಈ ನಿರ್ಧಾರವನ್ನು ಮರು ಪರಿಶೀಲಿಸಬೇಕು ಮತ್ತು ವಿದ್ಯಾರ್ಥಿಗಳ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಬಾರದು ಎಂದು ಒತ್ತಾಯಿಸಿದ್ದಾರೆ.

ಶಿವಂ ಅಸೋಸಿಯೇಟ್ ಕಚೇರಿಗಳ ಮೇಲೆ ದಾಳಿ ಅಧಿಕಾರಿಗಳಿಂದ ಮಹತ್ವದ ದಾಖಲೆಗಳ ಪರಿಶೀಲನೆ

ಬೆಳಗಾವಿ: ಶಿವಂ ಅಸೋಸಿಯೇಟ್ ಸಂಸ್ಥೆಯ ಮಾಲೀಕ ಶಿವಾನಂದ ನೀಲಣ್ಣನವರಿಗೆ ಸೇರಿದ ಕಚೇರಿಗಳ ಮೇಲೆ ಗುರುವಾರ ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಮಹತ್ವದ ದಾಖಲೆಗಳ ಪರಿಶೀಲನೆ ನಡೆಸಿದರು.

ನಗರದ ಶಿವಬಸವ ನಗರದಲ್ಲಿರುವ ಎರಡು ಕಚೇರಿಗಳ ಮೇಲೆ ನಡೆದ ಈ ಕಾರ್ಯಾಚರಣೆ ನಗರದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ.

ಬೆಳಗಾವಿ ಉಪ ವಿಭಾಗಾಧಿಕಾರಿ ಶ್ರವಣ ನಾಯಕ್ ನೇತೃತ್ವದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ತಂಡ ಕಚೇರಿಗೆ ಭೇಟಿ ನೀಡಿ ಹಣಕಾಸು ವ್ಯವಹಾರಗಳು, ಹೂಡಿಕೆ ದಾಖಲೆಗಳು ಹಾಗೂ ಸಾರ್ವಜನಿಕರಿಂದ ಸಂಗ್ರಹಿಸಿರುವ ಹಣಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ನಡೆಸಿತು. ಈ ವೇಳೆ ಕೆಲ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿರುವ ಮಾಹಿತಿ ಲಭ್ಯವಾಗಿದೆ.

ಶಿವಂ ಅಸೋಸಿಯೇಟ್ ಸಂಸ್ಥೆ ಮಾಜಿ ಸೈನಿಕರು ಸೇರಿದಂತೆ ಸಾರ್ವಜನಿಕರಿಗೆ ಹೆಚ್ಚಿನ ಬಡ್ಡಿದರ ನೀಡುವುದಾಗಿ ಭರವಸೆ ನೀಡಿ ದೊಡ್ಡ ಪ್ರಮಾಣದಲ್ಲಿ ಹಣ ಸಂಗ್ರಹಿಸಿರುವ ಆರೋಪ ಕೇಳಿಬಂದಿದೆ. ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಜನರು ಹೂಡಿಕೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಹೂಡಿಕೆದಾರರ ಸಾವಿರಾರು ಕೋಟಿ ರೂಪಾಯಿ ಹಣ ದುರುಪಯೋಗವಾಗಿರುವ ಸಾಧ್ಯತೆಯನ್ನೂ ಅಧಿಕಾರಿಗಳು ತನಿಖೆಯ ವ್ಯಾಪ್ತಿಯಲ್ಲಿ ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ.



ಇತ್ತೀಚಿನ ದಿನಗಳಲ್ಲಿ ಶಿವಾನಂದ ನೀಲಣ್ಣನವರ್ ಅವರ ಹಲವು ಹೇಳಿಕೆಗಳು ಹಾಗೂ ಭಾಷಣಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸಾಕಷ್ಟು ವಿವಾದಕ್ಕೆ ಕಾರಣವಾಗಿದ್ದವು. ಕಡೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಅವರು, "ನಮ್ಮ ಬಳಿ 15 ಸಾವಿರ ಬಂದೂಕುಗಳಿವೆ, ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ, ನಾನು ಯಾರಿಗೂ ಹೆದರಲ್ಲ" ಎಂದು ನೀಡಿದ ಹೇಳಿಕೆ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಇದೇ ವೇಳೆ "2028ರ ಚುನಾವಣೆಯಲ್ಲಿ 224 ಸ್ಥಾನ ಗೆದ್ದು ಸಿಎಂ ಆಗುತ್ತೇನೆ" ಎಂಬ ಹೇಳಿಕೆಯೂ ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು.

ಶಿವಂ ಅಸೋಸಿಯೇಟ್ ಕಚೇರಿಗಳ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದು, ದಾಖಲೆಗಳ ಪರಿಶೀಲನೆಯ ಬಳಿಕ ಇನ್ನಷ್ಟು ಮಹತ್ವದ ಮಾಹಿತಿ ಬಹಿರಂಗವಾಗುವ ಸಾಧ್ಯತೆ ಇದೆ. ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

ಕುಸೂರ ಬಳಿ ಕಾಡುಕೋಣ ಪ್ರತ್ಯಕ್ಷ

ಮುಂಡಗೋಡ: ಕಾಡಿನಿಂದ ತಪ್ಪಿಸಿಕೊಂಡು ಬಂದ ಕಾಡು ಕೋಣವೊಂದು ತಾಲೂಕಿನ ಕುಸೂರ ಗ್ರಾಮದ ಮನೆಯೊಂದರ ಹಿತ್ತಲಲ್ಲಿ ಪ್ರತ್ಯಕ್ಷಗೊಂಡ ಅಪರೂಪದ ಘಟನೆ ನಡೆದಿದೆ.

ಕುಸೂರ ಗ್ರಾಮದ ದತ್ತಾತ್ರೇಯ ಜನ್ನು ಎಂಬುವರ ಮನೆಯ ಹಿತ್ತಲಲ್ಲಿ ಕಾಡುಕೋಣ ಕಾಡಿನಿಂದ ದಾರಿ ತಪ್ಪಿ ಆಕಸ್ಮಿಕವಾಗಿ ಬಂದಿದೆ. ಹಿತ್ತಲಲ್ಲಿರುವ ದತ್ತಾತ್ರೇಯ ಜನ್ನು ಅವರ ದನಕರುಗಳ ಜೊತೆಗೆ ಬೆರೆತು ನಿಂತುಕೊಂಡು ಅತ್ತಿತ್ತ ನೋಡುತ್ತಿತ್ತು. ನಂತರ ಹಿತ್ತಲಿಗೆ ಬಂದ ದತ್ತಾತ್ರೇಯ ಅವರು ಕಾಡುಕೋಣವನ್ನು ನೋಡಿ ಗಾಬರಿಗೊಂಡಿದ್ದಾರೆ. ಆಮೇಲೆ ಕಾಡುಕೋಣ ಬಂದ ಸುದ್ದಿ ಕೇಳಿ ಗ್ರಾಮಸ್ಥರು ಬಂದಿದ್ದಾರೆ. ಗ್ರಾಮಸ್ಥರನ್ನೆಲ್ಲ ನೋಡಿದ ಕಾಡುಕೋಣ ಭೀತಿಯಿಂದ ಕಾಡಿನತ್ತ ಪಲಾಯನ ಬೆಳೆಸಿದೆ. ಕಾಡುಕೋಣ ಹೋದ ನಂತರ ಗ್ರಾಮಸ್ಥರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.



ಗ್ಯಾಸ್ ಸಿಲಿಂಡರ್ ಸ್ಫೋಟ: ಅಕ್ಕಸಾಲಿಗರಿಬ್ಬರಿಗೆ ಗಾಯ

ವಿಜಯಪುರ: ಚಿನ್ನಾಭರಣ ತಯಾರಿಕೆ ಮಳಿಗೆಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಅಕ್ಕಸಾಲಿಗರಿಬ್ಬರು ಗಾಯಗೊಂಡಿರುವ ಘಟನೆ ನಗರದ ಸರಾಫ್ ಬಜಾರ್‌ನ ಅಂಗಡಿಯೊಂದರಲ್ಲಿ ಗುರುವಾರ ನಡೆದಿದೆ.



ಬಂಗಾಳ ಮೂಲದ ಬೀಜು (38), ನಾನಾ ಹಕ್ಕಿಂ (40) ಗಾಯಗೊಂಡ ಅಕ್ಕಸಾಲಿಗರು.

ಇಲ್ಲಿನ ಶಿರೂರ ಕಾಂಪ್ಲೆಕ್ಸ್‌ನ ಚಿನ್ನಾಭರಣ ತಯಾರಿಕ ಮಳಿಗೆಯಲ್ಲಿ ಚಿನ್ನದ ಕುಲುಮೆಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದ್ದು, ಈ ಇಬ್ಬರು ಅಕ್ಕಸಾಲಿಗರ ಮೈಗೆ ಸುಟ್ಟು ಗಾಯವಾಗಿದೆ. ಗಾಯಗೊಂಡವರನ್ನು ಆಟೋ ಮೂಲಕ ಆಸ್ಪತ್ರೆಗೆ ಸಾಗಿಸಿ, ಚಿಕಿತ್ಸೆ ನೀಡಲಾಗಿದೆ. ಯಾವುದೇ ರೀತಿಯಲ್ಲಿ ಪ್ರಾಣಾಪಾಯ ಸಂಭವಿಸಿಲ್ಲ.

ಗ್ಯಾಸ್ ಸಿಲಿಂಡರ್ ಸ್ಫೋಟದ ತೀವ್ರತೆಗೆ ಚಿನ್ನದ ಅಂಗಡಿ ಶೆಟರ್ ಒಡೆದು ಹೋಗಿದ್ದು, ಪಕ್ಕದ ಅಂಗಡಿಗೂ ಹಾನಿಗೊಳಿಸಿದೆ. ಈ ಸ್ಫೋಟದ ಸದ್ದಿಗೆ ಸರಾಫ್ ಬಜಾರ್ ಜನರು ಗಾಬರಿಗೊಂಡು, ಮಳಿಗೆ ಎದುರು ಗುಂಪಾಗಿ ಸೇರಿದ್ದರು.

ಅಲ್ಲದೆ ಈ ಸ್ಫೋಟದ ದೃಶ್ಯ ಇಲ್ಲಿನ ಗಿಫ್ಟ್ ಸೆಂಟರ್‌ವೊಂದರ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಈ ದೃಶ್ಯ ನೋಡಿದವರಲ್ಲಿ ಆತಂಕ ಮೂಡಿಸುವಂತಾಗಿದೆ. ನಗರದ ಗಾಂಧಿಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಅಪಘಾತದಲ್ಲಿ ಶಿಕ್ಷಕಿಯ ದುರ್ಮರಣ

ಸಿದ್ದಾಪುರ: ಗಣತಿ ಕಾರ್ಯದ ಒತ್ತಡದಲ್ಲಿದ್ದ ಶಿಕ್ಷಕಿಯೋರ್ವರ ಮೇಲೆ ಅಕೇಶಿಯಾ ಕಟ್ಟಿಗೆ ಹಾಕಿದ್ದ ಟ್ರ್ಯಾಕ್ಟರ್ ಒಂದು ಹತ್ತಿದ ಪರಿಣಾಮ ಶಿಕ್ಷಕಿಯು ಸ್ಥಳದಲ್ಲೇ ಮೃತಪಟ್ಟ ಹೃದಯವಿದ್ರಾವಕ ಘಟನೆ ಗುರುವಾರ ಸಂಜೆ ಸಂಭವಿಸಿದೆ.

ಇಲ್ಲಿಯ ಹೊಸೂರು ಶಾಲೆಯ ಶಿಕ್ಷಕಿ, ಬಿದ್ರಕಾನ ಪ್ರೌಢಶಾಲೆಯ ಶಿಕ್ಷಕ ಜನಾರ್ಧನ ಭಟ್ಟ ಅವರ ಪತ್ನಿ ಪೂರ್ಣಿಮಾ ಗಣಪತಿ ಭಟ್ಟ (46) ಮೃತಪಟ್ಟವರು. ಶಿಕ್ಷಕಿ ಪೂರ್ಣಿಮಾ ಅವರು ಇಂದು ಗಣತಿ ಕಾರ್ಯ ನಡೆಸಿ ಅದರ ವರದಿಯನ್ನು ಅಧಿಕಾರಿಗಳಿಗೆ ಸಲ್ಲಿಸಿದ್ದು ಅವರು ಇದನ್ನು ಬ್ಲೇಕ್(ಕಪ್ಪು) ಇಂಕಿನಲ್ಲಿ ಮಾಡಿಕೊಡಿ ಎಂದು ಶರಾ ಬರೆದರೆಂದು ಹೇಳಲಾಗಿದೆ.



ಈ ಒತ್ತಡದಲ್ಲಿದ್ದ ಅವರು ಕಾರ್ಯವನ್ನು ಪೂರೈಸಿ ಬೈಕ್ ಚಲಾಯಿಸಿಕೊಂಡು ವರದಿಯನ್ನು ನೀಡಲು ತೆರುತ್ತಿರುವಾಗ ಇಲ್ಲಿಯ ಮಳವತ್ತಿಯ ಹತ್ತಿರ ದನಗಳೆರಡು ಹೊತ್ತಿಕೊಳ್ಳುತ್ತಾ ಬೈಕಿಗೆ ಅಡ್ಡ ಬಂದಿದ್ದು ಶಿಕ್ಷಕಿಯು ನೆಲದ ಮೇಲೆ ಬಿದ್ದರೆ ಹಿಂದುಗಡೆಯಿಂದ ಬರುತ್ತಿದ್ದ ಟ್ರ್ಯಾಕ್ಟರ್‌ನ ಟೈರ್ ಶಿಕ್ಷಕಿಯ ದೇಹದ ಮೇಲೆ ಹಾಯ್ದು ಶಿಕ್ಷಕಿಯು ಸ್ಥಳದಲ್ಲೇ ಮೃತಪಟ್ಟಿದ್ದಾಗಿ ಹೇಳಲಾಗಿದೆ.

ಶಿಕ್ಷಕಿಯ ಮೃತ ದೇಹವನ್ನು ಸ್ಥಳೀಯ ತಾಲೂಕಾ ಆಸ್ಪತ್ರೆಗೆ ತರುತ್ತಿದ್ದಂತೆ ನೂರಾರು ಶಿಕ್ಷಕ ಶಿಕ್ಷಕಿಯರು ಆಗಮಿಸಿ ಮರುಗುತ್ತಿದ್ದುದು ಕಂಡುಬಂದಿದೆ. ತಹಶೀಲ್ದಾರ ಎಂ.ಆರ್.ಕುಲಕರ್ಣಿ, ಪಿಐ ಜೆ.ಬಿ.ಸೀತಾರಾಮ, ಕ್ಷೇತ್ರಶಿಕ್ಷಣಾಧಿಕಾರಿ ಎಂ.ಎಚ್.ನಾಯ್ಕ, ಪ.ಪಂ.ಮುಖ್ಯಾಧಿಕಾರಿಗಳು ಆಸ್ಪತ್ರೆಗೆ ಆಗಮಿಸಿ ಮೃತರ ಕುಟುಂಬದವರಿಗೆ ಹಾಗೂ ಶಿಕ್ಷಕ ವೃಂದದವರಿಗೆ ಸಾಂತ್ವನ ಹೇಳಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

ನಮ್ಮ ತಾಯಿ ಗಣತಿ ಕೆಲಸದ ಒತ್ತಡದಲ್ಲಿದ್ದರು. ಮಧ್ಯಾಹ್ನ ಊಟವನ್ನೂ ಸರಿಯಾಗಿ ಮಾಡಿಲ್ಲ ಎಂದು ಮೃತ ಶಿಕ್ಷಕಿಯ ಮಗ ನಂದನ ಆಸ್ಪತ್ರೆಯ ಆವಾರದಲ್ಲಿ ಕಂಬನಿ ಮಿಡಿಯುತ್ತಿದ್ದ ದೃಶ್ಯ ಮನಕಲಕುವಂತಿತ್ತು.

ಯಾದಗಿರಿಯಲ್ಲಿ ಗುಡುಗು ಸಹಿತ ಧಾರಾಕಾರ ಮಳೆ

ಯಾದಗಿರಿ: ಬಿಸಿಲಿನ ಪ್ರಖರತೆಯಿಂದ ಕಾದು ಕೆಂಡವಾಗಿದ್ದ ಗಿರಿ ಜಿಲ್ಲೆಯಾದ್ಯಂತ ಗುರುವಾರ ಮಳೆ ಸುರಿಯುವ ಮೂಲಕ ಭೂಮಿಗೆ ತಂಪೆರೆಯಿತು.

ಸಂಜೆಯಾಗುತ್ತಲೇ ಗಾಳಿ, ಗುಡುಗು, ಸಿಡಿಲು ಸಮೇತ ಮಳೆ ಸುರಿಯಿತು. ಮೂರು ತಿಂಗಳು ಕಾಯ್ದು ಕೆಂಡವಾಗಿದ್ದ ಜಿಲ್ಲೆಯ ನೆಲ ಕೆಲಹೊತ್ತು ತಂಪು ಕಂಡಿತು. ಸಂಜೆ ವೇಳೆ ಏಕಾಏಕಿ ಮೋಡ ಕವಿದು ಗಾಳಿ ಬೀಸುತ್ತಲೇ ತಣ್ಣನೇಯ ವಾತವರಣ ಸೃಷ್ಟಿಯಾಯಿತು.



ಈ ವರ್ಷದ ಬೇಸಿಗೆ ಮುಗಿಯಲು ಇನ್ನೂ 15ದಿನಗಳ ಬಾಕಿ ಇದ್ದು, ಈ ಸಲ ಒಂದು ವಾರದ ಮುಂಚೆಯೇ ಮಾನಸೂನ ಜಿಲ್ಲೆಗೆ ಪ್ರವೇಶ ಪಡೆಯುತ್ತದೆ ಎಂಬ ಲೆಕ್ಕಾಚಾರದಲ್ಲಿ ಹವಮಾನ ಇಲಾಖೆ ಇದ್ದು, ಬುಧವಾರದಿಂದ ಮೂರುದಿನಗಳವರೆಗೆ ಜಿಲ್ಲೆಯಲ್ಲಿ ಬೆಳಗ್ಗೆ ಕೆಂಡದಂತಹ ಬಿಸಿಲು ರಾಚಿ ನಂತರ ಇಳಿಹೊತ್ತಿನಲ್ಲಿ ಗುಡುಗು ಮಿಶ್ರಿತ ಗಾಳಿಯೊಂದಿಗೆ ಮಳೆಯಾಗುವ ನಿರೀಕ್ಷೆ ಇತ್ತು ಅದರಂತೆಯೇ ಬೇಸಿಗೆ ಮುಗಿಯುವ ಪೂರ್ವದಲ್ಲಿಯೇ ತಂಪಿನ ವಾತವರಣದಿಂದಾಗಿ ಜನರು ನಿಟ್ಟಿಸಿರು ಬಿಟ್ಟರು.

ಶಹಾಪುರ, ಸುರಪುರ, ನಾರಾಯಣ ಪುರ, ವಡಗೇರಾ, ಸೈದಾಪುರ, ಗುರುಮಠಕಲ್ ತಾಲೂಕು ಸೇರಿದಂತೆಯೇ ವಿವಿಧ ಹಳ್ಳಿಗಳಲ್ಲಿ ಗುರುವಾರ ಮಧ್ಯಾಹ್ನವೇ ಗುಡುಗು ಮಿಶ್ರತ ಮಳೆ ಆರಂಭವಾಗಿದೆ. ಕೆಲವಡ ತಾಸುಗಟ್ಟಲೇ ಮಳೆಯಾದ ವರದಿಯಾಗಿದೆ. ಸಂಜೆ ಹೊತ್ತು ಎಡಬಿಡದೇ ಗುಡುಗು ಸಹಿತ ಸಿಡಿಲು ಅರ್ಭಟಿಸಿದೆ ನಗರದಲ್ಲಿ ಮಧ್ಯಾಹ್ನ 3ಕ್ಕೆ ಮೋಡಕವಿದ ವಾತವರಣ ಮೂಡಿದ್ದರೂ, ಸಂಜೆ 4.30ಕ್ಕೆ ಗುಡುಗು ಸಹಿತ ಸಿಡಿಲಿನ ಅರ್ಭಟದೊಂದಿಗೆ ಧಾರಾಕಾರವಾಗಿ ಮಳೆ ಸುರಿಯಿತು ಶಹಾಪುರದಲ್ಲಿ ಮಧ್ಯಾಹ್ನ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದೆ.

ಇದೇ ವಾತವರಣ ಶುಕ್ರವಾರವೂ ಮುಂದುವರೆಯಲಿದೆ. ಆದರೇ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಕೆಂಡದಂತಹ ಬಿಸಿಲು ಇದ್ದು, ಬಿಸಿ ಝಳ ಬೀಸಿ ಬೆವರು ಸುರಿದು ಜೀವರಾಶಿಗಳಿಗೆ ಹೈರಾಣ ಆಗುತ್ತಲೇ ಸಂಜೆ ಯಥಾ ಪ್ರಕಾರ ಮೋಡಕವಿದ ವಾತವರಣ ಸೃಷ್ಟಿಯಾಗಿ ಮಳೆ ಸುರಿಯುತ್ತದೆ ಜತೆಗೆ ಗುಡುಗು, ಗಾಳಿ, ಸಿಡಲಿನ ಅರ್ಭಟವು ಜೋರಾಗಿ ಇರಲಿದೆ ಎಂದು ಹವಾಮಾನ ಇಲಾಖೆಯ ಮಾಹಿತಿ ಇದೆ ಸಂಜೆಯವರೆಗೂ ಈ ಮಳೆಯಿಂದ ಹಾನಿಯಾದ ವರದಿಯಾಗಿಲ್ಲ, ಹಳ್ಳಿಗಳಲ್ಲಿ ಮಾತ್ರ ಎಡಬಡದೇ ಮಳೆ ಬಂದಿದೆ ಎಂಬ ಮಾಹಿತಿ ಇದೆ.

ಭಾರೀ ಮಳೆ-ಗಾಳಿಗೆ ಜನಜೀವನ ಅಸ್ತವ್ಯಸ್ತ



ಮುಂಡಗೋಡ: ತಾಲೂಕಿನ ಹುನಗುಂದ ಗ್ರಾಮದಲ್ಲಿ ಭಾರೀ ಮಳೆ ಗಾಳಿಗೆ ಮನೆಯ ಮೇಲ್ಛಾವಣಿಗಳು ಹಾರಿ ಹೋಗಿದ್ದು, ಹಲವು ಕಡೆ ವಿದ್ಯುತ್ ಕಂಬಗಳು ಮುರಿದು ಬಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ.

ಬುಧವಾರ ಸಂಜೆ ಭಾರೀ ಮಳೆ ಗಾಳಿಯಿಂದಾಗಿ ಹುನಗುಂದ ಗ್ರಾಮದಲ್ಲಿ ಅವಾಂತರ ಸೃಷ್ಟಿಯಾಗಿದೆ. ಹುನಗುಂದ ಗ್ರಾಮದ ಬಸವ್ವ ಎಂಬುವವರ ಮನೆಯ ಹಿಂದಿನ ಮೇಲ್ಛಾವಣಿ ಹಾರಿ ಮನೆಯ ಮುಂದಿನ ರಸ್ತೆಗೆ ಬಂದು ಬಿದ್ದಿದೆ. ಇನ್ನು ಕೆಲ ಮನೆಯ ಮೇಲ್ಛಾವಣಿ ಹಾರಿ ಹೋಗಿದೆ. ಅಲ್ಲದೆ ಕೆಲಮನೆಗಳ ಮೇಲೆ ಮರದ ಟೊಂಗೆ ಮತ್ತು ವಿದ್ಯುತ್ ಕಂಬಗಳು ಬಂದಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಮೇಲ್ಛಾವಣಿ ಹಾರಿಹೋದ ಹಿನ್ನೆಲೆಯಲ್ಲಿ ಮನೆಯ ಒಳಗಡೆ ಮಳೆಯ ನೀರು ತುಂಬಿಕೊಂಡಿದ್ದು, ಕೆಸರುಮಯವಾಗಿದೆ. ಇದರಿಂದ ಕುಟುಂಬಗಳು ರಾತ್ರಿಯಿಡಿ ಎಲ್ಲಿ ವಾಸಮಾಡುವುದು ಅನ್ನೋ ಚಿಂತೆ ಮೂಡಿದೆ.

ನೆಲಕ್ಕುರುಳಿದ ವಿದ್ಯುತ್ ಕಂಬಗಳು:

ಭಾರೀ ಗಾಳಿಗೆ ಗ್ರಾಮದ ವಿರಕ್ತಮಠದ ಹತ್ತಿರ ಮರವೊಂದು ವಿದ್ಯುತ್ ತಂತಿಯ ಮೇಲೆ ಬಿದ್ದ ಪರಿಣಾಮ ನಾಲ್ಕೈದು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಅಲ್ಲದೆ ಗ್ರಾಮದ ವ್ಯಾಪ್ತಿಯಲ್ಲಿ ಹತ್ತಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿವೆ. ಇದೆ ರಸ್ತೆ ಮೇಲೆಯೇ ಮರವೊಂದು ಬಿದ್ದಿರುವುದರಿಂದ ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ. ಇದರಿಂದಾಗಿ ವಿದ್ಯುತ್ ವ್ಯತ್ಯಯವಾಗಿದೆ. ಒಟ್ಟಿನಲ್ಲಿ ಬುಧವಾರ ಸಂಜೆ ಸುರಿದ ಮಳೆಗೆ ಹುನಗುಂದದಲ್ಲಿ ಅವಾಂತರ ಸೃಷ್ಟಿಯಾಗಿದೆ.

ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಅನುಮೋದನೆ

ಹುಬ್ಬಳ್ಳಿ: ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವೆ ಹೊಸ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ.

ಮೇ 17ರಂದು ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಬೆಳಗ್ಗೆ 10ಗಂಟೆಗೆ ಹೊರಡುವ ರೈಲು ಮೇ 18ರಂದು ಬೆಳಗ್ಗೆ 10.30ಕ್ಕೆ ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಲ್ ತಲುಪಲಿದೆ. ಪ್ರಯಾಣದ ಹಾದಿಯಲ್ಲಿ ಈ ರೈಲು ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮಿರಜ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಹಾಗೂ ಬೆಂಗಳೂರು, ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಮಹಾರಾಷ್ಟ್ರದ ಪುಣೆ, ಮುಂಬೈ ನಗರಗಳ ನಡುವೆ ಸಂಪರ್ಕವನ್ನು ಸುಧಾರಿಸಲು ಈ ರೈಲು ಅನುಕೂಲವಾಗಿದೆ. ಎಸ್‌ಎಂವಿಟಿ ಬೆಂಗಳೂರು ಲೋಕಮಾನ್ಯ ತಿಲಕ್ ಟರ್ಮಿನಲ್-ಎಸ್‌ಎಂವಿಟಿ ಬೆಂಗಳೂರು ದ್ವಿಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಎಸ್‌ಎಂವಿಟಿ ಬೆಂಗಳೂರಿನಿಂದ ಮೇ 23ರಿಂದ ಹಾಗೂ ಎಲ್‌ಟಿಟಿ ಮುಂಬೈನಿಂದ ಮೇ 24ರಂದು ಆರಂಭವಾಗಲಿದೆ.

ಈ ರೈಲು ಒಟ್ಟು 17 ಎಲ್‌ಎಚ್‌ಬಿ ಬೋಗಿಗಳನ್ನು ಹೊಂದಿದ್ದು, ಇದರಲ್ಲಿ ಒಂದು ಎಸಿ 2-ಟೈರ್, ನಾಲ್ಕು ಎಸಿ 3-ಟೈರ್, ಆರು ಸ್ಲೀಪರ್ ಬೋಗಿಗಳು, ನಾಲ್ಕು ಸಾಮಾನ್ಯ ದರ್ಜೆಯ ಬೋಗಿಗಳು, ಒಂದು ದಿವ್ಯಾಂಗ ಸ್ನೇಹಿ ಬೋಗಿ ಒಳಗೊಂಡ ಲಗೇಜ್-ಕಮ್-ಬ್ರೇಕ್ ವ್ಯಾನ್ ಹಾಗೂ ಒಂದು ಲಗೇಜ್-ಕಮ್-ಜನರೇಟರ್ ಕಾರ್-ಕಮ್-ಬ್ರೇಕ್ ವ್ಯಾನ್ ಬೋಗಿಗಳು ಒಳಗೊಂಡಿರುತ್ತದೆ ಎಂದು ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಸಂಭ್ರಮದ ಗಣಪತಿ ದೇವರ ವರ್ಧಂತಿ ಉತ್ಸವ

ಯಲ್ಲಾಪುರ: ಪೊಲೀಸ್ ವಸತಿ ಸಮುಚ್ಚಯದಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವರ 27ನೇ ವರ್ಷದ ವರ್ಧಂತಿ ಉತ್ಸವ ವಿಜೃಂಭಣೆಯಿಂದ ನಡೆಯಿತು.ದೇವರಿಗೆ ವಿಶೇಷ ಪೂಜೆ, ಬೆಳ್ಳಿಯ ಆಭರಣ, ಹೂವಿನ ಅಲಂಕಾರ ಮಾಡಲಾಗಿತ್ತು. ಕಲಾವೃದ್ಧಿ ಹವನ ಮತ್ತು ಗಣಪತಿ ಹವನ, ಪೂರ್ಣಾಹುತಿ ಮಹಾ ಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಶಾಸಕ ಶಿವರಾಮ್ ಹೆಬ್ಬಾರ್, ಡಿವೈಎಸ್‌ಪಿ ಗೀತಾ ಪಾಟೀಲ್, ಪೊಲೀಸ್ ಅಧಿಕಾರಿ, ಸಿಬ್ಬಂದಿ ಅವರ ಕುಟುಂಬ, ಸಾರ್ವಜನಿಕರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಹಣ್ಣು ಕಾಯಿ ಸೇವೆ ಸಮರ್ಪಿಸಿ ಅನ್ನ ಪ್ರಸಾದ್ ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು.

ಸಹೃದಯ ಕಾವ್ಯ ಪ್ರಶಸ್ತಿಗೆ ಕವನ ಸಂಕಲನ ಆಯ್ಕೆ

ದಾಂಡೇಲಿ: ಸವದತ್ತಿಯ ಸಹೃದಯ ಸಾಹಿತ್ಯ ಪ್ರತಿಷ್ಠಾನದಿಂದ ನಿಡುವ ರಾಜ್ಯಮಟ್ಟದ 'ಸಹೃದಯ ಕಾವ್ಯ ಪ್ರಶಸ್ತಿ'ಗೆ ಹಳೆ ದಾಂಡೆಲಿಯ ಸ.ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯೆ ಹಾಗೂ ಸಾಹಿತಿ, ಕವಯತ್ರಿ ನಾಗರೇಖಾ ಗಾಂವಕರ ಅವರ 'ಪಾದಕ್ಕೊಂದು ಕಣ್ಣು' ಕವನ ಸಂಕಲನ ಆಯ್ಕೆಯಾಗಿದೆ.



2025 ನೇ ಸಾಲಿನಲ್ಲಿ ಪ್ರಕಟವಾದ ಅತ್ಯುತ್ತಮ ಕವನಸಂಕಲನಗಳಿಗೆ ನೀಡುವ ಪ್ರಶಸ್ತಿ ಇದಾಗಿದೆ. ಪ್ರತಿಷ್ಠಾನದ ನಾಲ್ಕನೇ ವರ್ಷದ ಸಂಭ್ರಮದಲ್ಲಿ ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಲಾಗಿದ್ದು, 100ಕ್ಕೂ ಹೆಚ್ಚು ಕೃತಿಗಳು ಸಲ್ಲಿಕೆಯಾಗಿದ್ದವು. ನಾಡಿನ ಹಿರಿಯ ಸಾಹಿತಿ, ಸಂಶೋಧಕ ಪಿ.ಜಿ. ಕೆಂಪಣ್ಣವರ ತೀರ್ಪುಗಾರರಾಗಿದ್ದರು.ಹಾವೇರಿಯ ಲಕ್ಷ್ಮಿಕಾಂತ ಮಿರಜಕರ ಅವರ ಖಾಲಿ ಜೋಳಿಗೆಯ ಫಕೀರ ಗಜಲ್ ಸಂಕಲನಕ್ಕೂ ಈ ಪ್ರಶಸ್ತಿ ಲಭಿಸಿದೆ. ಜೂನ್ ತಿಂಗಳಿನಲ್ಲಿ ಸವದತ್ತಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಇಬ್ಬರೂ ಕೃತಿಕಾರರಿಗೆ ತಲಾ 75 ಸಾವಿರ ರೂ ನಗದು ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುತ್ತದೆ.ರಾಜ್ಯಮಟ್ಟ ಪ್ರಶಸ್ತಿಗೆ ಭಾಜನರಾದ ನಾಗರೇಖಾ ಗಾಂವಕರ ಅವರನ್ನು ನಗರದ ಗಣ್ಯರನೇಕರು ಅಭಿನಂದಿಸಿದ್ದಾರೆ.

ಮೇ 16 ರಂದು ಗ್ರಾಹಕರ ಸಂವಾದ ಸಭೆ

ಕಾರವಾರ: ಕಾರವಾರದ ಹೆಸ್ಕಾಂ ನ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಕಚೇರಿಯಲ್ಲಿ ಮೇ.16 ರಂದು ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯವರೆಗೆ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ ಸಭೆಗೆ ಹಾಜರಾಗಿ ತಮ್ಮ ಕುಂದು ಕೊರತೆಗಳ ಅಹವಾಲುಗಳನ್ನು ನೀಡುವಂತೆ ಕಾರವಾರ ಕಾರ್ಯ ಪಾಲನಾ ಮತ್ತು ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62399	69399
ಬಿಳಿಗೋಟು	27899	37223
ಕೆಂಪುಗೋಟು	32311	35899
ಬೆಟ್ಟೆ	36089	47699
ರಾಶಿ	51699	53399
ಚಾಲಿ	44799	48391
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	56159	57169
ರಾಶಿ	46510	55699
ಬೆಟ್ಟೆ	38099	49799
ಕೆಂಪುಗೋಟು	24612	37399
ಬಿಳಿಗೋಟು	23612	36799
ಚಾಲಿ	37619	48099
ಚಾಲಿ ಹಳೆದು	49599	49599
ಕೋಕಾ	21069	32900
ಕಾಳುಮೆಣಸು	58885	67500



ಯಲ್ಲಾಪುರ: ಪೊಲೀಸ್ ವಸತಿ ಸಮುಚ್ಚಯದಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವರ 27ನೇ ವರ್ಷದ ವರ್ಧಂತಿ ಉತ್ಸವ ವಿಜೃಂಭಣೆಯಿಂದ ನಡೆಯಿತು.ಶಾಸಕ ಶಿವರಾಮ್ ಹೆಬ್ಬಾರ್ ದೇವರ ದರ್ಶನ ಪಡೆದರು.

ಇಂದು ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆ

ಸಿದ್ದಾಪುರ: ತಾಲೂಕಿನ ಅರಣ್ಯ ಅತಿಕ್ರಮಣದಾರ ಮತ್ತು ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆ ಮೇ 15ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ರಾಘವೇಂದ್ರ ಮಠದ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಹೋರಾಟಗಾರರ ವೇದಿಕೆಯ ಪ್ರಧಾನ ಸಂಚಾಲಕ ಮಾಬ್ಲೇಶ್ವರ ನಾಯ್ಕ ಬೇಡ್ಕಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ನೀತಿಗೆ ವಿರುದ್ಧವಾಗಿ ಅರಣ್ಯ ಅತಿಕ್ರಮಣದಾರರ ಮಹಜರ್ ಜರುಗುತ್ತಿರುವುದು ಮತ್ತು ಅರಣ್ಯವಾಸಿಗಳು ಅತಿಕ್ರಮಿಸಿರುವ ಮೂರು ಎಕರೆ ಸಾಗುವಳಿಗೆ ಆತಂಕ ಮಾಡಬಾರದೆಂಬ ರಾಜ್ಯ ಸರ್ಕಾರದ ಆದೇಶ ರದ್ದಿಗೆ ಹೈಕೋರ್ಟನಲ್ಲಿ ಪ್ರಕರಣ ದಾಖಲಾಗಿರುವ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಘನಾಶಿನಿ ನದಿ ಜೋಡಣೆ ವಿರೋಧಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಆಕ್ಷೇಪಣಾ ಪತ್ರದ ಸ್ವೀಕೃತಿ ಪ್ರತಿ ವಿತರಿಸುವ ವಿಧಾನದ ಕುರಿತು ಹಾಗೂ ಯುನೆಸ್ಕೋ ವಿಶ್ವ ಪರಂಪರೆಯ ಕೇಂದ್ರದಿಂದ ಹೋರಾಟಗಾರರ ವೇದಿಕೆಗೆ ಬಂದಿರುವ ಉತ್ತರದ ಮಾಹಿತಿಯ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದು ಆಸಕ್ತರು ಆಗಮಿಸಿ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.



ಯಲ್ಲಾಪುರ: ಪೊಲೀಸ್ ಠಾಣೆಯಲ್ಲಿ ಎರಡುವರೆ ವರ್ಷದಿಂದ ಸೇವೆ ಸಲ್ಲಿಸುತ್ತಿದ್ದ ಪಿಐ ರಮೇಶ ಹಾನಾಪುರ ಅವರು ಮುಂಡಗೋಡು ಪಿಐ ಆಗಿ ಕರ್ತವ್ಯ ನಿಭಾಯಿಸುವಂತೆ ಸರ್ಕಾರದಿಂದ ಸೂಚನೆ ಬಂದಿದ್ದು, ಗುರುವಾರ ಅವರು ಯಲ್ಲಾಪುರ ಪೊಲೀಸ್ ಠಾಣೆಗೆ ವಿದಾಯ ಹೇಳಿದರು. ಹಿನ್ನಲೆಯಲ್ಲಿ ರಮೇಶ ಹಾನಾಪುರ ಅವರನ್ನು ಪೊಲೀಸ್ ಸಿಬ್ಬಂದಿಗಳು ಪುಷ್ಪ ವೃಷ್ಟಿಗೆರೆದು ಸನ್ಮಾನಿಸಿ ಬೀಳ್ಕೊಟ್ಟರು.

ಸಾಮಾಜಿಕ ಜಾಲತಾಣಗಳಲ್ಲಿ ಪೊಲೀಸ್ ಇಲಾಖೆಯಿಂದ ಸಂದೇಶ

ಸೈಬರ್ ವಂಚನೆ: ಜನರಲ್ಲಿ ಜಾಗೃತಿ ಅಗತ್ಯ

ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಜನಸಾಮಾನ್ಯರು ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿರುವ ಘಟನೆಗಳು ನಡೆದಿದ್ದು ಸೈಬರ್ ವಂಚಕರ ಜಾಲದಿಂದ ಜಾಗರೂಕತೆಯಿಂದ ಇರುವಂತೆ ಉತ್ತರಕನ್ನಡ ಜಿಲ್ಲಾ ಪೊಲೀಸರುಸಾಮಾಜಿಕ ಜಾಲತಾಣಗಳಲ್ಲಿಸಂದೇಶಗಳನ್ನು ಪ್ರಕಟಿಸುವ ಮೂಲಕ ಜನಜಾಗೃತಿ ಮೂಡಿಸುತ್ತಿದ್ದಾರೆ.

ಮೊಬೈಲ್‌ಗೆ ಬರುವ ಅಪರಿಚಿತ ಲಿಂಕ್ ಮತ್ತು ಎಪಿಕೆ ಫೈಲುಗಳನ್ನುತೆರೆಯದಂತೆ ಸೂಚಿಸಲಾಗಿದ್ದು, ಆನ್ ಲೈನ್ ಟ್ರೇಡಿಂಗ್ ಮತ್ತು ಹಣ ದ್ವಿಗುಣ ಮಾಡುವ ಕುರಿತಂತೆ ಬರುವ ವಾಟ್ಸಪ್ ಗ್ರೂಪುಗಳಿಂದ ದೂರವಿದ್ದು, ಯಾವುದೇ ರೀತಿಯ ಪ್ರತಿಕ್ರಿಯೆ ತೋರದಂತೆ ಸೂಚನೆ ನೀಡಲಾಗಿದೆ.

ಪೊಲೀಸ್ ಇಲಾಖೆ ಅಥವಾ ಸರ್ಕಾರಿ ಅಧಿಕಾರಿಗಳ ಹೆಸರಿನಲ್ಲಿ ವಿಡಿಯೋ ಕರೆ ಮಾಡಿ ವಿಚಾರಣೆ ನಡೆಸುವುದಾಗಿ ಹೆದರಿಸಿದರೆ, ಹಣಕ್ಕಾಗಿ ಬೇಡಿಕೆಯಿಟ್ಟರೆ ಹಣ ನೀಡಬಾರದು ಕರೆಯನ್ನು ಕಡಿತಗೊಳಿಸಿ ಪೊಲೀಸರಿಗೆ ಮಾಹಿತಿ ನೀಡುವಂತೆ ತಿಳಿಸಲಾಗಿದ್ದು, ಅಪರಿಚಿತರು ಕರೆ ಮಾಡಿ ಓಟಿಪಿ ನಂಬರ್ ನೀಡುವಂತೆ ಕೇಳಿದರೆ ಯಾವುದೇ ಕಾರಣಕ್ಕೂ ಓಟಿಪಿ ಸಂಖ್ಯೆ ಹಂಚಿಕೊಳ್ಳದಂತೆ ತಿಳಿಸಲಾಗಿದೆ.

ಯಾವುದೇ ರೀತಿಯ ಸೈಬರ್ ವಂಚನೆಗೆ ಒಳಗಾದಲ್ಲಿ ಸೈಬರ್ ಸಹಾಯವಾಣಿ 1930 ಗೆ ಕರೆ ಮಾಡಿ ದೂರು ಸಲ್ಲಿಸುವಂತೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಸಂಪರ್ಕಿಸಲು ಉತ್ತರ ಕನ್ನಡ ಪೊಲೀಸ್ ಇಲಾಖೆಯ ವತಿಯಿಂದ ಪ್ರಕಟಿಸಲಾಗಿದೆ.



ಸೈಬರ್ ಸಹಾಯವಾಣಿ 1930 ಗೆ ಕರೆ ಮಾಡಿ ದೂರು ಸಲ್ಲಿಸಿ

ಇತ್ತೀಚಿನ ದಿನಗಳಲ್ಲಿ ಹಲವರು ಸೈಬರ್ ವಂಚಕರ ಜಾಲಕ್ಕೆ ಬಲಿ ಬೀಳುತ್ತಿದ್ದು ಕೆಲವು ದಿನಗಳ ಹಿಂದೆ ಯಲ್ಲಾಪುರದ ವ್ಯಕ್ತಿಯೋರ್ವರಿಗೆ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಹೆದರಿಸಿ ಸುಮಾರು 1.75 ಕೋಟಿ ರೂಪಾಯಿ ಹಣ ಲಪಟಾಯಿಸಲಾಗಿತ್ತು. ಸೈಬರ್ ಅಪರಾಧ ಪೊಲೀಸರ ವಿಶೇಷ ತಂಡ ಈ ಸಂಬಂಧಿಸಿದಂತೆ ವಿಜಯಪುರದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದರು ದೇಶಾದ್ಯಂತ ಸೈಬರ್ ವಂಚನೆಯಲ್ಲಿ ಬಂಧಿತರು ತೊಡಗಿಕೊಂಡಿದ್ದರು ಎಂಬ ಮಾಹಿತಿ ಲಭ್ಯವಾಗಿತ್ತು.

ಇನ್ನೊಂದು ಘಟನೆಯಲ್ಲಿ ಜಿಲ್ಲೆಯ ದಾಂಡೇಲಿಯ ನಿವೃತ್ತ ರಕ್ಷಣಾ ಇಲಾಖೆಯ ನಿವೃತ್ತ ಉದ್ಯೋಗಿಯೋರ್ವರಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಸರ್ಕಾರಿಯೋಜನೆಯಲ್ಲಿ ಹಣ ಹೂಡಿಕೆ ಮಾಡಿ ಡಾಲರ್ ರೂಪದಲ್ಲಿ ಲಾಭಗಳಿಸುವ ಆಮಿಷ ಒಡ್ಡಿ ಅವರಿಂದ 10.60 ಲಕ್ಷ ರೂಪಾಯಿ ಹಣ ತೊಡಗಿಸಿ ವಂಚಿಸಲಾಗಿತ್ತು.

ಹೀಗೆ ಸೈಬರ್ ವಂಚಕರ ಮೋಸದ ಜಾಲಕ್ಕೆ ಅಮಾಯಕರು ಬಲಿ ಬೀಳುತ್ತಲೇ ಇದ್ದು ಮೋಸದ ಬಲೆಯಲ್ಲಿ ಸಿಲುಕದಂತೆ ಜಿಲ್ಲಾ ಪೊಲೀಸರು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.

9.34 ಲಕ್ಷ ರೂ. ಪಂಗನಾಮ

ಲೈನ್ ಟ್ರೇಡಿಂಗ್‌ನಲ್ಲಿ ಹಣ ಹಾಕಿ ದ್ವಿಗುಣ ಲಾಭ ನೀಡುವುದಾಗಿ ಕುಮಟಾದ ವ್ಯಕ್ತಿಯೋರ್ವರನ್ನು ಯಾಮಾರಿಸಿದ ವಂಚಕರು 9.34 ಲಕ್ಷ ರೂಪಾಯಿ ಪಂಗನಾಮ ಹಾಕಿದ್ದರು.

ಹೋರಾಟಕ್ಕೆ ಎಲ್ಲರ ಬೆಂಬಲ ಅವಶ್ಯ

ಬನವಾಸಿ: ಕನ್ನಡಿಗರ ಪ್ರಥಮ ರಾಜಧಾನಿಯಾಗಿರುವ ಐತಿಹಾಸಿಕ ಪ್ರಸಿದ್ಧಕ್ಷೇತ್ರ ಬನವಾಸಿಮಧುಕೇಶ್ವರ ದೇವಸ್ಥಾನ ಸೋರಿಕೆ ತಡೆಗಟ್ಟುವಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಸಂಪೂರ್ಣ ವಿಫಲವಾಗಿದ್ದು, ಈ ಕುರಿತು ಪ್ರತಿಭಟನೆಗೆ ಮುಂದಾಗಿರುವ ಬನವಾಸಿ ತಾಲೂಕು ನೂತನ ಹೋರಾಟ ಸಮಿತಿಯ ನಿಲುವು ಸ್ವಾಗತರ್ಹವಾಗಿದ್ದು, ಸಮಿತಿಯ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ. ತಾಲೂಕು ಹೋರಾಟ ಸಮಿತಿಯ ನಡೆಸಲಿರುವ ಹೋರಾಟಕ್ಕೆ ಪ್ರತಿಯೊಬ್ಬರು ಬೆಂಬಲ ನೀಡಬೇಕೆಂದು ಹಲವು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವ ಸಾಮಾಜಿಕ ಕಾರ್ಯಕರ್ತ ಸುಧೀರ್ ನಾಯರ್ ಹೇಳಿದ್ದಾರೆ.



ಪುರಾತತ್ವ ಇಲಾಖೆಯ ವಿರುದ್ಧ ಬನವಾಸಿ ತಾಲೂಕು ಹೋರಾಟ ಸಮಿತಿ ಹಮ್ಮಿಕೊಂಡಿರುವ ಅರೆಬೆತ್ತಲೆ ಪ್ರತಿಭಟನೆಗೆ ಬೆಂಬಲ ಸೂಚಿಸಿ ಪತ್ರಿಕಾ ಪ್ರಕಟಣೆ ನೀಡಿದ ಅವರು, ಕಳೆದ ಹತ್ತು ವರ್ಷಗಳಿಂದ ಇಲ್ಲಿನ ಮಧುಕೇಶ್ವರ ದೇವಸ್ಥಾನ ಮಳೆಗಾಲದಲ್ಲಿ ಸೋರುತ್ತಿದೆ. ಪ್ರತಿ ವರ್ಷವು ಇದರ ಬಗ್ಗೆ ಪುರಾತತ್ವ ಇಲಾಖೆಯ ಗಮನಕ್ಕೆ ತರುತ್ತಿದ್ದರು ಯಾವ ಪ್ರಯೋಜನವು ಆಗಿಲ್ಲ. ಬನವಾಸಿ ತಾಲೂಕು ಹೋರಾಟ ಸಮಿತಿಯು ಸಾಕಷ್ಟು ಬಾರಿ ಹೋರಾಟಕ್ಕೆ ಮುಂದಾಗುವ ಸಂದರ್ಭದಲ್ಲಿ ಪುರಾತತ್ವ ಇಲಾಖೆಯ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿ ಇನ್ನೊಂದು ತಿಂಗಳಲ್ಲಿ ಕಾಮಗಾರಿ ಆರಂಭಿಸು ತ್ತೇವೆ ಮಳೆಗಾಲ ಆರಂಭಕ್ಕೂ ಮುನ್ನ ಸೋರಿಕೆ ತಡೆಯಲಾಗುತ್ತದೆ ಎಂಬ ಆಶ್ವಾಸನೆ ನೀಡಿ ಹೋಗುತ್ತಾರೆ ವಿನಃ ಮತ್ತೆ ನೆನಪಿಗೆ ಬರುವುದು ಮುಂದಿನ ವರ್ಷವೇ. ಹೀಗೆ 5-6 ವರ್ಷದಿಂದ ಬನವಾಸಿಗರಿಗೆ ಪುರಾತತ್ವ ಇಲಾಖೆ ಚಳ್ಳೆಹಣ್ಣು ತಿನ್ನಿಸುತ್ತ ಬಂದಿದೆ. ಬನವಾಸಿಗರ ತಾಳ್ಮೆಯನ್ನು ಪರೀಕ್ಷೆ ಮಾಡದೇ ಆದಷ್ಟು ಶೀಘ್ರವಾಗಿ ಸೋರಿಕೆ ತಡೆಯಲು ಮುಂದಾಗಬೇಕು. ಇನ್ನೂ ಇದೇ ರೀತಿಯ ನಾಟಕವನ್ನು ಮಾಡುತ್ತ ಮುಂದುವರಿದರೇ ಮಧುಕೇಶ್ವರ ದೇವಸ್ಥಾನದ ಉಳಿವಿಗಾಗಿ ಬನವಾಸಿ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯ ಕುಮಾರ ಕಾನಳ್ಳಿ, ಗೌರವಾಧ್ಯಕ್ಷ ಸಿ ಎಫ್. ನಾಯಕ್ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ನೇತೃತ್ವದ ಪ್ರತಿಭಟನೆ ಯೊಂದಿಗೆ ಬನವಾಸಿಗರ ಜೊತೆಗೆ ಪ್ರತಿ ಹಳ್ಳಿಯ ಜನತೆ ಹೋರಾಟಕ್ಕೆ ಧುಮುಕಲಿದ್ದಾರೆ ಎಂದರು.



ಭಟ್ಕಳ: ಸೋಡಿಗದ್ದೆಯ ಮಹಾಸತಿ ದೇವಸ್ಥಾನ ಅಭಿವೃದ್ಧಿ ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿ, ಮಹಾಸತಿ ದೇವಸ್ಥಾನ ಸೋಡಿಗದ್ದೆ ಇವರ ಜಂಟಿ ಆಶ್ರಯದಲ್ಲಿ ಗುರುವಾರ ನಡೆದ ನೂತನ ಶಿಲಾಮಯ ದೇವಸ್ಥಾನದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಉಜಿರೆಯು ಶ್ರೀರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ನಾಳೆಯಿಂದ ಕೊಗ್ರೆಯ ಬಂಡಿಹಬ್ಬ



ಅಂಕೋಲಾ: ತಾಲೂಕಿನ ಕ್ಷೇತ್ರ ಕೊಗ್ರೆಯಲ್ಲಿ ಗ್ರಾಮ ದೇವರುಗಳ ಬಂಡಿಹಬ್ಬದ ವಿಧಿ ವಿಧಾನಗಳು ಪ್ರಾಚೀನ ಸಂಪ್ರದಾಯಗಳಂತೆ ನಡೆಯುತ್ತಿದ್ದು, ಬಂಡಿಹಬ್ಬದ ಪ್ರಮುಖ ಆಚರಣೆಗಳಲ್ಲಿ ಒಂದಾದ ದೇವರು ಕರೆಯುವ ಪ್ರಕ್ರಿಯೆ ರೋಚಕವಾಗಿ ನಡೆಯಿತು.

ಸೂರ್ವೆಯ ಕಳಸದ ಮನೆಯಿಂದ ಅಮ್ಮನವರ ಕಳಸ, ಭಂಡಾರ ದೇವರ ಮನೆಯಿಂದ ಕೊಗ್ರೆ ಬೊಮ್ಮಯ್ಯ ದೇವರ ಕಳಸ ಮಾಣಿಬೀರ, ಉಲಿಬೀರ ಕಳಸಗಳೊಂದಿಗೆ ಸೇರಿ ಹಡವ,ಕಣಗೀಲ ಮಾರ್ಗವಾಗಿ ಹಿಚ್ಕಡ ಗ್ರಾಮಕ್ಕೆ ತೆರಳಿ ಶ್ರೀಶಾಂತಿಕಾ ಪರಮೇಶ್ವರಿ ಅಮ್ಮನವರನ್ನು ಹಬ್ಬಕ್ಕೆ ಕರೆಯುವ ವಿಶೇಷ ಸಂದರ್ಭವನ್ನು ಸಹಸ್ರಾರು ಜನರು ಜಮಾಯಿಸಿ ಕಣ್ತುಂಬಿಕೊಂಡರು. ನಾಲ್ಕು ಕಳಸಗಳು ಅನಾದಿಕಾಲದಿಂದ ಸಂಚರಿಸುತ್ತ ಬಂದಿರುವ ದುರ್ಗಮ ದಾರಿಯಲ್ಲಿ ಗಾಂಭೀರ್ಯದಿಂದ ಸಾಗುವುದು, ಗುನಗರು ಕಟಗಿದಾರರು ಮೈಭಾರ ಬಂದು ಓಡುವ ಮತ್ತು ಭಕ್ತರ ಪೂಜೆ ಸ್ವೀಕರಿಸುವ ದೃಶ್ಯ ಭಕ್ತರನ್ನು ಮಂತ್ರಮುಗ್ದಗೊಳಿಸಿತು.ಕಳಸಗಳು ಹಡವ ಗ್ರಾಮಕ್ಕೆ ಆಗಮಿಸಿದ ಸಂದರ್ಭದಲ್ಲಿ ಸ್ಥಳೀಯ ಜನರು ಹಗರಣ ಪ್ರದರ್ಶನ ನೀಡಿದರು,ಕಣಗೀಲದ ದೇವರ ಕಟ್ಟೆಯಲ್ಲಿ ನಾಲ್ಕು ಕಳಸಗಳಿಗೆ ಪೂಜೆ ಸಲ್ಲಿಸಲಾಯಿತು. ಮೇ 16ರಂದು ಕೊಗ್ರೆಯ ಬಂಡಿಹಬ್ಬ ಮತ್ತು ಮೇ 17 ರಂದು ಹರಕೆಗಳ ಸಂದಾಯ ನಡೆಯಲಿದೆ.

ಎಲ್ಲೆಂದರಲ್ಲಿ ಕಸದ ರಾಶಿ: ರೋಗ ಹರಡುವ ಭೀತಿ

ಸುಧೀರ ನಾಯರ್

ದಿಗಂತ ವಿಶೇಷ



ಬನವಾಸಿ: ಪಟ್ಟಣದ ಪ್ರತಿ ವಾರ್ಡ್‌ಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿಯೇ ಕಾಣಸಿಗುತ್ತಿದ್ದು,ಸ್ಥಳೀಯ ಆಡಳಿತದ ವಿರುದ್ಧ ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಪಟ್ಟಣದ ಸರ್ಕಾರಿ ಆಸ್ಪತ್ರೆಯ ಹಿಂಭಾಗದ ರಸ್ತೆ, ಜಯಂತಿ ಪ್ರೌಢಶಾಲಾ ಮೈದಾನದ ಬಳಿ, ಪರೀವಿಕ್ಷಣಾ ಮಂದಿರದ ಕಂಪೌಡ್ ಬಳಿ, ಸಂತೆ ಮಾರ್ಗದ ಬಳಿ ರಾಶಿಗಟ್ಟಲೆ ಕಸ ಬಿದ್ದು ಆ ಪರಿಸರ ತುಂಬೆಲ್ಲ ಗಬ್ಬೆದ್ದು ನಾರುತ್ತಿದೆ. ಅಲ್ಲದೇ ಪಟ್ಟಣದ ಸಣ್ಣಪುಟ್ಟಅಂಗಡಿಕಾರರು,ಹೊಟೇಲ್, ಎಗ್ ರೈಸ್ ಅಂಗಡಿ, ಕಟಿಂಗ್ ಶಾಪ್, ಮಾಂಸದಂಗಡಿಕಾರರು, ಬೇಕರಿಗಳು ಶಿರಸಿ-ಹೊಸನಗರ ರಾಜ್ಯ ಹೆದ್ದಾರಿ ಮತ್ತು ಬನವಾಸಿ-ಚಂದ್ರಗುತ್ತಿ, ಬನವಾಸಿ- ದಾಸನಕೊಪ್ಪ, ಬನವಾಸಿ-ಬೆಂಗಳೆ ರಸ್ತೆಯ ಅಕ್ಕ ಪಕ್ಕದಲ್ಲಿ ಕಸ ಹಾಕುತ್ತಿದ್ದು ಎಲ್ಲೆಂದರಲ್ಲಿ ಅಪಾರ ಪ್ರಮಾಣದಲ್ಲಿ ಪ್ಲಾಸ್ಟಿಕ್, ಪ್ಲಾಸ್ಟಿಕ್ ಗ್ಲಾಸ್, ಕೂದಲು, ಕೋಳಿ ಪುಕ್ಕಗಳು, ಮೊಟ್ಟೆ ಸಿಪ್ಪೆಗಳ ರಾಶಿಯೇ ಕಂಡು ಬರುತ್ತಿದ್ದು ಪಟ್ಟಣದ ಸ್ವಚ್ಚತೆಗೆ ಇದು ಮಾರಕವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಸ್ವಚ್ಚತಾ ಅಭಿಯಾನಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜನತೆಗೆ ಅರಿವು ಮೂಡಿಸುವ ಕಾರ್ಯ ಕೈಗೊಂಡರು ಯಾವುದೇ ರೀತಿಯ ಪ್ರಯೋಜನ ಆಗುತ್ತಿಲ್ಲ. ಗ್ರಾಪಂ ಪ್ರತಿ ದಿನ ಮನೆ, ಅಂಗಡಿಗಳಿಗೆ ಕಸದ ವಾಹನ ಬಂದರು ಕಸ ನೀಡಲು ಮುಂದಾಗದೇ ಎಲ್ಲೆಂದರಲ್ಲಿ ಕಸ ಹಾಕುತ್ತಿದ್ದಾರೆ ಎಂದು ಗ್ರಾಪಂಯವರ ಆರೋಪವಾದರೇ, ಗ್ರಾಪಂಯ ಕಸದ ಗಾಡಿ ಸರಿಯಾಗಿ ಬರುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಮಳೆಗಾಲ ಆರಂಭವಾಗುತ್ತಿರುವ ಈ ಸಂದರ್ಭದಲ್ಲಿ ಶಾಲೆ, ಆಸ್ಪತ್ರೆ, ರಾಜ್ಯ ಹೆದ್ದಾರಿಯ ಸಮೀಪದಲ್ಲಿ ಕಸದ ರಾಶಿ ಇರುವುದರಿಂದ ದುರ್ವಾಸನೆ ಮತ್ತು ಸೊಳ್ಳೆಗಳಕಾಟದಿಂದಜನರಆರೋಗ್ಯದ ಮೇಲು ಪರಿಣಾಮ ಬೀರುತ್ತಿದೆ. ಎಲ್ಲಿ ಬೇಕೆಂದರಲ್ಲಿ ಕಸ ಎಸೆಯುವರ ವಿರುದ್ಧ ಕಠಿಣ ಕ್ರಮ ಜರುಗಿಸದ ಕಾರಣ ಕಸದ ಸಮಸ್ಯೆ ಮುಂದುವರಿಯುತ್ತಿದ್ದು, ಇನ್ನಾದರು ಗ್ರಾಪಂಯವರು ಇದನ್ನು ಗಂಭೀರವಾಗಿ ಪರಿಗಣಿಸಿ ಎಲ್ಲೆಂದರಲ್ಲಿ ಕಸ ಹಾಕುವವರ ವಿರುದ್ಧ ಕ್ರಮಕ್ಕೈಗೊಳ್ಳಬೇಕು ಎಂಬುವುದು ಸಾರ್ವಜನಿಕರ ಆಗ್ರಹವಾಗಿದೆ.

> ಪಟ್ಟಣದ ಕೆಲವೊಂದು ಸ್ಥಳಗಳಲ್ಲಿ ಪ್ರತಿ ಬಾರಿ ಸ್ವಚ್ಚತೆ ಮಾಡಿದ ಬಳಿಕ ಅಲ್ಲಿಯ ನಿವಾಸಿಗಳಿಗೆ ಕಸ ಹಾಕಬೇಡಿ ಎಂದು ಮನವರಿಕೆ ಮಾಡಿದರು ಪುನಃ ಅಲ್ಲಿಯೇ ಕಸ ತಂದು ಹಾಕುತ್ತಿದ್ದಾರೆ. ಕಸದ ರಾಶಿ ಕಂಡು ಬಂದ ಸ್ಥಳದ ಅಕ್ಕಪಕ್ಕದ ನಿವಾಸಿಗಳಿಗೆ ಶೀಘ್ರವೇ ನೋಟಿಸ್ ನೀಡಲಾಗುವುದು. ಅಂಗಡಿಕಾರು ತಮ್ಮ ಅಂಗಡಿಗಳಲ್ಲಿನ ಕಸವನ್ನು ಎಲ್ಲೆಂದರಲ್ಲಿ ಬಿಸಾಡದೇ ಗ್ರಾಪಂನ ಕಸದ ಗಾಡಿಗೆ ನೀಡಬೇಕು. ಕಸದ ಗಾಡಿಗೆ ನೀಡದೇ ಎಲ್ಲೆಂದರಲ್ಲಿ ಕಸ ಹಾಕುವುದು ಕಂಡುಬಂದರೆ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.
>
> ■ ಹನುಮಂತ ಛಲವಾದಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ



ಗೋಕರ್ಣ: ಹಾರುಮಾಸ್ಕೇರಿಯ ಗಣಪತಿ ದೇವರ ಕಲಾವೃದ್ಧಿ ಅಷ್ಟಬಂಧ ಹಾಗೂ ಶಿಖರ ಪುನರಪ್ರತಿಸ್ಥಾಪನಾ ಮಹೋತ್ಸವವು ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯೊಂದಿಗೆ ಸಂಪನ್ನಗೊಂಡಿತು.

ಸಾವಿತ್ರಿ ಭಟ್ ನಿಧನಕ್ಕೆ ದೇಶಪಾಂಡೆ ಸಂತಾಪ

ದಾಂಡೇಲಿ: ಬೆಂಗಳೂರಿನ ಮಹಾದೇವಿತಾಯಿ ಟ್ರಸ್ಟ್‌ನ ಟ್ರಸ್ಟಿಗಳಾಗಿಯೂ ಹಾಗೂ ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಅವರ ಸಹೋದರಿಯಾದ ಸಾವಿತ್ರಿ ಭಟ್ ಅವರ ನಿಧನದ ಹಿನ್ನಲೆಯಲ್ಲಿ ಗುರುವಾರ ಬೆಂಗಳೂರಿನಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿ ಅಗಲಿದ ಹಿರಿಯ ಚೇತನರ ಪಾರ್ಥಿವ ಶರೀರಕ್ಕೆ ಶಾಸಕ ಆರ್.ವಿ. ದೇಶಪಾಂಡೆ ಅವರು ಅಂತಿಮ ನಮನ ಸಲ್ಲಿಸಿದರು.ಸರಳತೆ, ಸೌಜನ್ಯ ಮತ್ತು ಸೇವಾ ಮನೋಭಾವದಿಂದ ಸಮಾಜದಲ್ಲಿ ವಿಶೇಷ ಗೌರವ ಗಳಿಸಿದ್ದ ಅವರು, ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಜನಾನುರಾಗಿಯಾಗಿ ಇದ್ದದ್ದನ್ನು ಸ್ಮರಿಸಿಕೊಂಡ ದೇಶಪಾಂಡೆಯವರು ಅವರ ಅಗಲಿಕೆಯಿಂದ ದುಃಖಿತಗೊಂಡ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ದುಃಖ ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸಿದರು.



ರಾಜ್ಯ ಸರ್ಕಾರ ವೈಫಲ್ಯದ ವಿರುದ್ಧ ಖಂಡನಾ ನಿರ್ಣಯ

ಅಂಕೋಲಾ: ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಎಲ್ಲಾ ಕ್ಷೇತ್ರದಲ್ಲೂ ಸಂಪೂರ್ಣ ವೈಫಲ್ಯ ಕಂಡಿದೆ. ಈ ಸರಕಾರ ಹೋದರೆ ಸಾಕು ಎಂದು ಜನ ಆಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಶಾಸಕರಿಗೆ ಅನುದಾನ ನೀಡದೆ ತಾರತಮ್ಯ ಎಸಗಲಾಗುತ್ತಿದೆ ಎಂದು ಕುಮಟಾ ಶಾಸಕರಾದ ದಿನಕರ ಶೆಟ್ಟಿ ಹೇಳಿದರು.

ಅವರು ಅಂಕೋಲಾದ ಸ್ವಪ್ನಾ ಕಂಫರ್ಟ್ಸನ ಸಭಾಭವನದಲ್ಲಿ ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡಿ ಪಂಚರಾಜ್ಯ ಚುನಾವಣೆಗಳಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಅದರಲ್ಲೂ ಪಶ್ಚಿಮ ಬಂಗಾಳದ ಗೆಲುವು ಬಿಜೆಪಿಕಾರ್ಯಕರ್ತರಲ್ಲಿ ಹೊಸ ಚೈತನ್ಯವನ್ನು ತುಂಬಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯದ ನಂತರ ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ ಕಾಂಗ್ರೆಸ್, ಟಿಎಮ್‌ಸಿ ಪಕ್ಷಗಳ ದುರಾಡಳಿತದಿಂದ ಬೇಸತ್ತು ಜನರು ಬಿಜೆಪಿಯತ್ತ ವಾಲುತ್ತಿರುವದು ಸ್ಪಷ್ಟವಾಗಿದೆ. ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಪಕ್ಷದ ಒಳ್ಳೆಯ ಕೆಲಸಗಳ ಮಾಹಿತಿಯನ್ನು ಜನರಿಗೆ ತಲುಪಿಸಿ ಮತ್ತೆ ಹೆಚ್ಚಿನ ಗೆಲುವು ಪಡೆಯಲು ಪಕ್ಷದ ಸಂಘಟನೆಯನ್ನು ಬಲಪಡಿಸಸಲು ಪದಾಧಿಕಾರಿಗಳು, ಕಾರ್ಯಕರ್ತರು ಶ್ರಮಿಸಬೇಕು ಎಂದರು.



ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ರಾಜೇಂದ್ರ ನಾಯ್ಕ ಅವರು ರಾಜ್ಯದ ಕಾಂಗ್ರೆಸ್ ಸರಕಾರದ ವೈಫಲ್ಯದ ಕುರಿತು ಖಂಡನಾ ನಿರ್ಣಯವನ್ನು ಮಂಡಿಸಿದರು. ಖಂಡನಾ ನಿರ್ಣಯವನ್ನು ಅನುಮೋದಿಸಿದ ರಾಜ್ಯ ಪ್ರಶಿಕ್ಷಣ ವರ್ಗದ ಸಂಚಾಲಕ ರವಿ ಹೆಗಡೆ ಮಾತನಾಡಿ ರಾಜ್ಯ ಸರಕಾರ ಕೇವಲ ಮೂರು ವರ್ಷದಲ್ಲಿ ಆರ್ಥಿಕ ವೈಫಲ್ಯದ ಜೊತೆಗೆ ಎಲ್ಲ ಕ್ಷೇತ್ರಗಳಲ್ಲೂ ವೈಫಲ್ಯ ಕಂಡಿದೆ. ಕಾನೂನು ಸುವ್ಯವಸ್ಥೆಗಳು ಹದಗೆಟ್ಟಿವೆ. ಬಿಜೆಪಿ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಗಡೀಪಾರು ಮಾಡಲಾಗುತ್ತಿದೆ. ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಶಿಕ್ಷಣ ಕ್ಷೇತ್ರ, ಗೃಹ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಸಂಪೂರ್ಣ ಹದಗೆಟ್ಟಿದೆ. ಖುರ್ಚಿಗಾಗಿ ಕಾದಾಡುತ್ತ, ಲವ್ ಜಿಹಾದಕ್ಕೆ ಪ್ರೋತ್ಸಾಹಿಸುತ್ತ, ಓಲೈಕೆ ರಾಜಕಾರಣ ಮಾಡುತ್ತ ಕಾಲಹರಣ ಮಾಡುವದು ಬಿಟ್ಟರೆ ಯಾವ ಅಭಿವೃದ್ಧಿಯನ್ನೂ ಮಾಡಿಲ್ಲ. ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದ್ದರಿಂದ ಈ ಸರಕಾರಕ್ಕೆ ಕರ್ನಾಟಕದಲ್ಲಿ ಆಡಳಿತ ನಡೆಸುವ ನೈತಿಕತೆಯೇ ಇಲ್ಲ. ಮುಂದಿನ ಎಲ್ಲ ಚುನಾವಣೆಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿ ಜನರಿಗೆ ನ್ಯಾಯ ಒದಗಿಸಿಕೊಡಬೇಕಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರದಿಂದ ಅಭಿವೃದ್ಧಿ ಶೂನ್ಯ: ಶಾಸಕ ದಿನಕರ ಶೆಟ್ಟಿ

ಜಿಲ್ಲಾ ಅಧ್ಯಕ್ಷ ಎನ್.ಎಸ್. ಹೆಗಡೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಜಿಲ್ಲಾ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು.

ವೇದಿಕೆಯಲ್ಲಿ ಮಾಜಿ ವಿಧಾನ ಪರಿಷತ ಸದಸ್ಯರಾದ ಎಸ್ ಎಲ್ ಘೊಟ್ನೆಕರ, ಮಾಧ್ಯಮ ರಾಜ್ಯ ವಕ್ತಾರರಾದ ಹರಿಪ್ರಕಾಶ ಕೋಣೆಮನೆ, ವಿಭಾಗೀಯ ಸಹ ಪ್ರಭಾರಿಗಳಾದ ಆರ್ ಡಿ ಹೆಗಡೆ, ಪ್ರಶಿಕ್ಷಣ ವರ್ಗದ ಪ್ರಭಾರಿಗಳಾದ ರಾಜೇಶ ಕಾವೇರಿ, ಶಿಕ್ಷಣ ಪ್ರಕೋಷ್ಟದ ರಾಜ್ಯ ಸಹ ಸಂಚಾಲಕರಾದ ಎಂ ಜಿ ಭಟ್ಟ, ಪ್ರಶಾಂತ ನಾಯ್ಕ, ಶಿವಾಜಿ ನರಸಾನಿ,

ಜಿಲ್ಲಾ ಮಹಿಳಾ ಮೋರ್ಚ ಅಧ್ಯಕ್ಷರಾದ ಶಿವಾನಿ ಶಾಂತಾರಾಮ, ಯುವ ಮೋರ್ಚ ಜಿಲ್ಲಾ ಅಧ್ಯಕ್ಷರಾದ ಪ್ರೇಮಕುಮಾರ ನಾಯ್ಕ, ರೈತ ಮೋರ್ಚ ಜಿಲ್ಲಾ ಅಧ್ಯಕ್ಷರಾದ ಅನಂತಮೂರ್ತಿ ಹೆಗಡೆ, ಅಲ್ಪಸಂಖ್ಯಾತ ಜಿಲ್ಲಾ ಅಧ್ಯಕ್ಷರಾದ ಜಾಯ್ ಫರ್ನಾಂಡಿಸ್ ಮತ್ತಿತರರು ಇದ್ದರು.

ತರಬೇತಿ ಕಾರ್ಯಾಗಾರಕ್ಕೆ ಸೋಮಶೇಖರ ಮೇಸ್ತಾ ಚಾಲನೆ

ಕಾರವಾರ: ಹವಾಮಾನದಲ್ಲಿ ಉಂಟಾಗುವ ಬದಲಾವಣೆಗಳನ್ನು ನಿಯಂತ್ರಿಸಿ, ಪರಿಸರದಲ್ಲಿ ಸಮತೋಲನ ಕಾಪಾಡುವ ಕಾರ್ಯದಲ್ಲಿ ಅಧಿಕಾರಿಗಳ ಪಾತ್ರವು ಅತ್ಯಂತ ಪ್ರಮುಖವಾದದ್ದು ಎಂದು ಜಿಪಂ ಮುಖ್ಯ ಯೋಜನಾಧಿಕಾರಿ ಸೋಮಶೇಖರ ಮೇಸ್ತಾ ಹೇಳಿದರು.

ಅವರು ಗುರುವಾರ ಜಿಪಂ ಸಭಾಂಗಣದಲ್ಲಿ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ವತಿಯಿಂದ, ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕುರಿತು ಕ್ರಿಯಾ ಯೋಜನೆ ತಯಾರಿಸುವ ಕುರಿತಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಹವಾಮಾನ ವೈಪರೀತ್ಯದಿಂದ ಉಂಟಾಗುತ್ತಿರುವ ಜಾಗತಿಕ ತಾಪಮಾನ ಏರಿಕೆ, ಅತಿವೃಷ್ಠಿ, ಬರಗಾಲ, ವಾಯು ಮಾಲಿನ್ಯ, ಅರಣ್ಯ, ಸಮುದ್ರ ಹಾಗೂ ವನ್ಯಜೀವಿಗಳ ನಾಶದಂತಹ ಪರಿಸ್ಥಿತಿಗಳನ್ನು ತಡೆಯುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾದ ನಿಯಂತ್ರಣ ಕ್ರಮಗಳ ಕುರಿತಂತೆ ಕ್ರಿಯಾ ಯೋಜನೆಯನ್ನು ರೂಪಿಸಿ, ಅದನ್ನು ಸಮರ್ಪಕವಾಗಿ ಜಾರಿಗೊಳಿಸುವ ಅತ್ಯಂತ ಮಹತ್ವದ ಜವಾಬ್ದಾರಿ ಅಧಿಕಾರಿಗಳಿಗಿದೆ ಎಂದರು.



ಕೆನಡಾದ ಯೂನಿವರ್ಸಿಟಿ ಆಫ್ ವಿನ್ನಿಪೆಗ್‌ನ ಪರಿಸರ ವಿಜ್ಞಾನ ವಿಭಾಗದ ಸಂಶೋಧನಾ ವಿಜ್ಞಾನಿ ಡಾ.ಮಹಾಬಲೇಶ್ವರ ಹೆಗಡೆ, ಕಾರ್ಬನ್ ಕ್ರೆಡಿಟ್ ಸ್ಕೋರ್, ಹವಾಮಾನ ಬದಲಾವಣೆ ಉಪಕ್ರಮಗಳು, ಪ್ಯಾರಿಸ್ ಒಪ್ಪಂದದ ಕುರಿತು ವಿವರಿಸಿದರು. ಜಲ ಸಂಪನ್ಮೂಲ ಇಲಾಖೆಯ ನಿರ್ದೇಶಕ ಡಾ.ಸೋಮಶೇಖರ ರಾವ್, ಜಲ ಸಂಪನ್ಮೂಲದ ಬಗ್ಗೆ ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ ಕುರಿತು ಆನ್‌ಲೈನ್ ಮೂಲಕ ಭಾಗವಹಿಸಿ ಮಾಹಿತಿ ನೀಡಿದರು.ಜಿಲ್ಲೆಯ ಅರಣ್ಯ, ಕೃಷಿ, ತೋಟಗಾರಿಕೆ, ಪಶುಪಾಲನೆ, ಸಣ್ಣ ನೀರಾವರಿ, ಮೀನುಗಾರಿಕೆ, ಆರೋಗ್ಯ ಇಲಾಖೆ, ಕೈಗಾರಿಕೆ ಇಲಾಖೆ, ಸಾರಿಗೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಪರಿಸರ ಅಧಿಕಾರಿ ಸಂತೋಷ್ ಉಪಸ್ಥಿತರಿದ್ದರು. ಎಂಪ್ರಿ ಸಂಸ್ಥೆಯ ತರಬೇತಿ ಮುಖ್ಯಸ್ಥೆ ಲತಾ ಸ್ವಾಗತಿಸಿ, ನಿರೂಪಿಸಿದರು.

ಕಿರುಸುದ್ದಿ

ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿ ಶಾಸಕರಿಗೆ ಆಹ್ವಾನ

ಹಾವೇರಿ: ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ ವತಿಯಿಂದ ಮೇ 25ರಂದು ನಡೆಯುವ ಎರಡನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿರುವ ಶಾಸಕ ರುದ್ರಪ್ಪ ಲಮಾಣಿ ಅವರನ್ನು ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಕರು ಆಮಂತ್ರಣ ನೀಡಿ ಆಹ್ವಾನಿಸಿದರು.

ಹುತಾತ್ಮ ಮೈಲಾರ ಮಹಾದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್.ಡಿ. ಮುಡೆಣ್ಣವರ, ನಿವೃತ್ತ ಮುಖ್ಯ ಶಿಕ್ಷಕ ಎಸ್. ಎಲ್. ಕಾಡದೇವರಮಠ, ಮುಖಂಡರಾದ ಉಡಚಪ್ಪ ಮಾಳಗಿ, ದ್ಯಾಮಣ್ಣ ಬಳಗಾನೂರ, ಸಂಜಯಗಾಂಧಿ ಸಂಜೀವಣ್ಣನವರ, ಬಳಗದ ಜಿಲ್ಲಾಧ್ಯಕ್ಷೆ ಚಂಪಾ ಹುಣಸಿಕಟ್ಟಿ, ಮಂಜುಳಾ ಅಕ್ಕಿ, ಮುತ್ತುರಾಜ ಮಾದರ, ಸುಭಾಷ್ ಮಡಿವಾಳರ ಇದ್ದರು.

ಎಟಿಎಂ ಕಾರ್ಡ್ ಬದಲಿಸಿ ಹಣ ಡ್ರಾ

ಹಾವೇರಿ: ಅನಾಮಧೇಯ ವ್ಯಕ್ತಿಯೊಬ್ಬರು ಎಟಿಎಂನಲ್ಲಿ ಹಣ ತೆಗೆಯಿಸಿ ಕೊಡುವುದಾಗಿ ನಂಬಿಸಿ, ಕಾರ್ಡ್ ಬದಲಿಸಿ ಸುಮಾರು 1.20ಲಕ್ಷ ರೂ.ಗಳನ್ನು ಡ್ರಾ ಮಾಡಿಕೊಂಡಿರುವ ಘಟನೆ ರಾಣೇಬೆನ್ನೂರು ನಗರದ ರೈಲ್ವೆ ಸ್ಟೇಶನ್ ರಸ್ತೆಯಲ್ಲಿರುವ ಎಟಿಎಂ ಕೇಂದ್ರದಲ್ಲಿ ನಡೆದಿದೆ. ರಾಣೇಬೆನ್ನೂರು ತಾಲೂಕು ಮೈದೂರು ಗ್ರಾಮದ ಪ್ರವೀಣ ಮಲ್ಲಪ್ಪ ಹಟ್ಟಿ ಎಂಬುವವರು ನೀಡಿದ ದೂರಿನನ್ವಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ದೂರುದಾರ ಪ್ರವೀಣ ಅವರು ತಮ್ಮ ಹೆಂಡತಿ ಹೆಸರಿನಲ್ಲಿದ್ದ ಎಟಿಎಂ ಕಾರ್ಡ್‌ನ್ನು ತೆಗೆದುಕೊಂಡು ಬಂದು ಎಟಿಎಂನಲ್ಲಿ ಹಣ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅನಾಮಧೇಯ ವ್ಯಕ್ತಿಯೊಬ್ಬರು ಪ್ರವೀಣ ಅವರನ್ನು ಮಾತನಾಡಿಸಿ ಹಣ ತೆಗೆದುಕೊಡುವುದಾಗಿ ನಂಬಿಸಿ, ಎಟಿಎಂ ಕಾರ್ಡ್ ಇಸಿದುಕೊಂಡು ಪಿನ್‌ಗಳನ್ನು ಪಡೆದುಕೊಂಡಿದ್ದಾನೆ. ವಾಪಸ್ ದೂರುದಾರರಿಗೆ ಹಣವನ್ನು ತೆಗೆಸಿಕೊಡದೆ, ಬೇರೆ ಯಾವುದೋ ಎಟಿಎಂನ್ನು ದೂರುದಾರರಿಗೆ ಕೊಟ್ಟು ಯಾಮಾರಿಸಿದ್ದಾರೆ. ಬಳಿಕ ವಿವಿಧ ಎಟಿಎಂ ಕೇಂದ್ರಗಳಿಗೆ ತೆರಳಿದ ಆರೋಪಿ 1,20,999 ರೂ.ಹಣವನ್ನು ಡ್ರಾ ಮಾಡಿಕೊಂಡು ಮೋಸ ಎಸಗಿದ್ದಾನೆಂದು ದೂರಿನಲ್ಲಿ ತಿಳಿಸಿದೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ಇಲ್ಲಿಯ ಶಕ್ತಿ ವೃದ್ಧಾಶ್ರಮದಲ್ಲಿ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಚಿಕ್ಕಜಾಜೂರ ಗ್ರಾಮದ ಲಾರಿ ಚಾಲಕ ಅಭಿಷೇಕ ಚಂದ್ರಪ್ಪ (24) ಮೃತ ದುರ್ದೈವಿಯಾಗಿದ್ದಾರೆ. ಈತ ಮದ್ಯ ವ್ಯಸನಿಯಾಗಿದ್ದು, ತನ್ನಷ್ಟಕ್ಕೆ ತಾನೇ ಮಾನಸಿಕ ಮಾಡಿಕೊಂಡು ಶಕ್ತಿ ವೃದ್ಧಾಶ್ರಮದಲ್ಲಿ ಇರುವ ಫ್ಯಾನಿಗೆ ವೇಲ್‌ನಿಂದ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾರೆ ಎಂದು ಮೃತರ ತಂದೆ ಚಂದ್ರಪ್ಪ ಗಂಗಪ್ಪ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ನಾಪತ್ತೆ

ಹಾವೇರಿ: ರಾತ್ರಿ ವೇಳೆ ಮನೆಯಲ್ಲಿ ಊಟ ಮುಗಿಸಿದ ವ್ಯಕ್ತಿಯೊಬ್ಬರು ಹೊರಗಡೆ ಸುತ್ತಾಡಿಕೊಂಡು ಬರುತ್ತೇನೆಂದು ಹೇಳಿ ಹೋದವರು ವಾಪಾಸ್ ಮನೆಗೆ ಬಾರದೆ ಕಾಣೆಯಾಗಿರುವ ಘಟನೆ ನಡೆದಿದೆ. ರಾಣೇಬೆನ್ನೂರಿನ ಸಿದ್ದೇಶ್ವರನಗರ ಒಂದನೇ ಕ್ರಾಸ್ ನಿವಾಸಿ ಶಿವಕುಮಾರ ಚಂದ್ರಶೇಖರ ಮೊಟೆಬೆನ್ನೂರ (40) ಕಾಣೆಯಾದ ವ್ಯಕ್ತಿಯಾಗಿದ್ದಾನೆ. ಈತ ಬುದ್ಧಿಮಾಂದ್ಯ ಇದ್ದು, ಮನೆಯಲ್ಲಿ ರಾತ್ರಿ ಊಟ ಮುಗಿಸಿದ ಬಳಿಕ ಹೊರಗಡೆ ಸುತ್ತಾಡಿಕೊಂಡು ಬರುವೆ ಎಂದು ಹೇಳಿ ಹೋದವರು ವಾಪಾಸ್ ಮನೆಗೆ ಬಾರದೆ ಕಾಣೆಯಾಗಿದ್ದಾನೆ ಎಂದು ಆತನ ಸಹೋದರ ಶಿವಾನಂದ ಚಂದ್ರಶೇಖರಪ್ಪ ಮೊಟೆಬೆನ್ನೂರ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಶೈಲಜಾ ಹಿಂಚಿಗೇರಿ



ಹಾವೇರಿ: ಸ್ಥಳೀಯ ವಿದ್ಯಾನಗರದ ನಿವಾಸಿ ಶೈಲಜಾ ಕೋಂ.ರವೀಂದ್ರ ಹಿಂಚಿಗೇರಿ (56) ನಿಧನರಾದರು. ಮೃತರು ಪತಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಸದಸ್ಯ ರವಿ ಹಿಂಚಿಗೇರಿ ಅವರನ್ನು ಒಳಗೊಂಡಂತೆ ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗದವನ್ನು ಅಗಲಿದ್ದಾರೆ.



ಹಾವೇರಿ: ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ ವತಿಯಿಂದ ಮೇ 25ರಂದು ನಡೆಯುವ ಎರಡನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿರುವ ಶಾಸಕ ರುದ್ರಪ್ಪ ಲಮಾಣಿ ಅವರನ್ನು ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಕರು ಆಮಂತ್ರಣ ನೀಡಿ ಆಹ್ವಾನಿಸಿದರು.

ಬಸವಣ್ಣನವರ ತತ್ವಾದರ್ಶ ಮೈಗೂಡಿಸಿಕೊಳ್ಳಿ

ಹಾನಗಲ್ಲ: ಬಸವಣ್ಣನವರು ಜಗತ್ತಿಗೆ ಜ್ಯೋತಿಯಾದಂತವರು, ಅವರ ತತ್ವದರ್ಶಗಳು ಇಂದಿಗೂ ಕೂಡ ಜೀವಂತವಾಗಿದೆ. ಅವರ ಕಾಯಕ, ನಡೆ ನುಡಿ ತತ್ವ, ಆತ್ಮ ನಿವೇದನೆ, ಮೂರ್ತಿ ಪೂಜೆ ನಿಷೇಧ, ದಾಸೋಹ ತತ್ವ ಮುಂತಾದ ಆದರ್ಶಗಳು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಗಳಾಗಿವೆ ಎಂದು ಬಂಕಾಪುರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ರಮೇಶ್ ಎನ್ ತೇವರಿ ಹೇಳಿದರು. ಪಟ್ಟಣದ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ವಚನಗಳಲ್ಲಿ ಬಸವಣ್ಣನ ವ್ಯಕ್ತಿತ್ವದರ್ಶನ ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಅವರು ಮಾತನಾಡಿದರು. ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಮ್ ಎಚ್ ಹೊಳಿಯಣ್ಣನವರ ಮಾತನಾಡಿದರು. ಪ್ರಾಸ್ತಾವಿಕವಾಗಿ ಎಸ್‌ಕೆಎಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹಾಗೂ ಸಂಚಾಲಕರಾದ ಡಾ. ಬೋವಿ ಹೊನ್ನಪ್ಪ ಮಾತನಾಡಿ,ಉತ್ತಮ ಕನ್ನಡ ಮನಸುಗಳಿದ್ದಾಗಲೇ ಇಂಥ ಉತ್ತಮ ಕನ್ನಡ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯ. ಕನ್ನಡ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅನನ್ಯವಾದುದು. 12ನೇ ಶತಮಾನದ ವಚನ ಸಾಹಿತ್ಯದ ಅನನ್ಯತೆಯಾಗಿ ಬಸವಣ್ಣನವರು ಕಂಡು ಬರುತ್ತಾರೆ. ಇಂಥ ಮಹಾನ್ ಸಾಂಸ್ಕೃತಿಕ ನಾಯಕನ ವ್ಯಕ್ತಿತ್ವದರ್ಶನ ಎಂಬ ವಿಚಾರ ಸಂಕಿರಣವನ್ನು ಆಯೋಜಿಸಿರುವುದು ಅತ್ಯಂತ ಸೂಕ್ತ ಮತ್ತು ಶಕ್ತವಾಗಿದೆ ಎಂದರು. ಪವನ್ ಕುಮಾರ್ ಹೊಸನಗರ ಸ್ವಾಗತ ಸೌಜನ್ಯ ಸಂಗಡಿಗರು ಪ್ರಾರ್ಥಿಸಿದರು.ರುಕ್ಮಿಣಿ ಮತ್ತು ಭೂಮಿಕಾ ಪಾಟೀಲ್ ನಿರೂಪಿಸಿದರು. ಮಹಮದ್ ಸಾಧಿಕ್ ಬಡಗಿ ವಂದಿಸಿದರು.



ಹಾನಗಲ್ಲ: ಪಟ್ಟಣದ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ವಚನಗಳಲ್ಲಿ ಬಸವಣ್ಣನ ವ್ಯಕ್ತಿತ್ವದರ್ಶನ ವಿಚಾರ ಸಂಕಿರಣದಲ್ಲಿ ಬಂಕಾಪುರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ರಮೇಶ್ ಎನ್ ತೇವರಿ ಮಾತನಾಡಿದರು.

ಶ್ರೀರಾಮ ಸೇನೆಯಿಂದ ಡಿಸಿ ಮೂಲಕ ಸಿಎಂಗೆ ಮನವಿ

ಹಿಜಾಬ್ ಅನುಮತಿಗೆ ವಿರೋಧ

ಹಾವೇರಿ: ಇತ್ತೀಚೆಗೆ ರಾಜ್ಯದ ಶಿಕ್ಷಣ ಸಚಿವರು ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ಶ್ರೀರಾಮ ಸೇನಾ ಪದಾಧಿಕಾರಿಗಳು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮೂಲಕ ಸಿಎಂಗೆ ಗುರುವಾರ ಮನವಿ ಸಲ್ಲಿಸಿದರು.

ಈ ಕುರಿತು ಶ್ರೀರಾಮ ಸೇನಾ ಜಿಲ್ಲಾಧ್ಯಕ್ಷ ವಿನಾಯಕ ಇಚ್ಚಂಗಿ ಮಾತನಾಡಿ, ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅನುಮತಿ ನೀಡುವ ಮೂಲಕ ಮಕ್ಕಳಲ್ಲಿ ಜಾತಿ ಭಾವನೆ ಬೇರಿನಲ್ಲಿಯೇ ಬಿತ್ತಲಾಗುತ್ತಿದ್ದು ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಲಾ-ಕಾಲೇಜುಗಳ ಸಮವಸ್ತ್ರ ಹಾಗೂ ಶಿಸ್ತು ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಎಸ್ಡಿಎಂಸಿ ಹಾಗೂ ಸಂಬಂಧಿತ ಸಂಸ್ಥೆಗಳ ಸಮಿತಿಗಳಿಗೆ ಇರುವ ಸಂದರ್ಭದಲ್ಲಿ, ಸರ್ಕಾರದ ಈ ನಿಲುವು ಸಮಿತಿಗಳ ಹಕ್ಕನ್ನು ಕಸಿದುಕೊಳ್ಳುವಂತಾಗಿದೆ. ಕೇವಲ ಮುಸ್ಲಿಂ ತುಷ್ಟಿಕರಣದ ರಾಜಕೀಯ ಉದ್ದೇಶದಿಂದಲೇ ಹಿಜಾಬ್‌ಗೆ ಅನುಮತಿ ನೀಡುವ ಪ್ರಯತ್ನ ನಡೆಯುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ದೂರಿದರು.

ದೇಶದ ಅಂದಿನ ಪ್ರಧಾನಿ ಇಂದಿರಾ ಗಾಂಧಿ ವಿದ್ಯಾರ್ಥಿಗಳಲ್ಲಿ ಧರ್ಮ, ಜಾತಿ ಹಾಗೂ ಆರ್ಥಿಕ ಭೇದಭಾವ ಕಾಣಿಸಬಾರದು ಎಂಬ ಉದ್ದೇಶದಿಂದ ಸಮವಸ್ತ್ರ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು. ಸಮವಸ್ತ್ರದ ಮೂಲ ಉದ್ದೇಶವೇ ಎಲ್ಲ ವಿದ್ಯಾರ್ಥಿಗಳಲ್ಲಿ ಸಮಾನತೆ ಮತ್ತು ಏಕತೆಯನ್ನು ನಿರ್ಮಿಸುವುದಾಗಿದೆ. ಆದರೆ ಇದೀಗ ಹಿಜಾಬ್ ವಿಚಾರಕ್ಕೆ ಅನವಶ್ಯಕವಾಗಿ ಶಿವಧಾರ, ಜನಿವಾರ, ರುದ್ರಾಕ್ಷಿ ಇತ್ಯಾದಿಗಳನ್ನು ಬಟ್ಟೆಯ ಒಳಭಾಗದಲ್ಲಿ ಧರಿಸಲಾಗುವ ವೈಯಕ್ತಿಕ ಆಚರಣೆಗಳಾಗಿದ್ದು, ಅನಗತ್ಯವಾಗಿ ಇವುಗಳನ್ನು ಜೋಡಿಸಿ ಹಿಂದು ಸಮಾಜದ ದಿಕ್ಕು ತಪ್ಪಿಸುವ ಜತೆಗೆ ಸಮವಸ್ತ್ರದ ಹೊರಾಂಗಣ ನಿಯಮಗಳಿಗೆ ಯಾವುದೇ ಸಂಬಂಧ ಇಲ್ಲ. ಆದ್ದರಿಂದ ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಹಿಜಾಬ್‌ಗೆ ಅನುಮತಿ ನೀಡುವ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಸರ್ಕಾರಕ್ಕೆ ಈ ಸುತ್ತೋಲೆಯನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿದ್ದಾರೆ.

ಈ ವೇಳೆ ಶ್ರೀರಾಮ ಸೇನಾದ ಪದಾಧಿಕಾರಿಗಳಾದ ವೀರೇಶ ಅಂಗಡಿ, ಗದಿಗೆಪ್ಪ ಕುರುವತ್ತಿ ಸೋಮು ರಾಥೋಡ ಲವ್ ಜಿಯಾದ ಪ್ರಮುಖರು ಹಾಗೂ ಕಾರ್ಯಕರ್ತರು ಇದ್ದರು.



> **2022ರಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯ ಹಿಜಾಬ್ ಸಮವಸ್ತ್ರದ ಅವಿಭಾಜ್ಯ ಭಾಗವಲ್ಲ ಎಂದು ಸ್ಪಷ್ಟವಾದ ತೀರ್ಪು ನೀಡಿರುವುದು ರಾಜ್ಯದ ಜನತೆಗೆ ತಿಳಿದಿರುವ ವಿಷಯ. ಇಂಥ ಪರಿಸ್ಥಿತಿಯಲ್ಲಿ ಮತ್ತೆ ಹಿಜಾಬ್‌ಗೆ ಅನುಮತಿ ನೀಡಲು ಮುಂದಾಗಿರುವುದು ನ್ಯಾಯಾಂಗದ ತೀರ್ಪಿನ ಆತ್ಮಕ್ಕೆ ವಿರುದ್ಧವಾಗಿದೆ.**
> ■ ವಿನಾಯಕ ಇಚ್ಚಂಗಿ, ಶ್ರೀರಾಮ ಸೇನಾ ಜಿಲ್ಲಾಧ್ಯಕ್ಷ

ಕೃಷಿ ಪಂಪ್‌ಸೆಟ್ ಉದ್ಘಾಟಿಸಿದ ಶಾಸಕ ಮಾನೆ

ಹಾನಗಲ್ಲ: ಲಾಭದ ಉದ್ದೇಶಕ್ಕೆ ಕೆಲಸ ಮಾಡುತ್ತಿರುವ ಖಾಸಗಿ ಸ್ವಾಮ್ಯದ ಬೆಳೆವಿಮಾ ಕಂಪನಿಗಳಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ರೈತ ಸಮೂಹದ ನೆರವಿಗೆ ನಿಲ್ಲುವ ಬದಲಿಗೆ ಲಾಭಗಳಿಕೆ ಕಡೆಗೆ ಕಂಪನಿಗಳು ಗಮನ ನೀಡುವುದು ದುರ್ದೈವದ ಸಂಗತಿ ಎಂದು ಶಾಸಕ ಶ್ರೀನಿವಾಸ ಮಾನೆ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ಮಾಸನಕಟ್ಟಿ ಗ್ರಾಮದ ರಾಜಶೇಖರ್ ಹಲಸೂರ ಅವರ ಹೊಲದಲ್ಲಿ 2025-26 ನೇ ಸಾಲಿನಲ್ಲಿ ಪಿಎಂ ಕುಸುಮ್ ಯೋಜನೆಯಡಿ ಅಳವಡಿಸಲಾದ ಸೋಲಾರ್ ಚಾಲಿತ ಕೃಷಿ ಪಂಪ್‌ಸೆಟ್ ಉದ್ಘಾಟಿಸಿ ಅವರು ಮಾತನಾಡಿ, 2016 ರವರೆಗೆ ಕೇಂದ್ರ ಸರ್ಕಾರದ ಅಧೀನದಲ್ಲಿದ್ದ ಕಂಪನಿಗಳಿಗೆ ಬೆಳೆವಿಮೆ ಭರಿಸಲಾಗುತ್ತಿತ್ತು. ಆ ಸಂದರ್ಭದಲ್ಲಿ ಕಂಪನಿಗಳು ಲಾಭನಷ್ಟದ ಲೆಕ್ಕಾಚಾರ ಮಾಡದೇ ರೈತರ ನೆರವಿಗೆ ನಿಲ್ಲುತ್ತಿದ್ದವು. ಆದರೀಗ ಕೇಂದ್ರ ಸರ್ಕಾರದ ಅಧೀನದ ಕಂಪನಿಗಳ ಬದಲಿಗೆ ಖಾಸಗಿ ಸ್ವಾಮ್ಯದ ಕಂಪನಿಗಳಿಗೆ ಕೇಂದ್ರ ಸರ್ಕಾರ ಅವಕಾಶ ನೀಡಿದೆ. ಇವು ರೈತರ ಹಿತ ಸಂಪೂರ್ಣವಾಗಿ ಕಡೆಗಣಿಸಿ ಬೆಳೆವಿಮಾ ಪರಿಹಾರ ಬಿಡುಗಡೆಯಲ್ಲಿ ಅನ್ಯಾಯ ಮಾಡುತ್ತಿವೆ. ಸೃಷ್ಟಿ ನಂಬಿ, ಬೆವರು ಹರಿಸಿ ದುಡಿಯುತ್ತಿರುವ ರೈತ ಸಮೂಹ ಬೆಳೆವಿಮಾ ಪರಿಹಾರದ ವಿಚಾರದಲ್ಲಿ ಸಂಕಷ್ಟಕ್ಕೊಳಗಾಗಿದೆ ಎಂದರು.

ರೈತ ರಾಜಶೇಖರ ಹಲಸೂರ ಮಾತನಾಡಿ, ಶಾಸಕ ಶ್ರೀನಿವಾಸ ಮಾನೆ ಅವರ ಪ್ರಯತ್ನದಿಂದ ಇಡೀ ಜಿಲ್ಲೆಯಲ್ಲಿ ಪಿಎಂ ಕುಸುಮ್ ಯೋಜನೆಯ ಅನುಷ್ಠಾನದಲ್ಲಿ ಹಾನಗಲ್ ತಾಲೂಕು ಮೊದಲ ಸ್ಥಾನದಲ್ಲಿದೆ. ಯೋಜನೆಯಡಿ ಒಟ್ಟು 225 ರೈತರು ಹೆಸರು ನೋಂದಾಯಿಸಿದ್ದಾರೆ. ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆ ಕಡಿತಗೊಳಿಸಿ ಸೌರಶಕ್ತಿ ಬಳಕೆಗೆ ಮುಂದಾಗಬೇಕಿದೆ ಎಂದರು.

ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಹೆಸ್ಕಾಂ ಎಇಇ ಸಂತೋಷ ಮರಿಗೌಡ್ರ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ, ಮುಖಂಡರಾದ ಈರಣ್ಣ ಬೈಲವಾಳ, ಮಲ್ಲೇಶಪ್ಪ ಬಿಜಾಪೂರ, ಕರಿಯಪ್ಪ ಗುಡ್ಡದ, ರುದ್ರಪ್ಪ ಹಲಸೂರ, ಮಂಜಪ್ಪ ತಿಮ್ಮಾಪೂರ, ಬೀರಪ್ಪ ಹಾದಿಮನಿ, ರುದ್ರಗೌಡ ಪಾಟೀಲ, ಬಾಪುಗೌಡ ಪಾಟೀಲ, ಚನ್ನಬಸನಗೌಡ ಪಾಟೀಲ, ಜಂಬಯ್ಯ ಚಿಕ್ಕಮಠ, ಸುಲೇಮಾನ್, ರವಿ ಬಾರ್ಕಿ, ಶಾಂತನಗೌಡ ಪಾಟೀಲ, ಮಲಕಪ್ಪ ಸಣ್ಣಪ್ಪನವರ, ಗಂಗಮ್ಮ ತಿಮ್ಮಾಪೂರ, ಪರಸಪ್ಪ ಕೌಡಕಿ, ಬಸನಗೌಡ ಪಾಟೀಲ, ಶಿವರಾಜ ಸಂಕಣ್ಣನವರ, ಬಾನಪ್ಪ ಸಂಕಣ್ಣನವರ, ಮಲ್ಲಿಕಾರ್ಜುನ ಸಂಕಣ್ಣನವರ, ಈರಪ್ಪ ಕಮ್ಮಾರ ಇದ್ದರು.



ಸಂತೋಷ ಆಲದಕಟ್ಟಿ ಅಸಮಾಧಾನ

ಶೈಕ್ಷಣಿಕ ಹಿತದೃಷ್ಟಿಯಿಂದ ಹಿಜಾಬ್ ಸರಿಯಲ್ಲ

ಹಾವೇರಿ: ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಕೊಟ್ಟಿರುವುದು ಶೈಕ್ಷಣಿಕ ಹಿತದೃಷ್ಠಿಯಿಂದ ಸರಿಯಲ್ಲ. 2022ರಲ್ಲಿ ಬಿ.ಜೆ.ಪಿ ನೇತೃತ್ವದ ರಾಜ್ಯ ಸರ್ಕಾರ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇದಿಸಿ ಸಮವಸ್ತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಿತ್ತು. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದಿನ ಸರ್ಕಾರದ ಆದೇಶವನ್ನು ರದ್ದುಪಡಿಸಿ, ಹಿಜಾಬ್‌ಗೆ ಅವಕಾಶ ನೀಡಿರುವುದು ಕೋಮು ಭಾವನೆಯನ್ನು ಪ್ರಚೋದಿಸುತ್ತಿದೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಂತೋಷ ಆಲದಕಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಶೈಕ್ಷಣಿಕ ಸಂಸ್ಥೆಗಳು ಜಾತಿ, ಧರ್ಮ, ರಾಜಕೀಯ ಭೇದಭಾವಗಳಿಂದ ದೂರವಿದ್ದು, ಏಕತೆ ಹಾಗೂ ಸಮಗ್ರತೆಯ ಭಾವನೆಯನ್ನು ಬೆಳೆಸುವ ಕೇಂದ್ರಗಳಾಗಬೇಕೆ ಹೊರತು, ಧರ್ಮಕ್ಕೊಂದು ವಸ್ತ್ರಧರಿಸಲು ಅವಕಾಶ ನೀಡಿ ಕೋಮು ಸೌಹಾರ್ದತೆಯನ್ನು ಕೆಡಿಸುವಂತಾಗಬಾರದು. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿ ಬಾಲ್ಯದಿಂದಲೆ ಮಕ್ಕಳಲ್ಲಿ ಕೋಮು ವಿಭಜನೆಯ ವಿಷಬೀಜ ಭಿತ್ತಿ ತನ್ನ ತುಷ್ಟಿಕರಣ ನೀತಿಯನ್ನು ಮುಗ್ದ ಮಕ್ಕಳಲ್ಲಿಯು ಕೋಮುಭಾವನೆಯನ್ನು ಭಿತ್ತುತ್ತಿದೆ ಎಂದು ದೂರಿದ್ದಾರೆ.

ಹಿಜಾಬ್ ಸಂಬಂಧಿಸಿದ ವಿವಾದದ ಅರ್ಜಿ ಸುಪ್ರಿಂಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿ ಇರುವಾಗ ರಾಜ್ಯದ ಶಿಕ್ಷಣ ಸಚಿವರು ನ್ಯಾಯಾಂಗದ ಪ್ರಕ್ರೀಯೆಯನ್ನು ಕಡೆಗಣಿಸಿ, ಹಿಜಾಬ್ ನಿಷೇದವನ್ನು ಹಿಂಪಡೆದಿರುವುದು ನ್ಯಾಯಾಂಗ ವ್ಯವಸ್ಥೆಗೆ ಮಾಡುವ ಅಪಮಾನವಾಗಿದೆ. ದೇಶದ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತಂದು ದೇಶದ ಸರ್ವ ಪ್ರಜೆಗಳು ಸಂವಿಧಾನದ ವ್ಯವಸ್ಥೆಯಲ್ಲಿ ಸಮಾನರು ಎಂದು ಕಾನೂನು ಮಾಡುತ್ತಿರುವ ಈ ಸಂಧರ್ಭದಲ್ಲಿ ಕಾಂಗ್ರೆಸ್ ಹಿಜಾಬ್‌ಗೆ ಅವಕಾಶ ನೀಡುವ ಮೂಲಕ ಸಮಾಜವನ್ನು ಧರ್ಮದ ಆಧಾರದ ಮೇಲೆ ವಿಭಜನೆ ಮಾಡುತ್ತಿರುವುದು ರಾಷ್ಟ್ರದ್ರೋಹದ ಕೆಲಸ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪನವರು 1ನೇ ತರಗತಿಯಿಂದ 12ನೇ ತರಗತಿ ಮಕ್ಕಳಿಗೆ ಹಿಜಾಬ್ ಧರಿಸಲು ಅವಕಾಶ ನೀಡಿರುವುದು ವಿದ್ಯಾರ್ಥಿಗಳ ಏಕತೆ ಹಾಗೂ ಸೌಹಾರ್ದತೆಯ ಭಾವನೆಗೆ ಧಕ್ಕೆ ಉಂಟು ಮಾಡುತ್ತದೆ. ಮುಸ್ಲಿಂ ಸಮುದಾಯದ ಮಕ್ಕಳು ಧಾರ್ಮಿಕ ಸಂಕೇತವೆಂದು ಹಿಜಾಬ್ ಧರಿಸಿ ಬಂದರೆ ಹಿಂದೂ ಸಮುದಾಯದ ಮಕ್ಕಳು ಕೇಸರಿ ಶಾಲು ಧರಿಸಿ ಬರಲು ಪ್ರಾರಂಭಿಸಿದರೆ ಆಗ ಶೈಕ್ಷಣಿಕ ವಾತಾವರಣ ನಾಶವಾಗುತ್ತದೆ. ಆದ್ದರಿಂದ ಶಿಕ್ಷಣ ಸಚಿವರು ಆದೇಶವನ್ನು ಹಿಂಪಡೆಯಬೇಕೆಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಭಾರೀ ಗಾಳಿ-ಮಳೆ: ಧರೆಗೆ ಉರುಳಿದ ಮರಗಳು

ಹಾವೇರಿ: ನಗರ ಸೇರಿದಂತೆ ಜಿಲ್ಲೆಯ ವಿವಿಧಡೆ ಬುಧವಾರ ಸಂಜೆ ಭಾರಿ ಗಾಳಿ, ಗುಡುಗು ಮಿಂಚಿನೊಂದಿಗೆ ಕೆಲಕಾಲ ಮಳೆಯಾಗಿದ್ದು, ಅಲ್ಲಲ್ಲಿ ಮರಗಳು ಧರೆಗೆ ಉರುಳಿ ಬಿದ್ದಿವೆ.

ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಬಿರು ಬಿಸಿಲಿನಿಂದ ಕೂಡಿದ್ದ ವಾತಾವಣ ಏಕಾಏಕಿ ಮೋಡ ಕವಿತು ಸಂಜೆ ಕೆಲಕಾಲ ಭಾರಿ ಗಾಳಿ, ಗುಡುಗು ಸಹಿತ ಜಿಲ್ಲೆಯ ಕೆಲವು ಭಾಗದಲ್ಲಿ ಮಳೆಯಾಗಿದೆ. ಹಾವೇರಿ ತಾಲೂಕಿನ ಹೊಸರಿತ್ತಿ ಬಸ್ ನಿಲ್ದಾಣದ ಆವರಣದಲ್ಲಿದ್ದ ಮರವೊಂದು ಭಾರಿ ಗಾಳಿಗೆ ಉರುಳಿ ಬಿದ್ದಿದೆ. ರಟ್ಟೀಹಳ್ಳಿ ತಾಲೂಕಿನಲ್ಲಿ ಸಹ ಭಾರಿ ಗಾಳಿಯೊಂದಿಗೆ ಮಳೆ ಸುರಿದಿದ್ದು, ದೊಡ್ಡಗುಬ್ಬಿ ಗ್ರಾಮದ ಬಳಿ ರಸ್ತೆಗೆ ಮರಗಳು ಉರಳಿ ಬಿದ್ದ ಪರಿಣಾಮ ಕೆಲಕಾಲ ರಾಣೆಬೆನ್ನೂರು-ಹಲಗೇರಿ ರಸ್ತೆ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಹಾನಗಲ್ಲ ತಾಲೂಕಿನಲ್ಲಿ ಸುಮಾರು ಒಂದು ಗಂಟೆ ಕಾಲ ಭರ್ಜರಿ ಮಳೆ ಸುರಿದಿದೆ. ಮುಂಗಾರು ಬಿತ್ತನೆಗೆ ಸಿದ್ದತೆ ನಡೆಸಲು ಇದರಿಂದ ಅನುಕೂಲವಾಗಿದ್ದು, ರೈತರು ಸಂತಸಗೊಂಡಿದ್ದಾರೆ.

ಗುರುವಾರ ಸಂಜೆ ಏಕಾಏಕಿ ಭಾರಿ ಗಾಳಿಯೊಂದಿಗೆ ಸುರಿದ ಮಳೆಯಿಂದಾಗಿ ನಗರದ ಮಾರುಕಟ್ಟೆಯಲ್ಲಿ ಅಸ್ತವ್ಯಸ್ತ ಉಂಟಾಯಿತು. ಮಾರುಕಟ್ಟೆಗೆ ಆಗಮಿಸಿದ್ದ ಜನರು ಮಳೆಯಿಂದಾಗಿ ಸಮಸ್ಯೆ ಎದುರಿಸುವಂತಾಯಿತು. ನಗರದಲ್ಲಿ ಕೆಲಕಾಲ ವಿದ್ಯುತ್ ವ್ಯತ್ಯಯವಾಯಿತು. ಇನ್ನುಳಿದಂತೆ ಜಿಲ್ಲೆಯ ಹಾನಗಲ್ಲ, ಶಿಗ್ಗಾವಿ, ಬ್ಯಾಡಗಿ, ರಾಣೆಬೆನ್ನೂರ, ಹಿರೇಕೆರೂರು, ರಟ್ಟೀಹಳ್ಳಿ, ಸವಣೂರು ತಾಲೂಕಿನ ವಿವಿಧಡೆ ಭಾರಿ ಗಾಳಿ, ಗುಡುಗು ಸಹಿತ ಮಳೆಯಾಗಿದೆ.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

ಹಾವೇರಿ: ನೀಟ್ ಪರೀಕ್ಷೆ ರದ್ದು ಖಂಡಿಸಿ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲು ಒತ್ತಾಯಿಸಿ ಜಿಲ್ಲಾ ಯುಥ್ ಕಾಂಗ್ರೆಸ್ ವತಿಯಿಂದ ಗುರುವಾರ ನಗರದ ತಾಪಂ ಆವರಣದಲ್ಲಿರುವ ಸಂಸದರ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಯುಥ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ದರ್ಶನ್‌ಕುಮಾರ ಲಮಾಣಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಂಟಕ ಪ್ರಾಯವಾಗಿದ್ದು, ಕೇಂದ್ರ ಬಿಜೆಪಿ ಸರ್ಕಾರ ಹಗರಣಗಳ ಸರಮಾಲೆಯಲ್ಲಿ ಮುಳುಗಿದೆ. ಈಗ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಯಿಂದ 30ಲಕ್ಷ ಹಣ ಪಡೆದು ಪ್ರಶ್ನೆಗಳನ್ನು ಸೋರಿಕೆ ಮಾಡಲಾಗಿದೆ. ಈ ಕುರಿತು ತನಿಖೆಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅವರನ್ನು ನೇಮಿಸಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಯುಥ್ ಕಾಂಗ್ರೆಸ್ ಮುಖಂಡ ಶಂಕರ್ ಮೆಹರವಾಡೆ ಮಾತನಾಡಿ, ಕೇಂದ್ರ ಸರ್ಕಾರ ವೈದ್ಯಕೀಯ ವಿದ್ಯಾರ್ಥಿಗಳ ಜೀವನ ಜೊತೆ ಆಟವಾಡಿದೆ. ಇದನ್ನು ಯುಥ್ ಕಾಂಗ್ರೆಸ್ ಸಹಿಸಲ್ಲ. ವಿದ್ಯಾರ್ಥಿಗಳಿಗೆ ನ್ಯಾಯ ದೊರಕುವವರೆಗೂ ಹೋರಾಟ ನಿಲ್ಲಿಸಲ್ಲ, ವಿದ್ಯಾರ್ಥಿಗಳ ಪರವಾಗಿ ಕಾಂಗ್ರೆಸ್ ಇದೆ. ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದೆ ಯಾರದೇ ಕೈವಾಡ ಇರಲಿ ತಕ್ಕ ಶಿಕ್ಷೆ ಆಗಬೇಕು. ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗುಲಾಮ್ ರಜಾ ಬೊಗಳಿ, ಹಾವೇರಿ ಗ್ರಾಮೀಣ ಯುಥ್ ಕಾಂಗ್ರೆಸ್ ಅಧ್ಯಕ್ಷ ಸಂತೋಷ ಲಮಾಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಾಂತೇಶ ಮಕರವಳ್ಳಿ, ಜಮೀರ್ ಜಿಗರಿ, ಸುಧೀರ ಲಮಾಣಿ, ನಾಗರಾಜ ಬಡೆಮ್ಮನವರ, ಮಂಜುನಾಥ ಲಕ್ಮಾಪುರ, ವಿನಯ ಪಾಲನಕರ್, ಹಸನ ಮುಲ್ಲಾ, ಖಾದರ್‌ಸಾಬ ಗಡ್ಡದ, ಯಲ್ಲಪ್ಪ ಶಿಗ್ಗಾವಿ ಸೇರಿದಂತೆ ಇತರರು ಇದ್ದರು.



ಎಲ್ಲ ಕ್ಷೇತ್ರದಲ್ಲಿ ಮಹಿಳೆ ಮುಂಚೂಣಿ: ಶ್ರೀಗಳು

ಹಾವೇರಿ: ಮಹಿಳೆಯರು ಇಂದು ಉತ್ತಮ ಶಿಕ್ಷಣವನ್ನು ಪಡೆದುಕೊಂಡು ಸಮಾಜದ ಸರ್ವತೋಮುಖ ಬೆಳವಣಿಗೆಯಲ್ಲಿ ತನ್ನದೇ ಆದ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ ಎಂದು ಹುಕ್ಕೇರಿಮಠದ ಡಾ.ಸದಾಶಿವ ಶ್ರೀಗಳು ಹೇಳಿದರು.

ನಗರದ ಹುಕ್ಕೇರಿಮಠ ಶಿವಲಿಂಗೇಶ್ವರ ಮಹಿಳಾ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ 2025-26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಯುಥ್ ರೆಡ್ ಕ್ರಾಸ್ ಹಾಗೂ ಎನ್.ಎಸ್.ಎಸ್. ಚಟುವಟಿಕೆಗಳ ಸಮಾರೋಪ ಸಮಾರಂಭ ಮತ್ತು ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಬಿಳ್ಕೊಡುಗೆ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಹಿಳೆ ಅಡುಗೆ ಮನೆಗೆ ಸೀಮಿತ ಎನ್ನುವ ಮಾತು ಇತ್ತು. ಆದರೆ ಈಗ ಆ ಮಾತುಬಹಳಷ್ಟುಬದಲಾವಣೆಯಾಗಿದೆ. ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ತಮ್ಮದೆಯಾದ ಸೇವೆ ಸಲ್ಲಿಸುತ್ತಿದ್ದಾರೆ. ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಹೀಗೆ ಎಲ್ಲಾ ವಲಯಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಇದಕ್ಕೆಲ್ಲಾ ಕಾರಣ ಶಿಕ್ಷಣ. ಆದ್ದರಿಂದ ಮಹಿಳೆಯರು ಉತ್ತಮವಾದ ಶಿಕ್ಷಣ ಕಲಿತು, ಸಮಾಜದ ಸರ್ವತೋಮುಖ ಅಭಿವೃದ್ದಿಗೆ ಕೊಡುಗೆ ನೀಡುವಂತಾಗಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರೇವತಿ ಹೊಸಮಠ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಿವಲಿಂಗೇಶ್ವರ ವಿದ್ಯಾಪೀಠದ ಕಾರ್ಯಾಧ್ಯಕ್ಷ ಎಸ್. ಎಸ್. ಮುಷ್ಠಿ, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗಿಯಾಗುವ ಮೂಲಕ ಮಹಾವಿದ್ಯಾಲಯದ ಕೀರ್ತಿಯನ್ನು ಉನ್ನತಿಸಬೇಕೆಂದು ತಿಳಿಸಿದರು.

ಈ ವೇಳೆ ವಿದ್ಯಾಪೀಠದ ಆಡಳಿತ ಮಂಡಳಿಯ ಗೌರವ ಉಪಾಧ್ಯಕ್ಷ ವೀರಣ್ಣ ಅಂಗಡಿ, ವಿದ್ಯಾಪೀಠದ ಸದಸ್ಯ ಮಹೇಶ ಚಿನ್ನಿಕಟ್ಟಿ ಉಪಸ್ಥಿತರಿದ್ದರು. ಪ್ರೊ. ಬಿ.ವಿ ಹಿರೇಮಠ ಸ್ವಾಗತಿಸಿದರು. ಪ್ರಾಚಾರ್ಯ ಡಾ. ಸವಿತಾ ಹಿರೇಮಠ ಪ್ರಾಸ್ತಾವಿಕ ಮಾತನಾಡಿದರು. ಪ್ರೊ. ಟಿ.ಎನ್.ಮಡಿವಾಳರ ಅತಿಥಿ ಪರಿಚಯಿಸಿದರು.

ಪ್ರೊ. ವ್ಹಿ.ಕೆ. ಹಲಗಣ್ಣನವರ ನಗದು ಬಹುಮಾನ ವಿತರಣೆ ಕಾರ್ಯಕ್ರಮ, ಪ್ರೊ.ನಾಗರಾಜ ಎಂ.ಹೆಚ್. ಕ್ರೀಡಾ ಬಹುಮಾನ ವಿತರಣಾ ಕಾರ್ಯಕ್ರಮ ಹಾಗೂ ಪ್ರೊ.ಪಿ.ಎಂ ಹಾವೇರಿ ಸಾಂಸ್ಕೃತಿಕ ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿ ಕೊಟ್ಟರು. ಪ್ರೊ ಎಸ್.ಎ.ಸೈಯದ್ ವಾರ್ಷಿಕ ವರದಿ ವಾಚಿಸಿದರು. ಎಂ.ಎಂ. ಮಡಿವಾಳರ ಎನ್.ಎಸ್.ಎಸ್ ವರದಿ ವಾಚಿಸಿದರು. ಕು. ಚಂದ್ರಕಲಾ ನಾಗನೂರ ವಂದಿಸಿದರು. ಎಸ್.ಬಿ.ಗಾಜಿಪುರ ಕಾರ್ಯಕ್ರಮ ನಿರೂಪಿಸಿದರು.

2025-26ನೇ ಸಾಲಿನ ಆದರ್ಶ ವಿದ್ಯಾರ್ಥಿನಿ ಬಹುಮಾನವನ್ನು ಬಿ.ಎ ಮತ್ತು ಬಿ.ಕಾಂ ವಿಭಾಗದಿಂದ ಕ್ರಮವಾಗಿ ಪೂರ್ಣಿಮಾ ಕರ್ಜಗಿ ಮತ್ತು ಸುಶ್ಮಿತಾ ಕಾಯಕದ ಪಡೆದುಕೊಂಡರು. ಸಮಗ್ರ ವೀರಾಗ್ರಣಿ ಚಂದ್ರಕಲಾ ನಾಗನೂರ ಪಡೆದರು. ಕಾರ್ಯಕ್ರಮದಲ್ಲಿ ಮಹಾ ವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ನಾಳೆಯಿಂದ 12ನೇ ಮೇ ಸಾಹಿತ್ಯ ಮೇಳ

ಹುಬ್ಬಳ್ಳಿ: 12 ನೇ ಮೇ ಸಾಹಿತ್ಯ ಮೇಳ ನಗರದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮೇ 16 ಹಾಗೂ 17 ರಂದು ಹಮ್ಮಿಕೊಳ್ಳಲಾಗಿದೆ ಎಂದು ಎಂದು ಪ್ರಗತಿಪರ ಚಿಂತಕ, ಸಾಹಿತಿ ಬಸವರಾಜ ಸೂಳಿಭಾವಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗದಗಿನ ಲಡಾಯಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಕ, ಕವಲಕ್ಕಿಯ ಕವಿ ಪ್ರಕಾಶನ ಹಾಗೂ ಮೇ ಸಾಹಿತ್ಯ ಮೇಳ ಹುಬ್ಬಳ್ಳಿ ಬಳಗದ ಸಹಯೋಗದಲ್ಲಿ ಮೇಳ ನಡೆಯಲಿದೆ ಎಂದರು.

ಮೇ 16ರಂದು ಬೆಳಗ್ಗೆ 10 ಕ್ಕೆ ಉದ್ಘಾಟನಾ ಗೋಷ್ಠಿಯನ್ನು ಸನತಕುಮಾರ ಬೆಳಗಲಿ, ಬಿ.ಎಸ್. ಸೊಪ್ಪಿನ, ಕೆ.ಎಸ್. ಶರ್ಮಾ, ವಿವೇಕಾನಂದ ದೊಡಮನಿ, ಬೀಬೀಜಾನ್ ಮುಲ್ಲಾ, ಫರೀದಾ ಕರ್ನೂಲ್ ಮತ್ತು ಲಿನೆಟ್ ಡಿಸಿಲ್ವ ಉದ್ಘಾಟಿಸಲಿದ್ದಾರೆ ಎಂದರು. ಸಾಂವಿಧಾನಿಕ ಪ್ರಜಾಸತ್ತೆ: ಸ್ವರೂಪ-ಸಂಘರ್ಷದ ಇತಿಹಾಸ, ವರ್ತಮಾನ ಭಾರತದಲ್ಲಿ ಸಾಂವಿಧಾನಿಕ ಪ್ರಜಾಸತ್ತೆ: ಏನು ಎತ್ತ, ಪ್ರಜಾಸತ್ತೆಯ ಮೇಲಿನ ದಾಳಿ: ಸೃಜನಶೀಲ ಸ್ಪಂದನೆ, ಪ್ರಜಾಸತ್ತೆ ಅಡಿಯಲ್ಲಿ ಅಸ್ಮಿತೆಯ ರಾಜಕಾರಣ, ಎಸ್‌ಐಆರ್: ಸಮಸ್ಯೆ-ಜನಾಂದೋಲನ ಹಾಗೂ ಇತರ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ. ಮೇ 17ರಂದು ಬೆಳಗ್ಗೆ 8.30ಕ್ಕೆ ಚನ್ನಮ್ಮ ವೃತ್ತದಿಂದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದವರೆಗೆ ಎಸ್‌ಐಆರ್ ರದ್ದುಗೊಳಿಸುವ ಕುರಿತು ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು. ಶ್ಯಾಮಲಾ ಗುರುಪ್ರಸಾದ, ಇಸಬೆಲ್ಲ ದಾಸ್, ಗುರುನಾಥ ಉಳ್ಳಿಕಾಶಿ, ನಾಗರಾಜ ಗುರಿಕಾರ, ಲಿಂಗರಾಜ ಅಂಗಡಿ, ಮಹೇಶ ಪತ್ತಾರ, ಸುನಂದಾ ಕಡಮೆ ಹಾಗೂ ಇತರರಿದ್ದರು.



ಸರಳ ಬದುಕಿಗೆ ವಚನಗಳು ಅವಶ್ಯ

ಹುಬ್ಬಳ್ಳಿ: ಬಸವಾದಿ ಶರಣರ ವಚನ ಸಾಹಿತ್ಯಕ್ಕೆ ಅಳಿವು ಎಂಬುವುದು ಇಲ್ಲ. ಜನಸಾಮಾನ್ಯರ ಸರಳ ಬದುಕಿಗೆ ವಚನಗಳು ತುಂಬ ಅವಶ್ಯಕವಾಗಿವೆ ಎಂದು ಶರಣ ಸಾಹಿತಿ ಪ್ರೊ. ಎಸ್. ವಿ. ಪಟ್ಟಣಶೆಟ್ಟಿ ತಿಳಿಸಿದರು.ನಗರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ಹುಬ್ಬಳ್ಳಿ ಶಹರ ವತಿಯಿಂದ ಏರ್ಪಡಿಸಿದ್ದ ಶರಣ ಸಾಹಿತ್ಯ ಚಿಂತನ ಮಂಥನ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

12ನೇ ಶತಮಾನದ ವಚನಕಾರರ ವಿಚಾರಧಾರೆಯನ್ನು ಇಂದಿನ ಸಮಾಜಕ್ಕೆ ಅಳವಡಿಸಿಕೊಳ್ಳಲು ವಚನ ಸಾಹಿತ್ಯ ತುಂಬಾ ಸಹಕಾರಿಯಾಗಿದೆ. ಇದು ಸಮಾನತೆ, ಕಾಯಕ ತತ್ವ, ದಾಸೋಹ ಮತ್ತು ಸಾಮಾಜಿಕ ಪರಿವರ್ತನೆಗೆ ಶರಣರ ವಚನಗಳ ಬೆಳಕಿನಲ್ಲಿ ಚಿಂತನೆ ನಡೆಸಿ, ಬದುಕನ್ನು ಸರಳ ಮತ್ತು ಪಾವನವಾಗಿಸುವ ಮಾರ್ಗ ತೋರುತ್ತದೆ ಎಂದರು.

ಜಾನಪದ ಕಲಾವಿದ ಡಾ. ರಾಮು ಮೂಲಗಿ ಮಾತನಾಡಿ, ಪ್ರೊ. ಎಸ್.ವ್ಹಿ. ಪಟ್ಟಣಶೆಟ್ಟಿ ಅವರು ಶರಣ ಸಾಹಿತಿಗಳಾಗಿ ಶರಣ ಸಂಸ್ಕೃತಿಯ ಉಳಿವಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ ಎಂದರು.ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಹುಬ್ಬಳ್ಳಿ ತಾಲೂಕು ಅಧ್ಯಕ್ಷ ಗುರುಸಿದ್ದಪ್ಪ ಎಂ. ಬಡಿಗೇರ ಪ್ರಾಸ್ತಾವಿಸಿದರು. ಪ್ರೊ. ಎಸ್.ವಿ. ಪಟ್ಟಣಶೆಟ್ಟಿ ಅವರಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನಿಂದ ಅಭಿನಂದಿಸಲಾಯಿತು. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ , ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿ ಉಮಾದೇವಿ, ಡಾ ಪೂರ್ಣಿಮಾ ಬಗಲಿ, ಪತ್ರಕರ್ತ ಗಿರೀಶ ಪಟ್ಟಣಶೆಟ್ಟಿ ಪ್ರಭುದೇವರು, ಕೋಶಾಧ್ಯಕ್ಷೆ ಗೀತಾ ಅಂಗಡಿ, ಕಾರ್ಯದರ್ಶಿ ಮಲ್ಲಿಕಾರ್ಜುನ ಕಮ್ಮಾರ , ಶರಣ ಸಾಹಿತ್ಯ ಪರಿಷತ್ತಿನ ಸದಸ್ಯ ವಿಜಯಾ ಗುಡಗೇರಿ, ಪಾರ್ವತಿ ಕಂಬಳಿ, ಶೀತಲ ಚನ್ನಪ್ಪನವರ ಇದ್ದರು.

ಕಿರುಸುದ್ದಿ

ಮೇ 17ಕ್ಕೆ ಗುರುನಮನ

ಗೋಕಾಕ: ಸರ್ಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್ ಎಸ್) ಗೋಕಾಕ ಸನ್ 2002-03ನೇ ಸಾಲಿನ ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ಗುರುಗಳಿಗೆ ಗೌರವ ನಮನ ಹಾಗೂ 23ನೇ ವರ್ಷದ ಸ್ನೇಹಿತರ ಪುನರ್ ಮಿಲನದ ಕಾರ್ಯಕ್ರಮ ಮೇ 17ರಂದು ನಗರದ ಸ್ವೈಸ್ ಗಾರ್ಡನನಲ್ಲಿ ಜರುಗಲಿದೆ. ಬೆಳಿಗ್ಗೆ 7.45ಕ್ಕೆ ಸರ್ಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಶಾಲೆಗೆ ಭೇಟಿ ನೀಡಿ ಮರು ನೆನಪಿನ ತರಗತಿಯಲ್ಲಿ ಪಾಲ್ಗೊಳ್ಳುವುದು. 9.30ಕ್ಕೆ ಉಪಾಹಾರ, ಸಮೂಹ ಭಾವಚಿತ್ರ, ಬೆಳಿಗ್ಗೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮ, ಸರಸ್ವತಿ ಪೂಜೆ, ಗುರು ವಂದನೆ, ಶಿಕ್ಷಕರ ಅನಿಸಿಕೆ ಕಾರ್ಯಕ್ರಮ ಜರುಗಲಿವೆ. ಮಧ್ಯಾಹ್ನ 1.30ಕ್ಕೆ ಭೋಜನ ನಡೆಯಲಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಸರಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಗೋಕಾಕ ಸನ್ 2002-03ನೇ ಸಾಲಿನ ಶಿಕ್ಷಕ ವೃಂದ, ಶಿಕ್ಷಕೇತರ ಸಿಬ್ಬಂಧಿ ಭಾಗವಹಿಸಲಿದ್ದಾರೆ.

ನೆಲಕ್ಕುರುಳಿದ 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು

ಕಾಗವಾಡ: ಪಟ್ಟಣದಲ್ಲಿ ಬುಧವಾರ ಸಂಜೆ ಬೀಸಿದ ಬಿರುಗಾಳಿ ಸಹಿತ ಮಳೆಗೆ ವ್ಯಾಪಕ ಹಾನಿಯಾಗಿದ್ದು, ಪಟ್ಟಣದ ಸುತ್ತಮುತ್ತ ಸುಮಾರು 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ವಿದ್ಯುತ್ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ. ಕಾಗವಾಡ ಪಟ್ಟಣದ ಬಸ್ ನಿಲ್ದಾಣದ ಎದುರಿರುವ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನಾಲ್ಕು ಕೊಠಡಿಗಳ ಮೇಲ್ಛಾವಣಿ ಬಿರುಗಾಳಿಗೆ ಹಾರಿ ಹೋಗಿದೆ. ಅದೃಷ್ಟವಶಾತ್ ಶಾಲೆಗೆ ರಜೆ ಇದ್ದ ಕಾರಣ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ರಭಸವಾಗಿ ಬೀಸಿದ ಗಾಳಿಗೆ ಮರಗಳು ರಸ್ತೆ ಮೇಲೆ ಉರುಳಿ ಕೆಲಕಾಲ ಸಂಚಾರಕ್ಕೆ ಅಡ್ಡಚಣೆ ಉಂಟಾಗಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಸ್ಥಳೀಯ ಅಧಿಕಾರಿಗಳು ಮರಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿದರು.

ಗಾಳಿಗೆ ಹಾರಿದ ಶಾಲಾ ಮೇಲ್ಛಾವಣಿ: ಪರಿಶೀಲನೆ



ಬೆಳಗಾವಿ: ಜಿಲ್ಲೆಯ ಖಾನಾಪುರ ತಾಲೂಕಿನ ಭೂರಣಕಿ ಗ್ರಾಮದಲ್ಲಿ ಸುರಿದ ಭಾರಿ ಮಳೆಗೆ ಶಾಲೆ ಮೇಲ್ಛಾವಣಿ ಸಂಪೂರ್ಣ ಹಾರಿ ಹೋಗಿದೆ. ವಿಷಯ ತಿಳಿಯುತ್ತಿದಂತೆ ಶಾಲೆಗೆ ಭೇಟಿ ನೀಡಿ ಶಾಸಕ ವಿಠ್ಠಲ್ ಹಲಗೇಕರ್ ಶಾಲೆಯ ಪರಿಸ್ಥಿತಿ ಪರಿಶೀಲನೆ ನಡೆಸಿದರು. ಸ್ಥಳದಲ್ಲೆ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಶಾಸಕ ವಿಠ್ಠಲ್ ಹಲಗೇಕರ್ ಅವರು, ನಿನ್ನೆ ಸಂಜೆ ಬುಧವಾರ ಸಂಜೆವೇಳೆ ಸುರಿದ ಗಾಳಿ ಮಳೆಗೆ ಶಾಲೆಯ ಮೇಲ್ಛಾವಣಿ ಹಾರಿ ಹೋಗಿ ಅವಘಡ ಸಂಭವಿಸಿರುವುದರ ಬಗ್ಗೆ ತಿಳಿಸಿದರು. ಶಾಸಕರ ಮನವಿಗೆ ಸ್ಪಂಧಿಸಿರುವ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಶಾಲಾ ದುರಸ್ಥಿಯನ್ನು ಶೀಘ್ರವಾಗಿ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ.

ನೋಂದಣಿ ಪ್ರಕ್ರಿಯೆ ಆರಂಭ

ಬೆಳಗಾವಿ: ಭಾರತ ಸರ್ಕಾರದ ಭಾರತ ಪಶುಧನ ಆ್ಯಪ್ ಮೂಲಕ ರೈತರು ತಮ್ಮ ಹಾಗೂ ತಮ್ಮ ಜಾನುವಾರುಗಳ ಮಾಹಿತಿಯನ್ನು ನೋಂದಾಯಿಸುವುದು ಅತ್ಯಂತ ಮಹತ್ವವಾಗಿದ್ದು, ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ನೋಂದಣಿ ಮಾಡಿಕೊಳ್ಳುವುದರಿಂದ ಜಾನುವಾರುಗಳ ಡಿಜಿಟಲ್ ಆರೋಗ್ಯ ದಾಖಲೆ, ಲಸಿಕಾ ಮಾಹಿತಿ ಮತ್ತು ಜ್ಞಾಪನೆ, ಕೃತಕ ಗರ್ಭಧಾರಣೆ ಮತ್ತು ಚಿಕಿತ್ಸೆ ದಾಖಲೆ, ಸರ್ಕಾರಿ ಯೋಜನೆಗಳ ಸೌಲಭ್ಯ ಪಡೆಯಲು ರೈತರಿಗೆ ಉಪಯೋಗವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕು ಮಟ್ಟದ ಮುಖ್ಯ ಪಶು ಆಸ್ಪತ್ರೆ (ಆಡಳಿತ) ಪಶು ಆಸ್ಪತ್ರೆಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ. ರವಿ ಸಾಲಿಗೌಡರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಕರ್ತ ಮುಲ್ಲಾ ನಿಧನ



ಬೆಳಗಾವಿ: ಬೆಳಗಾವಿಯ ಹಿರಿಯ ಪತ್ರಕರ್ತ ಎಂ.ಡಿ.ಮುಲ್ಲಾ ಖಾಸಗಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಮರಾಠಿಯ ಪುಢಾರಿ ಹಾಗೂ ಸಕಾಳ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದ್ದ ಅವರು ಪತ್ರಕರ್ತ ಸ್ನೇಹಿತರ ಬಳಗದಲ್ಲಿ 'ಪುಢಾರಿ ಮುಲ್ಲಾ' ಎಂದೇ ಪರಿಚಿತರಾಗಿದ್ದರು. ಕಳೆದ ಎರಡು - ಮೂರು ವರ್ಷಗಳ ಹಿಂದೆ ಅಷ್ಟೇ ತಮ್ಮ ವೈದ್ಯ ಮಗನನ್ನು ಕಳೆದುಕೊಂಡು ಆಘಾತಕ್ಕೊಳಗಾಗಿದ್ದರು. ಹಿರಿಯ ಪತ್ರಕರ್ತ ಎಂ.ಡಿ.ಮುಲ್ಲಾ ನಿಧನಕ್ಕೆ ಬೆಳಗಾವಿ ಪತ್ರಕರ್ತರು ಸಂತಾಪ ವ್ಯಕ್ತ ಪಡಿಸಿದ್ದಾರೆ.



ಯರಗಟ್ಟಿ: ಸಮೀಪದ ಮಬನೂರ ಗ್ರಾಮದಲ್ಲಿ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ಪ್ರತಿಭಾವಂತರಿಗೆ ಸನ್ಮಾನ ನಮ್ಮೆಲ್ಲರ ಕರ್ತವ್ಯ

ಯರಗಟ್ಟಿ: ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ. ಇಂತಹ ಪ್ರತಿಭಾವಂತರಿಗೆ ಗೌರವ ನೀಡಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ತಾಲೂಕು ಕಾಂಗ್ರೆಸ್ ಮುಖಂಡ ಆರ್.ಕೆ. ಪಟಾತ ಹೇಳಿದರು.

ಸಮೀಪದ ಮಬನೂರ ಗ್ರಾಮದಲ್ಲಿ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಈಚಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಇಟ್ಟು ಅಧ್ಯಯನ ಮಾಡಿದರೆ ಗುರಿ ತಲುಪಲು ಸಾಧ್ಯ ಎಂದರು.

ಗ್ರಾಪಂ ಮಾಜಿ ಸದಸ್ಯ ಪಡೆಪ್ಪ ನರಿ ಮಾತನಾಡಿ, ನಿರಂತರ ಪ್ರಯತ್ನದಿಂದ ಯಶಸ್ಸು ಸಾಧ್ಯ. ವಿದ್ಯಾರ್ಥಿಗಳು ಸಾಧನೆ ಮಾಡುವ ಮೂಲಕ ಪಾಲಕರ ಹಾಗೂ ಶಾಲೆಯ ಕೀರ್ತಿ ಹೆಚ್ಚಿಸಬೇಕು ಎಂದು ಹೇಳಿದರು.

ಮುಖಂಡ ಯಲ್ಲಪ್ಪ ನರಿ, ಉದಯ ನರಿ, ಸನ್ನಿಂಗಪ್ಪ ಮೇಟಿ, ಎಫ್.ಬಿ.ಹಟ್ಟಿ, ಪುಂಡಲೀಕ ಮಳಗಲಿ, ಸಿದ್ದಪ್ಪ ಮೇಟಿ, ಕರೆಪ್ಪ ಪಟಾತ, ಪಾಂಡು ಕಾರಿ, ವಿಠ್ಠಲ ಪಟಾತ, ಗೋಪಾಲ ಮೇಟಿ, ಮಲ್ಲಿಕಾರ್ಜುನ ನರಿ, ಮಹಾಂತೇಶ ಖಿಲಾರಿ, ಪಾಂಡು ಪಟಾತ, ಪಿ.ಎಂ.ಪಟಾತ, ವಾಯ್.ಕೆ.ನರಿ, ರವಿ ಪೂಜೆರ್, ದಾನು ಗದಿಗಿನ ಇತರರಿದ್ದರು. ಕರೆಪ್ಪ ಪಟಾತ ನಿರೂಪಿಸಿ, ಸಂಜು ಪಟಾತ ಸ್ವಾಗತಿಸಿ ವಂದಿಸಿದರು.



ಕಕಮರಿ: ಗ್ರಾಮದೇವತೆ ಶ್ರೀ ಅಮ್ಮಾಜೀಶ್ವರಿ ದೇವಸ್ಥಾನ ಕಟ್ಟಡ ನಿರ್ಮಾಣಕ್ಕಾಗಿ 25,001ರೂಗಳನ್ನು ತನ್ನ ಮೊದಲನೇಯ ತಿಂಗಳ ವೇತನವನ್ನು ದೇಣಿಗೆ ನೀಡಿದ ಗ್ರಾಮದ ಸಾಗರ ಕಲ್ಲಪ್ಪ ಸವದತ್ತಿ ಅವರ ಪಾಲಕರನ್ನು ಶ್ರೀ ಅಮ್ಮಾಜೀಶ್ವರಿ ದೇವಸ್ಥಾನ ಸೇವಾ ಕಮೀಟಿ ವತಿಯಿಂದ ಸತ್ಕರಿಸಲಾಯಿತು. ಮಲ್ಲಪ್ಪ ಪೂಜಾರಿ, ಗುರಪ್ಪ ದಾಶ್ಯಾಳ, ಚಂದು ದುಂಡಿ, ಬುಜಪ್ಪ ಸವದತ್ತಿ, ಸುಭಾಷ ತಂಗಡಿ, ಕಲ್ಲಪ್ಪ ಸವದತ್ತಿ, ಉಮೇಶ ತಂಗಡಿ, ಶ್ರೀಶೈಲ ಜನಗೌಡ, ಈರಪ್ಪ ದುಂಡಿ, ದಾನಪ್ಪ ಖೋಜನವಾಡಿ, ಶ್ರೀಶೈಲ ತಂಗಡಿ, ಇತರರಿದ್ದರು.

ಕೃಷಿಯಲ್ಲಿ ವಿನೂತನ ಪ್ರಯೋಗ ಅವಶ್ಯ: ಸವದಿ

ಅಥಣಿ: ಭಾರತವು ಕೃಷಿ ಪ್ರಧಾನ ದೇಶ. ಶೇ 68 ಭಾಗ ಕೃಷಿ ವ್ಯವಸ್ಥೆ ಹೊಂದಿದ್ದೇವೆ. ಕೃಷಿಯಲ್ಲಿ ವಿನೂತನ ಪ್ರಯೋಗ ಮಾಡುವುದು ಅವಶ್ಯಕತೆ ಇದೆ. ಮಂಜುನಾಥ ಹುಲಸದಾರ ಇಂತಹ ಉತ್ತಮ ವಿನೂತನ ಪ್ರಯೋಗ ಮಾಡಿದ್ದಾರೆ. ರೈತರು ಆಧುನಿಕ ಕೃಷಿಯತ್ತ ಮುಖಮಾಡಿ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ತಾಲೂಕಿನ ರಡ್ಡೆರಹಟ್ಟಿ ಗ್ರಾಮದಲ್ಲಿ ಮಂಜುನಾಥ ಹುಲಸದಾರ ಅವರ ತೋಟದಲ್ಲಿ ಸ್ವಯಂ ಚಾಲಿತ ರೇಷ್ಮೆ ನೂಲು ತೆಗೆಯುವ ಘಟಕಕ್ಕೆ ಶಂಕುಸ್ಥಾಪನೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಮಾನವನಿಗೆ ಅನ್ನ, ಬಟ್ಟೆ ಅವಶ್ಯಕತೆ ಇರುವ ಅಂಶಗಳಾಗಿವೆ. ಇತ್ತೀಚಿಗೆ ರೇಷ್ಮೆ ಬೇಡಿಕೆ ಕಡಿಮೆ ಆಗುತ್ತಿದೆ. ಆದರೆ, ಭಾರತದ ರೇಷ್ಮೆಗೆ ಬಹು ಬೇಡಿಕೆ, ಮೌಲ್ಯ ಹೊಂದಿದೆ. ಅಥಣಿಯ ಅನೇಕ ರೇಷ್ಮೆ ಬೆಳೆಯುವ ರೈತರು ಗೂಡು ಬಿಡಿಸಲು ರಾಮನಗರಕ್ಕೆ ಹೋಗಬೇಕಾಗಿತ್ತು. ಆದರೆ, ಮಂಜುನಾಥ ತುಂಬಾ ಮುತುವರ್ಜಿ ವಹಿಸಿ ರೈತರ ಸಂಕಷ್ಟ ಪರಿಹರಿಸಲು ಉತ್ತಮ ಪ್ರಯತ್ನ ಮಾಡಿದ್ದಾರೆ. ಇದರಿಂದ ರೈತರಿಗೆ ಮಧ್ಯವರ್ತಿಗಳ ಹಾವಳಿ, ದಲ್ಲಾಳಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ದೊರಕಿಸಿದ್ದಾರೆ. ಇಂದು ಎಐ ಬಂದಿರುವ ಹಿನ್ನೆಲೆಯಲ್ಲಿ ವೈದ್ಯರು, ಇಂಜಿನಿಯರ್ ಅಷ್ಟೇ ಅಲ್ಲದೇ ಎಲ್ಲ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗ ಕಳೆದುಕೊಳ್ಳುವ ಭೀತಿ ಎದುರಾಗಿದೆ.



ಇಂದು ಸರ್ಕಾರಿ ನೌಕರಿ ಅವಲಂಬಿಸಿ ಬದುಕಲು ಸಾಧ್ಯವಿಲ್ಲ.ಯುವಕರು ಸಾಕಷ್ಟು ಪ್ರಯತ್ನಿಸಿ ರೇಷ್ಮೆ ಬೆಳೆದು ಸ್ವ ಉದ್ಯೋಗ ಮಾಡಬೇಕು ಎಂದರು.

ಬೆಳಗಾವಿ ವಿಭಾಗದ ಇಲಾಖೆ ಜಂಟಿ ನಿರ್ದೇಶಕ ಪಿ.ಎಲ್. ಚಂದ್ರಪ್ಪ ಮಾತನಾಡಿ, ಇದು ಒಂದು ರೈತರಿಗೆ ಗುಡಿ ಕೈಗಾರಿಕೆ ಸ್ವಯಂ ಉದ್ಯೋಗ ಚಟುವಟಿಕೆಗೆ ಅವಕಾಶ ನೀಡುತ್ತದೆ. ಮಹಿಳೆಯರು ಇರುವವರೆಗೆ ರೇಷ್ಮೆಗೆ ಬೇಡಿಕೆ ಇದೆ. ಚೀನಾ ನಂತರ ಭಾರತ ರೇಷ್ಮೆ ಉತ್ಪಾದನೆಯಲ್ಲಿ ಮುಂದಿದೆ, ತುಂಬಾ ದುಬಾರಿ ಆಗಿರುವ ರೇಷ್ಮೆ ರೈತರಿಗೆ ಲಾಭದಾಯಕವಾಗಿದೆ ಎಂದರು. ಬೆಳಗಾವಿ ಜಿಲ್ಲೆಯಲ್ಲಿ 10750 ಜನ ರೇಷ್ಮೆ ಬೆಳೆಯುತ್ತಿದ್ದಾರೆ.ಪ್ರತಿ ಎರಡುವರೇ ತಿಂಗಳಲ್ಲಿ 270 ಕೆ ಜಿ ಬೆಳೆ ಬೆಳೆಯಬಹುದು. ಕರ್ನಾಟಕದಲ್ಲಿನ ರೈತರು ನೌಕರಿಗೆ ಕಟ್ಟು ಬೀಳದೆ ಸಾಕಷ್ಟು ಲಾಭದಾಯಕ ಬೆಳೆ ಬೆಳೆಯಬಹುದು. ಎಕರೆಗೆ 45 ಸಾವಿರ ರೂ ಸಹಾಯಧನ ದೊರೆಯುತ್ತದೆ. ಜೊತೆಗೆ ನರೇಗಾ ದಲ್ಲಿ ಕೂಡಾ ಸಹಾಯ ಧನ ಸಿಗುತ್ತದೆ. ಹುಳು ಸಾಕಾಣಿಕೆ ಶೆಡ್‌ಗೆ ಸಹಾಯ ಧನ ಸಿಗುತ್ತದೆ ಎಂದರು.

ತಾಲೂಕು ರೇಷ್ಮೆ ಇಲಾಖೆಯಿಂದ ರೈತರಿಗೆ ಸ್ವಚ್ಛತೆಗೆ ಪೂರಕವಾಗಿ ಔಷಧಿ ಮ್ಯಾಟ್ ಸೇರಿ ಹಲವು ಪರಿಕರ ವಿತರಿಸಲಾಯಿತು.

ಸಾನ್ನಿಧ್ಯವನ್ನು ಶಿವಮೊಗ್ಗದ ಪರಮ ಪೂಜ್ಯ ಕೊಡಲಿ ಅರುಣಾಚಲ ಅಯ್ಯರ ವಹಿಸಿ ಆಶೀರ್ವಚನ ನೀಡಿದರು. ಕೃಷ್ಣಾ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಪರಪ್ಪ ಸವದಿ, ಬೆಳಗಾವಿ ವಿಭಾಗದ ಇಲಾಖೆ ಜಂಟಿ ನಿರ್ದೇಶಕರು ಪಿ ಎಲ್ ಚಂದ್ರಪ್ಪ, ಬೆಳಗಾವಿ ರೇಷ್ಮೆ ಇಲಾಖೆ ಉಪನಿರ್ದೇಶಕರು ಮಹೇಶಕುಮಾರ ಬಾಗಿ,ಮುರಗೆಪ್ಪ ಹುಳಸದಾರ, ಭೀಮಪ್ಪ ಹುಲಸದಾರ, ಬಸಲಿಂಗಯ್ಯ ಹಿರೇಮಠ, ಹಣಮಂತ ರಾ, ಬಿರಾದಾರ, ಡಾ. ಎಂ.ಎ. ಚನ್ನಾಪುರ , ಕಲ್ಲೇಶ ಮಡ್ಡಿ ಸೇರಿದಂತೆ ಹಲವಾರು ಗ್ರಾಮಗಳ ರೈತ ಬಂಧುಗಳು ಉಪಸ್ಥಿತರಿದ್ದರು.

ರಾಷ್ಟ್ರೀಯ ಹ್ಯಾಕಥಾನ್ ಪ್ರೋಗ್ರಾಂ ಸ್ಪರ್ಧೆಯಲ್ಲಿ ಸಾಧನೆ

ಕುಡಚಿ: ಧಾರವಾಡದ ಎಸ್ಡಿಎಂ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜನಲ್ಲಿ ಏಪ್ರಿಲ್ 28 ರಿಂದ ಏಪ್ರಿಲ್ 30ರ ವರೆಗೆ ಜರುಗಿದ ಸೃಷ್ಟಿ ಇನ್ನೋವೇಶನ್ ಎಕ್ಸ್ಚೇಂಜ್ ಆಯೋಜಿಸಿದ್ದ ಪ್ರತಿಷ್ಠಿತ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್ ಪ್ರೋಗ್ರಾಮನಲ್ಲಿ ಪಟ್ಟಣದ ಮಾಸ್ಟರ್ ಕಂಪ್ಯೂಟರ್ ಅಕಾಡೆಮಿ ಮತ್ತು ವೆಬ್ಪಿನ್ ಸಾಫ್ಟ್‌ವೇರ್ಸ್ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

36 ಗಂಟೆಗಳ ತೀವ್ರವಾದ ನಿರಂತರ ನಾವೀನ್ಯತೆ ಸವಾಲಿನಲ್ಲಿ ದೇಶಾದ್ಯಂತದ 200ಕ್ಕಿಂತಲು ಹೆಚ್ಚು ತಂಡಗಳೊಂದಿಗೆ ಸ್ಪರ್ಧಿಸಿ, ಕುಡಚಿ ತಂಡವು ರಾಷ್ಟ್ರೀಯ ಮಟ್ಟದಲ್ಲಿ 2 ನೇ ಸ್ಥಾನ ಪಡೆದುಕೊಂಡು ನಾವೀನ್ಯತೆ ಮತ್ತು ಸಮಸ್ಯೆ ಪರಿಹಾರದಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ದ್ವಿತೀಯ ಸ್ಥಾನ ಪಡೆಯಿತು.

ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕುಡಚಿ ಪಟ್ಟಣದ ಅಮೀನಾ ಪ್ಯಾಲೇಸ್ ನಲ್ಲಿ ಹಮ್ಮಿಕೊಂಡಿದ್ದ ಸತ್ಕಾರ ಸಮಾರಂಭದಲ್ಲಿ ಪ್ರಮಾಣ ಪತ್ರ ನೀಡಿ ಸತ್ಕರಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಹ್ಯಾಕಥಾನ್ ಸಾಮಾಜಿಕ ಪ್ರಭಾವಕ್ಕಾಗಿ ತಂತ್ರಜ್ಞಾನದ ಮೇಲೆ ಕೇಂದ್ರೀಕರಿಸಿ ಈ ತಂಡವು ಜನವಾಜ್ ಎಂಬ ನವೀನ ಪರಿಹಾರವನ್ನು ಅಭಿವೃದ್ಧಿಪಡಿಸಿದ ಉತ್ತಮ ಸಂವಹನ, ಜಾಗೃತಿ ಮತ್ತು ಸಮುದಾಯ ಬೆಂಬಲ ವ್ಯವಸ್ಥೆಗಳನ್ನು ಸಕ್ರಿಯಗೊಳಿಸುವ ಮೂಲಕ ನೈಜ-ಪ್ರಪಂಚದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ವಿನ್ಯಾಸಗೊಳಿಸಲಾದ ಸ್ಮಾರ್ಟ್ ಅಪ್ಲಿಕೇಶನ್ ಕುರಿತು ಪರದೆ ಮೂಲಕ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜುನ್ನೇದಿಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಇಕ್ಬಾಲ್ ಸುತ್ತಾರ, ಹಾರೂಗೇರಿ ಎಸ್‌ವಿಇಎಸ್ ಸಂಸ್ಥೆ ಅಧ್ಯಕ್ಷ ಗಿರೀಶ ದರೂರ, ಪುರಸಭೆ ಮಾಜಿ ಅಧ್ಯಕ್ಷರಾದ ಹಮಿದೋದಿನ ರೋಹಿಲೆ, ದತ್ತಾ ಸಣ್ಣಕ್ಕಿ ಹಿರಿಯರಾದ ಸಾದಿಕ ಸಜ್ಜನ, ಅಲ್ಲಾವುದ್ದೀನ್ ರೋಹಿಲೆ, ಸಯ್ಯದ್ ಖಾಜಿ, ಮುಸ್ತಾಕ್ ಬಾಗಶಿರಾಜ, ಮಾಮುದೀನ ವಾಟೆ, ಸಂಸ್ಥೆಯ ಮುಖ್ಯಸ್ಥರಾದ ಸಯ್ಯದಕೈಫ್ ಖಾಜಿ, ಫೈಜಾನ ಪಿನಿತೋಡ, ವಿದ್ಯಾರ್ಥಿಗಳು ನೂರಾರು ಜನ ಸಾರ್ವಜನಿಕರು ಭಾಗಿಯಾಗಿದ್ದರು.



ಸ್ವಾವಲಂಬನೆ ಕೃಷಿಗೆ ಆದ್ಯತೆ ನೀಡಿ

ಚನ್ನಮ್ಮನ ಕಿತ್ತೂರು: ರೈತರು ಸ್ವಾವಲಂಬನೆ ಕೃಷಿಗೆ ಆದ್ಯತೆ ನೀಡುವ ಮೂಲಕ ಆರ್ಥಿಕವಾಗಿ ಸಬಲರಾಗಿ ಎಂದು ಬೆಳಗಾವಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಹೆಚ್.ಡಿ ಕೋಳೇಕರ ಹೇಳಿದರು.

ಸಮೀಪದ ಗುಂಡೇನಟ್ಟಿ ಗ್ರಾಮದ ಪ್ರಗತಿ ಪರ ರೈತ ಡಾ.ಶಂಕರ ಲಂಗಟಿ ಅವರ ತೋಟದಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ, ಕೃಷಿ ಇಲಾಖೆ ಬೆಳಗಾವಿ, ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ ಮತ್ತಿಕೊಪ್ಪ ಹಾಗೂ ಗ್ರಾಮ ಕೃಷಿ ವಿಧ್ಯಾ ಅಭಿವೃದ್ಧಿ ಸಂಘ ಗುಂಡೇನಟ್ಟಿ ಸಹಯೋಗದಲ್ಲಿ ನಡೆದ ಸೆಣಬು ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ರೈತರು ಸಾವಯವ ಕೃಷಿ ರೂಡಿಸಿಕೊಳ್ಳುವ ಮೂಲಕ ಮಣ್ಣಿನ ಆರೋಗ್ಯ ಕಾಪಾಡಿ ಹೆಚ್ಚು ಉತ್ಪಾದನೆಯ ಮೂಲಕ ಆರ್ಥಿಕ ಸಬಲಿಕರಣ ಸಾಧಿಸಿ ಎಂದರು.

ಸಹಾಯಕ ಕೃಷಿ ನಿರ್ದೇಶಕ ಸಿ.ಐ. ಹುಗಾರ ಮಾತನಾಡಿ, ಪೋಷಕಾಂಶ ಹೊಂದಿದ ಗೊಬ್ಬರವನ್ನು ಬಳಸಲು ಮಣ್ಣು ಪರೀಕ್ಷೆ ಅವಶ್ಯವಾಗಿದ್ದು, ವೈವಿಧ್ಯಮಯ ಬೆಳೆಗಳನ್ನು ಕೃಷಿಯಲ್ಲಿರೂಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಂಕರ ಲಂಗಟಿಯವರ ಸಾಧನೆ ಈ ಭಗದ ರೈತರಿಗೆ ಮಾದರಿಯಾಗಿದೆ ಎಂದರು.

ಪ್ರಗತಿ ಪರ ರೈತ ಡಾ.ಶಂಕರ ಲಂಗಟಿ ಸೆಣಬು ಬೆಳೆಯ ಕುರಿತು ರೈತರೊಂದಿಗೆ ಮಾಹಿತಿ ಹಂಚಿಕೊಂಡರು ಕೆ.ಎಲ್.ಇ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಜಿ.ಬಿ ವಿಶ್ವನಾಥ ಮಾತನಾಡಿದರು ಕಾರ್ಯಕ್ರಮದಲ್ಲಿ ಮಂಜುನಾಥ ಕಳಸನ್ನವರ, ಶಂಕರ ತೇಗುರ, ಚನ್ನಬಸು ಕಿಲಾರಿ, ಗುರುಸಿದ್ದ ಭರಮನ್ನವರ, ಶಶಿಧರ ಕುರಗುಂದ, ಶಿವಾನಂದ ಲಂಗಟಿ, ವಿಠ್ಠಲ ಹಿಂಡಲ್ಕರ, ಮಲ್ಲಪ್ಪ ತೇಗುರ, ಸುರೇಶ ಕಿತ್ತೂರ, ಆನಂದ ತೇಗುರ ಹಾಗೂ ಇತರರು ಇದ್ದರು.



ಶಿಕ್ಷಣವು ಜ್ಞಾನ, ನಾಯಕತ್ವದ ಭೂಮಿಕೆ: ಉಮಾಶ್ರೀ

ಬೆಳಗಾವಿ: ಸ್ವಾತಂತ್ರ್ಯ ಪೂರ್ವದಲ್ಲಿ ಅಕ್ಷರ ಜ್ಞಾನ ಕೇವಲ ಉಳ್ಳವರಿಗೆ ಮಾತ್ರ ಇತ್ತು. ಮಹಾತ್ಮ ಜ್ಯೋತಿಬಾ ಫುಲೆ ಅವರಿಂದ ಸಮಾಜದಲ್ಲಿ ಅಕ್ಷರ ಕ್ರಾಂತಿ ನಡೆಯಿತು. ಈಗ ಸರ್ವರಿಗೂ ಅಕ್ಷರ ಕಲಿಯುವ ಅವಕಾಶ ಸರ್ಕಾರ ಒದಗಿಸಿದೆ ಎಂದು ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಹೇಳಿದರು.

ನಗರದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯವು ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 2025-26ನೇ ಸಾಲಿನ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಸಾಂಸ್ಕೃತಿಕ , ಎನ್‌ಎಸ್‌ಎಸ್, ಎನ್ ಸಿಸಿ, ರೆಡ್ ಕ್ರಾಸ್ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ



ಅವರು, ನಮ್ಮ ಪೂರ್ವಜರು ತಮಗೆ ಶಿಕ್ಷಣ ಸಿಗಲಿಲ್ಲವಾದರೂ ನಮಗೆಲ್ಲರಿಗೂ ಶಿಕ್ಷಣ ಕೊಡಲು ಶ್ರಮಿಸಿದರು, ಪಣತೊಟ್ಟರು. ನನಗೆ ವಿದ್ಯೆಯ ಬೆಲೆ ಏನು ಎಂಬುದು ಆಗ ತಿಳಿದಿರಲಿಲ್ಲ, ನೀವು ಪಡೆದ ಶಿಕ್ಷಣವು ಸಮಾಜದ ಒಳಿತಿಗಾಗಿ, ಉನ್ನತಿಗಾಗಿರಲಿ ಎಂದರು.

ಉತ್ತಮ ವ್ಯಕ್ತಿತ್ವಕ್ಕೆ ಸಂಸ್ಕೃತಿ, ಸಂಸ್ಕಾರ, ಹಾಗೂ ಉತ್ತಮರ ಸಂಘವು ಮುಖ್ಯ. ಮೊಬೈಲ್ ಗೀಳಿಗೆ ಬಲಿಯಾಗಬೇಡಿ. ಬದುಕಿ ಬಾಳಬೇಕಾದ ಅದೆಷ್ಟೋ ಜೀವಗಳು ಸಾವಿನೊಂದಿಗೆ ಅಂತ್ಯವಾಗುತ್ತಿದೆ ಎಂದು ವಿಷಾದಿಸಿದರು.

ರಾಚವಿ ಕುಲಸಚಿವರಾದ ಸಂತೋಷ ಕಾಮಗೌಡ ,ಡಾ. ಮೈಜುದ್ದಿನ್ ಮುತುವಲಿ, ಮಹಾವಿದ್ಯಾಲಯ ವಿದ್ಯಾರ್ಥಿಗಳ ಒಕ್ಕೂಟದ ಪ್ರತಿನಿಧಿಗಳಾದ ನಾಗಲಿಂಗ ಕಂಬಾರ, ಮೇಘಾ ಪಾಟೀಲ, ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್. ಸಿ. ಪಾಟೀಲ್, ಉಪಪ್ರಾಚಾರ್ಯ ಡಾ. ಅರ್ಜುನ ಜಂಬಗಿ, ಡಾ. ಪ್ರೀತಿ ಪದಪ್ಪಗೋಳ, ಕಾಲೇಜಿನ ಆಡಳಿತ ಮಂಡಳಿ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇ-ಸ್ಪರ್ಧಾ

ನಮ್ಮ ಶಿಕ್ಷಣ ವ್ಯವಸ್ಥೆ ಬದಲಾಗಬೇಕು. ಇಂದು ನಮಗೆ ಪಾಠ ಮಾಡುವ ಶಿಕ್ಷಕರಿಗಿಂತ, ವಿದ್ಯಾರ್ಥಿಗಳಿಗೆ ಶಕ್ತಿ ತುಂಬುವ ಶಿಕ್ಷಕರು ಬೇಕು. ವಿದ್ಯಾರ್ಥಿಗಳು ಪದವಿ ಮುಗಿಯುತ್ತಿದ್ದಂತೆ ಕೋಚಿಂಗ್ ಇನ್ನಿತರ ತರಬೇತಿ ನೀಡುವ ಸಂಸ್ಥೆಗಳಿಗೆ ದುಬಾರಿ ಶುಲ್ಕ ನೀಡಿ ಹೋಗುತ್ತಿದ್ದಾರೆ. ಅದನ್ನು ತಪ್ಪಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಈ ವರ್ಷ ಇ - ಸ್ಪರ್ಧಾ ಆಯೋಜಿಸಿದೆ ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ ಸಿ. ಎಂ. ತ್ಯಾಗರಾಜ ಹೇಳಿದರು.

ಚಿಕ್ಕೋಡಿಯಲ್ಲಿ ಶೀಘ್ರದಲ್ಲೇ ಸಿಎಸ್‌ಡಿ ಕ್ಯಾಂಟೀನ್ ಆರಂಭ

ಬೆಳಗಾವಿ: ದೇಶ ಸೇವೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ನಮ್ಮ ಮಾಜಿ ಸೈನಿಕರ ಕುಟುಂಬಗಳಿಗೆ ಅಗತ್ಯ ಸೌಲಭ್ಯಗಳು ತಲುಪಬೇಕು ಎಂಬ ಉದ್ದೇಶದಿಂದ ಚಿಕ್ಕೋಡಿಯಲ್ಲಿ ಸಿಎಸ್‌ಡಿ ಕ್ಯಾಂಟೀನ್ ಆರಂಭಿಸುವ ಕುರಿತು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆಯುವ ಮೂಲಕ ಮನವಿ ಮಾಡಿದ್ದರು.ಈ ಮನವಿಗೆ ಸಕಾರಾತ್ಮಕ ಸ್ಪಂದನೆ ದೊರೆತಿದ್ದು, ಚಿಕ್ಕೋಡಿಯಲ್ಲಿ ಮಾಜಿ ಸೈನಿಕರಿಗಾಗಿ ಸಿಎಸ್‌ಡಿ ಕ್ಯಾಂಟೀನ್ ಆರಂಭಿಸಲು ಅಗತ್ಯ ಮಾನದಂಡಗಳು ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದೆ. ಜೊತೆಗೆ, ಕ್ಯಾಂಟೀನ್ ಆರಂಭ ಪ್ರಕ್ರಿಯೆಯನ್ನು ಶೀಘ್ರಗೊಳಿಸಲು ಸ್ಥಳೀಯ ಘಟಕಕ್ಕೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ.ಚಿಕ್ಕೋಡಿ ಹಾಗೂ ಸುತ್ತಮುತ್ತಲಿನ ಭಾಗಗಳ ಸಾವಿರಾರು ಮಾಜಿ ಸೈನಿಕರು ಮತ್ತು ಅವರ ಕುಟುಂಬಗಳಿಗೆ ಇದರಿಂದ ಬಹಳ ಅನುಕೂಲವಾಗಲಿದೆ. ದೂರದ ಪ್ರದೇಶಗಳಿಗೆ ತೆರಳಿ ಸೌಲಭ್ಯ ಪಡೆಯಬೇಕಾದ ಅನಿವಾರ್ಯತೆ ಕಡಿಮೆಯಾಗಲಿದ್ದು, ಅಗತ್ಯ ವಸ್ತುಗಳು ಮತ್ತು ಸೇವೆಗಳು ಸ್ಥಳೀಯ ಮಟ್ಟದಲ್ಲೇ ದೊರೆಯಲಿವೆ. ಈ ಮಹತ್ವದ ಬೇಡಿಕೆಗೆ ಸ್ಪಂದಿಸಿ ಕ್ರಮ ಕೈಗೊಂಡ ಕೇಂದ್ರ ಸರ್ಕಾರ ಹಾಗೂ ರಕ್ಷಣಾ ಸಚಿವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಎಂದು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ತಿಳಿಸಿದ್ದಾರೆ.

ಕೌಜಲಗಿ ಆಸ್ಪತ್ರೆ, ಬಿಎಲ್‌ಜಿ ಟ್ರಸ್ಟ್ ಮೂಲಕ ನಿರ್ವಹಣೆಗೆ ಚಿಂತನೆ

ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಕ್ರಮ

ಮೂಡಲಗಿ: ಕೌಜಲಗಿಯಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣವಾಗಿದ್ದರೂ ಸಿಬ್ಬಂದಿ ಕೊರತೆ ಎದುರಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕೌಜಲಗಿ ಸಮುದಾಯ ಆರೋಗ್ಯ ಕೇಂದ್ರವನ್ನು ನಮ್ಮ ಬಿಎಲ್‌ಜಿ ಟ್ರಸ್ಟಿನ ಮೂಲಕ ನಿರ್ವಹಿಸಲು ಚಿಂತನೆ ನಡೆಸುತ್ತಿರುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಆಶಯ ವ್ಯಕ್ತಪಡಿಸಿದರು.

ಗುರುವಾರ ತಾಲೂಕಿನ ಕಮಲದಿನ್ನಿ ಗ್ರಾಮದ ಮಹಾತ್ಮಾ ಗಾಂಧಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾಗಿ ಅವರು ಹೇಳಿದರು.

ಶಿಕ್ಷಕರ ಕೊರತೆಯೂ ಸಹ ಕಂಡು ಬಂದಿದ್ದು, ಅಲ್ಲಿಯೂ ಸಹ ನಮ್ಮ ಟ್ರಸ್ಟ್ ಮೂಲಕ ಅಗತ್ಯವಿರುವ ಕಡೆಗಳಲ್ಲಿ ಅತಿಥಿ ಶಿಕ್ಷಕರನ್ನು ನಿಯುಕ್ತಿ ಮಾಡಲಾಗುವುದು ಎಂದರು.

ಹಿಡಕಲ್ ಜಲಾಶಯದಿಂದ ಘಟಪ್ರಭಾ



ಬಲದಂಡೆ, ಎಡದಂಡೆ ಮತ್ತು ಸಿಬಿಸಿ ಕಾಲುವೆಗಳಿಗೆ ನೀರು ಹರಿಸಲು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆಮನವಿ ಮಾಡಿಕೊಂಡಿದ್ದು, ನಾಲ್ಕೈದು ದಿನಗಳಲ್ಲಿ ಮೂರು ಕಾಲುವೆಗಳಿಗೆ ನೀರನ್ನು ಬಿಡುಗಡೆ ಮಾಡುವ ಆಶ್ವಾಸನೆಯನ್ನು ಸಚಿವರು ನೀಡಿದ್ದಾರೆ. ಇದರಿಂದ ರೈತರಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಜೆಜೆಎಂ ಕಾಮಗಾರಿಯು ಜನರಿಗೆಮತ್ತಷ್ಟು ಹತ್ತಿರವಾಗಬೇಕು. ಈ ದಿಸೆಯಲ್ಲಿ ಅಧಿಕಾರಿಗಳು ಪ್ರತಿ ಗ್ರಾಮದ ಮನೆ,ಮನೆಗೆ ತೆರಳಿ ನಲ್ಲಿ ನೀರಿನ ಸಂಪರ್ಕದ ಕುರಿತು ಮಾಹಿತಿಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಪಂಚಾಯತಿಗೆ ಆಡಳಿತಾಧಿಕಾರಿ ನೇಮಕಗೊಂಡಿದ್ದು, ಸ್ಥಳೀಯ ಜನರ ಸಮಸ್ಯೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸುವ ಪ್ರಯತ್ನ ಮಾಡುವದಾಗಬೇಕು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾರಿಗೆ ವ್ಯವಸ್ಥೆ ಯನ್ನು ಸುಗಮಗೊಳಿಸಬೇಕು. ಪ್ರಯಾಣಿಕರ ಬೇಡಿಕೆಗಳಂತೆ ಸಾರಿಗೆಗಳನ್ನು ಓಡಿಸಲು ಅಧಿಕಾರಿ ಗಳು ಕ್ರಮ ಕೈಗೊಳ್ಳಬೇಕು. ಕಲ್ಮಡ್ಡಿ ಮತ್ತು ರಾಮೇಶ್ವರ ಏತ ನೀರಾವರಿ ಭಾಗದ ರೈತರಿಗೆ ಅಗತ್ಯವಿರುವ ಸಂದರ್ಭದಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡಲು ಅಧಿಕಾರಿಗಳಿಗೆ

ಕೌಜಲಗಿ ಸೇರಿದಂತೆ ಕ್ಷೇತ್ರದ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳಿದ್ದರೂ ಜನರಿಗೆ ಅವುಗಳ ಸೌಲಭ್ಯಗಳು ಸಿಗುತ್ತಿಲ್ಲ. ಸಿಬ್ಬಂದಿಗಳ ಕೊರತೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಇಷ್ಟರಲ್ಲೇ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಇವುಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು.

■ ಬಾಲಚಂದ್ರ ಜಾರಕಿಹೊಳಿ, ಶಾಸಕ

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಸೂಚನೆ ನೀಡಿದರು. ಮೂಡಲಗಿ ತಹಶಿಲ್ದಾರ್ ಶ್ರೀಶೈಲ ಗುಡುಮೆ, ಮೂಡಲಗಿ ತಾಪಂ ಇಓ ಪ್ರಶಾಂತ ನೆರಳೇಕರ, ಗೋಕಾಕ ತಾಪಂ ಇಓ ಪರಶುರಾಮ ಗಸ್ತಿ, ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೂಡ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹಿರೇಮಠ, ಜಿ.ಬಿ.ಬಳಗಾರ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕುರುಹಿನಶೆಟ್ಟಿ ಸೊಸೈಟಿಯಲ್ಲಿ ಹಜ್ ಯಾತ್ರಿಗಳಿಗೆ ಸನ್ಮಾನ

ಮೂಡಲಗಿ: ಧರ್ಮ ಪಾಲನೆಯಲ್ಲಿ ಎಲ್ಲರೂ ಸಮಾನರು ಎಂದು ಸಂಘದ ಅಧ್ಯಕ್ಷ ಸುಭಾಸ ಬೆಳಕೂಡ ಹೇಳಿದರು.

ಮಂಗಳವಾರ ಕುರುಹಿನಶೆಟ್ಟಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಪ್ರಧಾನ ಕಚೇರಿಯಲ್ಲಿ ಹಜ್ ಯಾತ್ರೆಗೆ ತೆರಳಲಿರುವ ಯಾತ್ರಿಗಳನ್ನು ಸನ್ಮಾನಿಸಿ ಮಾತನಾಡಿದರು.

ಹಜ್ ಯಾತ್ರಿಗಳಾದ ಅಬ್ದುಲ್ ಅಜೀಜ ಇಮಾಮಹುಸೇನ ಡಾಂಗೆ, ರಜೀಯಾಬಾನು ಅಬ್ದುಲ ಅಜೀಜ ಡಾಂಗೆ, ಅನ್ವರ ಮಹ್ಮದಅಲಿ ನಧಾಪ, ಖುರ್ಷಿದಾ ಅನ್ವರ ನಧಾಪ, ಮಲಿಕ ಇಬ್ರಾಹಿಂಸಾಬ



ಡಾಂಗೆ, ಶಾಹಿದಾಬಾನು ಮಲಿಕ ಡಾಂಗೆ ಈ ಎಲ್ಲಾ ದಂಪತಿಗೆ ಹಜ್ ಯಾತ್ರೆ ಸುಖಕರವಾಗಿರಲೆಂದು ಸತ್ಕರಿಸಿ ಹಾರೈಸಲಾಯಿತು.

ಉಪಾಧ್ಯಕ್ಷ ಇಸ್ಮಾಯಿಲ್ ಕಳ್ಳಿಮನಿ, ನಿರ್ದೇಶಕರಾದ ಬಸಪ್ಪ ಮುಗಳಖೋಡ ಗೊಡಚೆಪ್ಪ ಮುರಗೋಡ, ಬಸವರಾಜ ಬೆಳಕೂಡ, ಲಕ್ಕಪ್ಪ ಲ ಪೂಜೇರಿ ವಿಶಾಲ ಶೀಲವಂತ, ರಾಮಪ್ಪ ಬಳಿಗಾರ, ಮಾಲಾ ಬೆಳಕೂಡ, ರುಕ್ಮವ್ವಾ ಪೂಜೇರಿ,ಉಮಾ ಬೆಳಕೂಡ,ಶಾಂತವ್ವ ಬೋರಗಲ್, ಶ್ಯಾಲನ್ ಕೊಡತೆ ಈ ವೇಳೆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಸರ್ವ ಸಿಬ್ಬಂದಿ ವರ್ಗದವರು ಹಾಜರಿದ್ದರು. ಸಂಘದ ಪ್ರಧಾನ ವ್ಯವಸ್ಥಾಪಕ ರಮೇಶ ವಂಟಗೋಡಿ ಸ್ವಾಗತಿಸಿ ವಂದಿಸಿದರು.

ಅರ್ಜಿ ಆಹ್ವಾನ

ಬೆಳಗಾವಿ: ಕಾಗವಾಡ ತಾಲೂಕು ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ ಅಂಗನವಾಡಿ ಸಹಾಯಕಿಯರ ಹುದ್ದೆಯನ್ನು ಗೌರವಧನದ ಆಧಾರದ ಮೇಲೆ ಗುರುತಿಸಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಿಂದ ಪಡೆದುಕೊಂಡು ಮೇ 14 ರಿಂದ ಜೂನ್ 16ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಾಗವಾಡ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಪರ್ಕಿಸಬಹುದು ಎಂದು ಕಾಗವಾಡ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಭೂಮಿಪೂಜೆ ಇಂದು

ಕೆರೂರ: ಕರ್ನಾಟಕ ಅಲ್ಪಸಂಖ್ಯಾತರ ಇಲಾಖೆ ಹಾಗೂ ನೌಜವಾನ ಶೀರತ್ ಕಮೀಟಿ ಕೆರೂರ ಸಹಯೋಗದಲ್ಲಿ ಪಟ್ಟಣದ ಕಿಲ್ಲಾ ಬಡಾವಣೆಯಲ್ಲಿ ನಿರ್ಮಾಣವಾಗಲಿರುವ ನೂತನವಾಗಿ ನಿರ್ಮಾಣವಾಗಲಿರುವ ಶಾದಿ ಮಹಲ್ ಕಟ್ಟಡದ ಭೂಮಿಪೂಜೆಯನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಮೇ 15ರಂದು ನೆರವೇರಿಸಲಿದ್ದಾರೆ. ಸಮಾಜ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲು ಅಂಜುಮನ್ ಸಂಸ್ಥೆ ಪ್ರಕಟಣೆ ತಿಳಿಸಿದ್ದಾರೆ.

ಬನಶಂಕರಿದೇವಿ ಜನ್ಮದಿನ ಇಂದು

ಕೆರೂರ: ಪಟ್ಟಣದ ಹೊಸಪೇಟೆ ಬಡಾವಣೆಯಲ್ಲಿರುವ ಬನಶಂಕರಿ ದೇವಿ ದೇವಸ್ಥಾನದಲ್ಲಿ ಶುಕ್ರವಾರ ದೇವಿಯ ಜನ್ಮ ದಿನದ ನಿಮಿತ್ತ ವಿಶೇಷ ಪೂಜೆ ಜರುಗಲಿದೆ. ಅಂದು ಬೆಳಗ್ಗೆ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ ಹಾಗೂ ಮಾವಿನ ಹಣ್ಣಿನ ಅಭಿಷೇಕ ನಡೆಯಲಿದೆ. ಮಧ್ಯಾಹ್ನ ದೇವಸ್ಥಾನದಲ್ಲಿ ಭಕ್ತರಿಗೆ ಮಾವಿನ ಹಣ್ಣಿನ ಶಿಕರಿನಿಯ ಪ್ರಸಾದ ವ್ಯವಸ್ಥೆ ಇರಲಿದೆ ಎಂದು ದೇವಾಲಯದ ಸಮಿತಿ ಪ್ರಕಟಣೆ ತಿಳಿಸಿದೆ.

ಹೊಸ ಬಸ್‌ಗಳು ಪ್ರಾರಂಭ

ರಬಕವಿ-ಬನಹಟ್ಟಿ: ಮಹಾಲಿಂಗಪೂರ-ಪಂಢರಪೂರ ಬೆಳಗ್ಗೆ 10:30ಕ್ಕೆ, ಪಂಢರಪೂರ-ಮಹಾಲಿಂಗಪೂರಕ್ಕೆ ಮಧ್ಯಾಹ್ನ 3.30. ಚಿಕ್ಕೋಡಿ-ಪರಳಿ ಬೆಳಿಗ್ಗೆ 10:15, ಪರಳಿ-ಚಿಕ್ಕೋಡಿ ಮಧ್ಯಾಹ್ನ 3:15ಕ್ಕೆ. ತೇರದಾಳ-ಶ್ರವಣಬೆಳಗೋಳ ಮಧ್ಯಾಹ್ನ 2ಕ್ಕೆ, ಶ್ರವಣಬೆಳಗೋಳ- ತೇರದಾಳ ಬೆಳಿಗ್ಗೆ 6:45ಕ್ಕೆ. ಕೊಲ್ಹಾಪೂರ-ಇಂಡಿ ಸಂಜೆ 4:30ಕ್ಕೆ, ಇಂಡಿ ಕೊಲ್ಹಾಪೂರ ಮಧ್ಯಾಹ್ನ 12:15ಕ್ಕೆ ನೂತನ ಬಸ್‌ಗಳ ಸಂಚಾರ ಪ್ರಾರಂಭವಾಗಿವೆ. ಬೆಳಗಿನ ಜಾವ ಗೋಕಾಕ ಹಾಗೂ ಮೀರಜ್‌ಗಳಿಗೆ ತೆರಳಲು ಸೂಕ್ತ ಸಮಯದಲ್ಲಿ ಬಸ್‌ಗಳಿಲ್ಲದೆ ಪ್ರಯಾಣಿಕರು ಪ್ರಯಾಸ ಪಡಬೇಕಾಗಿದೆ. ಪ್ರಮುಖವಾಗಿ ಈಗಾಗಲೇ ಜಮಖಂಡಿಯಿಂದ ಗುಡ್ಡಾಪೂರಕ್ಕೆ ಸಂಚರಿಸುವ ಬಸ್‌ನ್ನು ತೇರದಾಳದವರೆಗೆ ವಿಸ್ತರಣೆಯಾದಲ್ಲಿ ಹೆಚ್ಚಿನ ಅನುಕೂಲವಾಗಲಿದೆ. ರಬಕವಿ-ಬನಹಟ್ಟಿಯಿಂದ ಅಥಣಿಗೆ ಪ್ರಯಾಣ ಬೆಳೆಸಲು ಕುಲಹಳ್ಳಿ ಮಾರ್ಗವಾಗಿ ಬಸ್ ಸಂಚಾರಕ್ಕೆ ಹಲವು ದಿನಗಳ ಬೇಡಿಕೆ ಹಾಗೇ ಉಳಿದಿದೆ. ಕೂಡಲೇ ವ್ಯವಸ್ಥೆ ಕಲ್ಪಿಸಬೇಕೆಂದು ಮುರಳಿಧರ ಕಾಬರಾ, ಚಿದಾನಂದ ಸೊಲ್ಲಾಪೂರ, ಶ್ರೀಶೈಲ ಉಳ್ಳಾಗಡ್ಡಿ, ಮಹಾದೇವ ಧೂಪದಾಳ, ಪ್ರಶಾಂತ ಕೊಳಕಿ ಒತ್ತಾಯಿಸಿದ್ದಾರೆ.

ಮೇ 17ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ

ಬಾದಾಮಿ: ಇಲ್ಲಿನ ಹೇಮ ವೇಮ ಚಾರಿಟೇಬಲ್ ಸಂಸ್ಥೆ(ರಿ) ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ತಾಲೂಕುಮಟ್ಟದ 604ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಮೇ 17ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ಪಟ್ಟಣದ ವಿದ್ಯಾನಗರದ ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಹರಿಹರ ತಾಲೂಕು ಎರೆಹೊಸಳ್ಳಿ ರಡ್ಡಿ ಗುರುಪೀಠದ ವೇಮನಾನಂದ ಮಹಾಸ್ವಾಮಿಗಳು, ಬೈರನಹಟ್ಟಿ ದೊರೆಸ್ವಾಮಿ ಮಠದ ಶಾಂತವೀರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಸಂಸ್ಥೆಯ ಅಧ್ಯಕ್ಷ ಡಿ.ಎಂ.ಪೈಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ರಾಜ್ಯ ಮಾರಾಟ ಮಂಡಳಿಯ ನಿರ್ದೇಶಕ ಎಸ್.ಆರ್.ಮೆಳ್ಳಿ ಭಾಗವಹಿಸುವರು. ಹುಬ್ಬಳ್ಳಿ ವಾಣಿಜ್ಯ ತೆರಿಗೆ ಇಲಾಖೆಯ ವಿಶ್ರಾಂತ ಉಪ ಆಯುಕ್ತ ಜಿ.ಜಿ.ಗೌಡಪ್ಪಗೋಳ ಉಪನ್ಯಾಸಕರಾಗಿ ಆಗಮಿಸುವರು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್ .ಎ.ಭರಮಗೌಡರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೀಳಗಿ: 2026-27ನೇ ಸಾಲಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ಇತರೆ ಜಾತಿಯ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ಪೂರ್ವ ಹಾಗೂ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಸ್ಥಳಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಇಲಾಖೆಯ ವೆಬ್‌ಸೈಟ್ https://swdhmis.karnataka.gov.in ಗೆ ಭೇಟಿ ನೀಡಿ ವಿದ್ಯಾರ್ಥಿಯ ಖಾತೆ ಸೃಜಿಸಿಕೊಂಡು, ನಂತರ ವಿದ್ಯಾರ್ಥಿ ಲಾಗಿನ್‌ನಲ್ಲಿಅರ್ಜಿ ಸಲ್ಲಿಸುವುದು. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ಜೂ.30 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಜುಲೈ 31 ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9480843059 ಹಾಗೂ ದೂರವಾಣಿ ಸಂಖ್ಯೆ: 08425-295023ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ತಾಲೂಕು ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಮಖಂಡಿ: ತಾಲೂಕಿನ ಶೂರ್ಪಾಲಿ ಗ್ರಾಮದ ಪುನರ್ವಸತಿ ಕೇಂದ್ರದದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಚೇರಿಯ ನೂತನ ಕಟ್ಟಡವನ್ನು ಶಾಸಕ ಜಗದೀಶ ಗುಡಗುಂಟಿ ಉದ್ಘಾಟಿಸಿದರು. ಸಂಘದ ನಿರ್ದೇಶಕ ಬಸವರಾಜ ಸಿಂಧೂರ, ಶೂರ್ಪಾಲಿಯ ಪಂಚಯ್ಯಾ ಗುರುಸಾತಯ್ಯ ಹಿರೇಮಠ, ತುಬಚಿಯ ಬಸಯ್ಯಾ ಗುರುಲಿಂಗಯ್ಯಾ ಮಠದ, ಜಂಬಗಿ ಕೆಡಿಯ ಈರಯ್ಯಾ ಪಂಚಯ್ಯಾ ಹಿರೇಮಠ, ಸಾರಂಗ ಮಠದ ಸುನಂದತಾಯಿ ಅಮ್ಮನವರು. ಸಂಸ್ಥೆಯ ಅಧ್ಯಕ್ಷ ರಮೇಶ ಕಣಬೂರ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಸೇರಿದಂತೆ ಇನ್ನಿತರರಿದ್ದರು.

ಮೇ 17ರಂದು ಸ್ನೇಹ ಸಮ್ಮಿಲನ

ಹುನಗುಂದ: ಪಟ್ಟಣದ ವಿಜಯ ಮಹಾಂತೇಶ ಪ್ರೌಢಶಾಲೆ ಹಾಗೂ ವಿ.ಮ ಬಾಲಕಿಯರ ಪ್ರೌಢ ಶಾಲೆಯ 1989-90ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ವತಿಯಿಂದ ಮೇ 17ರಂದು ಕೈವಾರ ಬೆಳಗ್ಗೆ 9 ಗಂಟೆಗೆ ಬಸವ ಮಂಟಪದಲ್ಲಿ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಜರಗಲಿದೆ ಎಂದು ವಿದ್ಯಾರ್ಥಿ ಹಾಗೂ ಹುನಗುಂದ ಸರ್ಕಾರಿ ಪಿಯು ಕಾಲೇಜ ಉಪನ್ಯಾಸಕ ಐ.ಎಚ್.ನಾಯಕ ಹೇಳಿದರು. ಪಟ್ಟಣದ ಹೊನ್ನಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆ ದಿನ ಬೆಳಗ್ಗೆ 9 ಗಂಟೆಗೆ ಪಟ್ಟಣದ ವಿ.ಮ. ವೃತ್ತದಿಂದ ನಮಗೆ ಅಕ್ಷರದಾತರಾದ ಗುರುಗಳನ್ನು ಭವ್ಯ ಮೆರವಣಿಗೆಯ ಮೂಲಕ ಬಸವ ಮಂಟಪದಲ್ಲಿ ಆಯೋಜಿಸಲಾಗಿರುವ ವೇದಿಕೆಗೆ ಕರೆ ತರಲಾಗುವುದು. ಚಿತ್ತರಗಿ ಸಂಸ್ಥಾನ ಮಠ ಇಳಕಲ್ಲದ ಗುರು ಮಹಾಂತ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿಕೊಳ್ಳಲಿದ್ದು, ಹುನಗುಂದದ ಗಚ್ಚಿನಮಠದ ಅಮರೇಶ್ವರ ದೇವರು ಸಾನ್ನಿಧ್ಯ ವಹಿಸಲಿದ್ದಾರೆ. ವಿಮವಿವ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸುವರು. ಸಂಘದ ಗೌರವ ಕಾರ್ಯದರ್ಶಿ ಡಾ. ಮಹಾಂತೇಶ ಕಡಪಟ್ಟಿ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ವಿಜಯ ಮಹಾಂತೇಶ ಪ್ರೌಢಶಾಲೆಯ ಮುಖ್ಯೋಪಾಧ್ಯಯ ಬಸವರಾಜ ಬನ್ನಟ್ಟಿ ಮತ್ತು ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯನಿ ಶಶಿಕಲಾ.ಎನ್ ಗೌರವ ಉಪಸ್ಥಿತಿ ವಹಿಸಲಿದ್ದಾರೆ ಎಂದರು. ವಿಜಯಲಕ್ಷ್ಮಿ ಒಡೆಯರ ಮಾತನಾಡಿದರು. ಅಜ್ಜಪ್ಪ ನಾಡಗೌಡರ, ಎಸ್.ಎಂ ಪಲ್ಲೇದ, ಎಲ್.ಎನ್ ಕಡಪಟ್ಟಿ, ಮಹೇಶ ವೀರಾಪೂರ, ಜಗದೀಶ ಪಾಟೀಲ, ಬಾಲಪ್ಪ ಕಿರಸೂರ, ಸಂಗಮೇಶ ವೀರಾಪೂರ ಸೇರಿದಂತೆ ಅನೇಕರು ಇದ್ದರು.



ಹುನಗುಂದ: ಪಟ್ಟಣದ ವಿಜಯ ಮಹಾಂತೇಶ ಪ್ರೌಢಶಾಲೆ ಹಾಗೂ ವಿ.ಮ ಬಾಲಕಿಯರ ಪ್ರೌಢ ಶಾಲೆಯ 1989-90ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ವತಿಯಿಂದ ಮೇ 17ರಂದು ಕೈವಾರ ಬೆಳಗ್ಗೆ 9 ಗಂಟೆಗೆ ಬಸವ ಮಂಟಪದಲ್ಲಿ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಪೂರ್ವ ಪಟ್ಟಣದ ಹೊನ್ನಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಕಾರ್ಯಲಯದಲ್ಲಿ ಪತ್ರಿಕಾಗೋಷ್ಠಿ ನಡೆಯಿತು.

ಬಾಗಲಕೋಟೆಯಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರಿಂದ ಪ್ರತಿಭಟನೆ

ಹಿಜಾಬ್‌ಗೆ ಅನುಮತಿ: ಆಕ್ರೋಶ

ಬಾಗಲಕೋಟೆ: ರಾಜ್ಯದ ಶಿಕ್ಷಣ ಸಚಿವರು ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅನುಮತಿ ನೀಡುವುದನ್ನು ವಿರೋಧಿಸಿ ಶ್ರೀರಾಮ ಸೇನೆ ಸಂಘಟನೆಯಿಂದ ಜಿಲ್ಲಾ ಆಡಳಿತ ಭವನದ ಎದುರು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದ ಶ್ರೀರಾಮ ಸೇನೆ ಕಾರ್ಯಕರ್ತರು ಕೂಡಲೇ ರಾಜ್ಯ ಸರ್ಕಾರ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಅನುಮತಿ ನೀಡಿದ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಘೋಷಣೆ ಕೂಗಿದರು. ಹಿಜಾಬ್‌ಗೆ ಅವಕಾಶ ನೀಡಿರುವುದರ ವಿರುದ್ಧ ಸೇನೆ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಶ್ರೀರಾಮ ಸೇನೆ ರಾಜ್ಯ ಕಾರ್ಯದರ್ಶಿ ಶಹಾಜಿ ಪವಾರ ಮಾತನಾಡಿ, 2022ರಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯ ಹಿಜಾಬ್ ಸಮವಸ್ತ್ರದ ಅವಿಭಾಜ್ಯ ಭಾಗವಲ್ಲ ಎಂದು ಸ್ಪಷ್ಟವಾದ ತೀರ್ಪು ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಹಿಜಾಬ್‌ಗೆ ಅನುಮತಿ ನೀಡಲು ಮುಂದಾಗಿರುವುದು ನ್ಯಾಯಾಂಗದ ತೀರ್ಪಿನ ಆಶಯಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.



ಶಾಲಾ-ಕಾಲೇಜುಗಳ ಸಮವಸ್ತ್ರ ಹಾಗೂ ಶಿಸ್ತು ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಖಚಿತ ಹಾಗೂ ಸಂಬಂಧಿತ ಸಂಸ್ಥೆಗಳ ಸಮಿತಿಗಳಿಗೆ ಇರುವ ಸಂದರ್ಭದಲ್ಲಿ, ಸರ್ಕಾರದ ಈ ನಿಲುವು ಸಮಿತಿಗಳ ಹಕ್ಕನ್ನು ಕಸಿದುಕೊಳ್ಳುವಂತಾಗಿದೆ. ಹಾಗೂ ಕೇವಲ ಮುಸ್ಲಿಂ ತುಷ್ಟಿಕರಣದ ರಾಜಕೀಯ ಉದ್ದೇಶದಿಂದಲೇ ಹಿಜಾಬ್‌ಗೆ ಅನುಮತಿ ನೀಡುವ ಪ್ರಯತ್ನ ನಡೆಯುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ಆರೋಪಿಸಿದರು.

ಶಿವಧಾರ, ಜನಿವಾರ, ರುದ್ರಾಕ್ಷಿ ಮುಂತಾದವುಗಳನ್ನು ಹಿಜಾಬ್ ವಿಚಾರಕ್ಕೆ ಅನವಶ್ಯಕವಾಗಿ ಜೋಡಿಸಿ ಹಿಂದು ಸಮಾಜದ ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿವೆ. ಶಿವಧಾರ, ಜನಿವಾರ, ರುದ್ರಾಕ್ಷಿ ಇತ್ಯಾದಿಗಳು ಬಟ್ಟೆಯ ಒಳಭಾಗದಲ್ಲಿ ಧರಿಸಲಾಗುವ ವೈಯಕ್ತಿಕ ಆಚರಣೆಗಳಾಗಿದ್ದು, ಅವುಗಳಿಗೆ ಸಮವಸ್ತ್ರದ ಹೊರಾಂಗಣ ನಿಯಮಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರು.

ತುಷ್ಟೀಕರಣ ನೀತಿಯನ್ನು ರಾಜ್ಯದಲ್ಲಿ ಅನುಸರಿಸಲಾಗುತ್ತಿದೆ. ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯದವರಿಂದ ಆಡಳಿತಕ್ಕೆ ಬಂದಿದ್ದೇವೆ. ಅವರಷ್ಟೇ ಮತ ಹಾಕಿದ್ದಾರೆ ಎಂಬ ಮನೋಭಾವನೆಯಲ್ಲಿದ್ದಾರೆ. ಮುಸ್ಲಿಂ ಸಮಾಜದವರು ಏನು ಮಾಡಿದರೂ ಅದೆಲ್ಲ ಸಂವಿಧಾನಬದ್ಧವಾಗಿರುತ್ತದೆ ಎಂದು ಅವರು ಅಪ್ಪಿಕೊಂಡಿದ್ದಾರೆ. ಮುಖ್ಯಮಂತ್ರಿಯವರು ಹಿಂದೂ ವಿರೋಧಿ ಭಾವನೆ ಅನುಸರಿಸುತ್ತಿದ್ದಾರೆ ಎಂದು ದೂರಿದರು. ರಾಜ್ಯದ ಶಾಂತಿ, ಶಿಕ್ಷಣ ವ್ಯವಸ್ಥೆಯ ಶಿಸ್ತು ಹಾಗೂ ವಿದ್ಯಾರ್ಥಿಗಳ ಏಕತೆಯ ಆದೃಷ್ಟಿಯಿಂದ ತಕ್ಷಣ ಸೂಕ್ತ ಕ್ರಮ ಕೈಗೊಂಡು ಹಿಜಾಬ್‌ಗೆ ಅನುಮತಿ ನೀಡಿದ ಆದೇಶವನ್ನು ಹಿಂದಕ್ಕೆ ಪಡೆದುಕೊಳ್ಳಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಹಿಂದೂಗಳನ್ನು ಕಾಪಾಡಲು ಆಗುತ್ತಿಲ್ಲ, ಹಿಂದೂಗಳ ಮೇಲೆ ಹಲ್ಲೆ, ಕೊಲೆ, ದೌರ್ಜನ್ಯ ನಡೆಯುತ್ತಿದೆ. ನಮ್ಮ ಧರ್ಮದ ಬಗ್ಗೆ ಆಚರಣೆ ಮಾಡಿದರೆ ಅದನ್ನು ಕೂಡ ವಿರೋಧ ಮಾಡುವ ಸರ್ಕಾರ ಪರಮಾವಧಿಯ ತುಷ್ಟೀಕರಣ ಮಾಡುತ್ತಿದೆ ಎಂದು ದೂರಿದರು.

ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ರಮೇಶ ಬಂಡಿವಡ್ಡರ, ಮುತ್ತು ಹಡಗಲಿ, ರವಿ ಬೀಳಗಿ, ಪರಸು ಸೂಳೀಭಾವಿ, ಸಂತೋಷ ಭಜಂತ್ರಿ ಸೇರಿ ಶ್ರೀರಾಮಸೇನೆಕಾರ್ಯಕರ್ತರುಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಮಾಜ ಸೇವೆಯಲ್ಲಿ ಶ್ರೀಗಳ ತ್ಯಾಗ ಅಪಾರ

ಗುಳೆದಗುಡ್ಡ: ನಾವು ನಮ್ಮ ಸಂಸ್ಕೃತಿ ಸಂಪ್ರದಾಯ ನಮ್ಮ ಮಕ್ಕಳಿಗೆ ಕಲಿಸಬೇಕು. ತಮ್ಮ ಮಕ್ಕಳನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಸಮಾಜಸರಿದಾರಿಗೆತರುವದು ಸ್ವಾಮೀಜಿಗಳಷ್ಟೇ ಅಲ್ಲದೇ ನಮ್ಮೆಲ್ಲರ ಮೇಲೆ ಜವಾಬ್ದಾರಿ ಇದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಸಮೀಪದ ಅಮರೇಶ್ವರ ಮಠದ ಅಮರೇಶ್ವರ ಜನಕಲ್ಯಾಣ ಪ್ರತಿಷ್ಠಾನದ ವತಿಯಿಂದ ಅಮರೇಶ್ವರ ಮಹಾಸ್ವಾಮಿಗಳು 57ನೇ ಪುಣ್ಯಸ್ಮರಣೆ, ಬಸಯ್ಯ ಸ್ವಾಮೀಗಳು, ಲಕ್ಷ್ಮೀಬಾಯಿ ಅಮ್ಮನವರ ಸಂಸ್ಮರಣೋತ್ಸವ ಕಾರ್ಯಕ್ರಮ, ಅಮರ ಆದರ್ಶ ದಂಪತಿ ಸತ್ಕಾರ, ಅಮರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ದಿವ್ಯಸಾನ್ನಿಧ್ಯ ವಹಿಸಿದ್ದ ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಾತನಾಡಿ, ಅಮರೇಶ್ವರ ಶ್ರೀಗಳು ಉಭಯ ವೈದ್ಯರಾಗಿದ್ದರು. 19 ವರ್ಷಗಳ ಕಾಲ ಮಠದ ಸೇವೆ ಮಾಡಿ, ಲಿಂಗೈಕ್ಯರಾದ ಬಸಯ್ಯ ಸ್ವಾಮಿಗಳು, ಲಕ್ಷ್ಮೀಬಾಯಿ ಅಮ್ಮನವರ ಹೆಸರಿನಲ್ಲಿ ಕಾಶಿ ಪೀಠದಿಂದ ತಲಾ 11 ಲಕ್ಷದಂತೆ ಒಟ್ಟು 22 ಲಕ್ಷರೂ.ಗಳನ್ನು ದೇಣಿಗೆ ನೀಡಲಾಗುವುದು. ಆ ದೇಣಿಗೆ ಹಣದಿಂದ ಬರುವ ಬಡ್ಡಿಯಿಂದ ಪ್ರತಿ ವರ್ಷ ಕಾರ್ಯಕ್ರಮ ನಡೆಸಿಕೊಂಡು ಹೋಗಬೇಕು ಎಂದರು.

ಆಶುಕವಿ, ಅಮರಶ್ರೀ ಪ್ರಶಸ್ತಿ ಪುರಸ್ಕೃತ ಸಿದ್ದಪ್ಪ ಬಿದರಿ ಮಾತನಾಡಿ, ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಎಲ್ಲರೂ ನನ್ನನ್ನು ಗುರುತಿಸಿ, ಇಷ್ಟುಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಪ್ರಶಸ್ತಿ ನೀಡಿದ್ದು ಖುಷಿ ತರಿಸಿದೆ ಎಂದರು. ಕೆರೂರು ಚರಂತಿಮಠದ ಡಾ.ಶಿವಕುಮಾರ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಸಾನಿಧ್ಯ ವಹಿಸಿದ್ದ ಒಪ್ಪತ್ತೇಶ್ವರ ಶ್ರೀಗಳು, ಗಂಗಾವತಿಯ ಡಾ.ಕೊಟ್ಟೂರು ಶ್ರೀಗಳು ಮಾತನಾಡಿದರು.

ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಶ್ರೀಗಳು, ಹೊಳೆಹುಚ್ಚೇಶ್ವರ ಶ್ರೀಗಳು, ಟೀಕಿನಮಠದ ಮಲ್ಲಿಕಾರ್ಜುನ ಶ್ರೀಗಳು, ಕಾಡಸಿದ್ದೇಶ್ವರ ಶ್ರೀಗಳು, ಸಾನ್ನಿಧ್ಯ ವಹಿಸಿದ್ದರು. ರಾಜು ದೇಸಾಯಿ, ಸುರೇಶ ವಸ್ತ್ರದ, ಪ್ರಭು ಮೊರಬದ, ಮಹಾಗುಂಡಪ್ಪ ಸುಂಕದ, ಮುತ್ತು ಮೊರಬದ, ಕಾಶೀನಾಥ ಪುರಾಣಿಕಮಠ, ವಿರೇಶ ಹಿರೇಮಠ, ರಂಗನಾಥ ಕಮತರ, ಹುಚ್ಚೇಶ ಕಮತರ, ಮಲ್ಲಿಕಾರ್ಜುನ ಹಿರೇಮಠ, ಜಿ.ಎಸ್.ಕೋಟಿ ಸೇರಿದಂತೆ ಇತರರು ಇದ್ದರು.



ಉಚಿತ ತಪಾಸಣೆಗಳು ಸಹಕಾರಿ



ಕೆರೂರ: ಹದಿಹರೆಯದವರ ಆರೋಗ್ಯ ಮತ್ತು ಕ್ಷೇಮ ಸುಧಾರಿಸುವಲ್ಲಿ ಆರೋಗ್ಯ ಶಿಬಿರದ ಉಚಿತ ತಪಾಸಣೆಗಳು ಸಹಕಾರಿಯಾಗಿವೆ ಎಂದು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ.ಪ್ರಶಾಂತಬಾಬು ಹೇಳಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರಾಷ್ಟ್ರೀಯ ಕಿಶೋರು ಸ್ವಾಸ್ಥ್ಯ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಹದಿಹರೆಯದವರ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದರು. ಡಾ.ಸವಿತಾ ಶೆಟ್ಟರ ಮಾತನಾಡಿ, ಹದಿಹರೆಯದವರು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು,. ಇತ್ತೀಚಿನ ದಿನಗಳಲ್ಲಿ ಬಾಯಿ ಕ್ಯಾನ್ಸರ್ ಹೆಚ್ಚಾಗಿದ್ದು, ದಂತ ಚಿಕಿತ್ಸೆಯು ಅವಶ್ಯವಾಗಿದೆ ಎಂದು ಸಲಹೆ ನೀಡಿದರು.

ಎಲ್ಲ ಮಕ್ಕಳಿಗೆ ಆರೋಗ್ಯ ಶಿಕ್ಷಣ ನೀಡಲಾಯಿತು. ಮುಖ್ಯ ವೈದ್ಯಾಧಿಕಾರಿ ಡಾ.ಕಿರಣ ಕುಳಗೇರಿ, ಸಿಬ್ಬಂದಿಗಳಾದ ಲಕ್ಷ್ಮೀ ಹೂಲಸಗೇರಿ, ಎಸ್.ಬಿ.ಕಾರಿ ಹಾಗೂ ಇತರರು ಇದ್ದರು.



ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಕುರಿತು ಜಿಲ್ಲಾಧಿಕಾರಿ ಸಂಗಪ್ಪನವರೊಂದಿಗೆ ಚರ್ಚೆ ನಡೆಸಲು ತೆರಳಿದ ಸಂದರ್ಭದಲ್ಲಿ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಅವರನ್ನು ಜಿಲ್ಲಾಧಿಕಾರಿ ಸನ್ಮಾನಿಸಿದರು. ಬಿಟಿಡಿಎ ಆರ್.ಒ. ಬಾರಿಗಿಡದ, ಕಾಂಗ್ರೆಸ್ ಮುಖಂಡ ಶ್ರೀನಿವಾಸ ಬಳ್ಳಾರಿ ಇದ್ದರು.

ಸಂತ್ರಸ್ತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಲಿ: ಗಚ್ಚಿನಮಠ ಶ್ರೀ

ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಯೋಜನಾ ಬಾಧಿತ ಸಂತ್ರಸ್ತರು ಶಿಥಿಲಗೊಂಡ ಶೆಡ್ ಪುನರ್ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಧರಣಿಯ 8ನೇ ದಿನವಾದ ಬುಧವಾರ ಹುನಗುಂದ ಪಟ್ಟಣದ ಗಚ್ಚಿನಮಠದ ವೇ.ಮೂ. ಮಹಾಂತಯ್ಯ ಗಚ್ಚಿನಮಠ ಹಾಗೂ ರೈತ ಸಂಘದಿಂದ ಬೆಂಬಲ ಸೂಚಿಸಿದರು.

ಗಚ್ಚಿನಮಠದ ಮಹಾಂತಯ್ಯ ಗಚ್ಚಿನಮಠ ಮಾತನಾಡಿ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವೆಲ್ಲಾ ಎಲ್ಲಿವರೆಗೆ ಮತದಾನದ ಮೌಲ್ಯವನ್ನು ತಿಳಿದುಕೊಳ್ಳುವುದಿಲ್ಲ ಅಲ್ಲಿವರೆಗೆ ನಾವು ಉದ್ಧಾರವಾಗಲು ಸಾಧ್ಯವಿಲ್ಲ. ನಿಮ್ಮ ನೋವಿಗೆ ಸರ್ಕಾರ ಮತ್ತು ನಿಮ್ಮಿಂದ ಮತ ಪಡುವ ಆಯ್ಕೆಯಾದ ಜನಪ್ರತಿನಿಧಿಗಳು ಸ್ಪಂಧಿಸದೇ ಇರೋದು ಕೂಡಾ ದುರಂತ. ನಿಮ್ಮ ಹೋರಾಟಕ್ಕೆ ಸದಾ ನಮ್ಮ ಬೆಂಬಲವಿದೆ ಎಂದರು.

ರೈತ ಸಂಘದ ಅಧ್ಯಕ್ಷ ಮಲ್ಲನಗೌಡ ತುಂಬಾ ಮಾತನಾಡಿ, ನಮ್ಮಲ್ಲಿನ ಒಗ್ಗಟ್ಟಿನ ಕೊರತೆ ಮತ್ತು ನಮ್ಮ ಹಕ್ಕುಗಳನ್ನು ನಾವು ಪಡೆದುಕೊಳ್ಳಲು ನಮ್ಮಲ್ಲಿ ಗಟ್ಟಿತನ ಇಲ್ಲದೆ ಇರುವದರಿಂದಲೇ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಆಟವಾಡುತ್ತಿದ್ದಾರೆ. ನಮ್ಮ ಸಮಸ್ಯೆ ಈಡೇರುವರಿಗೂ ಹೋರಾಟಕ್ಕೆ ಸಿದ್ಧವಾಗಿರಿ ಎಂದರು.



ಮುಖಂಡರಾದ ಶ್ರೀಕೃಷ್ಣ ಜಾಲಿಹಾಳ, ಮಲ್ಲಣ್ಣ ಕುಂಟೋಜಿ, ಬಸವರಾಜ ದಾದ್ಮಿ, ಕಲ್ಲಪ್ಪ ಆನೇಹೊಸೂರ, ಭೀಮಪ್ಪ ಅಡಿಹಾಳ, ಶರಣಪ್ಪ ಮುಳ್ಳೂರ, ಬಸವರಾಜ ಮುಳ್ಳೂರ, ಹಬೀಸಾಬ ಮುಲ್ಲಾ, ಕಲ್ಲಪ್ಪ ಬೇನಾಳ, ಹನಮಂತ ಕುರಿ, ಸಂಗಮೇಶ ಹಡಪದ, ಸರೋಜಮ್ಮ ಹಿರೇಮಠ, ನೀಲವ್ವ ಮಾಗಿ, ಮಲ್ಲಮ್ಮ ಗಡ್ಡಿಮಠ, ರೇಣುಕಾ ವಾಲಿಕಾರ, ಹೇಮವ್ವ ವಾಲಿಕಾರ, ಮಹಾದೇವಿ ತೋಟಗೇರ ಸೇರಿದಂತೆ ಅನೇಕರು ಇದ್ದರು.

ಶಿಕ್ಷಕರು ಚಾಣಕ್ಯನಂತೆ ಚತುರರಾಗಿರಲಿ: ಉಪನ್ಯಾಸಕ ಸಿದ್ನಾಳ

ಮಹಾಲಿಂಗಪುರ: ಮಕ್ಕಳು ಮಾಣಿಕ್ಯವಾಗಿ ಮಿನುಗಬೇಕಾದರೆ ಶಿಕ್ಷಕರು ಚಾಣಕ್ಯನಂತೆ ಚತುರರಾಗಿರಬೇಕು ಎಂದು ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ಸ್ಥಳೀಯ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಸಪನಾ ಅನಿಗೋಳ ಮಾತನಾಡಿ, ಇತ್ತೀಚಿನ ಶಿಕ್ಷಣದಿಂದ ಮಕ್ಕಳ ಜ್ಞಾನಕೋಶ ಹೆಚ್ಚುತ್ತಿದ್ದರೂ ಭಾವಕೋಶ ಬಡವಾಗುತ್ತಿದೆ. ಮಕ್ಕಳಲ್ಲಿ ವ್ಯಾವಹಾರಿಕ ಜ್ಞಾನ ಮತ್ತು ಭಾವನಾತ್ಮಕ ಬುದ್ಧಿ ಬೆಳೆಸುವ ಕೌಶಲ್ಯದ ಬಗ್ಗೆ ತಿಳಿಸಿದರು.

ರಾಷ್ಟ್ರೋತ್ಥಾನ ಪರಿಷತ್‌ನ ವಿಭಾಗೀಯ ಸಂಚಾಲಕ ಶ್ರೀನಿವಾಸ ಪಾಟೀಲ, ರಾಜ್ಯಮಟ್ಟದ ಕನ್ನಡ ಸಂಪನ್ಮೂಲ ವ್ಯಕ್ತಿ ಡಿ.ವಿ.ಹಿರೇಮಠ, ಉಪನ್ಯಾಸಕ ಶಿವಲಿಂಗ ಸಿದ್ನಾಳ, ಜಿಲ್ಲಾ ಪ್ರಶಸ್ತಿ ವಿಜೇತ ಶಿಕ್ಷಕ ಎಸ್.ಜಿ.ಜುಟನಟ್ಟಿ ಮಾತನಾಡಿದರು. ಶಿಕ್ಷಕ ನಾರನಗೌಡ ಉತ್ತಂಗಿ ಸಮಾರೋಪದಲ್ಲಿ ಮಾತನಾಡಿ, ನಮ್ಮ ಸಂಸ್ಕೃತಿಯ ಶ್ರೀಮಂತಿಕೆ ಬಗ್ಗೆ ತಿಳಿಯದೇ ಮಕ್ಕಳಲ್ಲಿ ಧೀಮಂತಿಕೆ ಬೆಳೆಯಲು ಸಾಧ್ಯವಿಲ್ಲ ಎಂದರು. ಸ್ವಾಮಿ ವಿವೇಕಾನಂದ ಶಾಲೆಯ ಅಧ್ಯಕ್ಷ ರಮೇಶ ಶೆಕ್ಕಿ ಅಧ್ಯಕ್ಷತೆ ವಹಿಸಿದ್ದರು. ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು. ಶಾಲೆಯ ವತಿಯಿಂದ ಸಂಪನ್ಮೂಲ ವ್ಯಕ್ತಿಗಳಿಗೆ ದೇಸಿ ಸಾವಯವ ಬೆಲ್ಲದ ಉತ್ಪನ್ನಗಳ ಉಡುಗೊರೆ ನೀಡಿ ಸನ್ಮಾನಿಸಲಾಯಿತು. ರೊಟ್ಟಿ, ಚಪಾತಿ, ಹೋಳಿಗೆ, ಶೀಕರಣಿ, ಅನ್ನಸಾರು ಜವಾರಿ ಸಿಹಿಯೂಟ ಉಣಬಡಿಸಲಾಯಿತು. ಸ್ವಾಮಿ ವಿವೇಕಾನಂದ ಪ್ರಾಥಮಿಕ ಶಾಲೆ ಮತ್ತು ಚಾಣಕ್ಯ ಕೋಚಿಂಗ್ ಸೆಂಟರ್ ಅಧ್ಯಕ್ಷ ರಮೇಶ ಶೆಕ್ಕಿ, ಕಾರ್ಯದರ್ಶಿ ಬಸವರಾಜ ನಿಂಗನೂರ, ಮುಖ್ಯ ಶಿಕ್ಷಕ ರಾಮಸ್ವಾಮಿ ಕೋಲ್ಕರ, ಶಿಕ್ಷಕರಾದ ಮಹೇಶ ಕಾಂಬಳೆ, ಶ್ರೀಮಂತ ಶಿರೋಳ, ಎಂ.ಡಿ.ನರಗಟ್ಟಿ ಇದ್ದರು.



ಸಾಲಮೇಳ ಸದುಪಯೋಗ ಪಡೆಯಿರಿ



ಬಾದಾಮಿ: ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ)ನಿಂದ ಅನೇಕ ಸಾಲ ಸೌಲಭ್ಯಗಳಿದ್ದು, ಸಾಲ ಸದುಪಯೋಗ ಪಡಿಸಿಕೊಳ್ಳಲು ಶಾಖಾ ವ್ಯವಸ್ಥಾಪಕ ಶಂಭುಕುಮಾರ ಸಾಹು ಮನವಿ ಮಾಡಿದರು.

ಎಸ್‌ಬಿಐ ಬ್ಯಾಂಕ್‌ನಲ್ಲಿ ಹಮ್ಮಿಕೊಂಡಿದ್ದ ಸಾಲ ಮೇಳವನ್ನು ಉದ್ದೇಶಿಸಿ ಮಾತನಾಡಿದರು. ಗೃಹಸಾಲ, ವಾಹನ ಸಾಲ, ಶೈಕ್ಷಣಿಕ ಸಾಲ, ಪಿಂಚಣಿಸಾಲ, ಮದುವೆಸಾಲ ಸೇರಿದಂತೆ ವಿವಿದ ದಾಲಗಳನ್ನು ಸದುಪಯೋಗ ಪಡಿಸಿಕೊಳ್ಳಲು ಮನವಿ ಮಾಡಿದರು.

ಕ್ಷೇತ್ರ ಅಧಿಕಾರಿ ಶೇ?ಗಿರಿ ಕಾರಕೂನ ಮಾತನಾಡಿ ಎಸ್.ಬಿ.ಐ.ನಿಂದ ಸಿಗುವ ಸಾಲಗಳು, ಪಡೆಯಲು ಬೇಕಾದ ದಾಖಲೆಗಳ ಕುರಿತು ವಿವರವಾದ ಮಾಹಿತಿ ನೀಡಿದರು. ಎಸ್‌ಬಿಐ ಬ್ಯಾಂಕ್ ಕಾನೂನು ಸಲಹೆಗಾರ ಎಂ.ಎಸ್.ಹಿರೇಮಠ, ಸಮಾಜ ಸೇವಕ ಇಷ್ಟಲಿಂಗ ಶಿರಶಿ, ಸಿಬ್ಬಂದಿಗಳಾದ ಧೂಳಪ್ಪ ಕಿತ್ತಲಿ, ಪ್ರಕಾಶ ಚಲವಾದಿ ಸೇರಿದಂತೆ ಬ್ಯಾಂಕ್‌ನ ಗ್ರಾಹಕರು, ಸಾರ್ವಜನಿಕರು ಭಾಗವಹಿಸಿದ್ದರು.

ಫಲಾನುಭವಿಗಳಿಗೆ ಯಂತ್ರ ವಿತರಣೆ

ಜಮಖಂಡಿ : ಸರ್ಕಾರಿ ಪಶು ಆಸ್ಪತ್ರೆಯಲ್ಲಿ ಸುಮಾರು 19 ಪರಿಕರಗಳು ಬಂದಿವೆ. 105 ಬೇಡಿಕೆ ನೀಡಿದ್ದು, ಅದರಲ್ಲಿ ಕೇವಲ 19 ಫಲಾನುಭವಿಗಳಿಗೆ ಯಂತ್ರ ಮತ್ತು ನೆಲ ಹಾಸುಗಳು ಬಂದಿವೆ. ಅದನ್ನು ಫಲಾನುಭವಿಗಳಿಗೆ ನೀಡಲಾಗುತ್ತಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸರ್ಕಾರಿ ಪಶು ಆಸ್ಪತ್ರೆಯಲ್ಲಿ ಸರ್ಕಾರದಿಂದ ಬಂದ ಯಂತ್ರೋಪಕರಣ ಫಲಾನುಭವಿಗಳಿಗೆ ವಿತರಿಸಿ ಮಾತನಾಡಿ, ಭೂಮಿಗೆ ಶಕ್ತಿ ನೀಡಲು ರಸಾಯನಿಕ ಗೊಬ್ಬರ ಬಳಸದೆ ಸಾವಯವ ಬಳಕೆ ಹೆಚ್ಚಾಗಬೇಕು. ಸಾವಯವ ಬೇಕಾದರೆ ಪಶು ಸಂಪತ್ತು ಹೆಚ್ಚಿರಬೇಕು. ಅದಕ್ಕಾಗಿ ಪಶು ಸಂಪತ್ತು ಬೆಳಸಿ ಉಳಿಸಿ ಎಂದರು.

ಪ್ರತಿಯೊಬ್ಬರೂ ಗೋ ಸಂಪತ್ತು ಎಮ್ಮೆಗಳನ್ನು ಸಾಕಿದರೆ ಹೈನುಗಾರಿಕೆಗೆ ಉತ್ತೇಜನೆ ನೀಡಿದಂತಾಗುತ್ತದೆ. ನಮ್ಮ ತಾಲೂಕಿಲ್ಲಿ ಆಲಗೂರ ಗ್ರಾಮದಲ್ಲಿ ದಿನನಿತ್ಯ 12 ಸಾವಿರ ಲೀಟರ್ ಹಾಲು ನೀಡುವ ಸಂಸ್ಥೆಯು ಬೆಳೆದು ನಿಂತಿದೆ. ಅಂತಹ ಸಂಸ್ಥೆಗಳು ತಾಲೂಕಿನಾದ್ಯಂತ ಕ್ಷೀರೋಧ್ಯಮಕ್ಕೆ ಉತ್ತೇಜನೆ ನೀಡಬೇಕು ಎಂದು ಹೇಳಿದರು. ಮಲ್ಲು ದಾನಗೌಡ ಇದ್ದರು.



ಬ್ಯಾಂಕ್ ಉತ್ತಮವಾಗಿ ಮುನ್ನಡೆಸಲು ಆಡಳಿತ ವ್ಯವಸ್ಥೆ ಮುಖ್ಯ

ಬಾದಾಮಿ: ಉತ್ತಮವಾಗಿ ಬ್ಯಾಂಕ್ ಮುನ್ನಡೆಸಲು ಪ್ರಾಮಾಣಿಕತೆ ಮತ್ತು ಉತ್ತಮ ಆಡಳಿತ ವ್ಯವಸ್ಥೆ ಮುಖ್ಯ ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.

ಗುರುವಾರ ನಗರದ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ವೀರಪುಲಿಕೇಶಿ ಸಹಕಾರಿ ಬ್ಯಾಂಕಿನ ಪ್ರಧಾನ ಕಚೇರಿಯ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು. ದಿಂ.ಕೆ.ಎಂ.ಪಟ್ಟಣಶೆಟ್ಟಿ ಅವರು ಕಟ್ಟಿದ ವೀರಪುಲಿಕೇಶಿ ಬ್ಯಾಂಕನ್ನು ಇಂದಿನವರೆಗೆ ಉತ್ತಮವಾಗಿ ನಡೆಸಿಕೊಂಡು ಬಂದಿದ್ದಾರೆ. ಉತ್ತರ ಕರ್ನಾಟಕದಲ್ಲಿಯೇ ಜನಪ್ರಿಯ ಬ್ಯಾಂಕ್ ಆಗಿದೆ. ಸಹಕಾರಿ ಚಳುವಳಿಗೆ ಒತ್ತು ಕೊಡುವಂತಾಗಿದೆ. ಸಹಕಾರಿ ಬ್ಯಾಂಕುಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬೇಗ ಸಾಲ ಸಿಗುತ್ತದೆ. ಸಹಕಾರಿ ಬ್ಯಾಂಕುಗಳಿಂದ ಅನೇಕ ಸೌಲಭ್ಯಗಳು ಇವೆ ಎಂದು ಹೇಳಿದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಮಾತನಾಡಿ, ಸಹಕಾರಿ ಕ್ಷೇತ್ರ ಕಣಗಿನಹಾಳ ಸಿದ್ದನಗೌಡ ಪಾಟೀಲ ಮೊದಲ ಬಾರಿಗೆ ಸಹಕಾರಿ ಬ್ಯಾಂಕ್ ಆರಂಭಿಸಿದರು. ಇಂದು ನಾವೆಲ್ಲರೂ ದುಡಿದು, ಖರ್ಚು ಮಾಡಿ ಭವಿಷ್ಯಕ್ಕೆ ಉಳಿತಾಯ ಮಾಡಬೇಕಾಗಿದೆ. ಯುವಕರು ಗಳಿಸಿದ್ದರಲ್ಲಿ ಸ್ವಲ್ಪ ಭಾಗ ಉಳಿತಾಯ ಮಾಡಿರಿ. ಬ್ಯಾಂಕಿನಿಂದ ಅನೇಕರಿಗೆ ಸಹಾಯವಾಗಿದೆ. ಬ್ಯಾಂಕ್ ರಾಷ್ಟ್ರೀಕರಣ ದಿಂದ ಇಂದು ಎಲ್ಲರಿಗೂ ಸಾಲ ಸುಲಭವಾಗಿ ಸಿಗುತ್ತದೆ ಎಂದು ಹೇಳಿದರು.ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಬ್ಯಾಂಕ್ ಬೆಳೆಯಬೇಕಾದರೆ ಗ್ರಾಹಕರು ಯಾವ ಉದ್ದೇಶಕ್ಕೆ ಸಾಲ ಪಡೆದಿದ್ದಾರೊ ಆದೇ ಉದ್ದೇಶಕ್ಕೆ ಬಳಸಿ ಸಕಾಲಕ್ಕೆ ಮರುಪಾವತಿ ಮಾಡಬೇಕು. ಅಂದಾಗ ಮಾತ್ರ ಬ್ಯಾಂಕ್ ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿಪ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ ಸದುದ್ದೇಶದಿಂದ ಆರಂಭವಾದ ಬ್ಯಾಂಕ್ ಜಿಲ್ಲೆಯಲ್ಲಿ ಪ್ರತಿಷ್ಠವಾಗಿ ಬೆಳೆದಿದೆ. ಉಳಿತಾಯ ಮಾಡುವ ಪ್ರಯತ್ನ ಮಾಡಬೇಕು. ಉಳಿತಾಯ ಮಾಡುವವರು ದೊಡ್ಡಮಟ್ಟಕ್ಕೆ ಬೆಳೆಯುತ್ತಾರೆ ಎಂದು ಹೇಳಿದರು.



ಬ್ಯಾಂಕಿನ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮೂರು ಸಾವಿರ ಮಠದ ಜಗದ್ಗುರು ಗುರುಸಿದ್ಧ ರಾಜಯೋಗೇಂದ್ರ ಶ್ರೀಗಳು, ಹಾಲಕೆರೆ ಅನ್ನದಾನೇಶ್ವರಮಠದ ಮುಪ್ಪಿನ ಬಸವಲಿಂಗ ಶ್ರೀಗಳು, ಹಾವೇರಿ ಹುಕ್ಕೇರಿಮಠದ ಡಾ.ಸದಾಶಿವ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.ಸಂಸ್ಥಾಪಕ ಅಧ್ಯಕ್ಷರ ಪುತ್ಥಳಿ ಅನಾವರಣ ಮತ್ತು ಹಿಂದಿನ ಅಧ್ಯಕ್ಷರ ಭಾವಚಿತ್ರ ಅನಾವರಣ ಮಾಡಲಾಯಿತು. ಬ್ಯಾಂಕ್ ನಿರ್ಮಾಣದಲ್ಲಿ ಶ್ರಮಿಸಿದ ಶಿಲ್ಪಿ, ಗುತ್ತಿಗೆದಾರರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಿರ್ದೇಶಕರಾದ ಎ.ಸಿ.ಪಟ್ಟಣದ, ಡಿ.ಎಂ.ಪೈಲ್, ಐ.ಕೆ.ಪಟ್ಟಣಶೆಟ್ಟಿ, ಗಂಗಾಧರ ಘಟ್ಟದ, ಕೆ.ಎಂ.ಪಟ್ಟಣಶೆಟ್ಟಿ, ವಿ.ಕೆ.ಬಾಗಲೆ, ಬಿ.ಎಂ. ಟೆಂಗಿನಕಾಯಿ, ಎಂ.ಎಸ್.ಹಿರೇಹಾಳ, ಚನ್ನಪ್ಪ ಪಟ್ಟಣದ, ಎಂ.ಎಸ್. ತೆಗ್ಗಿನಮನಿ, ವಿ.ಆರ್.ಪಾಟೀಲ, ಎಚ್.ಕೆ.ಬೆಳ್ಳಿಗುಂಡಿ, ಎಂ.ಆರ್.ತಳವಾರ, ನಿರ್ದೇಶಕಿಯರಾದ ಕೆ.ಜಿ.ಬಂಗಾರಶೆಟ್ಟರ, ಎಸ್.ಎಂ.ಪಟ್ಟಣಶೆಟ್ಟಿ, ಪ್ರಧಾನ ವ್ಯವಸ್ಥಾಪಕಿ ಎಂ.ಬಿ.ದೇಶನ್ನವರ ಉಪಸ್ಥಿತರಿದ್ದರು.



ವಿಜಯಪುರ: ನಗರದ ಸರಾಫ್ ಬಜಾರ್‌ನ ಚಿನ್ನಾಭರಣ ಮಳಿಗೆಯಲ್ಲಿ ಗುರುವಾರ ಏಕಾಏಕಿ ಗ್ಯಾಸ್ ಬ್ಲಾಸ್ಟ್ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಭೇಟಿ ನೀಡಿ ಪರಿಶೀಲಿಸಿದರು. ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಸರಾಫ್ ಬಜಾರ್ ಸಂಘದ ಪದಾಧಿಕಾರಿಗಳು ಹಾಗೂ ಚಿನ್ನಾ ಭರಣ ಮಳಿಗೆಯ ಮಾಲೀಕರು ಹಾಗೂ ಸಾರ್ವಜನಿಕರು ಇದ್ದರು.

ಬೀದಿ ಬದಿ ವ್ಯಾಪಾರಸ್ಥರಿಗೆ ಉಚಿತ ಛತ್ರಿ ವಿತರಣೆ

ಚಡಚಣ: ಜನರ ಸೇವೆಯೇ ಜನಾರ್ಧನ ಸೇವೆ ಎಂಬ ಧ್ಯೇಯದೊಂದಿಗೆ ಹಾಗೂ ಪ್ರಧಾನಿ ಮೋದಿ ಅವರ ಕಾರ್ಯ ಪ್ರೇರಣೆಯಿಂದ ಸಮಾಜ ಸೇವೆ ಮಾಡಲು ಪಣ ತೊಟ್ಟಿದ್ದೇನೆ ಎಂದು ಬಿಜೆಪಿ ಯುವ ಮುಖಂಡ ಹಾಗೂ ರಾಷ್ಟ್ರೀಯ ಬಂಜಾರಾ ಪರಿಷತ್ ರಾಜ್ಯಾಧ್ಯಕ್ಷ ಪ್ರಕಾಶ ಚವ್ಹಾಣ ಹೇಳಿದರು. ಬಿರು ಬಿಸಿಲ ತಾಪತ್ರಯ ತಣಿಸಲು ಪಟ್ಟಣದಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ತಮ್ಮ ಸಂಸ್ಕಾರ ಫೌಂಡೇಶನ್ ವತಿಯಿಂದ ಉಚಿತ ಕೊಡೆ ವಿತರಿಸಿ ಅವರು ಮಾತನಾಡಿದರು. ವಿಜಯಪುರ ಜಿಲ್ಲೆಯಾದ್ಯಂತ ಬಿಸಿಲಿನ ತಾಪ ಹೆಚ್ಚಾಗಿದ್ದು, ಬೀದಿ ಬದಿ ವ್ಯಾಪಾರಸ್ಥರು ಬಿರು ಬಿಸಿಲಿನಲ್ಲಿ ತಮ್ಮ ಉಪಜೀವನಕ್ಕಾಗಿ ತಮ್ಮ ಜೀವದ ಹಂಗು ತೊರೆದು ಯಾವುದೇ ನೆರಳಿನ ಆಸರೆ ಇಲ್ಲದೆ ವ್ಯಾಪಾರ ಮಾಡುವದನ್ನು ನೋಡಿ ನಮ್ಮ ಸಂಸ್ಕಾರ ಫೌಂಡೇಶನ್ ವತಿಯಿಂದ ಅವರಿಗೆ ಕೊಡೆಗಳನ್ನು ಉಚಿತವಾಗಿ ವಿತರಿಸುತ್ತಿದ್ದೇವೆ ಎಂದು ಹೇಳಿದರು. ನಾಳೆಯಿಂದ ಜಿಲ್ಲೆಯ ಎಲ್ಲ ಗ್ರಾಮೀಣ ಭಾಗಗಳಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಕೊಡೆಗಳನ್ನು ವಿತರಿಸುತ್ತೇವೆ. ಜನರ ಸೇವೆಯೇ ಜನಾರ್ಧನ ಸೇವೆ ಎಂಬ ಮನೋಭಾವದಿಂದ ಸಾಮಾಜಿಕ ಸೇವೆ ಮಾಡುತ್ತಿದ್ದೇನೆ ಎಂದರು. ಗೋಪಾಲ ಮಹಾರಾಜರು, ಸುರೇಶ ಚವ್ಹಾಣ, ವಿಜಯ ಚವ್ಹಾಣ, ಮಲ್ಲಿಕಾರ್ಜುನ ಭೈರಗೊಂಡ, ಮಹೇಶ ಶಿಂಧೆ, ಪ್ರವೀಣ ಕಲ್ಯಾಣಶೆಟ್ಟಿ, ರಾಮ ಮಾಲಾಪೂರ, ಶಾಂತುಗೌಡ ಬಿರಾದಾರ, ಭಿಮಾಶಂಕರ ವಾಳಿಖಿಂಡಿ, ದಯಾನಂದ ಕಸಮೂಳಿ, ರಾಹುಲ ಲೋಖಂಡೆ, ರವಿ ಶಿಂಧೆ, ರೇವಣಸಿದ್ದ ಗೋಡಖೆ, ಭೀಮನಗೌಡ ಪಾಟೀಲ ಸೇರಿದಂತೆ ಮತ್ತಿತರರು ಇದ್ದರು.




ಚಡಚಣ: ಪಟ್ಟಣದ ಬೀದಿ ಬದಿ ವ್ಯಾಪಾರಸ್ಥರಿಗೆ ಸಂಸ್ಕಾರ ಫೌಂಡೇಶನ್ ವತಿಯಿಂದ ಬಿಜೆಪಿ ಯುವ ಮುಖಂಡ, ರಾಷ್ಟ್ರೀಯ ಬಂಜಾರಾ ಪರಿಷತ್ ರಾಜ್ಯಾಧ್ಯಕ್ಷ ಪ್ರಕಾಶ ಚವ್ಹಾಣ ಉಚಿತ ಕೊಡೆ ವಿತರಿಸಿದರು. ಗೋಪಾಲ ಮಹಾರಾಜರು, ಸುರೇಶ ಚವ್ಹಾಣ, ವಿಜಯ ಚವ್ಹಾಣ, ಮಲ್ಲಿಕಾರ್ಜುನ ಭೈರಗೊಂಡ, ಮಹೇಶ ಶಿಂಧೆ, ಪ್ರವೀಣ ಕಲ್ಯಾಣಶೆಟ್ಟಿ, ರಾಮ ಮಾಲಾಪೂರ, ಶಾಂತುಗೌಡ ಬಿರಾದಾರ, ಭಿಮಾಶಂಕರ ವಾಳಿಖಿಂಡಿ, ದಯಾನಂದ ಕಸಮೂಳಿ, ರಾಹುಲ ಲೋಖಂಡೆ, ರವಿ ಶಿಂಧೆ ಇದ್ದರು.

ಕಿರುಸುದ್ದಿ

ಆಶ್ರಯ ತಾಣಕ್ಕೆ ಬೀದಿನಾಯಿಗಳನ್ನು ಸಾಗಿಸಿ

ವಿಜಯಪುರ: ಸರ್ವೋಚ್ಚ ನ್ಯಾಯಾಲಯ ಆದೇಶಿಸಿದಂತೆ ಸಾರ್ವಜನಿಕ ಸ್ಥಳ, ಸರ್ಕಾರಿ ಕಚೇರಿ, ಆಸ್ಪತ್ರೆ, ಶಾಲಾ-ಕಾಲೇಜು, ಬಸ್ ನಿಲ್ದಾಣ ಹಾಗೂ ಇನ್ನಿತರ ಜನನಿಬಿಡ ಪ್ರದೇಶಗಳಲ್ಲಿರುವ ಬೀದಿ ನಾಯಿಗಳನ್ನು ಗುರುತಿಸಿ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಬೇಕು. ತಾತ್ಕಾಲಿಕ ಪರಿಹಾರವಾಗಿ ಆಶ್ರಯ ತಾಣಕ್ಕೆ ಕಳುಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ. ಆನಂದ ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸಿದ ಅವರು, ಜಿಲ್ಲೆಯ ನಗರ, ಗ್ರಾಮ ಪಂಚಾಯತಿಗಳಲ್ಲಿ ಯೋಜನೆ ರೂಪಿಸಿ, ಬೀದಿ ನಾಯಿಗಳ ನಿಯಂತ್ರಣಕ್ಕೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಬೀದಿ ನಾಯಿಗಳಿಗೆ ಲಸಿಕೆ ಹಾಕಿಸಬೇಕು, ಎಬಿಸಿ ಎಲ್ಲಾ ಕಡೆ ಪೂರ್ಣಗೊಳಿಸಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಆದ್ಯತೆಯ ಮೇರೆಗೆ ಕೆಲಸ ಮಾಡಬೇಕು. ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಎಲ್ಲೂ ಕೂಡ ಘಟನೆ ನಡೆಯಬಾರದು ಎಂದರು. ಬುರಣಾಪೂರ ಡಾಗ್ ಶೆಲ್ಟರ್ ಬೇಗ ಆರಂಭಿಸಲು ಕ್ರಮವಹಿಸಬೇಕು. ಜೊತೆಗೆ ಪ್ರತಿ ಸ್ಥಳೀಯ ಸಂಸ್ಥೆಗಳಲ್ಲೂ ಡಾಗ್ ಶೆಲ್ಟರ್ ಕಡ್ಡಾಯವಾಗಿ ಮಾಡಬೇಕು. ಲಸಿಕೆ ಸಾಕಷ್ಟು ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಎ ಖಾತಾ ಹಾಗೂ ಬಿ ಖಾತಾ ಎಷ್ಟು ಆಸ್ತಿಗಳಿಗೆ ಆಗಿದೆ ಎಂಬುದರ ಕುರಿತು ಅಧಿಕಾರಿಗಳು ಸಭೆಗೆ ಮಾಹಿತಿ ಸಲ್ಲಿಸಿದರು. ಜಿಲ್ಲೆಯ ನಗರಸಭೆ, ಪಟ್ಟಣ ಪಂಚಾಯಿತಿಗಳು, ನಾನಾ ಕರ ವಸೂಲಿಯಲ್ಲಿ ಪ್ರಗತಿ ಸಾಧಿಸಲು ಜಿಲ್ಲಾಧಿಕಾರಿ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳಿಗೆ ಸೂಚಿಸಿದರು. ಇಂದಿರಾ ಕ್ಯಾಂಟೀನ್‌ಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಇಂದಿರಾ ಕ್ಯಾಂಟೀನ್‌ಗೆ ಅನಿರೀಕ್ಷಿತ ಭೇಟಿ ನೀಡಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಅಧಿಕಾರಿಗಳು ಆಗಾಗ ಅನಿರಿಕ್ಷೀತ ಭೇಟಿ ನೀಡಿ, ಅಲ್ಲಿರುವ ಆಹಾರ ಗುಣಮಟ್ಟ, ಶುಚಿರುಚಿ ಹಾಗೂ ಅಲ್ಲಿನ ಸ್ವಚ್ಛತೆ ಬಗ್ಗೆ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ. ಆನಂದ ಸೂಚಿಸಿದರು. ಸಿಇಒ ರಿಷಿ ಆನಂದ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ್, ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ, ಜಲಮಂಡಳಿ ಇಇ ಗೋವಿಂದ, ಪರಿಸರ ಅಧಿಕಾರಿ ವಿವೇಕ, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪಾಲ್ಗೊಂಡಿದ್ದರು.

ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಮುಖ್ಯ



ವಿಜಯಪುರ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವೃತ್ತಿ ಕ್ಷೇತ್ರದಲ್ಲಿ ಮಾತ್ರವಲ್ಲದೇ ಉನ್ನತ ಶಿಕ್ಷಣದಲ್ಲಿಯೂ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಯಶಸ್ವಿ ಹೊಂದಬೇಕಾದರೆ ವಿಷಯ ಜ್ಞಾನದ ಜತೆಗೆ ವಿಶ್ಲೇಷಣಾತ್ಮಕ ಮತ್ತು ಚಿಂತನಾ ಶಕ್ತಿ, ಕಾರ್ಯತತ್ಪರತೆ, ಕ್ರಿಯಾಶೀಲತೆ, ಸೃಜನಾತ್ಮಕತೆ ಮತ್ತು ಪ್ರಾಯೋಗಿಕತೆಯಂತಹ ಔದ್ಯೋಗಿಕ ಕೌಶಲ್ಯಗಳನ್ನು ಪಡೆಯುವುದು ಅಗತ್ಯವಾಗಿದೆ ಎಂದು ಹುಬ್ಬಳ್ಳಿಯ ಗುರುಕುಲ ಸ್ಕಿಲ್ ಡೆವ್ಹಲಪಮೆಂಟ್ ಆರ್ಗನೈಜೇಷನ್ ಸಂಚಾಲಕ ಡಿ.ರಾಜಶೇಖರ ಅಭಿಪ್ರಾಯಪಟ್ಟರು. ನಗರದ ನವಭಾಗದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ 'ಎಜು-ಸ್ಕಿಲ್ ಡೆವ್ಹಲಪಮೆಂಟ್ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳು ಸರ್ಕಾರಿ ಉದ್ಯೋಗ ಮತ್ತು ಪ್ರತಿಷ್ಠಿತ ಖಾಸಗಿ ವಲಯದ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳನ್ನು ಗಿಟ್ಟಿಸಿಕೊಳ್ಳಲು ಪ್ರವೇಶದ್ವಾರವಾಗಿವೆ. ಇಂದು ಕೇವಲ ವಿಷಯ ಜ್ಞಾನ, ಅಂಕ ಮತ್ತು ಪದವಿ ಪಡೆದರೆ ಸಾಲದು. ಅದಕ್ಕಿಂತ ಮುಖ್ಯವಾಗಿ ಶಿಸ್ತು, ಉದಾತ್ತ ಗುರಿ, ಯೋಜಿತ ತಯಾರಿ, ನಿರಂತರ ಕಲಿಕೆ, ಕಠಿಣ ಪರಿಶ್ರಮ, ಸಕಾರಾತ್ಮಕ ಚಿಂತನೆ ಮತ್ತು ಆ ಗುರಿಯ ಸಾಧಿಸುವ ಅಚಲ ವಿಶ್ವಾಸದೊಂದಿಗೆ ಮುನ್ನಡೆದರೆ ಖಂಡಿತ ಯಶಸ್ವಿ ಹೊಂದಬಹುದು ಎಂದರು. ಅಧ್ಯಕ್ಷತೆ ವಹಿಸಿದ್ದ ವಾಣಿಜ್ಯಶಾಸ್ತ್ರ ಮುಖ್ಯಸ್ಥ ಪ್ರೊ.ಎಂ.ಎಸ್.ಖೊದ್ನಾಪೂರ ಮಾತನಾಡಿ, ವಿದ್ಯಾರ್ಥಿಗಳು ಪಠ್ಯಕ್ರಮದ ಜತೆಗೆ ಸ್ಪಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್, ಪಿಎಸ್‌ಐ, ಎಫ್.ಡಿ.ಎ, ಎಸ್‌ಡಿಎ, ಸ್ಟಾಫ್ ಸಿಲೆಕ್ಷನ್ ಕಮಿಷನ್, ಬ್ಯಾಂಕಿಂಗ್ ಪರೀಕ್ಷೆಗಳ ಬಗ್ಗೆ ಉದ್ಯೋಗ ಮಾರ್ಗದರ್ಶನ ಮತ್ತು ತರಬೇತಿ ಪಡೆದು ತಯಾರಿ ಮಾಡಿಕೊಂಡು ಉದ್ಯೋಗಾವಕಾಶ ಗಿಟ್ಟಿಸಿಕೊಳ್ಳಬೇಕೆಂದರು. ಪ್ರಾಧ್ಯಾಪಕ ಡಾ.ಬಿ.ಎನ್.ಶಾಡದಳ್ಳಿ ಮಾತನಾಡಿದರು.

ಪ್ರಗತಿ ಪರಿಶೀಲನಾ ಸಭೆ | ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚನೆ

ಕುಡಿಯುವ ನೀರಿನ ಸಮಸ್ಯೆಯಾಗದಿರಲಿ

ವಿಜಯಪುರ: ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಸಮಸ್ಯೆ ಉಲ್ಬಣಿಸಿದರೆ ಆಯಾ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಯನ್ನು ತಕ್ಷಣ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಸೂಚನೆ ನೀಡಿದರು. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಏಪ್ರಿಲ್ ಒಂದರಿಂದ ಜಾರಿಗೆ ಬಂದಿದೆ. ಇದರಡಿ ನಾಲ್ಕು ರೀತಿಯ ವಿಂಗಡಣೆ ಮಾಡಿ ವಿಲೇವಾರಿ ಮಾಡಬೇಕಾಗುತ್ತದೆ. ಬಲ್ಕ್ ಜನರೇಟ್ ಲೋಕಲ್ ಬಾಡಿ ಗುರುತಿಸಿ ಅವುಗಳನ್ನು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ವಾರ್ಡ್‌ವಾರು ಒಳಗೊಳ್ಳುವಂತೆ ಜಿರೋ ವಾರ್ಡ್ ಕಸ ಮುಕ್ತಗೊಳಿಸುವ ಯೋಜನೆಯಾಗಿದೆ ಎಂದರು.

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಆರಂಭಗೊಂಡ ಕಸ ಕಂಡರೆ ಫೋಟೋ ಕಳಿಸಿ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದ್ದು, ಇನ್ನೂ ವ್ಯಾಪಕವಾಗಿ ಈ ಅಭಿಯಾನದ ಬಗ್ಗೆ ಜಾಗೃತಿ ಮೂಡಿಸಿ, ಸ್ವಚ್ಛ ನಗರವನ್ನಾಗಿಸಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

24 ಗಂಟೆಯೊಳಗೆ ಕಸ ಕ್ಲೀಯರ್ ಮಾಡಬೇಕು. ಕೆಲ ಕಡೆ ಆಗಿದೆ. ಕೆಲವು ಕಡೆ ಆಗುತ್ತಿಲ್ಲ, ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು. ಎಲ್ಲ



ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಮೇಲ್ವಿಚಾರಣೆ ಮಾಡಬೇಕು. ದೂರು ಬಂದ ತಕ್ಷಣ ನಿಮ್ಮ ಕೆಳಹಂತದ ಅಧಿಕಾರಿಗಳನ್ನು ನೇಮಿಸಿ, ಬ್ಲಾಕ್ ಸ್ಪಾಟ್ ಇದ್ದಲ್ಲಿ ಒಂದೆ ಕಡೆ ಕಸ ಹಾಕುವುದನ್ನು ನಿಗಾವಹಿಸಿ ಅಲ್ಲಿ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದರು. ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಂತೆ, ಜಾತ್ರೆಗಳಲ್ಲಿ ಸಂಗ್ರಹವಾಗುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಈಗ ವಿವಿಧ ತಜ್ಞರ ಸಮಿತಿ ರಚನೆಯಾಗಿದ್ದು, ಜಿಲ್ಲೆಯಲ್ಲಿ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಎಂಆರ್‌ಎಫ್ ಘಟಕ ಯೋಜನೆ ಈಗಿನಿಂದಲೇ ಮಾಡಿಕೊಳ್ಳಬೇಕು. ಅದಕ್ಕೆಂದೇ ಈಗಿನಿಂದ ಕ್ರಿಯಾ ಯೋಜನೆ ರೂಪಿಸಿಕೊಳ್ಳಬೇಕು ಎಂದರು. ಎಸ್‌ಟಿಪಿ ಜಾಗೆಗೆ ಸಂಬಂಧಿಸಿದ ಸಮಸ್ಯೆ ಬಗೆಹರಿಸಿಕೊಂಡು ಕಾರ್ಯ ಪ್ರವೃತ್ತರಾಗಲು ಸೂಚಿಸಿದರು.

ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ಅಮೃತ ಮಿತ್ರ ಹಾಗೂ ಅಮೃತ 2.0 ಉದ್ಯಾನವನ, ಜಲಮೂಲಗಳ ಪುನಶ್ಚೇತನ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಚಿಸಿದರು.

ಪಿಎಂ ಸ್ವನಿಧಿ ಯೋಜನೆಯಡಿ ಪ್ರಗತಿ ಸಾಧಿಸಬೇಕು. ಯಾವುದೇ ಪ್ರಸ್ತಾವನೆಗಳನ್ನು ಬಾಕಿ ಉಳಿಸಿಕೊಳ್ಳಬಾರದು. ಬ್ಯಾಂಕ್ ಕೂಡಾ ಅಂತಹ ಪ್ರಸ್ತಾವನೆ ಬಾಕಿ ಉಳಿಸಿಕೊಳ್ಳಬಾರದು ಜಿಲ್ಲಾಧಿಕಾರಿಗಳು ಹೇಳಿದರು. ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲ ಒದಗಿಸುವ ಈ ಯೋಜನೆಗೆ ಅರ್ಹರು ಪಡೆದುಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸಲು ಇದು ಮಹತ್ವದ ಯೋಜನೆಯಾಗಿದೆ. ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರಗತಿ ಸಾಧಿಸಬೇಕು. ಅರ್ಹರ ಅರ್ಜಿಗಳನ್ನು ವಿಳಂಬ ಮಾಡದೇ ಅರ್ಜಿ ತಿರಸ್ಕರಿಸದೇ ಅವರಿಗೆ ಅನುಕೂಲ ಮಾಡಿಕೊಡಬೇಕು. ಅರ್ಜಿ ಸಲ್ಲಿಸಿದವರಿಗೆ ವಿನಾಕಾರಣ ತೊಂದರೆಯಾಗದಂತೆ ಮಾನವೀಯ ದೃಷ್ಟಿಯಿಂದ ಕಾರ್ಯ ನಿರ್ವಹಿಸಿ ಎಂದ ಅವರು, ಜನರನ್ನು ಅಲೆದಾಡಿಸಬಾರದು. ಅವರು ವ್ಯಾಪಾರವನ್ನೇ ಅವಲಂಬಿಸಿರುತ್ತಾರೆ. ಅವರನ್ನು ಅಲೆದಾಡಿಸದೇ ಅನುಕೂಲ ಮಾಡಿಕೊಡಬೇಕು ಎಂದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಪ್ರತಿಭಟನೆ

ವಿಜಯಪುರ: ನೀಟ್ ಯುಜಿ 2026 ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಖಂಡಿಸಿ ಆಮ್ ಆದ್ಮಿ ಪಕ್ಷದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು. ನಂತರ ಪ್ರಧಾನಮಂತ್ರಿಗಳಿಗೆ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಮಾತನಾಡಿ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುವಂತಹ ಈ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಆಮ್ ಆದ್ಮಿ ಪಾರ್ಟಿ ತೀವ್ರವಾಗಿ ಖಂಡಿಸುತ್ತದೆ. ಇದು ಕೇವಲ ಒಂದು ಪರೀಕ್ಷೆಯ ಸೋರಿಕೆಯಲ್ಲ, ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ಮೇಲಿನ ದೊಡ್ಡ ದಾಳಿಯಾಗಿದೆ ಎಂದು ಆರೋಪಿಸಿದರು.


23 ಲಕ್ಷ ವಿದ್ಯಾರ್ಥಿಗಳು ಮೇ 3ರಂದು ಬರೆದಿದ್ದ ಪರೀಕ್ಷೆಯನ್ನು ರದ್ದು ಮಾಡಲಾಗಿದೆ. ಇವರೆಲ್ಲ ಮುಂದೆ ವೈದ್ಯರಾಗುವ ಅಪಾರ ಕನಸಿನೊಂದಿಗೆ ಹಗಲುರಾತ್ರಿ ಓದಿ ನೀಟ್ ಪರೀಕ್ಷೆ ಬರೆದಿದ್ದವರು. ಈ ಮಕ್ಕಳ ಜೊತೆಗೆ ಅವರ ಪೋಷಕರೂ ಕೂಡ ಸಮಯ, ಹಣ, ತನು-ಮನ, ನೆಮ್ಮದಿ ಎಲ್ಲವನ್ನೂ ತಮ್ಮ ಮಕ್ಕಳ ಈ ಪರೀಕ್ಷೆಗೆ ತೊಡಗಿಸಿದ್ದರು. ಆದರೆ, ಯಾವುದೇ ಅಕ್ರಮಗಳಿಲ್ಲದೆ ಒಂದು ಸರಳ ಪರೀಕ್ಷೆ ಮಾಡಲಾಗದಷ್ಟು ನಮ್ಮ ವ್ಯವಸ್ಥೆ ಅಪರಾಧಿಗಳ ಮೈದಾನವಾಗಿದೆ ಎಂದರು.

ಪ್ರವೇಶ ಪರೀಕ್ಷೆಗಳಲ್ಲಿ ಅಕ್ರಮ, ನೇಮಕಾತಿಗಳಲ್ಲಿ ಅಕ್ರಮ, ಕರ್ತವ್ಯದಲ್ಲಿ ಅಕ್ರಮ. ಏನೇ ಅಕ್ರಮ ಮಾಡಿದರೂ ದಕ್ಕಿಸಿಕೊಳ್ಳಬಹುದು ಎನ್ನುವ ಧೈರ್ಯ. ಅದಕ್ಕೆ ಸಾಕಷ್ಟು ಸಾಕ್ಷಿ ಪುರಾವೆಗಳೂ ಇವೆ.

ಇತ್ತೀಚೆಗಂತೂ ದೊಡ್ಡ ದೊಡ್ಡ ಅಕ್ರಮ ಮಾಡಿದವರು ಈಗಿನ ನವದೇಶಭಕ್ತರು ತಯಾರಿಸಿರುವ ಕೇಸರಿ ಬಣ್ಣದ ವಾಷಿಂಗ್ ಮೆಷಿನನಲ್ಲಿ ಹೋಗಿಬಂದರೆ ಅವರ ಎಲ್ಲಾ ಅಕ್ರಮ, ವಂಚನೆ, ಕಳ್ಳತನ, ಕೊಲೆ, ಕೊಳೆ, ಕಲೆ ಎಲ್ಲವೂ ಮಾಯ, ಶುಭ್ರ, ಸ್ವಚ್ಛ ಎಂದು ಕೇಂದ್ರ ಸರ್ಕಾರವನ್ನು ಕಾಲೆಳೆದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ತನಿಖೆಯನ್ನು ವೇಗಗೊಳಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಒದಗಿಸುವುದು, ಎನ್.ಟಿ.ಎ ಅಧಿಕಾರಿಗಳ ಜವಾಬ್ದಾರಿ ನಿರ್ಧರಿಸಿ ಕ್ರಮ ಕೈಗೊಳ್ಳಬೇಕು, ಪಾರದರ್ಶಕವಾದ ಪುನರ್ ಪರೀಕ್ಷೆಯನ್ನು ಶೀಘ್ರವಾಗಿ ನಡೆಸುವುದು, ವಿದ್ಯಾರ್ಥಿಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸದಂತೆ ಖಚಿತಪಡಿಸುವಂತೆ ಒತ್ತಾಯಿಸಿದರು.

ಸುಶೀಲಾ ಮಿಣಜಿಗಿ, ಜ್ಯೋತಿ ಮಿಣಜಿಗಿ, ಲಕ್ಷ್ಮಣ ಕಂಬಾಗಿ, ಕಿರಣ್ ಮೇಲಿನಕೇರಿ ಹಾಗೂ ಹಿರಿಯ ರೈತ ಮುಖಂಡರಾದ ಅರವಿಂದ್ ಕುಲಕರ್ಣಿ ಉಪಸ್ಥಿತರಿದ್ದರು.



ಡಿವೈಎಸ್‌ಪಿ ನಂದಗಾಂವಿಗೆ ಬೀಳ್ಕೊಡುಗೆ

ಬಸವನಬಾಗೇವಾಡಿ: ಬೀದರ ಜಿಲ್ಲೆಯ ಬಾಲ್ಕಿ ತಾಲೂಕಿಗೆ ವರ್ಗಾವಣೆಗೊಂಡ ಡಿವೈಎಸ್ಪಿ ಮುಖ್ಯಮಂತ್ರಿ ಪದಕ ಪುರಸ್ಕೃತ 2 ವರ್ಷ ಕಾರ್ಯನಿರ್ವಹಿಸಿದ್ದ ಅಧಿಕಾರಿ ಬಲ್ಲಪ್ಪ ನಂದಗಾಂವಿ ಅವರನ್ನು ಬಸವನಬಾಗೇವಾಡಿ, ಮುದ್ದೇಬಿಹಾಳ, ನಿಡಗುಂದಿ, ಕೊಲ್ಹಾರ, ಆಲಮಟ್ಟಿ, ಕೂಡಗಿ ಎನ್‌ಟಿಪಿಸಿ, ತಾಳಿಕೋಟೆ ಸೇರಿ ಬಸವನಬಾಗೇವಾಡಿ ವಿಭಾಗದ ಜನರು ಪಟ್ಟಣದ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ನಂದಗಾಂವಿ ದಂಪತಿಗಳಿಗೆ ಸನ್ಮಾನಿಸಿ ಬೀಳ್ಕೊಟ್ಟರು.

ಡಿವೈಎಸ್ಪಿ ಬಲ್ಲಪ್ಪ ನಂದಗಾಂವಿ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಇಲ್ಲಿ ಸರಕಾರಿ ಕೆಲಸ ಮಾಡುವವರಿಗೆ ಬಸವಣ್ಣನವರ, ಯಲಗೂರದಪ್ಪನ ಆಶೀರ್ವಾದ ಜನರ ಒಳ್ಳೆಯ ಸಹಕಾರವಿದೆ, ನಾವು ಒಳ್ಳೆಯ ಕೆಲಸ ಮಾಡಬೇಕು, ಅಧಿಕಾರ ಎನ್ನುವುದು ಯಾವಾಗಲು ತಲೆಯಲ್ಲಿ ಬರಬಾರದು, ನಾವು ಇಲ್ಲಿ ಜನರ ಸೇವೆ ಮಾಡಲು ಬಂದಿದ್ದೇವೆ ಎನ್ನುವುದು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಿದಲ್ಲಿ ಜನರ ಮೆಚ್ಚುಗೆಗೆ ಪಾತ್ರರಾಗುತ್ತೇವೆ ಎಂದು ಹೇಳಿದರು.

ರಾಜ್ಯ ಸಹಕಾರಿ ಮಹಾಮಂಡಳಿ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಎಂ.ಜಿ.ಆದಿಗೊಂಡ, ಸಂಗಮೇಶ ಓಲೇಕಾರ, ಸಂಗಯ್ಯ ಕಾಳಹಸ್ತೇಶ್ವರಮಠ, ಆದರ್ಶ ಶಿಕ್ಷಕರ ವೇದಿಕೆ ಜಿಲ್ಲಾಧ್ಯಕ್ಷ ಉಮೇಶ ಕೌಲಗಿ, ನೀಲು ನಾಯಕ, ಡಿಎಸ್‌ಎಸ್ ಮುಖಂಡರಾದ ಅಶೋಕ ಚಲವಾದಿ, ಪರಶುರಾಮ ದಿಂಡವಾರ, ಗುರುರಾಜ ಗುಡಿಮನಿ, ತಹಶೀಲ್ದಾರ್ ವೈ. ಎಸ್.ಸೋಮನಕಟ್ಟಿ, ಪಿಐಗಳಾದ ಗುರುಶಾಂತ ದಾಶ್ಯಾಳ, ಶರಣಗೌಡ ಗೌಡರ, ಪೊಲೀಸ್ ಸಿಬ್ಬಂದಿಗಳಾದ ಬಸವರಾಜ ಕಳ್ಳಿಗುಡ್ಡ, ಎಂ.ಎಚ್. ಹುಗ್ಗೆನವರ ಮಾತನಾಡಿದರು.

ಸಹದೇವ ಗುಡದಿನ್ನಿ ಕವನ ವಾಚನ ಮಾಡಿದರು.ಮುದ್ದೇಬಿಹಾಳ ಸಿಪಿಐ ಮಹ್ಮದ ಸೈಫುದ್ದಿನ್, ಭರತ ಅಗರವಾಲ, ಬಸವರಾಜ ಕೋಟಿ, ಎಸ್.ಪಿ.ಮಡಿಕೇಶ್ವರ, ಅರವಿಂದ ಸಾಲವಾಡಗಿ, ಸಂಜು ಕಲ್ಯಾಣಿ, ಮಹಾಂತೇಶ ಚಕ್ರವರ್ತಿ, ಸುನೀಲ ರಾಠೋಡ, ರಾಜು ಬಿರಾದಾರ, ಯಮನೂರಿ ಅಂಗಡಗೇರಿ, ವಕೀಲರಾದ ಆರ್.ವ್ಹಿ.ಗುತ್ತರಗಿಮಠ, ಎಸ್ .ಐ.ವಂದಾಲಮಠ ಸೇರಿದಂತೆ ಇತರರು ಇದ್ದರು.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಆರೋಪಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ವಿಜಯಪುರ: ನೀಟ್ ಯುಜಿ 2026 ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಎಬಿವಿಪಿ ಕಾರ್ಯಕರ್ತರು ಗುರುವಾರ ನಗರದ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಎಬಿವಿಪಿಯ ಕೇಂದ್ರೀಯ ಕಾರ್ಯ ಸಮಿತಿ ಸದಸ್ಯ ಸಚಿನ್ ಕುಳಗೇರಿ ಮಾತನಾಡಿ, ನೀಟ್ ಪರೀಕ್ಷೆಯನ್ನು ಬರೆದು ವೈದ್ಯರಾಗಬೇಕು ಎಂಬ ಕನಸನ್ನ ಇಟ್ಟುಕೊಂಡು 22 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದಾರೆ. ಎನ್‌ಟಿಎ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ನಿರ್ಲಕ್ಷದಿಂದ ಇಂದು ವಿದ್ಯಾರ್ಥಿಗಳ ಜೀವನ ಜೊತೆ ಚೆಲ್ಲಾಟವಾಡಿದಂತಾಗಿದೆ. ಪ್ರವೇಶ ಪರೀಕ್ಷೆಗಳ ಪಾವಿತ್ರ್ಯತೆ ಮತ್ತು ವಿಶ್ವಾಸಾರ್ಹತೆ ಕಳೆದುಕೊಳ್ಳುವ ರೀತಿಯಲ್ಲಿ ಪರೀಕ್ಷಾ ಸಂಸ್ಥೆಯು ನಡೆದುಕೊಳ್ಳುತ್ತಿರುವುದು ಖಂಡನೀಯವಾಗಿದೆ. ಕೇಂದ್ರ ಸರ್ಕಾರ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರ ವಿರುದ್ಧ ಹಾಗೂ ಎನ್‌ಟಿಎ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಎಬಿವಿಪಿಯ ರಾಜ್ಯ ಸಹ ಕಾರ್ಯದರ್ಶಿ ಸುಜ್ಞಾತಾ ಕುಲಕರ್ಣಿ ಮಾತನಾಡಿ, ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ತಾಂತ್ರಿಕ ಭದ್ರತೆ ಪ್ರಶ್ನೆ ಪತ್ರಿಕೆಯ ಗೌಪ್ಯತೆ ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಣೆ ಇಂತಹವುಗಳನ್ನ ಬಹಳ ಜಾಗೃತೆಯಿಂದ ಮಾಡಬೇಕಾದ ಜವಾಬ್ದಾರಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಮೇಲೆ ಇರುತ್ತದೆ. ಆದರೆ ಪರೀಕ್ಷಾ ಸಂಸ್ಥೆಯ ತನಿಖೆಗೆ ಸಹಕಾರ ನೀಡಿ ಆರೋಪಿಗಳಿಗೆ ಕಠಿಣ ನೀಡಬೇಕೆಂದು ಒತ್ತಾಯಿತಿಸಿದರು.

ಎಬಿವಿಪಿಯ ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ, ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ, ಬಾಲಾಜಿ ಬಿರಾದಾರ, ಬಸನಗೌಡ ಕೊನರಡ್ಡಿ, ಶಶಿ ಮಾಲಿಪಾಟೀಲ, ನಾಗರಾಜ ದೇಸಾಯಿ, ಅಕ್ಷಯಕುಮಾರ, ನೀಲಮ್ಮ ತಳವಾರ ಇದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಸಂಸದ ಜಿಗಜಿಣಗಿ ಕಚೇರಿಗೆ ಮುತ್ತಿಗೆ

ವಿಜಯಪುರ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕರ್ತರು ಸಂಸದ ರಮೇಶ ಜಿಗಜಿಣಗಿ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಮೋಯಿನ್‌ಅಹ್ಮದ ಶೇಖ ಮಾತನಾಡಿ, ನೀಟ್ ಪರೀಕ್ಷೆಯಲ್ಲಿ ಅಕ್ರಮಗಳ ಹಾವಳಿ ಇಂದು ನಿನ್ನೆಯದಲ್ಲ, 2017, 2021, 2024 ಹಾಗೂ ಪ್ರಸ್ತುತ 2026 ವರ್ಷದ ನೀಟ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿರುವುದು ಕೇಂದ್ರ ಸರ್ಕಾರದ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಹಲವು ವರ್ಷಗಳಿಂದ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ನಡೆಯುತ್ತಿದ್ದರೂ ಕೇಂದ್ರ ಸರ್ಕಾರ ಯಾವುದೇ ಸಮರ್ಪಕ ತನಿಖೆ ನಡೆಸದೆ ಮೌನವಾಗಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಆರೋಪಿಸಿದರು. ಪ್ರಕರಣವನ್ನು ತಕ್ಷಣ ಸಿಬಿಐಗೆ ವಹಿಸಿ ಕುಲಂಕುಷ ತನಿಖೆ ನಡೆಸಬೇಕು ಎಂದರು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ದೇಶದ ವಿದ್ಯಾರ್ಥಿಗಳ ಭವಿಷ್ಯ ಮತ್ತು



ರಾಷ್ಟ್ರದ ಅಭಿವೃದ್ಧಿಗೆ ಧಕ್ಕೆಯುಂಟು ಮಾಡುವ ಇಂತಹ ಘಟನೆಗಳಿಗೆ ಕೇಂದ್ರ ಸರ್ಕಾರ ದೇಶದ ವಿದ್ಯಾರ್ಥಿಗಳಲ್ಲಿ ಕ್ಷಮೆಯಾಚಿಸಬೇಕು ಹಾಗೂ ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಉಪಾಧ್ಯಕ್ಷ ಮುದಸ್ಸರ ವಾಲಿಕಾರ, ಪ್ರಧಾನ ಕಾರ್ಯದರ್ಶಿ ಸಂತೋಷ ಪೂಜಾರಿ, ಮಸ್ತಾನ ಸಾವಳಗಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಸಂತ ಹನುಮೋಡೆ, ಅವಿನಾಶ ಹೇರಲಗಿ, ಅವಿನಾಶ್ ಬಗಲಿ, ಸತೀಶ ಹತ್ತಿ, ರಿಹಾನ್ ಭಗವಾನ ಇದ್ದರು.

ವಲಸೆ ತಪ್ಪಿಸಲು ಕೂಲಿಕಾರರಿಗೆ ರೋಜಗಾರ ಯೋಜನೆ ಮುಖ್ಯ

ವಿಜಯಪುರ: ತಿಕೋಟಾ ತಾಲೂಕಿನ ಬಿಜ್ಜರಗಿಯಲ್ಲಿ ರೋಜಗಾರ್ ದಿವಸವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿವಿಧ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಸಂಘಟಿಸಲಾಗಿತ್ತು.

ಪಿಡಿಒ ರಾವಸಾಬ ಬಿರಾದಾರ ಮಾತನಾಡಿ, ಬೇಸಿಗೆ ಅವಧಿಯಲ್ಲಿ ನರೇಗಾ ಕೂಲಿಕಾರರಿಗೆ ವಲಸೆ ತಪ್ಪಿಸಿ ನಿರಂತರವಾಗಿ ಅವರ ಗ್ರಾಮದಲ್ಲಿಯೇ ಉದ್ಯೋಗ ಒದಗಿಸುವುದು ಆ ಮೂಲಕ ಗ್ರಾಮೀಣ ಆಸ್ತಿಗಳ ರಚನೆ ಮಾಡುವುದು, ಜಲ ಸಂರಕ್ಷಣೆ ಮಾಡಿ ಅಂತರ್ಜಲ ಮಟ್ಟ ವೃದ್ಧಿಸುವುದು, ಅರಣ್ಯೀಕರಣ ಕಾಮಗಾರಿಗಳು, ಶಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ನಿರ್ಮಾಣ ಮಾಡುವ ಉದ್ದೇಶದಿಂದ ಈ ರೋಜಗಾರ ದಿವಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ನರೇಗಾ ಕೂಲಿಕಾರರಿಗೆ ತೊಂದರೆಯಾಗದಂತೆ ಕೂಲಿಯಾಧಾರಿತ ಸಮುದಾಯ ಕಾಮಗಾರಿಗಳಲ್ಲಿ ಹೆಚ್ಚಿನ ಕೆಲಸ ನೀಡಲಾಗುತ್ತದೆ. ಅದರ ಜೊತೆ-ಜೊತೆಗೆ ವೈಯಕ್ತಿಕ ಕಾಮಗಾರಿಗಳಾದ ಕೃಷಿಹೊಂಡ, ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ, ಮಾವು, ಚಿಕ್ಕು, ನಿಂಬೆ, ನುಗ್ಗೆ ಇತರೆ ಬೆಳೆಗಳನ್ನು ಬೆಳೆಯಲು ನರೇಗಾದಡಿ ಕೂಲಿ



ಮೊತ್ತ ನೀಡುತ್ತಿದೆ. ಇಲ್ಲಿಯೂ ಕೆಲಸ ಮಾಡಿ ಕೂಲಿ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ. ವಿಶೇಷಚೇತನರಿಗೆ ಶೇ.50 ವರೆಗೂ ಕೆಲಸದಲ್ಲಿ ರಿಯಾಯಿತಿ ನೀಡಲಾಗುತ್ತಿದೆ ಎಂದರು.

ಈ ಬಗ್ಗೆ ಕೂಲಿಕಾರರಿಗೆ ಹೆಚ್ಚಿನ ಅರಿವು ಮೂಡಿಸಿ ಯೋಜನೆಯತ್ತ ಕರೆ ತಂದು, ಎಲ್ಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹೆಚ್ಚಿನ ಕೂಲಿಕಾರರನ್ನು ಸಂಘಟಿಸುವ ಕಾರ್ಯ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಹೀಗಾಗಿ ಮನರೇಗಾ ಯೋಜನೆಯಡಿ ಎಲ್ಲ ನೊಂದಾಯಿತ ಕೂಲಿಕಾರರು ಕೆಲಸ ನಿರ್ವಹಿಸಲು ಮುಂದೆ ಬರಬೇಕು ಆ ಮೂಲಕ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ತಾಲೂಕು ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕ ಕಲ್ಲಪ್ಪ ನಂದರಗಿ ಮಾತನಾಡಿ, ಬೇಸಿಗೆ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ಜನರು ತಮ್ಮ ಊರಲ್ಲಿ ಕೆಲಸ ಸಿಗದ ಕಾರಣದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಸಾಮಾನ್ಯ. ಇದನ್ನು ಗಂಭೀರವಾಗಿ ಪರಿಗಣಿಸಿದ ನಮ್ಮ ತಾಲೂಕು ಪಂಚಾಯತಿ ತಂಡ ನರೇಗಾ ಯೋಜನೆಯ ಕುರಿತು, ಯೋಜನೆಯಡಿ ಸಿಗುವ ಸೌಲಭ್ಯಗಳ ಕುರಿತು ಹೆಚ್ಚು ಪ್ರಚಾರ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ಕೂಲಿಕಾರರಿಗೆ ನರೇಗಾದಿಂದಾಗುವ ಅನುಕೂಲಗಳ ಕುರಿತು ಸುವಿವರವಾದ ಮಾಹಿತಿ ನೀಡಿದರು.

ಬಿ.ಎಫ್.ಟಿ ಸಿದ್ರಾಯ ದಾಶ್ಯಾಳ, ಸಮಾಜ ಕಾರ್ಯ ಪ್ರಶಿಕ್ಷಣಾರ್ಥಿ ರಾಜಶ್ರೀ ಎ, ಸಂತೂರಿ, ಎಚ್, ಸ್ವಾತಿ ತಂಬಾಕು, ಅಂಜನಾ ಹಿಪ್ಪರಗಿ, ಕಾಯಕ ಬಂಧು ವಿನಾಯಕ ಕುಂಬಾರ ಸೇರಿದಂತೆ ಗ್ರಾಪಂ ಸಿಬ್ಬಂದಿ. ಕೂಲಿಕಾರರು ಹಾಜರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

ವಿಜಯಪುರ: ಮಳೆಗಾಲದ ಆರಂಭವಾಗುವ ಮುನ್ನವೇ ಮುಂಜಾಗ್ರತಾ ಕ್ರಮವಾಗಿ ವಿಜಯಪುರ ಜಿಲ್ಲೆಯ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆ ದುರಸ್ತಿಗೊಳಿಸುವುದು ಸೇರಿದಂತೆ ವಿವಿಧ ಸಾರ್ವಜನಿಕರ ಪರವಾದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು.

ಕರವೇ ಸ್ವಾಭಿಮಾನ ಬಣದ ಜಿಲ್ಲಾಧ್ಯಕ್ಷ ಲಿಂಗರಾಜ ಬಿದರಿಕುಂದಿ ಮಾತನಾಡಿ, ವಿಜಯಪುರ ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ಇರುವ ಗುಂಡಿಗಳನ್ನು ತಕ್ಷಣ ಮುಚ್ಚುವ ಕ್ರಮ ಕೈಗೊಳ್ಳಬೇಕು. ಅತಂತ್ರ ಹಾಗೂ ಹಾಳಾಗಿರುವ ಒಳಚರಂಡಿ ಮತ್ತು ಡ್ರೈನೇಜ್ ವ್ಯವಸ್ಥೆಯನ್ನು ಪರಿಶೀಲಿಸಿ ತುರ್ತಾಗಿ ದುರಸ್ತಿ ಮಾಡಬೇಕು. ಮಳೆ ನೀರು ಸರಾಗವಾಗಿ ಹರಿಯುವಂತೆ ಚರಂಡಿಗಳ ಸ್ವಚ್ಛತೆ ಮತ್ತು ನಿರ್ವಹಣೆಯನ್ನು ನಿಯಮಿತವಾಗಿ ಕೈಗೊಳ್ಳಬೇಕು. ಸಾರ್ವಜನಿಕರಿಗೆ ದುರ್ವಾಸನೆ, ನೀರು ನಿಲ್ಲುವಿಕೆ ಹಾಗೂ ಸಂಚಾರ ತೊಂದರೆ ಆಗದಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಬೇಕು. ಮಳೆಗಾಲದಲ್ಲಿ ಜನರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಮುಂಚಿತವಾಗಿಯೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ವಾರ್ಡ ನಂ.02 ಮತ್ತು 12, 16 ಹಾಗೂ 17, 19, ಮತ್ತು 34, ಇನ್ನು ಹಲವಾರು ವಾರ್ಡಗಳಲ್ಲಿ ರಸ್ತೆ ಮತ್ತು ಡ್ರೈನೇಜ್ ಕಾಮಗಾರಿ ಪೂರ್ಣಗೊಳಿಸಬೇಕು. ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಬಾಸಾಹೇಬ ಹತ್ತರಕಿಹಾಳ, ಹಲವಾರು



ಕಡೆಗಳಲ್ಲಿ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲದ ಮಳೆ ನೀರು ಸರಿಯಾಗಿ ಹರಿಯದೆ ರಸ್ತೆ ಮೇಲೆಯೇ ನಿಂತು ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತಿದೆ. ಕೆಲವು ಪ್ರದೇಶಗಳಲ್ಲಿ ಡ್ರೈನೇಜ್ ಪೈಪ್ ಗಳು ಹಾಗೂ ಚರಂಡಿಗಳು ಹಾನಿಗೊಳಗಾಗಿರುವುದರಿಂದ ಮಳೆಗಾಲದಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಯೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಈ ವ್ಯವಸ್ಥೆಗೆ ಪುನರುಜ್ಜೀವನ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಉಪಾಧ್ಯಕ್ಷ ಪ್ರಭು ಮಂಕಣಿ, ಜಿಲ್ಲಾ ಶಿಸ್ತು ಸಮಿತಿ ಅಧ್ಯಕ್ಷ ಸೋಮಶೇಖರ ಮಾ. ಪಾಟೀಲ, ಜಿಲ್ಲಾ ಸಮಿತಿ ಸದಸ್ಯ ಹುಸೇನಸಾಬ ಮುಲ್ಲಾ, ಜಿಲ್ಲಾ ಸಮಿತಿ ಸದಸ್ಯರಾದ ರಾಜು ಪಟ್ಟಣಶೆಟ್ಟಿ, ವಿರೇಶ ಮಾಲನೂರ, ವಿನೋದ ಸಾಳುಂಕೆ, ಗೋಪಾಲ ಸಿಂಪಿ, ಭಾಗ್ಯಶ್ರೀ ಗಡದಿನ್ನಿ, ಪ್ರಕಾಶ ಸಬರದ, ಜಯಶ್ರೀ ಸೌಧಾಗರ, ವಿನೋದ ಖೇಡ ಇದ್ದರು.



ರಾಯಚೂರು: ನಗರದ ಐತಿಹಾಸಿಕ ಮಾವಿನಕೆರೆ ಪ್ರದೇಶಕ್ಕೆ ಜಿಲ್ಲಾಧಿಕಾರಿ ಎಸ್.ಪೂವಿತಾ ಭೇಟಿ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿದರು.

ಅಂಬೇಡ್ಕರ್ ಜಯಂತಿಗೆ ಸಕಲ ಸಿದ್ಧತೆ

ಕಲಬುರಗಿ: ಜಿಲ್ಲೆಯ ಜೇವರ್ಗಿ ಪಟ್ಟಣದಲ್ಲಿ ಮೇ 17ರಂದು ನಡೆಯಲಿರುವ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಅತ್ಯಂತ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಶಾಸಕ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ತಿಳಿಸಿದರು.

ಜಯಂತ್ಯುತ್ಸವದ ಅಂಗವಾಗಿ ಪಟ್ಟಣದ ವಿವಿಧೆಡೆ ನಡೆಯುತ್ತಿರುವ ಪೂರ್ವ ಸಿದ್ಧತೆ ಖುದ್ದಾಗಿ ವೀಕ್ಷಿಸಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಕೇವಲ ಆಚರಣೆಯಾಗಿ ಮಾಡದೆ, ಸಮಾಜದಲ್ಲಿ ಸಾಮರಸ್ಯ ಮತ್ತು ಜಾಗೃತಿ ಮೂಡಿಸುವ ಹಬ್ಬವಾಗಿ ಆಚರಿಸಲಾಗುತ್ತದೆ ಎಂದರು.

ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ಒದಗಿಸಲು ಹಾಗೂ ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುವಂತೆ ಅಧಿಕಾರಿಗಳು ಹಾಗೂ ಪದಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಈ ವೇಳೆ ಜಯಂತ್ಯುತ್ಸವ ಸಮಿತಿ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾರ್ಯಕ್ರಮ ಯಶಸ್ವಿಗೆ ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು, ಜಯಂತ್ಯುತ್ಸವ ಸಮಿತಿ ಸದಸ್ಯರು, ದಲಿತ ಸಂಘಟನೆಗಳ ಪ್ರಮುಖರು ಹಾಗೂ ಸಮಾಜದ ಹಿರಿಯರು ಉಪಸ್ಥಿತರಿದ್ದರು.



ಕಲಬುರಗಿ: ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಅಂಗವಾಗಿ ಪಟ್ಟಣದ ವಿವಿಧೆಡೆ ನಡೆಯುತ್ತಿರುವ ಪೂರ್ವ ಸಿದ್ಧತೆಯನ್ನು ಶಾಸಕ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ವೀಕ್ಷಿಸಿದರು.ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು, ಜಯಂತ್ಯುತ್ಸವ ಸಮಿತಿ ಸದಸ್ಯರು, ದಲಿತ ಸಂಘಟನೆಗಳ ಪ್ರಮುಖರು ಹಾಗೂ ಸಮಾಜದ ಹಿರಿಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಮಾವಿನಕೆರೆಗೆ ಡಿಸಿ ಎಸ್. ಪೂವಿತಾ ಭೇಟಿ

ರಾಯಚೂರು: ನಗರದ ಐತಿಹಾಸಿಕ ಮಾವಿನಕೆರೆ ಪ್ರದೇಶಕ್ಕೆ ಜಿಲ್ಲಾಧಿಕಾರಿ ಎಸ್.ಪೂವಿತಾ ಭೇಟಿ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿದರು. ಕಾಮಗಾರಿ ವೀಕ್ಷಣೆ ನಂತರ ಮಾತನಾಡಿ, ಕೆರೆ ಅಭಿವೃದ್ಧಿ ಕಾಮಗಾರಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು. ಕಾಮಗಾರಿಗೆ ಯಾವುದೇ ಅಡೆತಡೆ ಬಂದರೆ ಕೂಡಲೇ ಜಿಲ್ಲಾಡಳಿತವನ್ನು ಸಂಪರ್ಕ ಮಾಡಬೇಕು. ಕಾಮಗಾರಿ ಗುಣಮಟ್ಟದಿಂದ ಮಾಡಬೇಕೆಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.ಅಧಿಕಾರಿಗಳಿಂದ ಕೆರೆಯ ವಿಸ್ತರಣೆ ಕುರಿತಂತೆ ಮಾಹಿತಿ ಪಡೆದರು. ಮಾವಿನಕೆರೆಗೆ ಬೇರೆ ಬೇರೆ ಕಡೆಗಳಿಂದ ಚರಂಡಿ ನೀರು ಹರಿದು ಬರದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರು ಕೆರೆಗೆ ಕಸ ಮತ್ತು ಪ್ಲಾಸ್ಟಿಕ್ ಎಸೆಯದಂತೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.ಈ ವೇಳೆ ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ಕೆರೆ ಅಭಿವೃದ್ಧಿ ಮತ್ತು ಸಂರಕ್ಷಣಾಧಿಕಾರಿ ಆನಂದ ರೆಡ್ಡಿ, ಕೆರೆ ಇಂಜಿನಿಯರ್ ಬಸವರಾಜ ಸೇರಿದಂತೆ ಇತರರಿದ್ದರು.

ಪ್ರತಿಭಾ ಪುರಸ್ಕಾರ ಇಂದು

ಕುಷ್ಟಗಿ: ಇಲ್ಲಿನ ಬಸವೇಶ್ವರ ವೃತ್ತದಲ್ಲಿರುವ ಬಸವ ಭವನದಲ್ಲಿ ಮೇ 15ರಂದು ಬೆಳಗ್ಗೆ 10 ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ



ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಉದ್ಘಾಟಿಸುವರು. ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರು ಹಾಗೂ ತುಂಗಭದ್ರ ಕಾಡಾ ಅಧ್ಯಕ್ಷ ಹಸನಸಾಬ ದೋಟಿಹಾಳ, ಮಾಜಿ ಶಾಸಕ ಕೆ.ಶರಣಪ್ಪ ವಕೀಲರು ನಾಡದೇವಿ ಶ್ರೀಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ.ಕಸಾಪ ತಾಲೂಕಾಧ್ಯಕ್ಷ ಲೆಂಕಪ್ಪ ವಾಲಿಕಾರ ಅಧ್ಯಕ್ಷತೆ ವಹಿಸುವರು. ಕಸಾಪ ಪದಾಧಿಕಾರಿಗಳು, ಸಾಹಿತಿಗಳು ಸೇರಿದಂತೆ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ನಡೆಯಲಿದೆ ಎಂದು ಕಸಾಪ ಗೌರವ ಕಾರ್ಯದರ್ಶಿ ಶರಣಪ್ಪ ಲೈನದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾನೂನು ಬಾಹಿರ ಚಟುವಟಿಕೆ: ಐವರು ಗಡಿಪಾರು

ರಾಯಚೂರು: ಓಸಿ, ಮಟ್ಕಾ, ಶೇಂದಿ ಮಾರಾಟ ಸೇರಿದಂತೆ ವಿವಿಧ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದ ಐದು ಜನರನ್ನು ಗಡಿಪಾರು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷಯ ಗಿರಿ ತಿಳಿಸಿದ್ದಾರೆ.



ರಾಯಚೂರು ಮತ್ತು ಲಿಂಗಸುಗೂರು ಸಹಾಯಕ ಆಯುಕ್ತರು ಕೋರ್ಟ್‌ನಲ್ಲಿ ವಿಚಾರಣೆ ಐವರನ್ನು ಗಡಿಪಾರು ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹೊಳಚೂರು ಪೊಲೀಸ್ ಠಾಣ ವ್ಯಾಪ್ತಿಯಲ್ಲಿನ ಮಸ್ಕಿ ತಾಲೂಕಿನ ನಂಜಲದಿನ್ನಿ ಗ್ರಾಮದ ಅಮರೇಗೌಡ ಓಸಿ, ಮಟ್ಕಾ, ಅಬಕಾರಿ ಇಲಾಖೆಗೆ ಸಂಬಂಧಿಸಿದ ಪ್ರಕರಣ ಸೇರಿದಂತೆ ಒಟ್ಟು 14 ಪ್ರಕರಣಗಳಿಂದಾಗಿ ಜಿಲ್ಲೆಯಿಂದ ವಿಜಯಪುರ ಜಿಲ್ಲೆ ನಿಡಗುಂದಿಗೆ ಗಡಿಪಾರು ಮಾಡಲಾಗಿದೆ.

ತುರುವಿಹಾಳ್ ಪೊಲೀಸ್ ಠಾಣೆ ಜಂಭುನಾತನ ಹಳ್ಳಿ ಹನುಮಂತ ಕನಸಾವಿಯ ಮೇಲೆ ಓಸಿ, ಮಟ್ಕಾ, ಅಬಕಾರಿ ಇಲಾಖೆಗೆ ಸಂಬಂಧಿಸಿದ ಒಟ್ಟು 24 ಪ್ರಕರಣಗಳಿವೆ. ಇವನನ್ನು ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಪೊಲೀಸ್ ಠಾಣೆ ವ್ಯಾಪ್ತಿ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.ತುರ್ವಿಹಾಳನ ಗ್ರಾಮದ ಘನಮಠದಯ್ಯ ಸ್ವಾಮಿ ಕಣ್ಣೂರು ಮೇಲೆ 18 ಓಸಿ. ಮಟ್ಕಾ ಸೇರಿದಂತೆ ಒಟ್ಟು 26 ಪ್ರಕರಣಗಳು ದಾಖಲಾಗಿದ್ದು, ಬಾಗಲಕೋಟೆ ಜಿಲ್ಲೆ ಬೀಳಗಿ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ರಾಯಚೂರ ನಗರದ ಕಾಕನಕೇರಿಯ ವಾಹಿದ್ ಅಲಿಯಾಸ್ ಚುಮಟಿಯ ಮೇಲೆ 8 ಅಬಕಾರಿ ಪ್ರಕರಣಗಳಿರುವುದರಿಂದ ಬೀದರ್ ಜಿಲ್ಲೆಯ ಔರಾದ್ ಚಿಂತಕಿ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ರಾಯಚೂರಿನ ಮಂಗಳವಾರ ಪೇಟೆಯ ಹುಸೇನಿಷ್ ರವಿ ಮೇಲೆ ಸಿ.ಎಸ್ ಪೌಡರ ಮಿಶ್ರಿತ ಶೇಂದಿ ಮಾರಾಟ ಮಾಡುತ್ತಿದ್ದರೆಂದು 9 ಪ್ರಕರಣಗಳಿದ್ದು, ಔರದ್ ತಾಲೂಕಿನ ಚಿಂತಕಿಗೆ ಗಡಿಪಾರು ಮಾಡಲಾಗಿದೆ. ಓಸಿ, ಮಟ್ಕಾ, ಗಾಂಜಾ ಸೇರಿದಂತೆ ಇತರೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಎಚ್ಚರಿಸಿದ್ದಾರೆ.

ಬಿಬಿಸಿ–ನಬಾರ್ಡ್ ಎಫ್‌ಪಿಒ, ಸ್ಟಾರ್ಟ್ ಆ್ಯಪ್ ಸಮಾವೇಶ

1,200ಕ್ಕೂ ಹೆಚ್ಚು ರೈತರು ಭಾಗಿ

ಕಲಬುರಗಿ: ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತ್ಯಾಧುನಿಕ ಜೈವಿಕ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವಾದ ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ ಮತ್ತು ನಬಾರ್ಡ್ ಸಹಯೋಗದೊಂದಿಗೆ ರೈತರು-ಎಫ್‌ಪಿಒಗಳು-ಸ್ಟಾರ್ಟ್ ಆ್ಯಪ್ ಎಂಎಸ್‌ಎಂಇಗಳ ಸಮಾವೇಶ ಮತ್ತು ಇಮರ್ಶನ್ ಕಾರ್ಯಕ್ರಮ 2026 ಕಲ್ಯಾಣ ಕರ್ನಾಟಕ ಪ್ರದೇಶ ಉಪಕ್ರಮದಡಿ ಕಲಬುರಗಿಯ ಜಸ್ಟ್ ಕ್ಲಬ್‌ನಲ್ಲಿ ಯಶಸ್ವಿಯಾಗಿ ನಡೆಯಿತು.

ಈ ಸಮಾವೇಶದಲ್ಲಿ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಿಂದ 1,200ಕ್ಕೂ ಹೆಚ್ಚು ರೈತರು, 35 ಸ್ಟಾರ್ಟ್ ಆ್ಯಪ್‌ಗಳು, 25 ಎಫ್‌ಪಿಒಗಳು, 10 ಎಂಎಸ್‌ಎಂಇ ಪ್ರತಿನಿಧಿಗಳು, 100ಕ್ಕೂ ಹೆಚ್ಚು ಕೃಷಿ ವಿದ್ಯಾರ್ಥಿಗಳು, ಹಲವಾರು ಕೈಗಾರಿಕಾ ಮತ್ತು ಪ್ರತಿನಿಧಿಗಳು ಭಾಗವಹಿಸಿದರು. ರೈತರು, ಎಫ್‌ಪಿಒಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಮಾರುಕಟ್ಟೆ ವಲಯದ ನಡುವೆ ನೇರ ಸಂಪರ್ಕ ನಿರ್ಮಿಸಿ ಫಾರ್ಮ್ ಟು ಫೋರ್ಕ್ ವ್ಯವಸ್ಥೆ ಬಲಪಡಿಸುವುದು ಈ ಉಪಕ್ರಮದ ಮುಖ್ಯ ಉದ್ದೇಶವಾಗಿತ್ತು.

ಕಲ್ಯಾಣಕರ್ನಾಟಕದಏಳು ಜಿಲ್ಲೆಗಳರೈತರುಮತ್ತು ಎಫ್‌ಪಿಒಗಳು ಈ ಸಮಾವೇಶದಲ್ಲಿ ಭಾಗವಹಿಸಿ, ಪ್ರದೇಶದ ಸ್ಟಾರ್ಟ್ ಆ್ಯಪ್‌ಗಳು ಅಭಿವೃದ್ಧಿ ಪಡಿಸಿರುವ ನವೀನ ತಂತ್ರಜ್ಞಾನ ಅರಿತುಕೊಂಡರು. ಜೊತೆಗೆ ಬಿಗ್ಹಾಟ್, ಬಿಗ್‌ಬ್ಯಾಸ್ಕೆಟ್, ಬ್ಲಿಂಕಿಟ್, ಸ್ವಿಗ್ಗಿ, ಇನ್ಸ್ಟಾಮಾರ್ಟ್, ಅಮೆಜಾನ್ ಫ್ರೆಷ್, ಐಟಿಸಿ ಹಾಗೂ ಓರ್ಕ್ಲಾ ಇಂಡಿಯಾ ಸೇರಿದಂತೆ ಪ್ರಮುಖ ಕೈಗಾರಿಕಾ ಸಂಸ್ಥೆಗಳೊಂದಿಗೆ ನೇರ ಸಂವಾದ ನಡೆಸಿ, ಮಾರುಕಟ್ಟೆ ಬೇಡಿಕೆಗಳು, ಕ್ವಿಕ್ ಕಾಮರ್ಸ್ ವೇದಿಕೆಗಳು ಮತ್ತು ತಮ್ಮ ಉತ್ಪನ್ನಗಳಿಗೆ ಉತ್ತಮ ಮೌಲ್ಯ ದೊರಕಿಸಿಕೊಳ್ಳುವ ಅವಕಾಶಗಳ ಕುರಿತು ತಿಳಿದುಕೊಂಡರು.



- ರೈತರು-ಎಫ್‌ಪಿಒಗಳು- ಸ್ಟಾರ್ಟ್ ಆ್ಯಪ್ ಎಂಎಸ್‌ಎಂಇಗಳ ಸಮಾವೇಶ ಮತ್ತು ಇಮರ್ಶನ್ ಕಾರ್ಯಕ್ರಮ 2026 ಕಲ್ಯಾಣ ಕರ್ನಾಟಕ ಪ್ರದೇಶ ಉಪಕ್ರಮದಡಿ ಕಲಬುರಗಿಯ ಜಸ್ಟ್ ಕ್ಲಬ್‌ನಲ್ಲಿ ಯಶಸ್ವಿಯಾಗಿ ನಡೆಯಿತು.
- ರೈತರು, ಎಫ್‌ಪಿಒಗಳು, ಸ್ಟಾಟ್‌ಅಪ್‌ಗಳು ಮತ್ತು ಮಾರುಕಟ್ಟೆ ವಲಯದ ನಡುವೆ ನೇರ ಸಂಪರ್ಕ ನಿರ್ಮಿಸಿ ಫಾರ್ಮ್ ಟು ಫೋರ್ಕ್ ವ್ಯವಸ್ಥೆ ಬಲಪಡಿಸುವುದು ಈ ಉಪಕ್ರಮದ ಮುಖ್ಯ ಉದ್ದೇಶವಾಗಿತ್ತು.

ಈ ಸಮಾವೇಶದ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ನವೀನತೆಗಳು ಬೆಂಗಳೂರಿಗೆ ಮಾತ್ರ ಸೀಮಿತವಾಗದೆ, ಕಲ್ಯಾಣ ಕರ್ನಾಟಕದಂತಹ ಪ್ರದೇಶಗಳಿಗೂ ತಲುಪಿ ಗಮನಾರ್ಹವಾದ ಪರಿಣಾಮ ಉಂಟುಮಾಡಬೇಕು ಎಂಬುದೇ ಈ ಉಪಕ್ರಮದ ಉದ್ದೇಶ ಎಂದರು.

ಬಿಬಿಸಿ ಸಂಸ್ಥೆ ಈ ಭಾಗದ ರೈತರು ಮತ್ತು ಎಫ್‌ಪಿಒಗಳೊಂದಿಗೆ ಸಮನ್ವಯವಾಗಿ ಕೆಲಸ ಮಾಡಿ, ಕೃಷಿ ವೆಚ್ಚ ಕಡಿಮೆ ಮಾಡಲು, ಉತ್ಪಾದಕತೆ ಹೆಚ್ಚಿಸಲು ಮತ್ತು ಉತ್ತಮ ಮಾರುಕಟ್ಟೆ ಪ್ರವೇಶ ಕಲ್ಪಿಸಲು ಪ್ರಯತ್ನಿಸುತ್ತಿದೆ. ವಿಶೇಷವಾಗಿ ಕಮಲಾಪುರ ಕೆಂಪು ಬಾಳೆ ಹಾಗೂ ನಂಜನಗೂಡು ರಸಬಾಳೆ ಬೆಳೆಗಳಿಗೆ ಜೈವಿಕ ಗೊಬ್ಬರ ಪರಿಹಾರ, ಟಿಷ್ಯೂ ಕಲ್ಚರ್ ಸಹಾಯ ಮೂಲಕ ರೈತರು ಶಾಶ್ವತ ಹಾಗೂ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ನೆರವಾಗುತ್ತಿದ್ದು, ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಸಹಕಾರಿಯಾಗುತ್ತಿದೆ ಎಂದರು.

ಜನಪದ ಸಂಗಮ ಕಾರ್ಯಕ್ರಮ ಉದ್ಘಾಟನೆ

ಯಲಬುರ್ಗಾ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮರೆಯಾಗುತ್ತಿರುವ ಕಲೆಗಳನ್ನು ಪ್ರೋತ್ಸಾಹಿಸಲು ಒಳ್ಳೆಯ ಕಾರ್ಯ ಮಾಡುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಹೇಳಿದರು.

ತಾಲೂಕಿನ ಮ್ಯಾದನೇರಿ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಜನಪದ ಸಂಘದ ಸಹಯೋಗದಲ್ಲಿ ನಡೆದ ಜನಪದ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು,

ಗ್ರಾಮೀಣ ಕಲೆ ಮತ್ತು ಕಲಾವಿದರಿಗೆ ಸಹಕಾರ ನೀಡುವ ಸಲುವಾಗಿ ಹಲವಾರು ಕಾರ್ಯಕ್ರಮ ನಡೆಸುತ್ತ ಬರಲಾಗಿದೆ. ನವಮಾಧ್ಯಮಗಳ ಹಾವಳಿಯಿಂದ ಮೂಲ ಜನಪದ ಕಲೆಗಳು ಮರೆಯಾಗುತ್ತಿವೆ. ಜನಪದ, ತತ್ವಪದಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಕೌಟುಂಬಿಕ ಜೀವನ ಉತ್ತಮ ಮಾರ್ಗದಲ್ಲಿ ನಡೆಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಕಲೆಗಳನ್ನು ಉಳಿಸಿ ಬೆಳೆಸುವ ಜತೆಗೆ ಕಾರ್ಯಕ್ರಮ ಆಯೋಜಿಸುವ ಮೂಲಕ ಕಲಾವಿದರಿಗೆ ಅವಕಾಶ ನೀಡುತ್ತಿರುವ ಮ್ಯಾದನೇರಿಯ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಜನಪದ ಕಲಾ ಸಂಘ ಶ್ರಮಿಸುತ್ತಿದೆ ಎಂದರು.

ಕಲೆ ಪೋಷಿಸುವಲ್ಲಿ ಸಂಘದ ಕಾರ್ಯದರ್ಶಿ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಜನಪದ ಕಲಾ ಸಂಘದ ಕಾರ್ಯದರ್ಶಿ ಡಿ.ಎಸ್.ಪೂಜಾರ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕಲೆ, ಸಂಸ್ಕೃತಿ ಉಳಿಸಿ ಬೆಳೆಸುವ ಸಲುವಾಗಿ, ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸುವ ಕಾರ್ಯ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕಲಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಲಾಗುವುದು. ಎಲ್ಲ ಪ್ರಕಾರದ ಕಲಾವಿದರಿಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಈ ವೇಳೆಯಲ್ಲಿ ಅದಯ್ಯಸ್ವಾಮಿ, ಬಸಲಿಂಗಯ್ಯ ಹಿರೇಮಠ, ಸಂಘದ ಅಧ್ಯಕ್ಷ ಫಕೀರಪ್ಪ ಹೊಸೂರು, ಕಲಾವಿದರಾದ ರಾಮಪ್ಪ ಪೂಜಾರ, ವೀರಯ್ಯ ಆಡೂರ, ಸಹನಾ ಡಿ.ಪೂಜಾರ, ಇಂದ್ರಮ್ಮ ಆಡೂರ, ಬಸವರಾಜ ಮಹಾಂತ, ಶೇಖರಗೌಡ ಪೂಜಾರ, ವಿರೂಪಾಕ್ಷಪ್ಪ ದೇಸಾಯಿ, ಮಂಜುನಾಥ ಬಂಡಿಹರ್ಲಾಪುರ, ಶಿವಮೂರ್ತಿ ದೊಡ್ಮನಿ, ಹಾಲೇಶ, ಬಸವರಾಜ ಕರಮುಡಿ, ದೇವಪ್ಪ ಗುತ್ತೂರ, ಶ್ರೀಕಾಂತಗೌಡ ಚಿಕ್ಕಸುಳಿಕೇರಿ, ಪ್ರಭಾರಿ ಮುಖ್ಯಶಿಕ್ಷಕ ಗವಿಸಿದ್ದಪ್ಪ ಬಿಸರಳ್ಳಿ ಹಾಗೂ ಗ್ರಾಮದ ಗುರು ಹಿರಿಯರು ಇದ್ದರು.



ಕುಡಿಯುವ ನೀರು, ಮೂಲ ಸೌಕರ್ಯಕ್ಕೆ ಅದ್ಯತೆ

ಯಲಬುರ್ಗಾ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಲಾದ ನಾಲಾ ಹೂಳೆತ್ತುವ ಕಾಮಗಾರಿಯಲ್ಲಿ ನರೇಗಾ ಯೋಜನೆ ಕೂಲಿಕಾರರು ಗುಳೆ ಹೋಗದಂತೆ ತಡೆದು ಕೆಲಸ ನೀಡಿದ್ದು, ಕೆಲಸದ ಸ್ಥಳದಲ್ಲಿ ಕುಡಿಯುವ ನೀರು ಮತ್ತು ಮೂಲ ಸೌಕರ್ಯ ಒದಗಿಸಲಾಗುವುದು ಎಂದು ಗ್ರಾಪಂ ಕಾರ್ಯದರ್ಶಿ ಶ್ರೀಕಾಂತ ಕೂಕನಪಳ್ಳಿ ಹೇಳಿದರು.

ತಾಲೂಕಿನ ತುಮ್ಮರಗುದ್ದಿ ಗ್ರಾಪಂ ವ್ಯಾಪ್ತಿಯ ಮಾರನಾಳ ಗ್ರಾಮದಲ್ಲಿ ಇತ್ತೀಚಿಗೆ ಗ್ರಾಮದ 350ಕ್ಕೂ ಹೆಚ್ಚು ಜನ ಅಕುಶಲ ಕೂಲಿಕಾರರ ಎನ್‌ಎಂಆರ್ ತೆಗೆದು ಕೆಲಸದ ಹಂಚಿಕೆ ಮಾಡಲಾಗಿದೆ ಎಂದರು.

ಇದರಲ್ಲಿ 209 ಜನರ ಎನ್‌ಎಂಎಸ್ ಹಾಜರಾತಿ ಆಗಿದ್ದು, ಇನ್ನು ಕೆಲವು ಜನರ ಹಾಜರಾತಿ ಆಗದೇ ಇರುವ ಕಾರಣ ಅಪ್‌ಡೇಟ್ ಮಾಡಿಸಿಕೊಂಡು ಬರಲು ತಿಳಿಸಿದೆ. ಜತೆಗೆ ಇನ್ನು ಆರು ದಿನಗಳ ನಿರಂತರ ಕೆಲಸ ನೀಡಲಾಗಿದೆ. ಈಗಾಗಲೇ ಒಂದು ಟ್ಯಾಂಕರ್ ನೀರು ಕೊಡಲಾಗಿದ್ದು, ಮತ್ತೊಂದು ಟ್ಯಾಂಕರ್ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದರು.

ಐಇಸಿ ಸಂಯೋಜಕ ಶರಣಪ್ಪ ಹಾಳಕೇರಿ ಮಾತನಾಡಿ, ಕೂಲಿಕಾರರು ಪ್ರಧಾನಮಂತ್ರಿ ಶ್ರಮ ಯೋಗಿ ಮಾನ್-ಧನ್ (ಪಿಎಂಎಸ್‌ವೈಎಂ) ಎನ್ನುವುದು ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಸ್ವಯಂಪ್ರೇರಿತ ಮತ್ತು ಕೊಡುಗೆ ಆಧಾರಿತ ಪಿಂಚಣಿ ಯೋಜನೆಯಾಗಿದ್ದು, ಈ ಯೋಜನೆಯಡಿ 60 ವರ್ಷ ವಯಸ್ಸಿನ ನಂತರ ಪ್ರತಿ ತಿಂಗಳು 3,000 ಖಚಿತ ಪಿಂಚಣಿ ದೊರೆಯುತ್ತದೆ ಎಂದರು.

ತಾಂತ್ರಿಕ ಸಹಾಯಕ ವಿಜಯ್ ಬಂಡಿ ಮಾತನಾಡಿ ನರೇಗಾ ಕೆಲಸ ಮಾಡುವ ಕೂಲಿಕಾರರು, ಸರಿಯಾಗಿ ಕಟ್ಟೆ ಕಡಿಯಬೇಕು. ಮಳೆ ಬಂದಾಗ ಮಳೆನೀರು ಅದರಲ್ಲಿ ಸಂಗ್ರಹವಾಗಿ ಭೂಮಿಯಲ್ಲಿ ಇಂಗಬೇಕು. ಇದರಿಂದ ಅಂತರ್ಜಲ ವೃದ್ಧಿಯಾಗುವುದು. ಅಳತೆಗೆ ತಕ್ಕಂತೆ ವೇತನ ನೀಡಲಾಗುವುದು ಎಂದರು.

ಈ ವೇಳೆಯಲ್ಲಿ ಗಣಕಯಂತ್ರ ನಿರ್ವಾಹಕ ರಮೇಶ, ಗ್ರಾಮ ಕಾಯಕ ಮಿತ್ರರಾದ ಶಿಲ್ಪಾ ಡೊಳ್ಳಿನ್, ಕಾಯಕ ಬಂಧುಗಳು ನೂರಾರು ಜನ ಕೂಲಿಕಾರರು ಇದ್ದರು.



ಮೃತರ ಕುಟುಂಬಕ್ಕೆ ಧನಸಹಾಯ



ಕುಷ್ಟಗಿ: ತಾಲೂಕಿನ ಕಬ್ಬರಗಿ ಗ್ರಾಮದ ರೈತ ಶರಣಪ್ಪ ಮಾಸಪ್ಪ ಹುಲಿಗೇರಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಸಿಡಿಲು ಬಡಿದು ಮೃತಪಟ್ಟಿರುವ ಹಿನ್ನೆಲೆ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘದ ಪದಾಧಿಕಾರಿಗಳು ಗುರುವಾರ ಮೃತರ ಮನೆಗೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳುವ ಮೂಲಕ ಸಂಘಟನೆ ವತಿಯಿಂದ ತುರ್ತು ಆರ್ಥಿಕ ಧನಸಹಾಯ ವಿತರಿಸಿದರು.

ರೈತ ಶರಣಪ್ಪ ಹುಲಿಗೇರಿ ಸಾವು ಕಬ್ಬರಗಿ ಗ್ರಾಮಕ್ಕೆ ಮಾತ್ರವಲ್ಲದೆ ಇಡೀ ರೈತ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಇವರ ಕುಟುಂಬವು ಇಂದು ದಿಕ್ಕಿಲ್ಲದಂತಾಗಿದೆ. ಸರ್ಕಾರವು ತಕ್ಷಣವೇ ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಸಿಗುವ 5 ಲಕ್ಷ ರೂ. ಪರಿಹಾರ ವಾರದೊಳಗೆ ಮೃತರ ಕುಟುಂಬಕ್ಕೆ ತಲುಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘ ಆಗ್ರಹಿಸಿದೆ.

ಸಂಘಟನೆ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ದೋಟಿಹಾಳ ರಾಜ್ಯ ಪ್ರಧಾನ ಕಾರ್ಯದರ್ಶಿ ಹನುಮೇಶ ಎಸ್.ಎಚ್.ಶಾಖಾಪೂರ, ಕೊಪ್ಪಳ ಜಿಲ್ಲಾ ಕಾರ್ಯಾಧ್ಯಕ್ಷ ಹೊನ್ನಪ್ಪ ಎಚ್.ತಳವಾರ, ತಾಲೂಕು ಗೌರವಾಧ್ಯಕ್ಷ ವೀರೇಶ ಕಲ್ಲುಡಿ, ತಾಲೂಕು ಅಧ್ಯಕ್ಷ ಹನುಮಗೌಡ ಹಿರೇಮನಿ, ಉಪಾಧ್ಯಕ್ಷ ಶಿವಶರಣಗೌಡ ಪಾಟೀಲ, ತಾಲೂಕು ಕಾರ್ಯಾಧ್ಯಕ್ಷಶರಣಪ್ಪ ಮೇಗೂರು, ತಾಲೂಕು ಸದಸ್ಯ ಯಮನೂರು ಗುಮಗೇರಾ, ಹಾಗೂ ಗ್ರಾಮದ ಪ್ರಮುಖರು ಮತ್ತು ಸಂಘಟನೆಯ ಕಾರ್ಯಕರ್ತರು ಇದ್ದರು.

ವೈನ್ ಶಾಪ್‌ಗಳ ಬಂದ್‌ಗೆ ಆಗ್ರಹ

ಮುನಿರಾಬಾದ್: ಕೊಪ್ಪಳ ಜಿಲ್ಲೆಯಲ್ಲಿ ಎಲ್ಲೆಂದರಲ್ಲಿ ಮದ್ಯದ ಅಂಗಡಿ (ವೈನ್ ಶಾಪ್)ಗಳು ತಲೆಯೆತ್ತಿವೆ. ದೇವಸ್ಥಾನ, ಶಾಲೆ, ಕಾಲೇಜುಗಳ 200 ಮೀಟರ್ ಅಂತರವಿಲ್ಲದೆ ನಡೆಯುತ್ತಿವೆ. ಹೋಟೆಲ್, ಡಾಬಾ,ರಸ್ತೆ ಪಕ್ಕ ಇರುವ ಸಣ್ಣ ಪುಟ್ಟ ಅಂಗಡಿಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮದ್ಯ ಮಾರಾಟ ನಡೆಯುತ್ತಿದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಕರ್ನಾಟಕ ಸೇನೆ ಆಗ್ರಹಿಸಿ ಮನವಿ ಮಾಡಿತು.

ಜಿಲ್ಲಾ ಎಲ್ಲ ತಾಲೂಕ ಸೇರಿದಂತೆ ಅನೇಕ ಧಾರ್ಮಿಕ ಸ್ಥಳಗಳು ಶಾಲಾ-ಕಾಲೇಜುಗಳು ಬಸ್ ನಿಲ್ದಾಣಗಳ 500, ಮೀಟರ್ ವ್ಯಾಪ್ತಿಯಲ್ಲಿ ಮದ್ಯಪಾನ ಅಂಗಡಿಗಳನ್ನು ಬಂದ್ ಮಾಡಿಬೇಕು. ಅಲ್ಲದೆ ಹೋಟೆಲ್ ಡಾಬಾಗಳಲ್ಲಿ ಹಳ್ಳಿಗಳಲ್ಲಿ ಕಿರಣಿ ಅಂಗಡಿಗಳಿಗಿಂತ ಮಧ್ಯ ಮಾರುವಂತಹ ಅಂಗಡಿಗಳೇ ಹೆಚ್ಚಾಗಿ ಕಂಡುಬರುತ್ತವೆ. ಇದರಿಂದಾಗಿ ಯುವಕರು ಮದ್ಯಕುಡಿದು ಹಾಳಾಗುತ್ತಿದ್ದಾರೆ. ಆದರಿಂದ ತಾವುಗಳು ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕೊಪ್ಪಳ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಂದು ತಂಡ ರಚಿಸಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಬಾರ್ ಮತ್ತು ವೈನ್ ಶಾಪ್ ಬಂದ್ ಮಾಡಿಸಿ ಯೋಗ್ಯವಾದ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಕೊಪ್ಪಳದ ಅಪರ ಜಿಲ್ಲಾಧಿಕಾರಿ ಸಿದ್ದೇಶ್ವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ನಮ್ಮ ಕರ್ನಾಟಕ ಸೇನೆಯ ಪದಾಧಿಕಾರಿಗಳಾದ ಬಂದೇ ನವಾಜ್ ಮನೆಯಾರ್, ಕಾರ್ಮಿಕ ಘಟಕ ಜಿಲ್ಲಾಧ್ಯಕ್ಷ ಯಮನೂರ್ಸಾಬ್, ಉಪಾಧ್ಯಕ್ಷ ಭಕ್ಷಿ, ಕಾಘ ತಾಲೂಕು ಉಪಾಧ್ಯಕ್ಷ ಕಿರಣ್ ಕುಮಾರ್, ತಾಲೂಕ ಅಧ್ಯಕ್ಷ ರಮೇಶ ನರೇಗಲ, ಯುವ ಘಟಕದ ಜಿಲ್ಲಧ್ಯಕ್ಷ ಬಸವರಾಜ, ಪ್ರಸ ಜಿಲ್ಲಾಧ್ಯಕ್ಷ ಬೆಳ್ಳಪ್ಪ.ಬೀ, ಭರತ ದೊಡ್ಮನಿ ಉಪಸ್ಥಿತರಿದ್ದರು.



ಉಪನ್ಯಾಸಕರ ಕಾರ್ಯಭಾರ ಕೊರತೆ ಪಟ್ಟಿ ರದ್ದುಪಡಿಸಲು ಆಗ್ರಹ

ಕಲಬುರಗಿ: ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಉಪನ್ಯಾಸಕರ ಕಾರ್ಯಭಾರ ಕೊರತೆ ಹೆಸರಿನಲ್ಲಿ ಬಿಡುಗಡೆ ಮಾಡಿರುವ ಪಟ್ಟಿಯನ್ನು ತಕ್ಷಣವೇ ಹಿಂಪಡೆಯಬೇಕೆಂದು ಕರ್ನಾಟಕ ರಾಜ್ಯ ಪ.ಪೂ ಕಾಲೇಜುಗಳ ಪ್ರಾಂಶುಪಾಲರ ಸಂಘ ಹಾಗೂ ಉಪನ್ಯಾಸಕರ ಸಂಘದ ಕಲಬುರ್ಗಿ ಜಿಲ್ಲಾ ಘಟಕದ ಪದಾಧಿಕಾರಿಗಳು ಆಗ್ರಹಿಸಿದರು.

ವಿಪ ಸದಸ್ಯ ಶಶೀಲ.ಜಿ.ನಮೋಶಿ ಮುಖಾಂತರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಇತ್ತೀಚಿಗೆ ಪ.ಪೂ ಶಿಕ್ಷಣ ಇಲಾಖೆ ಬಿಡುಗಡೆ ಮಾಡಿದ ಉಪನ್ಯಾಸಕರ ಕಾರ್ಯಭಾರಕೊರತೆ ಪಟ್ಟಿಸಂಪೂರ್ಣ ಅವೈಜ್ಞಾನಿಕವಾಗಿದ್ದು, ಇದರಿಂದ ಸರ್ಕಾರಿ ಹಾಗೂ ಅನುದಾನಿತ ಪಪೂ ಕಾಲೇಜುಗಳ ಅಸ್ತಿತ್ವವೇ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಸಂಘದ ಪದಾಧಿಕಾರಿಗಳು ಆತಂಕ ವ್ಯಕ್ತಪಡಿಸಿದರು.



ಪ್ರಸ್ತುತ ಇಲಾಖೆ ಅನುಸರಿಸುತ್ತಿರುವ 320:1 ವಿದ್ಯಾರ್ಥಿ- ಉಪನ್ಯಾಸಕರ ಅನುಪಾತದಲ್ಲೇ ಮೂಲಭೂತ ದೋಷವಿದ್ದು, ಈ ಅನುಪಾತ 180:1ಕ್ಕೆ ಇಳಿಸಿ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡುವಂತೆ ರಾಜ್ಯ ಉಪನ್ಯಾಸಕರ ಸಂಘ ಕಳೆದ ಎರಡು ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದೆ. ಆದಾಗ್ಯೂ, ಸರ್ಕಾರ ಹಾಗೂ ಇಲಾಖೆ ಈ ಬೇಡಿಕೆ ಪರಿಗಣಿಸಿಲ್ಲ ಎಂದು ದೂರಿದರು.

ರಾಜ್ಯದಲ್ಲಿ 3263 ಖಾಸಗಿ ಕಾಲೇಜುಗಳಿದ್ದರೆ, ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಸಂಖ್ಯೆ 1340 ಮಾತ್ರ ಇದೆ. ಸರ್ಕಾರಿ ಕಾಲೇಜುಗಳಲ್ಲಿ ಕೇವಲ 7644 ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, 5269 ಹುದ್ದೆಗಳು ಖಾಲಿ ಇವೆ. ಇಂತಹ ಸಂದರ್ಭದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರನ್ನೇ ಇತರ ಕಾಲೇಜುಗಳಿಗೆ ನಿಯೋಜನೆ ಮಾಡುವುದರಿಂದ ಸರ್ಕಾರಿ ಕಾಲೇಜುಗಳ ಉಳಿವು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ ಎಂದು ಸಂಘ ತಿಳಿಸಿತು.

ಶಿವಮೊಗ್ಗ ಜಿಲ್ಲೆಯಲ್ಲಿ 51 ಸರ್ಕಾರಿ ಕಾಲೇಜುಗಳ 193 ಉಪನ್ಯಾಸಕರನ್ನು 'ಕಡಿಮೆಕಾರ್ಯಭಾರ' ಹೊಂದಿರುವವರಾಗಿ ಗುರುತಿಸಲಾಗಿದ್ದು, ಇದರಿಂದ 47 ಕಾಲೇಜುಗಳು ನೇರ ಪರಿಣಾಮಕ್ಕೆ ಒಳಗಾಗಲಿವೆ. ಈ ಕ್ರಮ ಜಾರಿಯಾದರೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶಿಕ್ಷಣದ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಸಂಘದ ಮುಖಂಡರು ಎಚ್ಚರಿಸಿದರು.

ಎಂಎಲ್ಸಿ ಶಶೀಲ್.ಜಿ.ನಮೋಶಿ ಮನವಿ ಸ್ವೀಕರಿಸಿ ಮಾತನಾಡಿದ ಅವರು,ಉಪನ್ಯಾಸಕರ ನ್ಯಾಯಯುತ ಬೇಡಿಕೆಗಳ ಪರವಾಗಿ ಸದಾ ನಿಲ್ಲುತ್ತೇನೆ. ಈ ವಿಷಯ ತಕ್ಷಣವೇ ಸಚಿವರು ಹಾಗೂ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು. ಕರ್ನಾಟಕ ರಾಜ್ಯ ಪಪೂ ಕಾಲೇಜುಗಳ ಪ್ರಾಂಶುಪಾಲರ ಸಂಘದ ಕಲಬುರ್ಗಿ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಖಜೂರ್ಗಿ,ಉಪನ್ಯಾಸಕರ ಸಂಘದ ಅಧ್ಯಕ್ಷ ಜೇ ಮಲ್ಲಪ್ಪ, ಪ್ರಧಾನ ಕಾರ್ಯದರ್ಶಿ ನರಸಪ್ಪ ರಂಗೋಲಿ, ರಾಜ್ಯ ಪರಿಷತ್ ಸದಸ್ಯರಾದ ಧರ್ಮರಾಯ ಜವಳಿ, ಸವಿತಾ ನಾಶಿ, ಐ.ಕೆ.ಪಾಟೀಲ, ಎಸ್.ಐ.ಪಾಟೀಲ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚುಟುಕು ಕವಿಗೋಷ್ಠಿ, ಉಪನ್ಯಾಸ



ಕುಕನೂರು: ಚುಟುಕು ಚಿಕ್ಕದಾಗಿದ್ದರೂ ಅದರ ಸಾಹಿತ್ಯದ ಆಳ ತುಂಬಾ ವಿಶಾಲವಾದ ಅರ್ಥ ನೀಡುತ್ತದೆ ಎಂದು ಕುಕನೂರು ತಾಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವರಾಜ ಉಪ್ಪಿನ ಹೇಳಿದರು.

ಪಟ್ಟಣದಲ್ಲಿ ಹಮ್ಮಿಕೊಂಡಿದ ಚುಟುಕು ಕವಿಗೋಷ್ಠಿ ಮತ್ತು ಉಪನ್ಯಾಸದಲ್ಲಿ ಮಾತನಾಡಿ, ತಾಲೂಕಿನಲ್ಲಿ ಪ್ರತಿಭಾವಂತ ಚುಟುಕು ಕವಿಗಳು ಇದ್ದಾರೆ. ಚುಟುಕು ಕವಿಗಳಿಂದ ಚುಟುಕು ಸಾಹಿತ್ಯ ಗಟ್ಟಿಗೊಳಲಿ ಚುಟುಕು ಸಾಹಿತ್ಯ ಸಮಾಜಕ್ಕೆ ವಿಶಿಷ್ಟ ಸಂದೇಶ ನೀಡುತ್ತದೆ ಎಂದರು.

ಜಿಲ್ಲಾ ಚುಸಾಪ ಅಧ್ಯಕ್ಷ ರುದ್ರಪ್ಪ ಭಂಡಾರಿ, ನ್ಯಾಯವಾದಿ ಬಸವರಾಜ ಜಂಗ್ಲಿ, ಪ್ರಕಾಶ ಹಳ್ಳಿಗುಡಿ, ಗಾಯಕರಾದ ಮೇಘರಾಜ್ ಜಿಡಗಿ, ಬಿ.ಎಚ್. ಕೊಡ್ಲಿ, ಮುರಾರಿ ಭಜಂತ್ರಿ ಉಪಸ್ಥಿತರಿದ್ದರು.

ವಸಂತ ಗುಡಿ ಉಪನ್ಯಾಸ ನೀಡಿದರು. ಕವಿಗೋಷ್ಠಿಯಲ್ಲಿ ಬಸವರಾಜ ಚೌಡಕಿ, ಗುರುಮೂರ್ತಿ ಹಿರೇಮಠ, ಮಂಜುಳಾ ಗುಡ್ಲಾನೂರ, ಶಶಿಕಲಾ ಕೊರಗಲ, ಮಹಾಲಕ್ಷ್ಮಿ ಮುಂಡರಗಿ ಮತ್ತಿತರರು ಕವನ ವಾಚಿಸಿದರು. ಚುಸಾಪ ಕಾರ್ಯದರ್ಶಿ ರವಿ ಹಿರೇಮನಿ ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

ಅಧಿಸೂಚನೆ ಪ್ರತಿ ದಹಿಸಿ ಆಕ್ರೋಶ

ಮಾನ್ವಿ: ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳ ಅಧಿಸೂಚನೆ ತಕ್ಷಣ ರದ್ದುಪಡಿಸಬೇಕೆಂದು ಒತ್ತಾಯಿಸಿ ಎಐಸಿಸಿಟಿಯು ನೇತೃತ್ವದಲ್ಲಿ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರು ಅಧಿಸೂಚನೆ ಪ್ರತಿಗಳನ್ನು ದಹಿಸಿ ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಅವರು, ಎಐಸಿಸಿಟಿಯು ಮುಖಂಡ ರಾಜ ಸಾಬ್ ಅವರು, ಪ್ರಸ್ತುತ ಜಾರಿಯಲ್ಲಿರುವ ಕಾರ್ಮಿಕ ಪರ ಕಾಯ್ದೆ ದುರ್ಬಲಗೊಳಿಸಿ, ಬಂಡವಾಳಶಾಹಿ ಮತ್ತು ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗಾಗಿ ಕೇಂದ್ರದ ಬಿಜೆಪಿ ಸರ್ಕಾರ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳನ್ನು ಜಾರಿಗೆ ತರಲು ಮುಂದಾಗಿದೆ. ಇದು ದೇಶದ ಕೋಟ್ಯಾಂತರ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ ಮರಣ ಶಾಸನವಾಗಿದ್ದು, ಕಾರ್ಮಿಕ ವರ್ಗ ಇದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಐಸಿಸಿಟಿಯು ಕರೆ ನೀಡಿರುವ ಜಿಲ್ಲಾವ್ಯಾಪಿ ಪ್ರತಿಭಟನೆ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಕಾರ್ಮಿಕ ಸಂಘಟನೆಗಳು ಇನ್ನಷ್ಟು ಬಲವಾದ ಹೋರಾಟ ರೂಪಿಸಲಿವೆ ಎಂದು ಮುಖಂಡರು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಎಐಸಿಸಿಟಿಯು ಮುಖಂಡರಾದ ರಾಜಸಾಬ್, ಈಶಪ್ಪ ಗೌಡ, ವೆಂಕಟೇಶ್ ಕೋರಿ, ಚಂದು ಸಾಬ್, ಗೋಪಾಲ ರಾವ್, ಜಲೀಲ ಪಾಶಾ, ಇಮ್ರಾನ್ ಭಾಗವಹಿಸಿದ್ದರು.



ಕಿರುಸುದ್ದಿ

ಪಶು ವೈದ್ಯಕೀಯ ಆಸ್ಪತ್ರೆ ಕಾಮಗಾರಿ ಪರಿಶೀಲನೆ

ಸಿರುಗುಪ್ಪ: ನಗರದ ಪಶು ವೈದ್ಯಕೀಯ ಆಸ್ಪತ್ರೆಗೆ ನಬಾರ್ಡ್ ಅಧಿಕಾರಿಗಳು ಗುರುವಾರ ಭೇಟಿ ನೀಡಿ ಆಸ್ಪತ್ರೆ ಕಾಮಗಾರಿ ಪರಿಶೀಲಿಸಿದರು.

ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಧಿ (ಆರ್ ಐಡಿಎಫ್) ಅಡಿಯಲ್ಲಿ ಕಳೆದ ಡಿಸೆಂಬರ್ 2024 ರಲ್ಲಿ ಅನುಮೋದಿತ 49.96 ಲಕ್ಷ ವೆಚ್ಚದ ಕಾಮಗಾರಿಯ ಕಟ್ಟಡದ ಗುಣಮಟ್ಟವನ್ನೂ ಪರಿಶೀಲನೆ ನಡೆಸಿದರು.

ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಯುವರಾಜ ಆರ್. ಎಸ್. ಭೇಟಿಯ ವೇಳೆ ಸಿರುಗುಪ್ಪ ಪಶು ಸಂಗೋಪನಾ ಇಲಾಖೆಯ ಪಶುವೈದ್ಯಾಧಿಕಾರಿ ಡಾ.ಗಂಗಾಧರ ಮಾತನಾಡಿ,' ಕಟ್ಟಡ ನಿರ್ಮಾಣ ಕಾಮಗಾರಿ ನಿಧಾನವಾಗಿ ಸಾಗುತ್ತಿದ್ದು, ಗುತ್ತಿಗೆದಾರರು ಇಲಾಖೆಯ ಯಾವುದೇ ಮನವಿಗೆ ಸ್ಪಂದಿಸುತ್ತಿಲ್ಲ ಹಾಗೂ ಕಟ್ಟಡಕ್ಕಾಗಿ ನೀರಿನ ವ್ಯವಸ್ಥೆ ಕಲ್ಪಿಸಲು ಪ್ರತ್ಯೇಕ ಅನುದಾನ ಇದ್ದರೂ ಈ ವರೆಗೆ ಕೆಲಸ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕಟ್ಟಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಯಾವುದೇ ಆಹವಾಲು ಸಲ್ಲಿಸುವಾಗ ದಾಖಲೆ ಹಾಗೂ ಜಿ ಪಿ ಎಸ್ ಪೋಟೋಗಳೊಂದಿಗೆ ಕಳುಹಿಸಿ ಎಂದು ನಬಾರ್ಡ್ ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು ಸೂಚಿಸಿದರು. ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಟಿ. ಹುಚ್ಚೀರಪ್ಪ, ದ್ವಿದ ಸಹಾಯಕ ಸುರೇಂದ್ರನಾಥ್, ಸಿಬ್ಬಂದಿ ತಿಪ್ಪಮ್ಮ ಇತರರಿದ್ದರು.

ಮಂಗಳಾ ಕೆ. ನೂತನ ಬಿಇಒ



ಹೂವಿನಹಡಗಲಿ: ಶಾಲಾ ಶಿಕ್ಷಣ ಇಲಾಖೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಮಂಗಳಾ ಕೆ. ನೇಮಕ ಗೊಂಡಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ಗ್ರೂಪ್ ಬಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಗ್ರೂಪ್ ಎ ಹುದ್ದೆಗೆ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.ಮಂಗಳಾ ಕೆ. ಈ ಮೊದಲು ಹರಪನಹಳ್ಳಿ ತಾಲೂಕಿನ ಕಡಬಗೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಖ್ಯ ಗುರುಗಳಾಗಿ, ನಂತರ ಕೊಟ್ಟೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಇದೇ ಮೊದಲ ಬಾರಿಗೆ ಮಹಿಳಾ ಅಧಿಕಾರಿ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ನೇಮಕ ಆಗಿರುವುದು ವಿಶೇಷ ಸಂಗತಿ.

ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಹೂವಿನಹಡಗಲಿ: ಸಮಾಜ ಕಲ್ಯಾಣ ಇಲಾಖೆ 2026-27ನೇ ಸಾಲಿನ ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಜೂನ್ 30ರೊಳಗಾಗಿ ಎಸ್ ಎಟಿಎಸ್ ಐಡಿ, ಜಾತಿ, ಆದಾಯ ಪ್ರಮಾಣ ಪತ್ರ, ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಸೇರಿ ಮೂಲ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಟ್ಟು ಭಸ್ಮವಾದ ತಿಪ್ಪೆಗುಂಡಿಗಳು



ಕೊಟ್ಟೂರು: ತಾಲೂಕಿನ ಹರಾಳು ಗ್ರಾಮದ ಹಗರಿ ಹಳ್ಳದ ಹತ್ತಿರವಿರುವ ರೈತರು ವರ್ಷದಿಂದ ಸಂಗ್ರಹಿಸಿದ್ದ ಆಕಳ ಮತ್ತು ಎಮ್ಮೆಗಳ ಫಲವತ್ತಾದ ಸಾವಯವ ಕೃಷಿಗೆ ಬಳಕೆ ಮಾಡುವ ಐದಕ್ಕೂ ಹೆಚ್ಚು ಕಸದ ತಿಪ್ಪೆಗುಂಡಿಗಳು ಸುಟ್ಟು ಸಂಪೂರ್ಣ ಭಸ್ಮವಾಗಿವೆ.

ರೈತರು ವರ್ಷಪೂರ್ತಿ ತಮ್ಮ ಮನೆಗಳಲ್ಲಿ ಕಟ್ಟಿರುವ ದನ ಕರುಗಳು ಹಾಗೂ ಕುರಿ ಮೇಕೆಗಳ ಗೊಬ್ಬರ ಸಂಗ್ರಹಿಸಿ ಮಳೆಗಾಲದ ಸಂದರ್ಭದಲ್ಲಿ ಕೃಷಿ ಹೊಲಗಳಿಗೆ ಯೋಗ್ಯವಾದ ಸಾವಯವ ಗೊಬ್ಬರ ಬಳಕೆ ಮಾಡಿ ಬೆಳೆ ತೆಗೆಯುತ್ತಾರೆ. ಆದರೆ ಕೆಲವು ಕಿಡಿಗೇಡಿಗಳು ಮಾಡಿದ ದುಷ್ಕೃತ್ಯದಿಂದ ಫಲವತ್ತಾದ ಸಗಣಿ ಗೊಬ್ಬರವು ಇದೀಗ ಬೂದಿಯಾಗಿ ಮಾರ್ಪಟ್ಟಿದೆ.

ಗ್ರಾಮಸ್ಥರು ಕರೆ ಮಾಡಿ ದೂರು ನೀಡದ ತಕ್ಷಣವೇ ಪ್ರತಿ ಸ್ಪಂದಿಸಿದ ಕೊಟ್ಟೂರು ಅಗ್ನಿಶಾಮಕ ಇಲಾಖೆ ಠಾಣಾಧಿಕಾರಿ ಬಸವರಾಜ ಹಾಗೂ ಸಿಬ್ಬಂದಿ ವರ್ಗದವರು ಬೆಂಕಿ ಆರಿಸುವಲ್ಲಿ ಯಶಸ್ವಿಯಾದರು. ಇಲ್ಲದಿದ್ದರೆ ದೊಡ್ಡ ಅನಾಹುತಗಳೇ ಸಂಭವಿಸುತ್ತಿದ್ದವೆಂದು ಗ್ರಾಮಸ್ಥರು ಅಭಿಪ್ರಾಯ ಪಟ್ಟರು. ಪಕ್ಕದಲ್ಲೇ ಇದ್ದ ಟ್ರಾನ್ಸಫಾರ್ಮರ್ ಹೊತ್ತಿ ಉರಿಯುವ ಸನ್ನಿವೇಶ ಎದುರಾಗಿತು. ಕೆಇಬಿ ಇಲಾಖೆಯವರು ಕೂಡಲೇ ಎಚ್ಚೆತ್ತುಕೊಂಡು ಸಮಸ್ಯೆ ಬಗೆಹರಿಸಿದರು.



ಸಿರುಗುಪ್ಪ: ನಗರದ ಪಶು ವೈದ್ಯಕೀಯ ಆಸ್ಪತ್ರೆಗೆ ನಬಾರ್ಡ್ ಅಧಿಕಾರಿಗಳು ಗುರುವಾರ ಭೇಟಿ ನೀಡಿ ಆಸ್ಪತ್ರೆ ಕಾಮಗಾರಿ ಪರಿಶೀಲಿಸಿದರು.

ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಕೆಂಭಾವಿ: ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿ ಅವರ ಸರ್ವಾಂಗೀಣ ಅಭಿವೃದ್ಧಿಗೆ ತಂದೆ-ತಾಯಿ ಆಶ್ರಯ ಅತ್ಯಂತ ಅಗತ್ಯ ಎಂದು ಸ್ಪಂದನ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಾರ್ಯದರ್ಶಿ ಡಿ.ಸಿ.ಪಾಟೀಲ ಹೇಳಿದರು.

ಪಟ್ಟಣದ ಸ್ಪಂದನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ. ಬಸವಂತ್ರಾಯ (ಮಾಸ್ತರ) ಪಾಟೀಲ ಅವರ ಸ್ಮರಣಾರ್ಥವಾಗಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಮುಖ್ಯ ಅತಿಥಿ ವಾಮನರಾವ್ ದೇಶಪಾಂಡೆ ಮಾತನಾಡಿದರು.

ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಮಹಿಪಾಲ ರೆಡ್ಡಿ ಡಿಗ್ಗಾವಿ ಮಾತನಾಡಿದರು. ಅನಘಾ ಕುಲಕರ್ಣಿ ಪ್ರಾರ್ಥನಾ ಗೀತೆ ಹಾಡಿದರು. ಶಿಕ್ಷಕ ಬಂದೇನವಾಜ್ ನಾಲತವಾಡ ನಿರೂಪಿಸಿ ವಂದಿಸಿದರು. ಮಡಿವಾಳಪ್ಪಗೌಡ ಪೊಲೀಸ್ ಪಾಟೀಲ್, ಬಾಬುಗೌಡ ಮಾಲಿ ಪಾಟೀಲ, ಪ್ರಕಾಶ ಪಾಟೀಲ, ಸಂಗಣ್ಣ ಎಸ್. ತುಂಬಗಿ, ಸಂಗಣ್ಣ ಎಂ. ತುಂಬಗಿ, ಸಾಹೇಬಲಾಲ ಆಂದೇಲಿ, ಮಧು ಚೆನ್ನು, ವಿಕಾಸ ಸೊನ್ನದ ಉಪಸ್ಥಿತರಿದ್ದರು.

ಪಟ್ಟಣಕ್ಕೆ ಶ್ವೇತಾ ಪ್ರಥಮ: ಕೆಂಭಾವಿ ಪಟ್ಟಣದ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಶ್ವೇತಾ ಪ್ರಭುಗೌಡ 609 ಅಂಕ ಪಡೆದು ಪಟ್ಟಣಕ್ಕೆ ಪ್ರಥಮ ಸ್ಥಾನ ಪಡೆದರು. ಬದೀಹಾ ಅಫಾಫ ಇಲೀಯಾಸ್ ವಡಕೇರಿ 606 ಅಂಕ ಪಡೆದು 2ನೇ ಸ್ಥಾನ, ನಿಷಾದ್ ನಜೀರ್ ಹಮ್ಮದ್ ವಡಕೇರಿ 600 ಅಂಕ ಪಡೆದು ಪಟ್ಟಣಕ್ಕೆ 3ನೇ ಸ್ಥಾನ, ಮೊಹ್ಮದ್ ಐಜಾದ್ ಹುಸೇನ್ 599 ಅಂಕ ಪಡೆದು ಪಟ್ಟಣಕ್ಕೆ 4ನೇ ಸ್ಥಾನ ಪಡೆದರು. ಸಾಧನೆ ಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, 5000 ರೂ.ನಗದು ನೀಡಿ ಗೌರವಿಸಲಾಯಿತು.



ಕೆಂಭಾವಿ: ಪಟ್ಟಣದ ಸ್ಪಂದನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ. ಬಸವಂತ್ರಾಯ (ಮಾಸ್ತರ) ಪಾಟೀಲ ಅವರ ಸ್ಮರಣಾರ್ಥವಾಗಿ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಸೇತುವೆ ನಿರ್ಮಾಣಕ್ಕೆ ತಾಂತ್ರಿಕ ಒಪ್ಪಿಗೆ ಸನ್ನಿಹಿತ

ಪುಷ್ಪಾವತಿ ಜಿಎಂ ಬಸಯ್ಯ

ಕುರುಗೋಡು: ಸಮೀಪದ ಕಂಪ್ಲಿಯ ತುಂಗಭದ್ರಾ ನದಿಗೆ ನೂತನ ಸೇತುವೆ ನಿರ್ಮಾಣ ಕುರಿತು ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಇದೇ ಮೇ.16ರಂದು ಬೆಂಗಳೂರಿನಲ್ಲಿ ನಡೆಯುವ ಇಆರ್‌ಸಿ (ಎಸ್ಟಿಮೇಷನ್ ರಿವ್ಯೂ ಕಮಿಟಿ) ಸಭೆಯಲ್ಲಿ ಮಂಡನೆಯಾಗಲಿದೆ. ಸಭೆಯಲ್ಲಿ ತಾಂತ್ರಿಕ ಅನುಮೋದನೆ ಪಡೆದು ಸೇತುವೆ ನಿರ್ಮಾಣಕ್ಕೆ ಟೆಂಡರ್ ಕರೆಯುವ ಪ್ರಕ್ರಿಯೆ ಆರಂಭಗೊಳ್ಳಲಿದೆ. ಬಹು ವರ್ಷಗಳ ಸೇತುವೆ ನಿರ್ಮಾಣದ ಕನಸು ನನಸಾಗುವ ದಿನಗಳು ಹತ್ತಿರ ಬರುತ್ತಿವೆ.

ಉತ್ತರ ಕರ್ನಾಟಕದ ಹಲವು ದಶಕಾಲಗಳಿಂದ ಈ ಭಾಗದ ಕನಸುಗೆ ನಾನಸಾಗುವ ಆಸೆ ಚಿಗುರಿದೆ. ಈ ಸೇತುವೆಯಿಂದ ಹುಬ್ಬಳ್ಳಿ ಮಾರ್ಗವಾಗಿ ಆಂದ್ರಕ್ಕೆ ಸಂಚಾರ ಸರಕು ವಸ್ತುಗಳಿಗೆ ಹಾಗೂ ಜನತೆಗೆ ಅನುಕೂಲವಾದೆ. ವಾಹನಗಳ ಸುತ್ತುವರಿಕೆ ಕಡಿತವಾಗಲಿದೆ.

1959ರ ಸುಮಾರಿಗೆ ನಿರ್ಮಾಣಗೊಂಡ ಸೇತುವೆ ಶಿಥಿಲಗೊಂಡಿದ್ದಲ್ಲದೆ ಪ್ರತಿ ವರ್ಷವೂ ಮಳೆಗಾಲದಲ್ಲಿ ಜಲಾಶಯದಿಂದ 1ಲಕ್ಷ ಕ್ಯೂಸೆಕ್ ನಷ್ಟು ನೀರು ಹರಿದು ಬಂದಾಗ ಸೇತುವೆ ಮುಳುಗಿ ಸಂಪರ್ಕ ತಪ್ಪಿ ಹೋಗುತ್ತಿತ್ತು. ಕೆಲ ವರ್ಷ 30ರಿಂದ 40ದಿನಗಳ ತನಕ ಸಂಪರ್ಕ ಸ್ಥಗಿತಗೊಂಡು ಶಾಲೆ ಕಾಲೇಜಿನ ವಿದ್ಯಾರ್ಥಿಗಳಿಗೆ, ಪ್ರಯಾಣಿಕರಿಗೆ, ರೈತರಿಗೆ ತುಂಬಾ ತೊಂದರೆಯಾಗುತ್ತಿತ್ತು. ಸುತ್ತಿ ಬಳಸಿ ಪ್ರಯಾಣಿಸುವ ಸಂಕಷ್ಟ ಎದುರಾಗುತ್ತಿತ್ತು. ಕಳೆದ ಎರಡು ದಶಕಗಳಿಂದಲೂ ಹೊಸ ಸೇತುವೆ ನಿರ್ಮಾಣಕ್ಕೆ ಪಟ್ಟಣಿಗರು, ಪ್ರಗತಿಪರ ಸಂಘಟನೆಗಳು ಒತ್ತಾಯಿಸಿದ್ದವು. ಜಿಲ್ಲಾ ಉಸ್ತುವಾರಿ ಸಚಿವರಾಗಿದ ಬಿ.ಶ್ರೀರಾಮುಲು ಸೇತುವೆ ನಿರ್ಮಿಸುವ ಭರವಸೆ ನೀಡಿದ್ದರೂ ಅವರ ಅವಧಿಯಲ್ಲಿ ಸೇತುವೆ ನಿರ್ಮಾಣ ಭರವಸೆ ಸಾಕಾರಗೊಳ್ಳಲಿಲ್ಲ. ಪಿಡಬ್ಲ್ಯೂಯಡಿ ಸಚಿವ ಸತೀಶ ಜಾರಕಿಹೊಳಿ ಸೇತುವೆ ವೀಕ್ಷಿಸಿ ಹೊಸ ಸೇತುವೆ ನಿರ್ಮಿಸುವ ಭರವಸೆ ನೀಡಿದ್ದರು. ಇದರಿಂದ ಜನರಲ್ಲೂ ನೂತನ ಸೇತುವೆ ಭಾಗ್ಯ ದೊರಕುವ ಆಸೆ ಚಿಗುರಿತು. ಇದೀಗ ನೂತನ ಸೇತುವೆ ನಿರ್ಮಾಣ ಕಾಮಗಾರಿಗೆ ತಾಂತ್ರಿಕ ಅನುಮೋದನೆಗೆ ದಿನಗಣನೆ ಆರಂಭವಾಗಿದೆ.

ನೂತನ ಸೇತುವೆ ಬೆನಕನ ಕಾಲುವೆ ಬಳಿಯಿಂದ ಚಿಕ್ಕಜಂತಕಲ್‌ಗೆ ನದಿಗೆ ಅಡ್ಡಲಾಗಿ ನಿರ್ಮಾಣಗೊಳ್ಳಲಿದೆ. ಈಗಿರುವ ಸೇತುವೆ ಮಟ್ಟದಿಂದ 7.5ಮೀ.ಎತ್ತರದಲ್ಲಿ ಸೇತುವೆ ನಿರ್ಮಾಣಗೊಳ್ಳಲಿದೆ. ಇದರಿಂದ ನೆರೆ ಬಂದಾಗ ಸೇತುವೆ ಮುಳುಗಡೆ ತಪ್ಪಲಿದೆ. ಸೇತುವೆ 700ಮೀ. ಉದ್ದ ಇರಲಿದೆ. ಸೇತುವೆಯ ಅಗಲ 11ಮೀ.ನಷ್ಟಿದ್ದು, ಎರಡು ಕಡೆಗಳಲ್ಲೂ 1.5ಮೀ.ನಷ್ಟು ಪಾದಾಚಾರಿ ರಸ್ತೆ ಸೇರಿ ಒಟ್ಟಾರೆ ಸೇತುವೆ 14ಮೀ.ಅಗಲ ಇರಲಿದೆ. ಗಂಗಾವತಿ ಕಡೆ 415ಮೀ, ಕಂಪ್ಲಿ ಕಡೆ 258ಮೀ.ನಷ್ಟು ಸೇತುವೆಗೆ ಅಪ್ರೋಚಸ್(ಮುಂಚಾಚಿದ)ರಸ್ತೆ ಇರಲಿದೆ. ಅಪ್ರೋಚಸ್ ರಸ್ತೆ 7ಮೀ.ಡಾಂಬರ್ ಹೊಂದಿದ್ದು, ರಸ್ತೆ ಎರಡೂ ಬದಿ ತಲಾ 1.5ಮೀ.ನಷ್ಟು ಪೇರ್ಸ್ ಅಳವಡಿಸಿ, ಅದರಪಕ್ಕದಲ್ಲಿ ತಲಾ 1ಮೀ.ಶೋಲ್ಡರ್ಸ್ ಇರಲಿದೆ. ಇದಕ್ಕಾಗಿ ಕಂಪ್ಲಿ ಮತ್ತು ಚಿಕ್ಕಜಂತಕಲ್ ಕಡೆಗಳಲ್ಲಿ ತಲಾ 3ಎಕರೆಯಂತೆ ಒಟ್ಟಾರೆ 6ಎಕರೆಯಷ್ಟು ಭೂಸ್ವಾಧೀನಗೊಳ್ಳಬೇಕಿದೆ. ಗರ್ಡರ್ ವಿತ್ ಡೆಕ್‌ಸ್ಲ್ಯಾಬ್ ಮಾದರಿಯಲ್ಲಿ ಸೇತುವೆ ನಿರ್ಮಾಣಗೊಳ್ಳಲಿದೆ. ಒಟ್ಟಾರೆ ಅಂದಾಜು 100ಕೋಟಿ ರೂ.ಗಳಲ್ಲಿ ಸೇತುವೆ ನಿರ್ಮಾಣಗೊಳ್ಳಲಿದೆ.



> ಕಂಪ್ಲಿ ತುಂಗಭದ್ರಾ ನದಿಗೆ ನೂತನ ಸೇತುವೆ ನಿರ್ಮಾಣ ನನ್ನ ಮಹತ್ತರ ಕನಸಾಗಿದೆ. ಸೇತುವೆ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ಸಚಿವರ ಹಸಿರು ನಿಶಾನೆ ದೊರಕಿದೆ. ಶೀಘ್ರದಲ್ಲೇ ನೂತನ ಸೇತುವೆ ಕಾಮಗಾರಿ ಆರಂಭಕ್ಕೆ ಭೂಮಿಪೂಜೆ ನೆರವೇರಿಸಲಾಗುವುದು.
>
> ■ ಜೆ.ಎನ್.ಗಣೇಶ್, ಶಾಸಕ

> ಬೆನಕನ ಕಾಲುವೆ ಬಳಿಯಲ್ಲಿ ಅಥವಾ ಕಂಪ್ಲಿಯಿಂದ ತೆರಳುವಾಗ ಈಗಿರುವ ಸೇತುವೆ ಬಲ ಭಾಗದಲ್ಲಿ ನದಿಯ ಅಗಲ ಕಡಿಮೆ ಇದ್ದುದರಿಂದ ನೂತನ ಸೇತುವೆ ನಿರ್ಮಾಣಕ್ಕೆ ಸ್ಥಳ ಆಯ್ಕೆ ಮಾಡಿದೆ. ಈ ಸ್ಥಳದಲ್ಲಿ ನದಿಯ ಅಗಲ 596ಮೀ.ನಷ್ಟಿದೆ. ಭೂಸ್ವಾಧೀನತೆ ಪ್ರಮಾಣ ಕಡಿಮೆ ಇದೆ. ಮೇಲಾಗಿ ಸೇತುವೆ ನಿರ್ಮಾಣಕ್ಕೆ ಮಣ್ಣು ಪರೀಕ್ಷೆಯಲ್ಲಿ ಸ್ಥಳ ಉತ್ತಮವಾಗಿದೆ. ಅಂದಾಜುಪಟ್ಟಿ ರಾಜ್ಯಮಟ್ಟದ ತಾಂತ್ರಿಕ ಪರಿಶೀಲನಾ ಸಭೆಯಲ್ಲಿ ಮಂಡಿಸಿ ತಾಂತ್ರಿಕ ಒಪ್ಪಿಗೆ ಪಡೆಯಲಾಗುವುದು.
>
> ■ ಆನಂದ್ ಪೆಮ್ಮಾರ್, ಎಇ, ಪಿಡಬ್ಲ್ಯೂ ಕಂಪ್ಲಿ

ಸ್ಟಾಲಿನ್ ಹೇಳಿಕೆ ಖಂಡಿಸಿ ಇಂದು ಪ್ರತಿಭಟನೆ

ವಿಜಯನಗರ: ತಮಿಳುನಾಡಿನ ಡಿಎಂಕೆ ಶಾಸಕ ಉದಯನಿಧಿ ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ಸನಾತನ ಧರ್ಮವನ್ನು ನಾಶಮಾಡುವುದಾಗಿ ನೀಡಿರುವ ಹೇಳಿಕೆ ವಿರುದ್ಧ ಮೇ 15ರಂದು ಸಂಜೆ 5.30ಕ್ಕೆ ಹೊಸಪೇಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ವಿವಿಧ ಸಮುದಾಯಗಳನ್ನು ಒಳಗೊಂಡ ಹಿಂದೂ ಸನಾತನ ಸಂರಕ್ಷಣಾ ಸಮಿತಿ ನಿರ್ಧರಿಸಿದೆ.

ಸಮಿತಿಯ ಗೌರವಾಧ್ಯಕ್ಷ ಅಶೋಕ ಜೀರೆ ಗುರುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬ್ರಿಟಿಷರಿಗೆ ಸಹ ಸನಾತನ ಧರ್ಮವನ್ನು ನಾಶಮಾಡಲು ಸಾಧ್ಯವಾಗಲಿಲ್ಲ, ಉದಯನಿಧಿ ಮಾತಿಗೆ ಕಿಮ್ಮತ್ತಿಲ್ಲ, ಆದರೆ ಅವರ ಹೇಳಿಕೆಯನ್ನು ಹಿಂದೂಗಳೆಲ್ಲರೂ ಒಗ್ಗಟ್ಟಿನಿಂದ ಖಂಡಿಸಿ, ಅವರ ಮಾತನ್ನು ವಿಧಾನಸಭೆಯ ಕಡತದಿಂದ ತೆಗೆದುಹಾಕುವಂತೆ ಮಾಡಬೇಕಿದೆ ಎಂದರು.

ಸಮಿತಿಯ ಸಂಚಾಲಕ ಎನ್.ಎಸ್. ರೇವಣಸಿದ್ದಪ್ಪ ಮಾತನಾಡಿ, ಮೇ 15ರಂದು ಸಂಜೆ 5.30ಕ್ಕೆ ವಡಕರಾಯ ದೇವಸ್ಥಾನದ ಬಳಿಯಿಂದ ಪ್ರತಿಭಟನೆ ಮತ್ತು ಪಂಜಿನ ಮೆರವಣಿಗೆ ಆರಂಭವಾಗಲಿದ್ದು, ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನೀತ್ ರಾಜ್ ಕುಮಾರ್ ವೃತ್ತದಲ್ಲಿ ಬಂದು ಕೊನೆಗೊಳ್ಳಲಿದೆ. ಕೊನೆಯಲ್ಲಿ ಜಿಲ್ಲಾಡಳಿತ ಮೂಲಕ ತಮಿಳುನಾಡಿನ ರಾಜ್ಯಪಾಲ ಮತ್ತು ರಾಷ್ಟ್ರಪತಿ ಅವರಿಗೆ ಕಳುಹಿಸಿಕೊಡಲಾಗುವುದು ಎಂದರು.

ವಿವಿಧ ಸಮುದಾಯಗಳ ಮುಖಂಡರಾದ ಅಶೋಕ್ ಮೋದಿ, ಎನ್.ರೂಪೇಶ್ ಕುಮಾರ್, ವೀರಸ್ವಾಮಿ, ಭೂಪಾಳ್ ಪ್ರಹ್ಲಾದ್, ಗೊಗ್ಗ ಚೆನ್ನಬಸವೇಶ, ಶ್ರೀನಿವಾಸ ದೇವರಮನಿ, ಗಾಳೆಪ್ಪ, ದಿವಾಕರ, ಎಲ್.ಎಸ್. ಆನಂದ, ರಾಮ್‌ಜಿ ನಾಯ್ಕ್, ಸಮಿತಿಯ ಸಹ ಸಂಚಾಲಕ ಅಪ್ಪರಾವ್ ಸಾನಬಾಳ್ ಅವರು ಸನಾತನ ಧರ್ಮ ರಕ್ಷಣೆಗೆ ಹಿಂದೂಗಳೆಲ್ಲರೂ ಒಗ್ಗಟ್ಟಿನಿಂದ ಹೋರಾಡುವ ಅಗತ್ಯವನ್ನು ಒತ್ತಿ ಹೇಳಿದರು ಹಾಗೂ ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಮನವಿ ಮಾಡಿದರು.

ಉದಯನಿಧಿ ಸ್ಟಾಲಿನ್ ಪಕ್ಷವನ್ನು ಈಗಾಗಲೇ ತಮಿಳುನಾಡಿನ ಜನ ತಿರಸ್ಕರಿಸಿದ್ದಾರೆ, ಅಧಿಕಾರದಿಂದ ಕಿತ್ತೊಗೆದಿದ್ದಾರೆ, ಸನಾತನ ಧರ್ಮ ನಾಶ ಕುರಿತ ಅವರ ಮನೋಭಾವ ಬದಲಾಗದಿದ್ದರೆ ಅವರನ್ನು ಜನ ಶಾಶ್ವತವಾಗಿ ಅಧಿಕಾರದಿಂತ ಕಿತ್ತೊಗೆಯುವುದು ನಿಶ್ಚಿತ. ಈ ನಿಟ್ಟಿನಲ್ಲಿ ದೇಶದಾದ್ಯಂತ ಇದೀಗ ಒತ್ತಡ ಹೇರಲಾಗುತ್ತಿದೆ. ಹೊಸಪೇಟೆ ನಗರದಲ್ಲಿ ಎಲ್ಲಾ ಹಿಂದೂ ಸಮುದಾಯಗಳೂ ಒಗ್ಗಟ್ಟಾಗಿ ಹೋರಾಡುವ ಮೂಲಕ ಒಂದು ಸಂದೇಶವನ್ನು ರವಾನಿಸಬೇಕಾಗಿದೆ ಎಂದು ಎಲ್ಲಾ ಸಮುದಾಯಗಳ ಮುಖಂಡರು ಹೇಳಿದರು.



ಮಹೇಶ ಪೂಜಾರ ಮರು ನೇಮಕಕ್ಕೆ ಒತ್ತಾಯ


ಹೂವಿನ ಹಡಗಲಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸತತ ಎರಡು ಬಾರಿ ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಲು ಉತ್ತಮವಾಗಿ ಕಾರ್ಯ ನಿರ್ವಹಿಸಿದ ಮಹೇಶ್ ವಿ. ಪೂಜಾರ ರವರನ್ನು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಮರು ನೇಮಕ ಆಗಬೇಕು ಎಂದು ಎ ಐ ಟಿ ಯು ಸಿ ಸಂಚಾಲಕ ಹಲಗಿ ಸುರೇಶ ಒತ್ತಾಯಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿವಿಧ ತರಬೇತಿ ಮೂಲಕ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡಿದ್ದಾರೆ.

ತಾಲೂಕಿನ ಸರ್ಕಾರಿ ಅನುದಾನಿತ ಅನುದಾನರಹಿತ ಮೊರಾರ್ಜಿ ದೇಸಾಯಿ ವಸತಿ ಪ್ರೌಢಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಅನೇಕ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆಕ ತಂದು ಮುಖ್ಯ ಗುರುಗಳ ಸಹ ಶಿಕ್ಷಕರ ಸಹಕಾರದಿಂದ ಶೈಕ್ಷಣಿಕ ಅಭಿವೃದ್ಧಿಗೆ ಹಗಲಿರುಳು ದುಡಿದಿದ್ದಾರೆ. 2026 ಮಾರ್ಚ್, ಏಪ್ರಿಲ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 31 ಪ್ರೌಢಶಾಲೆಗಳು ಶೇಕಡಾ ನೂರರಷ್ಟು ಫಲಿತಾಂಶ ಪಡೆದಿವೆ.

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಪ್ರೌಢಶಾಲಾ ಮುಖ್ಯ ಗುರುಗಳ ಶಿಕ್ಷಕರು ಬೆಳಿಗ್ಗೆ ವಿಶೇಷ ತರಗತಿ ಸಂಜೆ ಗುಂಪು ಅಧ್ಯಯನ ಮಾತ್ರವಲ್ಲದೆ ಭಾನುವಾರವೂ ತರಗತಿ ಇವರ ಮಾರ್ಗದರ್ಶನದಲ್ಲಿ ನಿರಂತರವಾಗಿ ನಡೆಸಿದ್ದಾರೆ.ಕ್ರೀಡಾಕೂಟಗಳು ಪ್ರತಿಭಾ ಕಾರಂಜಿ ಶಿಕ್ಷಕರಿಗೆ ಪಠ್ಯೇತರ ಚಟುವಟಿಕೆ ಸ್ಪರ್ಧೆ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ.

ಕ್ರಿಯಾಶೀಲ ಬಿಇಒ ಮಹೇಶ್ ವಿ. ಪೂಜಾರ ರವರನ್ನು ಹೂವಿನ ಹಡಗಲಿ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಮರು ನೇಮಕ ಆಗಬೇಕು. ಈ ಮೂಲಕ ತಾಲೂಕಿನ ಶಿಕ್ಷಣದ ಅಭಿವೃದ್ಧಿಗೆ ಜನಪ್ರತಿನಿಧಿಗಳು ಮುಂದಾಗಬೇಕು ಎಂದು ಹಲಗಿ ಸುರೇಶ ಆಗ್ರಹಿಸಿದ್ದಾರೆ.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಪ್ರತಿಭಟನೆ



ವಿಜಯನಗರ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ನೇತೃತ್ವದಲ್ಲಿ ಹೊಸಪೇಟೆ ನಗರದ ಡಾ.ಪುನಿತ್ ರಾಜಕುಮಾರ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯದರ್ಶಿ ಭರತ ಕುಮಾರ ಸಿ.ಆರ್ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರದ ಭದ್ರತಾ ವೈಫಲ್ಯದಿಂದಾಗಿ ಬಿಹಾರ, ಕೇರಳ ಸೇರಿದಂತೆ ಅನೇಕ ರಾಜ್ಯಗಳಲ್ಲಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪರೀಕ್ಷೆಗಾಗಿ ಹಗಲಿರುಳು ಅಭ್ಯಾಸ ಮಾಡಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಯಾರೋ ಮಾಡಿದ ತಪ್ಪಿಗೆ ಮತ್ತೆ ಪರೀಕ್ಷೆ ಬರೆಯುವ ಅನಿವಾರ್ಯತೆ ಎದುರಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿರುವುದು ಇದು ಮೊದಲೇನಲ್ಲ, ಈ ಹಿಂದೆಯೂ ಮೂರ್ನಾಲ್ಕು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದರೂ, ಕಠಿಣ ಕ್ರಮ ಕೈಗೊಳ್ಳದಿರುವುದರ ಕಾರಣ ಮತ್ತೆ ಮರುಕಳಿಸಿದೆ. ಉನ್ನತ ಶಿಕ್ಷಣ ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದೆ ದೊಡ್ಡ ಜಾಲವಿದ್ದ, ಬಹಕೋಟಿ ಹಣ ಕೈ ಬದಲಾಗಿರುವ ಶಂಕೆಯಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು, ತ್ವರಿತಗತಿಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವಂತಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಯುವ ಕಾಂಗ್ರೆಸ್ ಸಾಮಾಜಿಕ ಜಾಲತಾಣ ಸಂಯೋಜಕ ಗಣೇಶ ಪಾಟೀಲ, ವಿಜಯನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಶೇಖ್ ತಾಜುದ್ದೀನ್, ಇಮ್ತಿಯಾಜ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ, ಅಬ್ರಾಜ್ ಖಾನ್, ಜಮೀರ್ ಹುಂಡೇಕರ್, ಸಾಮಾಜಿಕ ಜಾಲತಾಣ ಜಿಲ್ಲಾಧ್ಯಾಕ್ಷ ರ್ರಿಸ್ವಾಮಿ, ಕಮಲಾಪುರ ಬ್ಲಾಕ್ ಅಧ್ಯಕ್ಷ ಗಾಸ್ಸಾಬ್, ಯುವ ಮುಖಂಡರಾದ ರಬೇಕಾ, ಪ್ರಶಾಂತ, ಉಮೇಶ, ನವೀನ ಕುಮಾರ ಬಸವರಾಜ, ಮೊಹಮ್ಮದ್ ಭಾಷ, ಸುನೀಲ ಇದ್ದರು.

14 ಪ್ರಮುಖ ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ: ಸಂತಸ



ಬಳ್ಳಾರಿ: 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರ 14 ಪ್ರಮುಖ ಬೆಳೆಗಳ ಬೆಂಬಲ ಬೆಲೆಯನ್ನು ಹೆಚ್ಚಳ ಮಾಡಿದ್ದು, ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರಕ್ಕೆ ನಾಡಿನ ರೈತರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಸ್.ಗುರುಲಿಂಗನ ಗೌಡ ಅವರು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಕೇಂದ್ರ ಸರ್ಕಾರ ರೈತರ ಬದುಕು ಸುಧಾರಿಸಲು ಹಾಗೂ ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿಸಲು ನಿರಂತರವಾಗಿ ಮಹತ್ವದ ನಿರ್ಧಾರವನ್ನು ಕೈಗೊಳ್ಳುತ್ತಿದೆ. 2026-27ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಕೇಂದ್ರ ಹೆಚ್ಚಳ ಮಾಡಿ ಆದೇಶ ಹೊರಡಿಸಿರುವುದು ರೈತರ ಶ್ರಮಕ್ಕೆ ನೀಡಿದ ಗೌರವವಾಗಿದೆ. ಕೇಂದ್ರ ಸರ್ಕಾರ ಘೋಷಿಸಿದ ಹೊಸ ಎಂಎಸ್ ಪಿ ದರಗಳಿಂದ ಭತ್ತ, ಜೋಳ, ರಾಗಿ, ಸಜ್ಜೆ, ಮೆಕ್ಕೆಜೋಳ, ತೊಗರಿಬೇಳೆ, ಉದ್ದು, ಹೆಸರುಬೇಳೆ, ನೆಲಗಡಲೆ, ಸೂರ್ಯಕಾಂತಿ, ಸೋಯಾಬೀನ್, ಎಳ್ಳು, ಹತ್ತಿ ಬೆಳೆಗಳಿಗೆ ನೇರವಾಗಿ ಲಾಭ ದೊರೆಯಲಿದೆ. ವಿಶೇಷವಾಗಿ ತೊಗರಿಬೇಳೆ, ಹೆಸರುಬೇಳೆ, ಉದ್ದು ಹಾಗೂ ಎಣ್ಣೆ ಬೀಜಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಎಂಎಸ್ ಪಿ ಹೆಚ್ಚಳ ಘೋಷಿಸಿರುವುದು ದೇಶಕ್ಕೆ ಅನ್ನ ನೀಡುವ ರೈತರಲ್ಲಿ ಮತ್ತಷ್ಟು ಹೊಸ ವಿಶ್ವಾಸ ಮೂಡಿಸಿದೆ. ಗ್ರೇಡ್ ಎ ಭತ್ತದ ಎಂಎಸ್ ಪಿ ಯನ್ನು 2461ಕ್ಕೆ ಹೆಚ್ಚಳ ಮಾಡಿರುವುದು ಹಾಗೂ ರಾಗಿ ಬೆಳೆಯನ್ನು 5205ಕ್ಕೆ ಏರಿಕೆ ಮಾಡಿರುವುದು ಕರ್ನಾಟಕದ ರೈತರಿಗೆ ವಿಶೇಷ ಸಂತಸವನ್ನುಂಟು ಮಾಡಿದೆ. ಪಲ್ಸ್ ಹಾಗೂ ಎಣ್ಣೆ ಬೀಜ ಉತ್ಪಾದನೆಯನ್ನು ಉತ್ತೇಜಿಸಲು ತೊಗರಿಬೇಳೆ 8450, ಹೆಸರುಬೇಳೆ 8780, ಉದ್ದು 8200, ಸೋಯಾಬೀನ್ 5708, ಸೂರ್ಯಕಾಂತಿ 8343 ಹಾಗೂ ಎಳ್ಳು 10,346 ರೂ.ಬೆಲೆ ನಿಗದಿಪಡಿಸುವುದು ದೇಶದ ಕೃಷಿ ಆತ್ಮನಿರ್ಭರತೆಗೆ ಸಹಕಾರಿಯಾಗಲಿದೆ. ಹತ್ತಿ ಬೆಳೆಗಾರರ ಹಿತದೃಷ್ಟಿಯಿಂದ ಮಧ್ಯಮ ಎಳೆಯ ಹತ್ತಿಗೆ 8267 ರೂ. ಹಾಗೂ ಉದ್ದ ಎಳೆಯ ಹತ್ತಿಗೆ 8667 ಎಂಇಎಸ್ ಪಿ ಘೋಷಿಸಿರುವುದು ರೈತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗಿದೆ. ಹೆಮ್ಮೆಯ ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿರುವ ಐತಿಹಾಸಿಕ ನಿರ್ಧಾರಕ್ಕೆ ನಾಡಿನ ರೈತರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವೆ ಎಂದು ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಗೆ ಮುನ್ನೆಚ್ಚರಿಕಾ ಕ್ರಮ: ಶಾಸಕ

ಕೂಡ್ಲಿಗಿ: ಕ್ಷೇತ್ರದ ರೈತರ ದಶಕಗಳ ಕನಸಾದ 74 ಕೆರೆಗಳಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಈ ವರ್ಷವೂ ಕೆರೆಗಳಿಗೆ ನೀರು ಹರಿಸುವ ಕಾರ್ಯ ಮುಂದುವರಿಯಲಿದ್ದು, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಡಾ.ಶ್ರೀನಿವಾಸ ಎನ್ .ಟಿ ಹೇಳಿದರು.

ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಪಥದ ವಿವರ ಹಂಚಿಕೊಳ್ಳಲು ಗುರುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕ್ಷೇತ್ರದಲ್ಲಿ ಕೈಗೊಂಡ ನೀರಾವರಿ, ಶಿಕ್ಷಣ, ವಸತಿ ಮತ್ತು ಮೂಲಸೌಕರ್ಯ ಯೋಜನೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ತಾಂಡಾ ಮತ್ತು ಹಟ್ಟಿಗಳ ಬಡ ಜನರಿಗೆ ಹಕ್ಕುಪತ್ರ ಕೊಡಿಸಲು ವೈಯಕ್ತಿಕ ಶುಲ್ಕ ಪಾವತಿಸುವೆ. ನರಸಿಂಹಗಿರಿ ಮತ್ತು ಕಾಟ್ರಹಳ್ಳಿ ಗ್ರಾಮಗಳಲ್ಲಿ ಎಸ್ಸಿ, ಎಸ್ಟಿ ಕುಟುಂಬಗಳಿಗೆ ಸುಸಜ್ಜಿತ ಮನೆಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಲಾಗಿದೆ. ಕೂಡ್ಲಿಗಿ ಪಟ್ಟಣದಲ್ಲಿ ಸ್ಲಂ ಅಭಿವೃದ್ಧಿ ಮಂಡಳಿಯಿಂದ 850 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಸಾರಿಗೆ ಮತ್ತು ರಸ್ತೆ ಸಂಪರ್ಕ: ಕ್ಷೇತ್ರದಲ್ಲಿ ಪ್ರಸ್ತುತ 90 ಬಸ್ಸುಗಳು ಸಂಚರಿಸುತ್ತಿದ್ದು, ಶೀಘ್ರದಲ್ಲೇ ಹೆಚ್ಚುವರಿಯಾಗಿ 15 ಹೊಸ ಬಸ್ಸುಗಳನ್ನು ಒದಗಿಸಲಾಗುವುದು. ಕಾತ್ರಿಕೆಹಟ್ಟಿ ಸೇತುವೆ ಸೇರಿದಂತೆ ಪ್ರಮುಖ ರಸ್ತೆ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ತಾಂತ್ರಿಕ ಕಾರಣಗಳಿಂದ ಬಾಕಿ ಇರುವ ರಸ್ತೆಗಳನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಮುಂದಿನ ವರ್ಷ ಒನಕೆ ಓಬವ್ವ ಉತ್ಸವವನ್ನು ಇನ್ನಷ್ಟು ಅದ್ದೂರಿಯಾಗಿ ಆಚರಿಸಲಾಗುವುದು. ಕಲಾವಿದರಿಗೆ ಸೂಕ್ತ ಗೌರವ ನೀಡಲಾಗುವುದು ಎಂದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ತಹಶೀಲ್ದಾರ್ ನೇತ್ರಾವತಿ, ಡಿವೈಎಸ್ಪಿ ಮಲ್ಲೇಶ ದೊಡ್ಡಮನೆ, ಇಒ ನರಸಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಒತ್ತು

- 9 ಕೋಟಿ ರೂ. ವೆಚ್ಚದಲ್ಲಿ 3 ಹೊಸ ಪ್ರೌಢಶಾಲೆಗಳ ನಿರ್ಮಾಣ.
- 7 ಕರ್ನಾಟಕ ಪಬ್ಲಿಕ್ ಶಾಲೆಗಳು ಹಾಗೂ 58 ಅಂಗನವಾಡಿ ಕೇಂದ್ರಗಳ ಮಂಜೂರಾತಿ.
- ಚಿರತಗುಂಡು ಸೂಲದಹಳ್ಳಿ ಮತ್ತು ಬಡೇಲಡುಕು ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿ.
- ಗಣಿ ಪ್ರದೇಶದ ಶಾಲಾ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲು ವಿಶೇಷ ಆದ್ಯತೆ.

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಶ್ರಮಿಸಿ: ಜಿಲ್ಲಾಧಿಕಾರಿ

ಯಾದಗಿರಿ: ತೀವ್ರ ಬೇಸಿಗೆ ಕಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅವಶ್ಯಕ ಮುನ್ನೆಚ್ಚರಿಕೆಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಕೊಳವೆ ಬಾವಿಗಳ, ಆರ್‌ಒ ಪ್ಲಾಂಟ್‌ಗಳ ಸಮರ್ಪಕ ಕಾರ್ಯನಿರ್ವಹಣೆ ಬಗ್ಗೆ ಸೂಕ್ತ ನಿಗಾವಹಿಸಬೇಕು. ದುರಸ್ತಿ ಇರುವ ಆರ್‌ಒ ಪ್ಲಾಂಟ್‌ಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅದರಂತೆ ಕುಡಿಯಲು ಯೋಗ್ಯವಿರುವ ನೀರು ಬಳಸುವ ಬಗ್ಗೆ ಸೂಕ್ತ ತಿಳಿವಳಿಕೆ ನೀಡುವಂತೆ ತಿಳಿಸಿದರು.

ನೀರಾವರಿ ಇಲಾಖೆ ಅಧಿಕಾರಿಗಳು, ಕಲ್ಬುರ್ಗಿ ಪ್ರಾದೇಶಿಕ ಆಯುಕ್ತರ ಆದೇಶದನ್ವಯ ಕಾಲುವೆಗಳ ಮೂಲಕ ಅವಶ್ಯಕ ನೀರು ಬಿಡಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಜಲಧಾರೆ ಯೋಜನೆಯಡಿ ವಿವಿಧ ಶಾಲಾ,ವಸತಿ ನಿಲಯಗಳಿಗೆ ನಳದ ನೀರು ಸರಬರಾಜು ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಗ್ರಾಮೀಣ ಕುಡಿಯುವ ನೀರು ಸರಬರಾಜು, ವಿವಿಧ ವಸತಿ ನಿಲಯ ಹೊಂದಿರುವ ಇಲಾಖೆಗಳು, ಶಾಲಾ ಶಿಕ್ಷಣ ಇಲಾಖೆ ಮತ್ತು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಕೃಷಿ ಹಾಗೂ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ರಸಗೊಬ್ಬರಗಳ ಸಮರ್ಪಕ ನಿರ್ವಹಣೆಯಾಗುವಂತೆ ನೋಡಿಕೊಳ್ಳಬೇಕು. ಮಾವಿನ ಹಣ್ಣು ಹಾಗೂ ಪೋಮೋಗ್ರೈನೇಟ್, ಮಾರುಕಟ್ಟೆಗಾಗಿ ಈ ಜಿಲ್ಲೆಯ ರೈತರನ್ನು, ವಿಜಯಪುರ, ಬಾಗಲಕೋಟೆ,ಇತರೆ ಜಿಲ್ಲೆಗಳ ರೈತ ಸಂಘಗಳೊಂದಿಗೆ ಸಮನ್ವಯಗೊಳಿಸಿ ರೈತರಿಗೆ ನೇರವಾಗಬೇಕು. ಮತ್ಸ್ಯ ಸಂಜೀವಿನಿ ಹಾಗೂ ಇತರೆ ಮೀನುಗಾರಿಕೆ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಎಲ್‌ಪಿಜಿ, ಕಮರ್ಷಿಯಲ್ ಗ್ಯಾಸ್ ಸಮರ್ಪಕ ವಿತರಣೆ, ಪಡಿತರ ವಿತರಣೆ, ಅರಣ್ಯ ಮತ್ತು ಅಗ್ನಿಶಾಮಕ ಇಲಾಖೆ, ಪಶು ವೈದ್ಯಕೀಯ ಸೇವಾ ಇಲಾಖೆ, ಸಿರಿ ಕಲ್ಚರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೆಬಿಜೆ ಎನ್‌ಎಲ್ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು. ಜಿಪಂ ಸಿಇಒ ಲವೀಶ್ ಒರಡಿಯಾ, ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿ, ಆರ್‌ಒ ಪ್ಲಾಂಟ್‌ಗಳ ಸ್ಥಿತಿಗತಿ, ನಿರ್ವಹಣೆ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತ ಶ್ರೀಧರ ಗೋಟುರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



> ಗ್ರಾಮೀಣ ಹಾಗೂ ನಗರ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ತೀವ್ರ ನಿಗಾ ಇಡಬೇಕು. ನಾರಾಯಣಪುರ ಡ್ಯಾಂ, ಗೂಗಲ್ ಬ್ಯಾರೇಜ್ ಸೇರಿದಂತೆ ವಿವಿಧ ಜಲಾಶಯಗಳಲ್ಲಿನ ನೀರಿನ ಸಂಗ್ರಹ ಇಟ್ಟುಕೊಳ್ಳುವ ಜತೆಗೆ, ಲಭ್ಯತೆ ಬಗ್ಗೆ ಸಮಗ್ರ ಮಾಹಿತಿ ಒದಗಿಸಿ.
>
> ■ ಹರ್ಷಲ್ ಭೋಯರ್, ಡಿಸಿ